ಬುಧವಾರ, ಜುಲೈ 10, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 191 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
'ಸಿಕಲ್ ಸೆಲ್ ಅನೀಮಿಯಾ'ಗೆ ಔಷಧವೊಂದನ್ನು ಕಂಡುಹಿಡಿಯಲಾಗಿದೆಯಂತೆ



ಸಂಖ್ಯೆ-ಸುದ್ದಿ ಬಿಪಿಎಲ್ ನಕಲಿಯೇ ಹೆಚ್ಚು?

'ದರ್ಶನ್‌ಗೆ ವಿಶೇಷ ಸೌಲಭ್ಯವಿಲ್ಲ' 7

ಕೊಡಗು: ಭಾಗಮಂಡಲದಲ್ಲಿ ಬಿರುಸಿನ ಮಳೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,351 ▲	24,433 ▲	₹74,680 (ಬೆಂಗಳೂರು) ▼	₹93,500 (ಬೆಂಗಳೂರು) ▼	83.49 ▲

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಫಲಿತಾಂಶ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಫಲಿತಾಂಶ ಜುಲೈ 10ರಂದು ಬೆಳಿಗ್ಗೆ 11.30ಕ್ಕೆ ಪ್ರಕಟವಾಗಲಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಜೂನ್ 14ರಿಂದ 22ರವರೆಗೆ ರಾಜ್ಯದ 724 ಪರೀಕ್ಷಾ ಕೇಂದ್ರಗಳಲ್ಲಿ ನಡೆದಿತ್ತು. 1.44 ಲಕ್ಷ ಬಾಲಕರು, 79,148 ಬಾಲಕಿಯರು ಸೇರಿದಂತೆ 2.23 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು. ಅವರಲ್ಲಿ 13,085 ವಿದ್ಯಾರ್ಥಿಗಳು ಫಲಿತಾಂಶ ವೃದ್ಧಿಗಾಗಿ ಎರಡನೇ ಪರೀಕ್ಷೆಗೆ ಹಾಜರಾಗಿದ್ದರು.

ಫಲಿತಾಂಶವನ್ನು ಮಂಡಳಿಯ ಜಾಲತಾಣ https://karresults.nic.in ನಲ್ಲಿ ವೀಕ್ಷಿಸಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೇಳಿದೆ.

ಪ್ರಾಂಶುಪಾಲರ ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ನೇಮಕ

● ಚಂದ್ರಹಾಸ ಹಿರೇಮಳಲಿ

434 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು

400 ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳು

310 ಭರ್ತಿ ಮಾಡುತ್ತಿರುವ ಸ್ಥಾನಗಳು

954 ಪರೀಕ್ಷೆ ಬರೆದ ಅಭ್ಯರ್ಥಿಗಳು



332 ತಾತ್ಕಾಲಿಕ ಅಂಕ ಪಟ್ಟಿಯಲ್ಲಿರುವ ಖಾಸಗಿ ಕಾಲೇಜಿನ ಬೋಧಕರು

ಬೆಂಗಳೂರು: ನೇರ ಪರೀಕ್ಷೆ ಮೂಲಕ ಭರ್ತಿ ಮಾಡುತ್ತಿರುವ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳು ಐದು ವರ್ಷಗಳ ಗುತ್ತಿಗೆ ಅವಧಿಗೆ ಮಾತ್ರ ಸೀಮಿತ.

ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇದ್ದ 310 ಪ್ರಾಂಶುಪಾಲರ ಹುದ್ದೆಗಳ ನೇರ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಲಿಖಿತ ಪರೀಕ್ಷೆ ನಡೆಸಿದೆ. ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ನೇಮಕಾತಿ ನಿಯಮದಂತೆ ಐದು ವರ್ಷಗಳ ನಂತರ ಪ್ರಾಂಶುಪಾಲರ ಸ್ಥಾನ ತ್ಯಜಿಸಿ, ಹಿಂದೆ ತಾವು ಕಾರ್ಯನಿರ್ವಹಿಸುತ್ತಿದ್ದ ಕರ್ತವ್ಯಕ್ಕೆ ಮರಳಬೇಕಾಗುತ್ತದೆ.

ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಜತೆಗೆ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳು ಸೇರಿದಂತೆ ಯಾವುದೇ ಪದವಿ ಕಾಲೇಜಿನಲ್ಲಿ 15 ವರ್ಷಗಳ ಬೋಧನಾನುಭವ ಹೊಂದಿರಬೇಕು ಎಂಬ ನಿಯಮ ರೂಪಿಸಲಾಗಿದೆ. ಎಂಜಿನಿಯರಿಂಗ್ ಸೇರಿದಂತೆ ಬಹುತೇಕ ಖಾಸಗಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪೂರ್ಣಕಾಲಿಕ ಬೋಧಕರಾಗಿ ಕೆಲಸ ಮಾಡಿದ ಅನುಭವವಿಲ್ಲ. ಬಹಳಷ್ಟು ಅಧ್ಯಾಪಕರು ಒಂದೇ ಕಾಲೇಜಿಗೆ ಸೀಮಿತವಾಗಿಲ್ಲ. ಒಂದೇ ವೃತ್ತಿಯನ್ನು ನಂಬಿಕೊಂಡಿಲ್ಲ. ಅಂಥವರು ಪ್ರಾಂಶುಪಾಲರ ಹುದ್ದೆಗೆ ಆಯ್ಕೆಯಾದರೆ ಐದು ವರ್ಷಗಳ ನಂತರ ಏನು ಮಾಡಬೇಕು ಎನ್ನುವ ಅತಂತ್ರ ಸ್ಥಿತಿಯನ್ನು ಉನ್ನತ ಶಿಕ್ಷಣ ಇಲಾಖೆ ಸೃಷ್ಟಿಸಿದೆ.

'ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ರ‍್ಯಾಂಕ್ ಪಡೆದಿದ್ದೆ. ಪಿಎಚ್‌.ಡಿಯನ್ನೂ ಪೂರೈಸಿರುವೆ. ಸರ್ಕಾರಿ ಕಾಲೇಜು ಪ್ರಾಧ್ಯಾಪಕನಾಗಲು ಸಾಧ್ಯವಾಗಲಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಅತ್ಯಂತ ಕಡಿಮೆ ವೇತನಕ್ಕೆ 20 ವರ್ಷಗಳು ಕೆಲಸ ಮಾಡಿದ್ದೇನೆ. ಈಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರ ಹುದ್ದೆಯ ಪರೀಕ್ಷೆ ಬರೆದಿದ್ದೇನೆ. ಆಯ್ಕೆಯಾಗುವ ವಿಶ್ವಾಸವಿದೆ. ಆದರೆ, ಐದು ವರ್ಷಗಳ ನಂತರ ಹುದ್ದೆ ತ್ಯಜಿಸಿದರೆ ಮತ್ತೆ ಖಾಸಗಿ ಕಾಲೇಜಿಗೆ ಹೋಗಬೇಕೇ? ಮರಳಿ ಹೋದರೆ ಅಲ್ಲಿ ಕೆಲಸ ಸಿಗುವ ಖಾತ್ರಿ ಏನು? ನಮ್ಮಂಥವರ ಬದುಕು ಅತಂತ್ರವಾಗುವುದಿಲ್ಲವೇ' ಎಂದು ಪ್ರಶ್ನಿಸುತ್ತಾರೆ ಹುದ್ದೆ ನಿರೀಕ್ಷೆಯಲ್ಲಿರುವ ಅಭ್ಯರ್ಥಿ ಯೋಗರಾಜ್.

> **ಹಿಂದಿನ ಸರ್ಕಾರ ನೇಮಕಾತಿ ಅಧಿಸೂಚನೆ ಹೊರಡಿಸಿತ್ತು. ಯುಜಿಸಿ ನಿಯಮದಂತೆ ಪ್ರಾಂಶುಪಾಲರ ಹುದ್ದೆಗಳಿಗೆ ಐದು ವರ್ಷ ಕಾಲಮಿತಿ ನಿಗದಿ ಮಾಡಲಾಗಿದೆ. ದಕ್ಷತೆ ತೋರುವವರ ಅವಧಿ ಮುಂದುವರಿಸಲು ಅವಕಾಶವಿದೆ**
> **ಡಾ.ಎಂ.ಸಿ. ಸುಧಾಕರ್,** ಉನ್ನತ ಶಿಕ್ಷಣ ಸಚಿವ

6ನೇ ಪುಟ ನೋಡಿ

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ: ನಾಗೇಂದ್ರ, ದದ್ದಲ್‌ಗೆ ಇಂದು ಮತ್ತೆ ಹಾಜರಿಗೆ ಸೂಚನೆ

ಶಾಸಕರಿಗೆ ಎಸ್‌ಐಟಿ ಪ್ರಶ್ನಾ ಊಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ₹94.97 ಕೋಟಿ ಹಗರಣದ ತನಿಖೆ ಚುರುಕುಗೊಳಿಸಿರುವ ಎಸ್‌ಐಟಿ ಪೊಲೀಸರು, ಮಾಜಿ ಸಚಿವ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರನ್ನು ಮಂಗಳವಾರ ವಿಚಾರಣೆಗೆ ಒಳಪಡಿಸಿದರು.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ನಿಗಮ ಹೊಂದಿದ್ದ ಖಾತೆಯಿಂದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಪ್ರಕರಣದಲ್ಲಿ ಎಸ್‌ಐಟಿ ಈವರೆಗೆ 11 ಮಂದಿಯನ್ನು ಬಂಧಿಸಿದೆ. ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ನಾಗೇಂದ್ರ ಮತ್ತು ನಿಗಮದ ಅಧ್ಯಕ್ಷ ಹಾಗೂ ಶಾಸಕರೂ ಆಗಿರುವ ಬಸನಗೌಡ ದದ್ದಲ್ ಕೂಡ ಹಗರಣದಲ್ಲಿ ಭಾಗಿಯಾಗಿರುವ ಶಂಕೆಯ ಮೇಲೆ ಇಬ್ಬರನ್ನೂ ಸುದೀರ್ಘಕಾಲ ವಿಚಾರಣೆ ನಡೆಸಲಾಗಿದೆ.

ಹಣ ವರ್ಗಾವಣೆ ಪ್ರಕರಣದಲ್ಲಿ ಇಬ್ಬರ ಪಾತ್ರದ ಕುರಿತು ವಿಚಾರಣೆ ನಡೆಸಲು ಜುಲೈ 5ರಂದು ನೋಟಿಸ್ ಜಾರಿಗೊಳಿಸಿದ್ದ ಎಸ್‌ಐಟಿ, ಖುದ್ದು ವಿಚಾರಣೆಗೆ ಬರುವಂತೆ ಸೂಚಿಸಿತ್ತು. ವಿಚಾರಣೆ ವೇಳೆ, ಹಗರಣದ ಸಂಬಂಧ ತನಿಖಾಧಿಕಾರಿಗಳು ಮಹತ್ವದ ಮಾಹಿತಿ ಕಲೆಹಾಕಿದ್ದಾರೆ ಎಂದು ಗೊತ್ತಾಗಿದೆ.

ಬಂಧಿತರ ಆಡಿಯೊ ಸಂಭಾಷಣೆ: ತನಿಖೆ ಚುರುಕು

ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ ಹಾಗೂ ಲೆಕ್ಕಾಧಿಕಾರಿಯಾಗಿದ್ದ ಪರಶುರಾಮ್ ಜಿ. ದುರ್ಗಣ್ಣನವರ ಮಧ್ಯೆ ಮೇ 24ರಂದು ನಡೆದಿದೆ ಎನ್ನಲಾದ ಮೊಬೈಲ್ ಸಂಭಾಷಣೆಯ ಆಡಿಯೊ ತುಣುಕು ತನಿಖಾ ತಂಡಕ್ಕೆ ಲಭಿಸಿದ್ದು, ಅದನ್ನು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

'ಬ್ಯಾಂಕ್‌ನವರ ವಿರುದ್ಧ ಕೇಸ್ ಮಾಡ್ತೀವಲ್ಲ, ನಮಗೆ ಹಣ ಕೊಡ್ತಾರಾ ಅವ್ರು' ಎಂಬ ಮಾತು ಆಡಿಯೊದಲ್ಲಿದೆ. ಮತ್ತೊಬ್ಬರು 'ಅಧ್ಯಕ್ಷರಿಗೆ ಹೇಳೋದು ಬೇಡ್ವಾ' ಎನ್ನುತ್ತಾರೆ. 'ಅಧ್ಯಕ್ಷರ ಗಮನಕ್ಕೆ ತರಬೇಕು. ಗಮನಕ್ಕೆ ತಂದರೆ ದೊಡ್ಡ ರಾದ್ಧಾಂತ ಆಗುತ್ತದೆ' ಎಂದು ಇನ್ನೊಬ್ಬರು ಹೇಳುತ್ತಾರೆ. ಆಗ 'ಸೋಮವಾರ, ಮಂಗಳವಾರ, ಬುಧವಾರ ಬಿಡೋಣ. ಇವತ್ತು ಒಂದು ದಿನ ಅವರನ್ನು ಮ್ಯಾನೇಜ್ ಮಾಡಿ ಕಳಿಸಿ' ಎಂದು ಇಬ್ಬರು ಮಾತನಾಡಿಕೊಂಡಿರುವುದು ದಾಖಲಾಗಿದೆ.

ಈ ಆಡಿಯೊ ತುಣುಕನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿದೆ ಎಂದು ಎಸ್‌ಐಟಿ ಅಧಿಕಾರಿಯೊಬ್ಬರು ಹೇಳಿದರು.

ಬಿ.ನಾಗೇಂದ್ರ

ದದ್ದಲ್

'ಬೆಳಿಗ್ಗೆ 11ರ ಸುಮಾರಿಗೆ ಸಿಐಡಿ ಕಚೇರಿಗೆ ಬಂದ ಬಿ.ನಾಗೇಂದ್ರ ಅವರನ್ನು ಸಂಜೆ 5 ಗಂಟೆವರೆಗೆ ಆರು ತಾಸು ವಿಚಾರಣೆ ನಡೆಸಲಾಗಿದೆ. ಮಧ್ಯಾಹ್ನ 3 ಗಂಟೆಗೆ ಬಂದ ದದ್ದಲ್ ಅವರನ್ನು ಸಂಜೆ 6ರವರೆಗೆ ಮೂರು ತಾಸು ವಿಚಾರಣೆ ನಡೆಸಲಾಗಿದೆ. ಎಸ್‌ಐಟಿ ಮುಖ್ಯಸ್ಥ ಮನೀಶ್ ಖರ್ಬೀಕರ್ ಅವರ ನೇತೃತ್ವದಲ್ಲಿ ನಡೆದ ವಿಚಾರಣೆಯಲ್ಲಿ ತನಿಖಾಧಿಕಾರಿಗಳು ಹಲವು ಪ್ರಶ್ನೆಗಳನ್ನು ಕೇಳಿ ಹೇಳಿಕೆ ದಾಖಲಿಸಿಕೊಂಡರು. ಇಬ್ಬರ ಹೇಳಿಕೆಯನ್ನೂ ವಿಡಿಯೊ ರೆಕಾರ್ಡ್ ಮಾಡಲಾಗಿದೆ. ಬುಧವಾರ ಮತ್ತೆ ವಿಚಾರಣೆ ಮುಂದುವರಿಯಲಿದೆ ಎಂದು ಮೂಲಗಳು ಹೇಳಿವೆ.

ಸುದೀರ್ಘ ವಿಚಾರಣೆ: 'ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ನೆಕ್ಕಂಟಿ ನಾಗರಾಜ್ ಹಾಗೂ ಅವರ ಸಂಬಂಧಿ ನಾಗೇಶ್ವರ ರಾವ್ ಅವರು ನಿಮಗೆ ಹೇಗೆ ಪರಿಚಯ? ನೆಕ್ಕಂಟಿ ನಾಗರಾಜ್ ಅವರು ನಿಮ್ಮ ಆಪ್ತರೇ? ಹಣ ವರ್ಗಾವಣೆಯ ಮಾಹಿತಿಯನ್ನು ನಿಮಗೆ ನೀಡಲಾಗಿತ್ತೇ' ಎಂಬ ಪ್ರಶ್ನೆಗಳನ್ನು ತನಿಖಾಧಿಕಾರಿಗಳು ಕೇಳಿದರು.

6ನೇ ಪುಟ ನೋಡಿ

'ಎರಡೂ ಆಯಾಮದಲ್ಲಿ ತನಿಖೆ'

'ಹಗರಣದ ತನಿಖೆಯನ್ನು ಎಸ್‌ಐಟಿ ಹಾಗೂ ಸಿಬಿಐ ಬೇರೆ ಬೇರೆ ಆಯಾಮಗಳಲ್ಲಿ ನಡೆಸುತ್ತಿವೆ. ಸಿಬಿಐ ಅಧಿಕಾರಿಗಳು ನಿಗಮದ ಹಣಕಾಸಿನ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಕೃತ, ಡಿಸಿಸಿ ಮತ್ತು ಸಹಕಾರ ಸಂಘಗಳ ದಾಖಲಾತಿ ಪರಿಶೀಲಿಸುತ್ತಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಸುದ್ದಿಗಾರರಿಗೆ ಮಂಗಳವಾರ ತಿಳಿಸಿದರು.

'ತನಿಖೆಯ ಬಗ್ಗೆ ಬಿಜೆಪಿ ಮುಖಂಡರು ಸುಮ್ಮನೆ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ತನಿಖೆ ಪಾರದರ್ಶಕವಾಗಿ ನಡೆಯುತ್ತಿದೆ' ಎಂದು ಅವರು ಹೇಳಿದರು.

ಹೊರಗುತ್ತಿಗೆ ಮೀಸಲು ಕಾಯ್ದೆಗೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳು ಹೊರಗುತ್ತಿಗೆಯಡಿ ನೇಮಕ ಮಾಡಿಕೊಳ್ಳುವಾಗ ಪರಿಶಿಷ್ಟ ಜಾತಿ, ಪಂಗಡದವರಿಗೆ ಮೀಸಲಾತಿ ನೀಡಲು ಇದ್ದ ಅಡ್ಡಿಗಳನ್ನು ನಿವಾರಿಸಲು ಸರ್ಕಾರ ಮುಂದಾಗಿದೆ.

ಈ ಉದ್ದೇಶಕ್ಕಾಗಿ ಕಾಯ್ದೆಗೆ ತಿದ್ದುಪಡಿ ತರಲಾಗುತ್ತಿದ್ದು, ಮುಂದಿನ ವಾರದಿಂದ ನಡೆಯಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ವಿದ್ಯಾವಂತರಿಗೆ ಸರ್ಕಾರದ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ತರುವ ಸಂಬಂಧ ಇದೇ ಮೇ 20ರಂದು ರಾಜ್ಯ ಸರ್ಕಾರವು ಸುತ್ತೋಲೆ ಹೊರಡಿಸಿತ್ತು. ಸ್ವಚ್ಛತಾ ಸಿಬ್ಬಂದಿ, ವಾಹನ ಚಾಲಕರು, ಡಾಟಾ ಎಂಟ್ರಿ ಆಪರೇಟರ್‌ಗಳು ಮತ್ತು ಗ್ರೂಪ್‌–ಡಿ ಹುದ್ದೆಗಳಲ್ಲಿ ಮೀಸಲಾತಿ ಒದಗಿಸಬೇಕು ಎಂದು ಸುತ್ತೋಲೆ ವಿವರಿಸಿತ್ತು.

ಆದರೆ, ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಯಲ್ಲಿ ಮೀಸಲಾತಿ ಇತ್ಯಾದಿ) ಕಾಯ್ದೆಯ 3ನೇ ಸೆಕ್ಷನ್ ಅನುಸಾರ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ನೀಡಲು ಅವಕಾಶ ಇರಲಿಲ್ಲ.

ಮುಖ್ಯಾಂಶಗಳು

- ನೇಮಕಾತಿಯಲ್ಲಿ ಮೀಸಲಾತಿ ಕಲ್ಪಿಸಲು ಕಾಯ್ದೆ ಅಡ್ಡಿ
- ತಿದ್ದುಪಡಿ ಮಸೂದೆ ಸಿದ್ಧಪಡಿಸಿರುವ ರಾಜ್ಯ ಸರ್ಕಾರ
- ಮುಂಬರುವ ಅಧಿವೇಶನದಲ್ಲಿ ಮಸೂದೆ ಮಂಡನೆ

> **ಮೀಸಲಾತಿ ಜಾರಿಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ನಮ್ಮ ಸರ್ಕಾರ ಇರುವವರೆಗೆ ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದಂತೆ ಯಾವುದೇ ರಾಜಿ ಇಲ್ಲ**
> **ಎಚ್‌.ಸಿ.ಮಹದೇವಪ್ಪ**
> ಸಮಾಜ ಕಲ್ಯಾಣ ಸಚಿವ

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕೆ–ಸೆಟ್: ನಾಳೆಯಿಂದ ದಾಖಲೆಗಳ ಪರಿಶೀಲನೆ 7

ಬೇನಾಮಿ ಹೆಸರಿಗೆ ನಿವೇಶನ ಮಂಜೂರು

ಮೈಸೂರು: ಇಲ್ಲಿನ ಮುಡಾದಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೇನಾಮಿ ವ್ಯಕ್ತಿಗೆ ನಿವೇಶನ ಮಂಜೂರು ಮಾಡಿರುವ ಮತ್ತೊಂದು ಪ್ರಕರಣ ಬಯಲಾಗಿದೆ. ನಿವೇಶನ ಮಂಜೂರಾಗಿರುವ ವ್ಯಕ್ತಿಯದೆಂದು ಮುಡಾ ಉಲ್ಲೇಖಿಸಿರುವ ವಿಳಾಸದಲ್ಲಿ ಅವರು ವಾಸವೇ ಇಲ್ಲ. 6

ಇ–ಕೆವೈಸಿಗೆ ಕಾಲಮಿತಿ ಇಲ್ಲ

ನವದೆಹಲಿ: ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ನಕಲಿ ಬಳಕೆದಾರರ ಪತ್ತೆಗೆ ಎಲ್‌ಪಿಜಿಗೆ ಗ್ರಾಹಕರ ಆಧಾರ್ ಸಂಖ್ಯೆ ಜೋಡಣೆ ಕಾರ್ಯ ಮಾಡುತ್ತಿವೆ. ಆದರೆ, ಸರ್ಕಾರವು ಈ ಪ್ರಕ್ರಿಯೆ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಿಲ್ಲ. 12

ಸಲಿಂಗ ವಿವಾಹ: ಬಹಿರಂಗ ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಲು ನಿರಾಕರಿಸಿ ನೀಡಿದ್ದ ತೀರ್ಪಿನ ಮರುಪರಿಶೀಲನೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಬಹಿರಂಗ ವಿಚಾರಣೆಗೆ 'ಸುಪ್ರೀಂ' ಅಸಮ್ಮತಿ. 8

'ಯುದ್ಧ ಪರಿಹಾರವಲ್ಲ'

ಮಾಸ್ಕೊ (ಎಎಫ್‌ಪಿ): 'ಶಾಂತಿ ಸ್ಥಾಪನೆಗೆ ಹೆಚ್ಚಿನ ಮಹತ್ವ ನೀಡಬೇಕು. ಯುದ್ಧಗಳಿಂದ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ಕಿವಿಮಾತು ಹೇಳಿದ್ದಾರೆ.

'ಮುಂದಿನ ಪೀಳಿಗೆಯ ಉಜ್ವಲ ಭವಿಷ್ಯಕ್ಕಾಗಿ ಶಾಂತಿ ಸ್ಥಾಪನೆ ಪ್ರಕ್ರಿಯೆಗೆ ಆದ್ಯತೆ ನೀಡಬೇಕು ಎಂದು ಒಬ್ಬ ಸ್ನೇಹಿತನಾಗಿ ನಾನು ಪುಟಿನ್ ಅವರಿಗೆ ಹೇಳಿದ್ದೇನೆ' ಎಂದು ಮೋದಿ ತಿಳಿಸಿದರು.

ಉಕ್ರೇನ್–ರಷ್ಯಾ ಯುದ್ಧ ಆರಂಭವಾದ ಬಳಿಕ ರಷ್ಯಾಗೆ ಇದು ಮೋದಿ ಅವರ ಮೊದಲ ಪ್ರವಾಸವಾಗಿದೆ. 22ನೇ ಭಾರತ–ರಷ್ಯಾ ವಾರ್ಷಿಕ ಸಭೆಗಾಗಿ ಅವರು ಇಲ್ಲಿಗೆ ಆಗಮಿಸಿದ್ದಾರೆ.

ಪುಟಿನ್ ಪಕ್ಕದಲ್ಲಿ ಕುಳಿತಿರುವಂತೆಯೇ ಹಿಂದಿಯಲ್ಲಿ ಮಾತನಾಡಿದ ಮೋದಿ, 'ಅಮಾಯಕ ಮಕ್ಕಳ ಹತ್ಯೆ ಹೃದಯವಿದ್ರಾವಕ. ಅದನ್ನು ಸಹಿಸಿಕೊಳ್ಳುವುದು ಕಷ್ಟ' ಎಂದರು.

'ಉಕ್ರೇನ್‌ನಲ್ಲಿ ರಷ್ಯಾದ ಕಾರ್ಯಾಚರಣೆ ಸೇರಿ ವಿವಿಧ ವಿಷಯಗಳನ್ನು ಚರ್ಚಿಸಿದೆವು. ಮುಕ್ತವಾಗಿ ಭಾವನೆಗಳನ್ನು ಹಂಚಿಕೊಂಡೆವು. ಇಂಧನ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಥಿರತೆ ಇರುವಂತೆ ನೋಡಿಕೊಳ್ಳಲು ಒಪ್ಪಂದ ಏರ್ಪಡುವುದು ಮುಖ್ಯ ಎಂದೂ ಚರ್ಚಿಸಿದೆವು' ಎಂದರು.

'ಯುದ್ಧದಿಂದ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ಬಾಂಬ್, ಬಂದೂಕು, ಗುಂಡುಗಳ ಜೊತೆಗೆ ಶಾಂತಿ ಮಾತುಕತೆ ಸಾಧ್ಯವಿಲ್ಲ' ಎಂದರು.

ಗಣನೀಯ ಸೇವೆಗಾಗಿ ನೀಡಲಾಗುವ ರಷ್ಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ಮಾಸ್ಕೊದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಪ್ರಧಾನಿ ಮೋದಿ ಅವರಿಗೆ ರಷ್ಯಾ ಅಧ್ಯಕ್ಷ ಪುಟಿನ್ ಪ್ರದಾನ ಮಾಡಿದರು —ಎಎಫ್‌ಪಿ ಚಿತ್ರ

> **ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ನಾಯಕ, ವಿಶ್ವದ ಅತಿದೊಡ್ಡ ರಕ್ತದಾಹಿ ಕ್ರಿಮಿನಲ್‌ನನ್ನು ಅಪ್ಪಿಕೊಂಡಿರುವುದು ಶಾಂತಿ ಸ್ಥಾಪನೆಯ ಪ್ರಕ್ರಿಯೆಗೆ ಹಿನ್ನಡೆ**
> **ವೊಲೊಡಿಮಿರ್ ಝೆಲೆನ್‌ಸ್ಕಿ,** ಉಕ್ರೇನ್ ಅಧ್ಯಕ್ಷ

> **ಉಕ್ರೇನ್ ಬಿಕ್ಕಟ್ಟನ್ನು ಶಾಂತಿಯುತ ಮಾರ್ಗದಲ್ಲಿ ಬಗೆಹರಿಸಲು ಯತ್ನಿಸುತ್ತಿರುವುದಕ್ಕಾಗಿ ಭಾರತದ ಪ್ರಧಾನಿ ಮೋದಿಯವರಿಗೆ ಕೃತಜ್ಞತೆಗಳು**
> **ವ್ಲಾದಿಮಿರ್ ಪುಟಿನ್,** ರಷ್ಯಾ ಅಧ್ಯಕ್ಷ

ಇನ್ನಷ್ಟು ಸುದ್ದಿಗಳು 9

ರಾಮನಗರ ಹೆಸರು ಬದಲು ಯತ್ನ ● ಬಿಜೆಪಿ–ಜೆಡಿಎಸ್ ವಿರೋಧ

ಬೆಂಗಳೂರು ದಕ್ಷಿಣ: ಡಿಕೆಶಿ ಪಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ಜಿಲ್ಲೆಗೆ 'ಬೆಂಗಳೂರು ದಕ್ಷಿಣ' ಎಂದು ಮರುನಾಮಕರಣ ಮಾಡಬೇಕು ಎಂಬ ಬೇಡಿಕೆ ಮತ್ತೆ ಮುನ್ನೆಲೆಗೆ ಬಂದಿದ್ದು, ಬಿಜೆಪಿ, ಜೆಡಿಎಸ್ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ತಮ್ಮ ಜಿಲ್ಲೆಯ ಶಾಸಕರು, ಜನಪ್ರತಿನಿಧಿಗಳಿದ್ದ ನಿಯೋಗದ ನೇತೃತ್ವ ವಹಿಸಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಮನವಿ ಸಲ್ಲಿಸುವ ಮೂಲಕ 'ರಾಮನಗರದ ರಾಜಕೀಯ'ದ ಮತ್ತೊಂದು ಅಧ್ಯಾಯವನ್ನು ತೆರೆದರು.

ಕಾಂಗ್ರೆಸ್ ನಾಯಕರು ಮಂಡಿಸಿದ ಈ ಪ್ರಸ್ತಾವವನ್ನು ವಿರೋಧಿಸಿರುವ ಬಿಜೆಪಿ–ಜೆಡಿಎಸ್ ನಾಯಕರು ರಾಮನಗರ ಹೆಸರು ಬದಲಾವಣೆ ಮಾಡದಂತೆ ಒತ್ತಾಯಿಸಿದ್ದಾರೆ.

> **ರಾಮನಗರವನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡುವಂತೆ ಶಿವಕುಮಾರ್ ನೇತೃತ್ವದ ನಿಯೋಗ ಮನವಿ ನೀಡಿದೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮನವಿ ಸಲ್ಲಿಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಡಿ.ಕೆ. ಶಿವಕುಮಾರ್, 'ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ, ಹಾರೋಹಳ್ಳಿ ತಾಲೂಕುಗಳ ಭವಿಷ್ಯ ಹಾಗೂ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಮರುನಾಮಕರಣದ ಪ್ರಸ್ತಾವವನ್ನು ಸಲ್ಲಿಸಿದ್ದೇವೆ' ಎಂದು ಹೇಳಿದರು.

'ಬೆಂಗಳೂರು ನಗರ ಸೇರಿ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿಯ ನಾವೆಲ್ಲರೂ ಮೂಲತಃ ಬೆಂಗಳೂರು ಜಿಲ್ಲೆಯವರು. ಆಡಳಿತಾತ್ಮಕ ದೃಷ್ಟಿಯಿಂದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ಎಂದು ಹಿಂದೆ ವಿಭಜಿಸಲಾಗಿತ್ತು. ಈಗ ಹಿಂದಿನ ಹೆಸರನ್ನು ಉಳಿಸಿಕೊಳ್ಳಬೇಕು. ರಾಮನಗರವನ್ನು ಕೇಂದ್ರಾಡಳಿತವಾಗಿ ಇಟ್ಟುಕೊಂಡೇ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡುವುದು ಅಗತ್ಯ' ಎಂದು ಅವರು ಪ್ರತಿಪಾದಿಸಿದರು.

'ಮತ್ತೆ ಅಧಿಕಾರಕ್ಕೆ ಬಂದು ಕಿತ್ತೆಸೆಯುತ್ತೇನೆ'

ನವದೆಹಲಿ: ಕಾಂಗ್ರೆಸ್‌ನವರು ಈಗ ಜಿಲ್ಲೆಯ ಹೆಸರು ಬದಲಾವಣೆ ಮಾಡಬಹುದು, ಮತ್ತೆ ನಾನು ರಾಜ್ಯದಲ್ಲಿ ಅಧಿಕಾರಕ್ಕೆ ಬಂದೇ ಬರುತ್ತೇನೆ. ಆಗ, ಇವರು ಇಟ್ಟಿರುವ ಹೆಸರನ್ನು ಕಿತ್ತೆಸೆಯುತ್ತೇನೆ ಎಂದು ಕೇಂದ್ರದ ಭಾರಿ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಇಲ್ಲಿ ಮಾತನಾಡಿದ ಅವರು, 'ರಾಮನಗರ ಜಿಲ್ಲೆಗೆ ತನ್ನದೇ ಆದ ಇತಿಹಾಸವಿದೆ, ಪೌರಾಣಿಕ ಐತಿಹ್ಯವಿದೆ. ಜಿಲ್ಲೆಯ ಹೆಸರಿನಲ್ಲಿ ರಾಮನ ಹೆಸರಿದೆ. ಅದನ್ನು ಬದಲಿಸುವ ಮೂಲಕ ರಾಮದೇವರಿಗೆ ಅಪಚಾರ ಮಾಡಲು ಹೊರಟಿದ್ದಾರೆ. ರಾಮನಗರವು ಬೆಂಗಳೂರಿಗೆ ಸೇರ್ಪಡೆಯಾದರೆ ಮೂಟೆಗಟ್ಟಲೇ ಹಣವನ್ನು ತುಂಬಿಸಿಕೊಳ್ಳಬಹುದು ಎಂಬುದು ಅವರ ಉದ್ದೇಶ' ಎಂದು ಶಿವಕುಮಾರ್ ಹೆಸರು ಉಲ್ಲೇಖಿಸದೇ ದೂರಿದರು.

ಜಿಲ್ಲೆಗೆ ಹೆಸರು ಬದಲಾಯಿಸುವುದು ಅನಗತ್ಯ. ರಾಮನಗರ-ಚನ್ನಪಟ್ಟಣ ಅವಳಿ ನಗರ ಮಾಡಿದ್ದರೆ ಒಂದು ಹೆಸರು ಅವರಿಗೆ ಬಂದಿರುತ್ತಿತ್ತು ಎಂದರು.

5ನೇ ಪುಟ ನೋಡಿ

ಕರ್ನಾಟಕ ಸರ್ಕಾರ
ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ
17, "ವಾರ್ತಾಸೌಧ", ಭಗವಾನ್ ಮಹಾವೀರ ರಸ್ತೆ, ಬೆಂಗಳೂರು 560 001.
ದೂರವಾಣಿ : 080 22028110

ಸಂ: ವಾಸಾಸಂಇ/ಪ್ರಶಾ/ಮಾಆಕ/2024-25/3896 ದಿನಾಂಕ : 06-07-2024

"ಮಾರ್ಚ್ ಆಫ್ ಕರ್ನಾಟಕ" ಆಂಗ್ಲ ಮಾಸಿಕ ಪತ್ರಿಕೆಯನ್ನು ಮುದ್ರಿಸಿಕೊಡಲು ಇ-ಟೆಂಡರ್ (ಇ-ಪ್ರೊಕ್ಯೂರ್‌ಮೆಂಟ್)

ಇಲಾಖೆಯಿಂದ ಪ್ರಕಟಗೊಳ್ಳುವ "ಮಾರ್ಚ್ ಆಫ್ ಕರ್ನಾಟಕ" ಆಂಗ್ಲ ಮಾಸ ಪತ್ರಿಕೆಯನ್ನು ಮುದ್ರಿಸಿ ಸರಬರಾಜು ಮಾಡಲು ಬೆಂಗಳೂರಿನಲ್ಲಿ ಬಹುವರ್ಣ ಆಫ್‌ಸೆಟ್ ಮುದ್ರಣ ಯಂತ್ರ ಹೊಂದಿರುವ ಹಾಗೂ ಇ-ಆಡಳಿತ ಇಲಾಖೆಯ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೊಂದಾಯಿಸಿ ಕೊಂಡಿರುವ ಮುದ್ರಕರಿಂದ ಇ-ಟೆಂಡರನ್ನು ಆಹ್ವಾನಿಸಲಾಗಿದೆ.

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಲಾಗಿನ್ ಆಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಟೆಂಡರ್‌ಗಳನ್ನು ಇಎಂಡಿ ಮೊತ್ತದೊಂದಿಗೆ ದಿನಾಂಕ: 08-08-2024 ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬಹುದು.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಅರ್ಹತೆ ಷರತ್ತುಗಳ ವಿವರ ಇತ್ಯಾದಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in. ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ ದೂರವಾಣಿ ಸಂಖ್ಯೆ 8046010000, 8068948777, ಹಾಗೂ ಜಂಟಿ ನಿರ್ದೇಶಕರು (ಪ್ರಕಟಣೆ), ದೂರವಾಣಿ ಸಂಖ್ಯೆ: 080-22028043 ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/-
(ಹೇಮಂತ್ ಎಂ. ನಿಂಬಾಳ್ಕರ್, ಐಪಿಎಸ್)
ಆಯುಕ್ತರು

DIPR/CP/850/Zen/2024-25

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,
ಕೋಲಾರ-563101. e-mail : eepwdkolar07@gmail.com,
website: www.kpwd.gov.in, e-portal: http://kppp.karnataka.gov.in
ದೂರವಾಣಿ: 08152-222022, ಫ್ಯಾಕ್ಸ್: 08152-227443

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು-3
ಟೆಂಡರ್ ಪ್ರಕಟಣೆ ಸಂಖ್ಯೆ-06/ 2024-25 ದಿನಾಂಕ: 05.07.2024

ಕೋಲಾರ ಜಿಲ್ಲೆ ಕೋಲಾರ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 4202-01-202-1-05-386 (8443 ಠೇವಣಿ ವಂತಿಗೆ) ಅಡಿಯಲ್ಲಿ 1 ಕಟ್ಟಡ ನಿರ್ಮಾಣ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ: ರೂ. 82.49 ಲಕ್ಷಗಳು ಇ.ಎಂ.ಡಿ ಮೊತ್ತ: **ರೂ. 1.65 ಲಕ್ಷಗಳು** ಕಾಲಾವಧಿ: 6 ತಿಂಗಳು ನಿರ್ವಹಿಸಲು 3 ನೇ ದರ್ಜೆ ಮತ್ತು ಮೇಲ್ಪಟ್ಟ ನೊಂದಾಯಿತ ಗುತ್ತಿಗೆದಾರರಿಂದ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು-3 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **20.07.2024 ರಂದು ಸಂಜೆ 16.00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **22.07.2024 ರಂದು ಸಂಜೆ 16.30 ಗಂಟೆಯ** ನಂತರ ಕೆ.ಪಿ.ಪಿ.ಪೋರ್ಟಲ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆ.ಪಿ.ಪಿ.ಪೋರ್ಟಲ್ **(Viz., http://kppp.karnataka.gov.in)** ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳಾದಲ್ಲಿ ಕೆ.ಪಿ.ಪಿ.ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು / ಸೂಚಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ ಕೋಲಾರ ವಿಭಾಗ, ಕೋಲಾರ
ವಾ.ಸಾ.ಸಂ.ಇ./ ಕೋಲಾರ/ ಆರ್.ಓ.ಸಂಖ್ಯೆ 82/ಕೆಎಸ್ಎಂಸಿಎ/2024-25

PUBLIC NOTICE

We are investigating the title of (1) Divyasri Technologies, a partnership firm, having its office at No.#744, J.P. Nagar, 6th Phase, Bangalore 560 078 and (2) Sri Ventures, a partnership firm, having its office at No.#82/1, 1st floor, Dr. Rajkumar Road, Rajaji Nagar, Bangalore-560 021 **("Owners")** with respect to converted land in Survey No.131/1 measuring 3 acres, having E khata No.150200302200720006 and PID 32/131/1, within limits of Agara village panchayat and situated at B.M. Kaval Village, Kengeri Hobli, Bangalore South Taluk, Bangalore Urban District, morefully described in the schedule hereunder and hereinafter referred to as the **"Schedule Property"**.

Any person having any right, title, claim or interest in the Schedule Property/Owners must notify the undersigned with documentary proof thereof within fifteen (15) days of this publication. In case no such notice is received by us within fifteen (15) days from the date of publication of this notice, it shall be presumed that the title of the Owners with respect to the Schedule Property is clear, marketable and free from encumbrance/s of any kind whatsoever and no person has any right, title or interest of any nature whatsoever in respect of the Schedule Property or any part thereof. Claims or alleged interest, if any, which are not received within fifteen (15) days from the date of publication of this notice shall be deemed to have been waived and disregarded for all intents and purposes and shall not be binding on our client.

SCHEDULE PROPERTY

All that piece and parcel of land in Survey No.131/1 measuring 3 acres having E khata No.150200302200720006 and PID 32/131/1, within limits of Agara village panchayat and situated at B.M. Kaval Village, Kengeri Hobli, Bangalore South Taluk, Bangalore Urban District, and bounded on: East: Land in Survey No.135. West: Remaining portion of the same Survey No.131/1. North: Road and Remaining portion of the same Survey No.131/1. South: Remaining portion of the same Survey No.131/1.

Malini Raju / Vidhyadhare. S AZB & Partners,
Level 5, 37, Cunningham Road
Bengaluru-560052

ಮದ್ಯ ಸೇವಿಸಿ ಚಾಲನೆ: 23 ಚಾಲಕರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದ ಶಾಲಾ ವಾಹನಗಳ ಚಾಲಕರ ವಿರುದ್ಧ ಸಂಚಾರ ವಿಭಾಗದ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನಗರದ ವಿವಿಧೆಡೆ ಮಂಗಳವಾರ ಬೆಳಿಗ್ಗೆ ಕಾರ್ಯಾಚರಣೆ ನಡೆಸಿದ ಪೊಲೀಸರು, 3,016 ವಾಹನಗಳ ತಪಾಸಣೆ ನಡೆಸಿದರು. ಮದ್ಯ ಸೇವಿಸಿದ್ದ 23 ಚಾಲಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಿ ಚಾಲಕರ ವಾಹನ ಚಾಲನಾ (ಡಿಎಲ್) ಪರವಾನಗಿಯನ್ನು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಚೇರಿಗೆ ಕಳುಹಿಸಲಾಗಿದೆ ಹಾಗೂ ತಪಾಸಣೆ ವೇಳೆ ಫಿಟ್‌ನೆಸ್ ಪ್ರಮಾಣ ಪತ್ರ ಹೊಂದಿರದ 11 ವಾಹನಗಳನ್ನು ಸಂಬಂಧಪಟ್ಟ ಆರ್‌ಟಿಒ ವಶಕ್ಕೆ ಒಪ್ಪಿಸಲಾಗಿದೆ.

IN THE COURT OF THE 1st ADDL. SENIOR CIVIL JUDGE, BENGALURU RURAL DISTRICT AT BENGALURU
O.S. No. 1894/2022

BETWEEN: Mr. Venkatesha T.V, aged about 47 years, Son of Venkategowda, Residing at No. 150, 1st Floor, 12th Cross, JP Nagar 2nd Phase, Bangalore-560078 ...**PLAINTIFF**

AND: Smt. Ramamani and others ... **DEFENDANTS**

SUMMONS TO THE DEFENDANT NO.5

5. Smt. B.K. Sathyavathi, D/o Late B.M. Krishnappa, aged about 42 years, Residing at: No.19, 4th Cross Road, Byatarayanapura, Mysore Road, Bangalore- 560060

NOTICE

Whereas, the above named plaintiff have filed the above suit for the specific performance of contract and such other reliefs against you and other defendants. You defendant No.5 hereby summoned to appear in this court in person are by a pleader duly instructed. And able to answer all material questions relating to the suit or who shall be accompanied by some person able to answer all such question on **19-08-2024** at **11:00 AM** and you are directed to produce all the documents upon which you intend to relay in support of defense. Take notice that, in default of your appearance on the day above mentioned the suit will be heard and determined in your absence, the above case is posted for your appearance and you are hereby directed to appeared before this Hon'ble Court on **19-08-2024 at 11-00 AM.** either in person or through counsel, failing which the matter will be decided in your absence.

SCHEDULE

All that piece and parcel of the Vacant land bearing old Survey No.57/2, New Survey No.57/4, measuring an extent 1 acre 01 guntas situated at Bheemanakuppee Village, Kengeri Hobli, Bangalore South Taluk, Presently with the jurisdiction of Bangalore Development authority measuring an extent 1 acre 01 guntas and the same is bounded on the: **EAST BY:** Property belongs to Girijamma W/o Narayana, **WEST BY:** Road, **NORTH BY:** Property belongs to Huche Gowda, **SOUTH BY:** Property belongs Girijamma W/o Narayana

Given under my hand and seal of this Court on 05-07-2024 at Bengaluru.

By Order of the Court, Chief Ministerial Officer, Senior Civil Judge Court, Bengaluru Rural Dist, Bengaluru

Advocate for plaintiff: **Gowtham Kumar G.S**
Bengaluru.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು, ಈ ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಸ್ವತ್ತನ್ನು ಅದರ ಪ್ರಸಕ್ತ ಮಾಲೀಕರಾದ ಶ್ರೀ. ಜಿ. ರಾಜ್ ಕುಮಾರ್ ಬಿನ್ ಗಣೇಶ್ ಮೂರ್ತಿ, ವಿಳಾಸ: # 803, 3ನೇ ಮೈನ್, ಹೆಚ್‌ಎಎಲ್ 3ನೇ ಹಂತ, ಹೊಸ ತಿಪ್ಪಸಂದ್ರ, ಬೆಂಗಳೂರು ಉತ್ತರ, ಬೆಂಗಳೂರು-560075 ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ ಮತ್ತು ಸದರಿ ಮಾಲೀಕರು, ಸದರಿ ಸ್ವತ್ತಿನ ಮೇಲೆ ಸ್ಪಷ್ಟ ಹಾಗೂ ವ್ಯಾಪಾರ ಯೋಗ್ಯ ಹಕ್ಕುಗಳನ್ನು ಹೊಂದಿದ್ದೇನೆ. ಎಂದು ಪ್ರತಿಪಾದಿಸಿರುತ್ತಾರೆ. ಆದ್ದರಿಂದ ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು ಹಣಕಾಸು ಸಂಸ್ಥೆಗಳು ಮತ್ತು ಶಾಸನಬದ್ಧ ಪ್ರಾಧಿಕಾರಗಳು, ಯಾವುದೇ ಸ್ವರೂಪದ ಹಕ್ಕು, ಅಧಿಕಾರ ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ ಮತ್ತು ಅಥವಾ ಮೇಲ್ಕಂಡ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ಕಡ್ಡಾಯವಾಗಿ ಈಗಿನಿಂದ ಹದಿನೈದು (15) ದಿನಗಳೊಳಗೆ, ತಮ್ಮ ಕ್ಲೈಮ್ ಮತ್ತು ಅಥವಾ ಆಕ್ಷೇಪಣೆಗಳನ್ನು ಈ ಕೆಳಗಿನ ಸಹಿದಾರರಿಗೆ ಲಿಖಿತ ರೂಪದಲ್ಲಿ ಪೂರಕ ದಾಖಲಾತಿಗಳ ಸಮೇತ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ಕ್ಲೈಮ್‌ಗಳಾಗಲೀ, ಆಕ್ಷೇಪಣೆಗಳಾಗಲೀ ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ನನ್ನ ಕಕ್ಷಿದಾರರು, ಅಗತ್ಯ ಶಾಸನಬದ್ಧ ಹಾಗೂ ಕಾನೂನಾತ್ಮಕ ಔಪಚಾರಿಕ ಪ್ರಕ್ರಿಯೆಗಳನ್ನು ಪೂರ್ಣಸುವ ಮೂಲಕ, ಸ್ವತ್ತಿನ ಪ್ರಸಕ್ತ ಮಾಲೀಕರೊಂದಿಗೆ ತಮ್ಮ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಮುಂದಾಗುತ್ತಾರೆ.

ಷೆಡ್ಯೂಲ್ ಸ್ವತ್ತುಗಳ ವಿವರ

ಐಟಂ ನಂ.1 : ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಸೂಲಿಬೆಲೆ ಗ್ರಾಮದ ಹಳೇ ಸರ್ವೆ ನಂ.180/2, ಹೊಸ ಸರ್ವೆ ನಂ.180/3 ರಲ್ಲಿ ವಿಸ್ತೀರ್ಣ 0-02 ಗುಂಟೆ ಜಮೀನು ಹಾಗೂ **ಐಟಂ ನಂ.2 :** ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಸೂಲಿಬೆಲೆ ಗ್ರಾಮದ ಹಳೇ ಸರ್ವೆ ನಂ.188, ಹೊಸ ಸರ್ವೆ ನಂ. 188/2 ರಲ್ಲಿ ವಿಸ್ತೀರ್ಣ 0-08.1/4 ಗುಂಟೆ ಜಮೀನುಗಳು ಒಂದಕ್ಕೊಂದು ಲಗತ್ತಾಗಿರುವುದರಿಂದ ಪೂರ್ತಾ ಜಮೀನುಗಳಿಗೆ ಚಕ್ಕುಬಂದಿ:-

ಪೂರ್ವಕ್ಕೆ : ಶಾಳಪ್ಪ ರವರ ಎಸ್.ಪಿ.ನಾರಾಯಣಸ್ವಾಮಿ ರವರ ಜಮೀನು, **ಪಶ್ಚಿಮಕ್ಕೆ :** ಪಿಳ್ಳಣ್ಣ ರವರ ನಾರಾಯಣಪ್ಪ ರವರ ಜಮೀನು, **ಉತ್ತರಕ್ಕೆ :** ನೀಲಮ್ಮ ರವರ ಜಮೀನು, **ದಕ್ಷಿಣಕ್ಕೆ :** ಶ್ಯಾಳಪ್ಪ ರವರ ರಮೇಶ್ ರವರ ಜಮೀನು.

ನಮ್ಮ ಕಕ್ಷಿದಾರರ ಪರವಾಗಿ ವಕೀಲರು
ಜಿ. ಅಂಡ್ ಎಸ್. ಲಾ ಅಸೋಸಿಯೇಟ್ಸ್
ಸಿ.ಜಿ. ಗೀತಾ, ವಕೀಲರು
ಕುಂಭೇಶ್ವರ ಕಾಂಪ್ಲೆಕ್ಸ್, 1ನೇ ಮಹಡಿ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್. ಫೋನ್ ನಂ. 9964614149

'ಗಿಗ್ ಕಾರ್ಮಿಕರಿಗೆ ಇಎಸ್‌ಐ ಕಲ್ಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿಗ್ ಕ್ಷೇತ್ರದ ಕಾರ್ಮಿಕರಿಗೆ ಕಾರ್ಮಿಕರ ರಾಜ್ಯ ವಿಮಾ ನಿಗಮದಿಂದ ವಿಮೆ (ಇಎಸ್‌ಐ) ಮತ್ತು ಭವಿಷ್ಯನಿಧಿ (ಪಿಎಫ್) ಸೌಲಭ್ಯಗಳನ್ನು ಒದಗಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್‌ನರ್ಸ್ ಯೂನಿಯನ್ ಅಧ್ಯಕ್ಷ ವಿನಯ್ ಸಾರಥಿ ಒತ್ತಾಯಿಸಿದ್ದಾರೆ.

ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆಯ ಪ್ರಸ್ತಾವವಿರುವ 'ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ-2024'ರ ಕರಡನ್ನು ಜೂನ್ 28ರಂದು ಪ್ರಕಟಿಸಿರುವ ಕಾರ್ಮಿಕ ಇಲಾಖೆ, ಸಲಹೆ ಹಾಗೂ ಆಕ್ಷೇಪಣೆಗಳನ್ನು ಆಹ್ವಾನಿಸಿದೆ.

'ಮಂಡಳಿಯಲ್ಲಿ ಸಚಿವರು, ಅಧಿಕಾರಿಗಳ ಜೊತೆಗೆ ಗಿಗ್ ಕಾರ್ಮಿಕರು ಮತ್ತು ಅಗ್ರಿಗೇಟರ್‌ಗಳ ತಲಾ ಐವರು ಸದಸ್ಯರು ಇರುವ ಸಮಿತಿ ರಚಿಸಬೇಕು. ಪ್ರತಿ ಜಿಲ್ಲೆಯಲ್ಲಿ ಕಾರ್ಮಿಕರು ದೂರು ನೀಡಲು ಅವಕಾಶ ಕಲ್ಪಿಸಲು ಕಾರ್ಮಿಕ ಅಧಿಕಾರಿಗಳನ್ನು ಕುಂದುಕೊರತೆ ಪರಿಹಾರ ಅಧಿಕಾರಿಯಾಗಿ ನೇಮಿಸಬೇಕು' ಎಂದು ವಿನಯ್ ಸಾರಥಿ ಒತ್ತಾಯಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಕಾನಿಇಂ(ವಿ)/ಸಕಾನಿಇಂ(ಕ)/ಕೊಬೃಕಾವಿ/ಕ-29/24-25/943-45 ದಿನಾಂಕ: 08.07.2024

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ತಿಳಿವಳಿಕೆಗೆ, ಈ ಮೂಲಕ ಪ್ರಕಟಿಸುವುದೇನೆಂದರೆ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆಯ ರಾಮದೇವರಗುಡಿ ಬಳಿ ನಿರ್ಮಿಸಲಾಗಿರುವ 66/11 ಕೆವಿ ವಿದ್ಯುತ್ ಉಪಕೇಂದ್ರದ ಸುಮಾರು 4.210 ಕಿ.ಮೀ. ಉದ್ದದ 66 ಕೆವಿ ವಿದ್ಯುತ್ ಪ್ರಸರಣ ಮಾರ್ಗವು, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆಯ ಎಸ್.ಐ. ಗೊಲ್ಲಚಿನ್ನಪ್ಪನಹಳ್ಳಿ, ರಾಯಪ್ಪನಹಳ್ಳಿ, ಸೊಪ್ಪಹಳ್ಳಿ, ದೇವಸ್ಥಾನದ ಹೊಸಹಳ್ಳಿ, ಇನಿಮಿಂಚೇನಹಳ್ಳಿ, ಬಳಗೆರೆ ಗ್ರಾಮಗಳ ಮೂಲಕ ಹಾದು ಹೋಗಿರುತ್ತದೆ. ಈ ಮಾರ್ಗವನ್ನು ದಿನಾಂಕ : **15.07.2024 ರಂದು ಅಥವಾ ತದನಂತರ** ಚಾಲನೆಗೊಳಿಸಲಾಗುವುದು. ಈ ವಿದ್ಯುತ್ ಹರಿಯುವ ತಂತಿಗಳು ಜೀವಕ್ಕೆ ಅಪಾಯಕಾರಿಯಾಗಿರುವುದರಿಂದ ಗೋಪುರಗಳನ್ನು ಹತ್ತಬಾರದಾಗಿ, ತಂತಿಗಳ ಮೇಲೆ ಲೋಹದ ತುಂಡುಗಳು ಅಥವಾ ಮರದ ಹಸಿರು ಕೊಂಬೆಗಳು ಇತ್ಯಾದಿಗಳನ್ನು ಎಸೆಯಬಾರದಾಗಿ ಹಾಗೂ ಗೋಪುರಗಳಿಗೆ ದನಕರುಗಳನ್ನು ಕಟ್ಟಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ. ಸದರಿ ಪ್ರಕಟಣೆ ನೀಡಿದ್ದಾಗ್ಯೂ ಸಹ ಯಾರಾದರೂ ಗೋಪುರಗಳನ್ನು ಹತ್ತುವುದು ಅಥವಾ ಹಸಿರು ಕೊಂಬೆ, ಲೋಹದ ತುಂಡುಗಳನ್ನು ಎಸೆಯುವುದು ಅಥವಾ ದನಕರುಗಳನ್ನು ಗೋಪುರಗಳಿಗೆ ಕಟ್ಟುವುದು ಇವುಗಳಿಂದ ಉಂಟಾಗುವ ಯಾವುದೇ ಆಕಸ್ಮಿಕ ಘಟನೆಗಳಿಗೆ ಮತ್ತು ಕೃತ್ಯಗಳಿಗೆ ಸ್ವತಃ ಅವರೇ ಜವಾಬ್ದಾರರಾಗಿರುತ್ತಾರೆ ಮತ್ತು ಯಾವುದೇ ರೀತಿಯ ದುಷ್ಪರಿಣಾಮಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗಿರುವುದಿಲ್ಲ.

ಈ ಮಾರ್ಗ ಹಾದುಹೋಗಿರುವ ಜಮೀನು ಮಾಲೀಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಮಾರ್ಗದ ಟವರ್ ಮಧ್ಯದಿಂದ ಎರಡೂ ಬದಿ 9 ಮೀಟರ್ (ಒಟ್ಟು 18 ಮೀ)** ಆವರಣದಲ್ಲಿ ಮರಗಿಡಗಳನ್ನು ಬೆಳೆಸುವುದು ಜೀವಕ್ಕೆ ಅಪಾಯಕಾರಿಯಾಗಿರುವುದರಿಂದ, ಈ ಆವರಣದಲ್ಲಿ ಮರಗಿಡಗಳನ್ನು ಬೆಳೆಸಬಾರದಾಗಿ ಈ ಮೂಲಕ ಮತ್ತೊಮ್ಮೆ ತಿಳಿಸಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ಕೋಲಾರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-35/785/2024-25 ದಿನಾಂಕ: 09-07-2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-ಎ ರಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ಕೈಗಾರಿಕ (ಹೈಟೆಕ್)'** ವಲಯದಿಂದ **'ವಸತಿ'** ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	Sri Muniyappa & M/s. Iinspire Worldcity Projects Pvt. Ltd., #351, Ground Floor, Kasturaba Road Cross, Off Lavelle Road, Bangalore - 560001.	ಆನೇಕಲ್	ಸರ್ಜಾಪುರ	ಚೂಡಸಂದ್ರ	6/1	2A-17G	ಕೈಗಾರಿಕ (ಹೈಟೆಕ್) ವಲಯ	ವಸತಿ
					6/2	2A-08G		
					9(ಪಿ)	3A-09G		
					10(ಪಿ)	0A-08G		
					ಒಟ್ಟು	8A-02G		

ಷರಾ: ಅರ್ಜಿದಾರರು ಭೂ ಉಪಯೋಗ ಬದಲಾವಣೆ ಮಾಡಿ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಪ್ರದೇಶದ ಸಾರ್ವಜನಿಕರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ ಹಾಗೂ ಸುತ್ತಮುತ್ತಲಿನ ಪ್ರದೇಶವು ಅಭಿವೃದ್ಧಿ ಹೊಂದುವುದಲ್ಲದೆ ಇತರೆ ಸಾರ್ವಜನಿಕ ಸಣ್ಣ ಸಣ್ಣ ಉದ್ಯಮಗಳು ಅಭಿವೃದ್ಧಿ ಹೊಂದಲು ಸಹಾಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಕೈಗಾರಿಕ (ಹೈಟೆಕ್) ವಲಯ'** ದಿಂದ **'ವಸತಿ ವಲಯಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 22263479.

ಸಂಖ್ಯೆ: STRRPA/TP/ಭೂ.ಪ-ಆನ್‌ಲೈನ್/20/2024-25 ದಿನಾಂಕ: 09.07.2024

"ಸಾರ್ವಜನಿಕ ಪ್ರಕಟಣೆ"

ಅರ್ಜಿದಾರರಾದ Gomedh Ambika Girinar Bhakti Dham Trust (Religious And Charitable Trust) ಇದರ ಮ್ಯಾನೇಜಿಂಗ್ ಡೈರೆಕ್ಟರ್ ಆದ ಅನಿಲ್ ಕುಮಾರ್ ಸಿ ಜೈನ್ ಬಿನ್ ಚಗನ್ ಲಾಲ್ ಪಿ ಜೈನ್., ಇವರು ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಕೊನಘಟ್ಟ ಗ್ರಾಮದ ಸರ್ವೆ ನಂ. 127/6ರಲ್ಲಿ 01ಎಕರೆ-09ಗುಂಟೆ ವಿಸ್ತೀರ್ಣದ ಜಮೀನನ್ನು Cultural Buildings ಉದ್ದೇಶಕ್ಕೆ ಭೂಪರಿವರ್ತನೆ ಕೋರಿರುತ್ತಾರೆ. ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ, ಎಲ್.ಆರ್.ಡಿ.ಇ. ಕಟ್ಟಡ, ನಂ.01, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052. ಬೆಂಗಳೂರು ಜಿಲ್ಲೆ ಇವರಿಗೆ ಲಿಖಿತ ರೂಪದಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ.

ಸಹಿ/-
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾ.ಪ್ರ/836/2024-25

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

ACCOUNTANT MALE/ female, 3-4 years experience full knowledge of accounts, tally, M.S.Office, 2 wheeler DL required, prefer staying around Yeshwanthpur, 20-23K, mail-id: hrnarayan97@gmail.com

WANTED ACCOUNTANT for HUL-Distribution in Doddaballapura, APMC. Qualification: Any Graduate, Payment: 12000-15000. Contact: 9845455640

THE SIVAKASI LIONS MATRICULATION HIGHER SECONDARY SCHOOL
Virudhunagar Road, Anaikuttam P.O., Sivakasi-626130, Tamilnadu
ISO 9001:2015 and 5S Certified Institution

TEACHERS WANTED:
Invites application from Professionally Qualified, Experienced, Dedicated and Passionate CBSE Trained Teachers with excellent communication skills may apply for the following posts.
- PRT. TGT, PGT for Grades 1 to 8 in all Subjects.

Senior Campus:
- Part time/Full time Study Supervisor (Male / Female) (Maths, Physics, Chemistry) (Retired Teachers can also apply)
- TGT in Computer Science- M.Sc., B.Ed
- TGT in Social Science- M.A., B.Ed.
- Technical Engineer- B.E. (ECE) (Minimum 5 Years Experience)
- Office Assistant with Computer Knowledge
- Hostel Warden- Boys Hostel

Emoluments:
- Lucrative salary and EPF will be provided as per management Rules.
- Selected candidates can stay in the Hostel if needed.

Interested candidates may send their resume to:
correspondent@thesivakasilionsschool.in
Contact No: **93848 58224, 95972 74441**
-Principal

KARNATAKA DIGITAL ECONOMY MISSION (KDEM)
An initiative of the Govt. of Karnataka
CAREER OPPORTUNITIES
Call for Applicants
- **VP – ESDM, Beyond Bengaluru, Talent Accelerator & IT/GCC** 15-18 years of Experience, Location- Bengaluru
- **Associate – Startup & Innovation / Marketing** 2-5 years of Experience | Location: Bengaluru
- **Project Manager** 8-10 years of Experience | Location: Bengaluru
- **Research Associate** 2-7 years of Experience | Location: Bengaluru

The detailed Job Description and application process are available at
www.karnatakadigital.in/careers
THE DEADLINE FOR APPLICATIONS IS 19TH JULY 2024

HIGH SCHOOL Computer & English Language Teachers needed for CHITRAKOOTA CBSE School in Nagarbhavi Kengeri Ring Road, Immediately Call: 7829647333

Engg/ Production Technical

REQUIRED EXPERIENCED CIVIL ENGINEERS for a Reputed Construction Co. Contact: 94490-53904, Mail: kmc185km@gmail.com

General

WANTED FEMALE Front Office Assistant for a Service Oriented Organization. Contact: 080- 22250423 between 11 a.m. to 4 p.m.

HRD & Admin

ADMIN. EXECUTIVE with min. 5yrs. Experience. Excellent communication, Kannada & English language skills with working knowledge of M S Office required. ISME, Sarjapur Road. 080-28019805. jobs@isme.in

Wanted

WANTED FEMALE Office Assistant- Any Degree, Good Communication Skills English & Hindi for Pvt Ltd Company in Rajajinagar Contact: 9108458798/ 9845579620

Teachers/ Professors

WANTED IN house Chilkalnnerpur, Shiddlagatta Place. Principal, Teachers for Primary & High School section of CBSC & State syllabus @ CERTAINTY RANK ACADEMY. Date- 14.07.2024, Sunday 10.30 AM @ #20, 2nd floor 4th main NS Palya, Abbayyappa Layout, 2nd Stage BTM Layout, Bangalore- 560076. Ph: 9347183823. Email: info@certaintyrankacademy.com. Open for all qualified candidates, preferably educators from Kerala

SRI LAL BAHADUR SHASTRY MEMORIAL HIGH SCHOOL
No.19/01, 1st Cross, Cholurpalya, Magadi Road Post, Bengaluru-560023.
WANTED
SCIENCE TEACHER (PCMB)
TO Teach Sixth to Tenth Standard.
Contact immediately between 09-00 a.m. 04-00 p.m.
Sd/- Secretary
Mobile Number : **9449976761**

LITTLE LILLYS Education Society Requires Graduate/ Post Graduate Teachers High School: Physics & Chemistry Head Mistress and Office Staff for Accounts Section Salary: 3.0 Lakhs to 4.0 Lakhs Contact: 9731558585/ 9535498177

REQUIRES LADY Teacher For English and Computer For Primary & High School. Hebbal, Kempapura Call:9008981637

WANTED TEACHERS ICSE Curriculum MSc, BEd, BIOLOGY. Contact: OXFORD PUBLIC SCHOOL, Srikantapura Anchepalya Near Jindal Public School Tumkur Road Bangalore Mobile: 9620075574, 9945622240

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9886213331

BUSINESS

Business to Business

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

Business Offers

Distributors

RS.1.50.000/ MORE PM Initial After Six Month. Rs.250000/ Excellent Exclusive & Concrete. Super Distributorship For South India- 7775842189 Apply S.K.ENTERPRISES

REAL ESTATE SELLING

Sites

Anjanapura

"SALE 30X40 East facing site Anjanapura Layout 9th Block, near Recoup Hospital. Contact: 7760388034/ 9242135834"

Peenya

BLUEJAY SUNSHINE 152 East facing (2 teak trees) 1185 sq.ft BDA approved near to Nagasandra metro. 8200/ - negotiable 9980162483

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Lost

DOCUMENT LOST
I, **Chandrappa V** R/at # 1228, 11th Main, WOC Road, 2nd Stage, Mahalakshmipuram, Bangalore, have lost my **Original Absolute Mother Deed Document Identification No. 4102/11-12 Khata No.110 & Site No.110, PNY No.1-02602-12-13 and DSP-1-04102-11-12**. while in transit *Finders please contact:* **9986541958** or inform nearby the police station.

Change of Name

CHANGE OF NAME
I, **Sonal Vasudev Thellakula,** Residing at No.28, Vasu Nivas, 1st Main Road, Kalidasa Marga, Gandhinagar, Bengaluru-560009, have changed my name to **SONAL VASUDEV** vide affidavit dated 09-07-2024, sworn to before notary L Gopalakrishna, Bengaluru. Henceforth I shall be known as **SONAL VASUDEV** only

I, REKHA R/o #6, Ayee Krupe, Venkatgiriyappa Garden, 6th 'C' Main, Ganeshnagar, Kodigehalli, Bengaluru-97 have changed my name as REKHA S HEGDE Vide affidavit dated 28.06.2024 before Notary Diwakar N Kagawad Bangalore

I, SHYLAJA SURESH have changed my name as SHYLAJA NARAYANSWAMY Vide affidavit dated 5/07/2024 before Notary Mohammed Hussain K, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕ್ಲಾಸಿಫೈಡ್ಸ್
ADMISSION CORNER



ಕ್ಲಾಸಿಫೈಡ್ಸ್
HEALTH SPECIAL

ಬಿಬಿಎಂಪಿ ವ್ಯಾಪ್ತಿಯಲ್ಲಿ 250 ಕೆರೆಗಳು • ನಿರ್ವಹಣೆಗೆ ವರ್ಷಕ್ಕೆ ₹30 ಕೋಟಿ ಅಗತ್ಯ • ಹೈಕೋರ್ಟ್‌ಗೆ ಮಾಹಿತಿ

ಖಾಸಗಿ ತೆಕ್ಕೆಗೆ ಕೆರೆ ನಿರ್ವಹಣೆ: ನೀತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ 205 ಕೆರೆಗಳ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸುವ ನಿಟ್ಟಿನಲ್ಲಿ ನೀತಿಯೊಂದನ್ನು ರೂಪಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ರಾಜಕಾಲುವೆ, ಕೆರೆ ಜಾಗಗಳ ಒತ್ತುವರಿ ತೆರವುಗೊಳಿಸಲು ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ,'ಸಿಟಿಜನ್ ಆ್ಯಕ್ಷನ್ ಗ್ರೂಪ್' ಹಾಗೂ ಇತರರು 2014ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, 'ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 205 ಕೆರೆಗಳಿವೆ. ಅವುಗಳ ನಿರ್ವಹಣೆಗೆ ಪಾಲಿಕೆಗೆ ವಾರ್ಷಿಕ ಅಂದಾಜು ₹30 ಕೋಟಿ ಬೇಕು. ಇಷ್ಟೊಂದು ದೊಡ್ಡ ಮೊತ್ತವನ್ನು ಪ್ರತಿ ವರ್ಷವೂ ಹೊಂದಿಸುವುದು ಕಷ್ಟವಾಗಲಿದೆ. ಆದ್ದರಿಂದ, ಕೆರೆಗಳ ನಿರ್ವಹಣೆಯನ್ನು ಸ್ಥಳೀಯ ನಿವಾಸಿಗಳ ಸಂಘಗಳು, ಸಹಕಾರ ಸಂಘಗಳು, ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು (ಎನ್ ಜಿಒ), ಕಾರ್ಪೊರೇಟ್ ಕಂಪನಿಗಳಿಗೆ ವಹಿಸುವ ಸಂಬಂಧ ನೀತಿ ರೂಪಿಸಲಾಗಿದೆ. ಕೆರೆಗಳ ಮಾಲೀಕತ್ವ, ಮೇಲ್ವಿಚಾರಣೆ ಸರ್ಕಾರ ಮತ್ತು ಪಾಲಿಕೆಯದ್ದೇ ಆಗಿರಲಿದೆ. ಯಾವುದೇ ಕಾರಣಕ್ಕೂ ಮಾಲೀಕತ್ವವನ್ನು ಖಾಸಗಿಯವರಿಗೆ ಬಿಟ್ಟುಕೊಡುವುದಿಲ್ಲ. ಅವರು ಕೆರೆ ನಿರ್ವಹಣೆ ಮತ್ತು ಅಭಿವದ್ಧಿಗೆ ಹಣ ಖರ್ಚು ಮಾಡಬೇಕು ಅಷ್ಟೇ. ಈ ವಿಷಯದಲ್ಲಿ ಆಸಕ್ತರ ಅಭಿಪ್ರಾಯ ಪಡೆಯಲಾಗುವುದು, ಸರ್ಕಾರದ ಷರತ್ತುಗಳನ್ನು ಒಪ್ಪಿಕೊಂಡವರಿಗೆ ನಿರ್ವಹಣೆಯ ಜವಾಬ್ದಾರಿ ವಹಿಸಲಾಗುತ್ತದೆ' ಎಂದರು.

ಇದನ್ನು ಬಲವಾಗಿ ಆಕ್ಷೇಪಿಸಿದ ಅರ್ಜಿದಾರರ ಪರ ಹಿರಿಯ ವಕೀಲೆ ಜಯ್ನಾ ಕೊಠಾರಿ ಹಾಗೂ ಜಿ.ಆರ್. ಮೋಹನ್, 'ಸ್ಥಳೀಯ ನಿವಾಸಿಗಳ ಸಂಘಗಳು, ಕೆರೆಯ ಅಕ್ಕಪಕ್ಕದ ನಿವಾಸಿಗಳಿಗೆ ಕೆರೆ ನಿರ್ವಹಣೆ ಜವಾಬ್ದಾರಿ ವಹಿಸಲು ನಮ್ಮ ಆಕ್ಷೇಪವೇನೂ ಇಲ್ಲ. ಆದರೆ, ಕಾರ್ಪೊರೇಟ್ ಕಂಪನಿಗಳ ವಿಚಾರದಲ್ಲಿ ಕೆಲವು ಅನುಮಾನಗಳಿವೆ. ಅಂತಿಮವಾಗಿ ನಗರದ ಕೆರೆಗಳು ಉಳಿಯಬೇಕು ಎಂಬುದಷ್ಟೇ ನಮ್ಮ ಉದ್ದೇಶ' ಎಂದರು.

ಇದಕ್ಕೆ ಶಶಿಕಿರಣ್ ಶೆಟ್ಟಿ, 'ಕೆರೆಗಳ ಉಳಿವಿಗೆ ಕಾರ್ಪೊರೇಟ್ ಕಂಪನಿಗಳ ನೆರವು ಅಗತ್ಯವಿದೆ. ನಿರ್ವಹಣೆಗೆ ಹಣ ಬೇಕು. ಈ ವಿಷಯದಲ್ಲಿ ಅರ್ಜಿದಾರರು ಯಾವುದೇ ಅನುಮಾನ ವ್ಯಕ್ತಪಡಿಸುವ ಅಗತ್ಯವಿಲ್ಲ. ಕೆರೆಗಳು ಉಳಿಯಬೇಕೆಂಬುದೇ ಸರ್ಕಾರದ ಉದ್ದೇಶವೂ ಆಗಿದೆ. ಎಲ್ಲವನ್ನೂ ನೀತಿಯಲ್ಲಿ ವಿವರಿಸಲಾಗಿದೆ. ಅಂತೆಯೇ, ಅರ್ಜಿದಾರರ ಬಳಿ ಸೂಕ್ತ ಸಲಹೆಗಳಿದ್ದರೆ ಅವುಗಳನ್ನು ಸ್ವೀಕರಿಸಿ ನಿಯಮಾನುಸಾರ ಅಳವಡಿಸಿಕೊಳ್ಳಲು ಸರ್ಕಾರ ಮುಕ್ತ ಮನಸ್ಸು ಹೊಂದಿದೆ' ಎಂದು ಭರವಸೆ ನೀಡಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಸರ್ಕಾರದ ನೀತಿಗೆ ಪೂರಕವಾದ ಸಲಹೆಗಳಿದ್ದರೆ ಅರ್ಜಿದಾರರು ಸರ್ಕಾರ ಮತ್ತು ಪಾಲಿಕೆಗೆ ಅವುಗಳನ್ನು ಸಲ್ಲಿಸಬಹುದು' ಎಂದು ಸೂಚಿಸಿ ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿತು.

ಖಾಲಿ ಹುದ್ದೆ ಭರ್ತಿ ಕೋರಿಕೆ: ನೋಟಿಸ್

ಬೆಂಗಳೂರು: 'ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ವಕೀಲ ವಿ.ಆರ್.ರಘುನಾಥನ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಮಧ್ಯಂತರ ಆದೇಶ ನೀಡಲು ನಿರಾಕರಿಸಿ ವಿಚಾರಣೆ ಮುಂದೂಡಿತು.

ಅರ್ಜಿಯಲ್ಲೇನಿದೆ?: 'ಕೆಲವು ತಿಂಗಳುಗಳಿಂದ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಒಂದಷ್ಟು ಹುದ್ದೆಗಳು ಭರ್ತಿಯಾಗದೇ ಖಾಲಿ ಉಳಿದಿವೆ. ಇದರಿಂದ ಗ್ರಾಹಕರಿಗೆ ತ್ವರಿತವಾಗಿ ಪರಿಹಾರ ನೀಡಲು ಸಾಧ್ಯವಾಗುತ್ತಿಲ್ಲ. ಒಂದೆಡೆ ಪ್ರಕರಣಗಳು ಹೆಚ್ಚುತ್ತಿದ್ದರೆ ಮತ್ತೊಂದೆಡೆ ಅಧ್ಯಕ್ಷರು ಮತ್ತು ಸದಸ್ಯರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಕರ್ನಾಟಕ ರಾಜ್ಯ ಗ್ರಾಹಕರ ಪರಿಹಾರ ಆಯೋಗದ ಅಧ್ಯಕ್ಷರ ಅವಧಿ ಮೇ 17ಕ್ಕೇ ಮುಕ್ತಾಯಗೊಂಡಿದೆ. ಇದುವರೆಗೂ ಆ ಹುದ್ದೆಗೆ ಹೊಸ ಅಭ್ಯರ್ಥಿಯ ನೇಮಕ ಆಗಿಲ್ಲ. ಆದ್ದರಿಂದ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆಯೋಗದಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ದ್ವೇಷ ಭಾಷಣ: ಕ್ರಮ ಕೋರಿದ ಪಿಐಎಲ್ ವಜಾ

ಬೆಂಗಳೂರು: 'ದ್ವೇಷ ಭಾಷಣದ ಆರೋಪ ಎದುರಿಸುತ್ತಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿಯ ಸಂಸದ ತೇಜಸ್ವಿ ಸೂರ್ಯ, ವಿಧಾನಸಭಾ ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಪರಿಷತ್ ಸದಸ್ಯ ಸಿ.ಟಿ.ರವಿ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಜಿ ಸಂಸದ ಪ್ರತಾಪ ಸಿಂಹ, ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್, ಚಕ್ರವರ್ತಿ ಸೂಲಿಬೆಲೆ, ಕೆ.ಎಸ್. ಈಶ್ವರಪ್ಪ ವಿರುದ್ಧ ಕ್ರಮ ಕೈಗೊಳ್ಳಲು ವಿಫಲವಾಗಿರುವ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮೊಹಮ್ಮದ್ ಖಲೀಮುಲ್ಲಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ರಾಜಕೀಯ ಮತ್ತು ಕೋಮು ಭಾವನೆಯ ದುರುದ್ದೇಶದಿಂದ ಕೂಡಿದ್ದು, ಇದನ್ನು ಪುರಸ್ಕರಿಸಲಾಗದು. ನ್ಯಾಯವಾಗಿ ಇಂತಹ ಅರ್ಜಿಗೆ ದಂಡ ವಿಧಿಸಿ ವಜಾ ಮಾಡಬೇಕು. ಆದರೆ, ಹಾಗೆ ಮಾಡುತ್ತಿಲ್ಲ' ಎಂದು ಎಚ್ಚರಿಕೆ ನೀಡಿದ ನ್ಯಾಯಪೀಠ ಅರ್ಜಿ ವಜಾ ಮಾಡಿ ಆದೇಶಿಸಿದೆ.

ವಿಚಾರಣೆ ವೇಳೆ ನ್ಯಾಯಪೀಠವು ಅರ್ಜಿದಾರರ ಪರ ವಕೀಲ ಅನ್ವರ್ ಅವರನ್ನು, 'ನಿಮ್ಮ ಅರ್ಜಿದಾರ ಖಲೀಮುಲ್ಲಾ ಅವರ ವೃತ್ತಿ ಏನು' ಎಂದು ಪ್ರಶ್ನಿಸಿತು. ಇದಕ್ಕೆ ಉತ್ತರಿಸಲು ಅನ್ವರ್ ತಡವರಿಸಿದರಲ್ಲದೆ, ವಿಚಾರಣೆ ಮುಂದೂಡುವಂತೆ ಪರಿ ಪರಿಯಾಗಿ ಕೋರಿದರು. ಅಂತಿಮವಾಗಿ, 'ಅರ್ಜಿದಾರ ಖಲೀಮುಲ್ಲಾ ಸಿವಿಲ್ ಎಂಜಿನಿಯರ್ ಮತ್ತು ಸಾಮಾಜಿಕ ಕಾರ್ಯಕರ್ತರೂ ಆಗಿದ್ದಾರೆ' ಎಂದರು. ದಾಖಲೆಯನ್ನು ಪರಿಶೀಲಿಸಿದ ನ್ಯಾಯಪೀಠ, ನಿಮ್ಮ ಅರ್ಜಿದಾರರು ಏನು ಮಾಡುತ್ತಿದ್ದಾರೆ ಎಂಬುದೂ ನಿಮಗೆ ತಿಳಿದಿಲ್ಲ ಎಂದರೆ ಯಾಕೆ ಅರ್ಜಿ ಸಲ್ಲಿಸುತ್ತೀರಿ? ಕ್ಷುಲ್ಲಕ ಅರ್ಜಿಗಳನ್ನು ಹೈಕೋರ್ಟ್ ಗೆ ಸಲ್ಲಿಸುವ ಮೂಲಕ ಯಾಕೆ ಈ ವೇದಿಕೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತೀರಿ? ಸಿವಿಲ್ ಕಾಂಟ್ರ್ಯಾಕ್ಟರ್ ಇಂತಹ ಅನ್ ಸಿವಿಲ್ ಅರ್ಜಿ ಸಲ್ಲಿಸಿದ್ದಾರೆಯೇ? ಎಂದು ಮೌಖಿಕವಾಗಿ ಕಿಡಿಕಾರಿತು.

ಬ್ಯಾಂಕ್ ಆಫೀಸರ್ಸ್ ಮತ್ತು ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆಯಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಶೆಡ್ ಅನ್ನು ಬಿಡಿಎ ಸಿಬ್ಬಂದಿ ತೆರವುಗೊಳಿಸಿದರು

ಬಿಡಿಎ ಕಾರ್ಯಾಚರಣೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಘುವನಹಳ್ಳಿ, ದೊಡ್ಡಕಲ್ಲಸಂದ್ರ ಮತ್ತು ತಿಪ್ಪಸಂದ್ರ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿನ ಒತ್ತುವರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂಗಳವಾರ ತೆರವುಗೊಳಿಸಿತು.

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿಯ ದೊಡ್ಡಕಲ್ಲಸಂದ್ರ, ರಘುವನಹಳ್ಳಿ ಮತ್ತು ತಿಪ್ಪಸಂದ್ರ ಗ್ರಾಮ ಹಾಗೂ ಇತರೆ ಗ್ರಾಮಗಳಲ್ಲಿ ಬಡಾವಣೆ ನಿರ್ಮಿಸಲು 191 ಎಕರೆ 2 ಗುಂಟೆ ಜಮೀನನ್ನು ರಾಜ್ಯ ಸರ್ಕಾರ ಅಧಿಸೂಚಿಸಿತ್ತು.

ಬ್ಯಾಂಕ್ ಆಫೀಸರ್ಸ್ ಮತ್ತು ನೌಕರರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಬಡಾವಣೆ ನಿರ್ಮಿಸಲು ಬಿಡಿಎ ಅನುಮೋದನೆ ನೀಡಿತ್ತು. ಅನುಮೋದಿತ ನಕ್ಷೆಯಂತೆ ಬಡಾವಣೆ ರಚನೆ ಮಾಡಿರಲಿಲ್ಲ. ಉದ್ಯಾನಗಳ ಸ್ಥಳಗಳಲ್ಲಿ ನಿವೇಶನ ರಚಿಸಿ ಮಾರಾಟ ಮಾಡಿ, ಬಿಡಿಎ ಆದೇಶವನ್ನು ಉಲ್ಲಂಘಿಸಲಾಗಿತ್ತು.

ಹೀಗಾಗಿ, ಉದ್ಯಾನ ಮತ್ತು ಆಟದ ಮೈದಾನದಲ್ಲಿ ಒತ್ತುವರಿಯಾಗಿದ್ದ ಸುಮಾರು ಎರಡು ಎಕರೆ ಪ್ರದೇಶ ಹಾಗೂ ನಾಗರಿಕ ಸೌಲಭ್ಯ ನಿವೇಶನದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡವನ್ನು ಬಿಡಿಎ ಸಿಬ್ಬಂದಿ ತೆರವುಗೊಳಿಸಿದರು. ಸುಮಾರು ನಾಲ್ಕು ಗುಂಟೆ ಪ್ರದೇಶವನ್ನು ವಶಪಡಿಸಿಕೊಂಡಿದೆ. ವಶಪಡಿಸಿಕೊಂಡಿರುವ ನಾಗರಿಕ ಸೌಲಭ್ಯ ನಿವೇಶನದ ಮೌಲ್ಯ ಸುಮಾರು ₹3.20 ಕೋಟಿ ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

ಪೊಲೀಸರು, ಬಿಬಿಎಂಪಿ ಅಧಿಕಾರಿಗಳಿಂದ ಕಿರುಕುಳ: ಆರೋಪ

'ಬೀದಿ ವ್ಯಾಪಾರಿಗಳು ಸಂಘಟಿತರಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸರು, ಬಿಬಿಎಂಪಿ ಅಧಿಕಾರಿಗಳು ಬೀದಿಬದಿ ವ್ಯಾಪಾರಿಗಳಿಗೆ ಅತಿಯಾದ ಕಿರುಕುಳ ನೀಡುತ್ತಿದ್ದು, ಸಮಸ್ಯೆ ಮುಂದುವರಿದರೆ ಅದರ ವಿರುದ್ಧ ಸಂಘಟಿತರಾಗಿ ಪ್ರತಿಭಟಿಸಲಾಗುವುದು' ಎಂದು ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಸ್. ಬಾಬು ಹೇಳಿದರು.

ಮಂಗಳವಾರ ನಡೆದ ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘದ ಸರ್ವಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

'ಬೀದಿ ವ್ಯಾಪಾರಿಗಳ ಸತತ ಹೋರಾಟದಿಂದ 'ಬೀದಿ ವ್ಯಾಪಾರಿಗಳ ಜೀವನೋಪಾಯದ ರಕ್ಷಣೆ ಹಾಗೂ ನಿಯಂತ್ರಣ ಕಾಯ್ದೆ-2014' ಜಾರಿಗೆ ಬಂದಿದೆ. ಬೀದಿ ವ್ಯಾಪಾರಿಗಳಿಗೆ ಜೀವನೋಪಾಯದ ರಕ್ಷಣೆ ನೀಡುವುದರ ಜೊತೆಗೆ ಹಕ್ಕುಗಳನ್ನು ಈ ಕಾಯ್ದೆ ನೀಡುತ್ತದೆ. ಈ ಕಾನೂನನ್ನು ಸರಿಯಾಗಿ ಅನುಷ್ಠಾನಗೊಳಿಸುವಂತೆ ಸತತವಾಗಿ ಹೋರಾಟ ನಡೆಯುತ್ತಿದೆ' ಎಂದು ಹೇಳಿದರು.

ಸಭೆಯಲ್ಲಿ ಬೆಂಗಳೂರು ನಗರ ಘಟಕದ 15 ಸದಸ್ಯರ ಸಮಿತಿಯನ್ನು ರಚಿಸಲಾಯಿತು. ಎಸ್. ಬಾಬು (ಅಧ್ಯಕ್ಷ), ಸೈಯದ್ ಜಮೀರ್ (ಕಾರ್ಯದರ್ಶಿ), ಮಂಜು (ಉಪಾಧ್ಯಕ್ಷ), ಫಯಾಜ್ ಅಲಿ, ವನಜಾ, ಅಶೋಕ್, ರತ್ನಮ್ಮ, ವಿನಯ್, ಲೇಖಾ, ಶಶಿಕಲಾ ಅವರನ್ನು ಜಂಟಿ ಕಾರ್ಯದರ್ಶಿಗಳನ್ನಾಗಿ ಆಯ್ಕೆ ಮಾಡಲಾಯಿತು. ಅಮೀರುಲ್ಲಾ, ಖಾದರ್‌ವಲಿ, ಶಿವಪ್ಪ ಅವರನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಎಐಸಿಸಿಟಿಯು ರಾಜ್ಯ ಘಟಕದ ಅಧ್ಯಕ್ಷ ಕ್ಲಿಫ್ಟನ್ ಡಿ ರೊಜಾರಿಯೋ, ವಕೀಲ ವಿನಯ್ ಶ್ರೀನಿವಾಸ ಭಾಗವಹಿಸಿದ್ದರು.

ಮಂಗಳವಾರ ನಡೆದ ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘದ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಿದ್ದ ಬೀದಿ ವ್ಯಾಪಾರಿಗಳು.

ಸಿಪಿವೈ ಆಕಾಂಕ್ಷಿ ಎಂಬ ಹೇಳಿಕೆಯಲ್ಲಿ ತಪ್ಪಿಲ್ಲ: ನಿಖಿಲ್

ಪ್ರಜಾವಾಣಿ ವಾರ್ತೆ

ರಾಮನಗರ: 'ಬಿಜೆಪಿ ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಅವರು ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ನಾನೂ ಆಕಾಂಕ್ಷಿ ಎಂದು ಹೇಳಿಕೆ ನೀಡಿರುವುದರಲ್ಲಿ ತಪ್ಪೇನಿಲ್ಲ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು

'ನಾವು ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವುದರಿಂದ ಎಚ್.ಡಿ. ಕುಮಾರಸ್ವಾಮಿ ಏಕಾಏಕಿಯಾಗಿ ಯಾರನ್ನೂ ಅಭ್ಯರ್ಥಿ ಎಂದು ಘೋಷಿಸಲು ಸಾಧ್ಯವಿಲ್ಲ' ಎಂದು ಹೇಳಿದರು.

ಈ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಕ್ಷೇತ್ರವನ್ನು ಜೆಡಿಎಸ್ ಪ್ರತಿನಿಧಿಸುತ್ತಿದ್ದರಿಂದ ಪಕ್ಷವೇ ಟಿಕೆಟ್ ಉಳಿಸಿಕೊಳ್ಳಬೇಕೆಂಬ ಅಭಿಪ್ರಾಯಗಳಿವೆ. ಕ್ಷೇತ್ರದ ಇತಿಹಾಸ ಗಮನಿಸಿದರೆ ಇಲ್ಲಿ ಪಕ್ಷಕ್ಕೆ ಸಾಂಪ್ರದಾಯಿಕ ಮತಗಳಿವೆ' ಎಂದರು.

'ಹಿಂದೆ ವರದೇಗೌಡ ಅವರು ಆಯ್ಕೆಯಾಗಿದ್ದರು. ನಾಗರಾಜು ಅವರು ಸ್ಪರ್ಧಿಸಿ 55 ಸಾವಿರ ಮತ ಪಡೆದಿದ್ದರು. ಇದನ್ನು ಗಮನಿಸಿ ನಮ್ಮ ಕಾರ್ಯಕರ್ತರು ಪಕ್ಷವೇ ಟಿಕೆಟ್ ಉಳಿಸಿಕೊಳ್ಳಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗಾಗಿ, ಅವರ ಭಾವನೆ ಕ್ರೋಡೀಕರಿಸಬೇಕಿದೆ. ಅಂತಿಮವಾಗಿ ಮೈತ್ರಿ ನಾಯಕರು ಅಭ್ಯರ್ಥಿಯನ್ನು ಆಯ್ಕೆ ಮಾಡಲಿದ್ದಾರೆ. ಇಲ್ಲಿ ಗೊಂದಲಕ್ಕೆ ಅವಕಾಶವಿಲ್ಲ' ಎಂದರು.

'ಮಹದೇವಪುರ ಅಭಿವೃದ್ಧಿಗೆ ಕಾರ್ಯಪಡೆ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಅಭಿವೃದ್ಧಿಗೆ ಕಾರ್ಯಪಡೆಯ (ಟಾಸ್ಕ್ ಫೋರ್ಸ್) ಸದಸ್ಯರ ಶ್ರಮ ಅತ್ಯವಶ್ಯಕವಾಗಿದೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಮಾರತ್ತಹಳ್ಳಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನವಾಗಿ ರಚಿಸಿರುವ ಮಹದೇವಪುರ ಕಾರ್ಯಪಡೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕ್ಷೇತ್ರದ ಅಭಿವೃದ್ಧಿಗೆ ರೂಪಿಸಿರುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ತಮ್ಮೆಲ್ಲರ ಸಹಕಾರ ಅಗತ್ಯವಾಗಿದೆ. ಸ್ಥಳೀಯ ಸಮಸ್ಯೆಗಳಿಗೆ ಶೀಘ್ರವಾಗಿ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ.ಹಾಗಾಗಿ ಎಲ್ಲಾ ಕಾರ್ಯಪಡೆಯ ಸದಸ್ಯರು ಕಾರ್ಯೋನ್ಮುಖರಾಗಬೇಕು' ಎಂದು ತಿಳಿಸಿದರು.

ಸ್ಫೋಟ: ಐವರಿಗೆ ಗಾಯ

ಬೆಂಗಳೂರು: ಕುಮಾರಸ್ವಾಮಿ ಲೇಔಟ್‌ನ ಚಂದ್ರನಗರದಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಸಂಭವಿಸಿದ ಸ್ಫೋಟದಿಂದ ಐವರು ಗಾಯಗೊಂಡಿದ್ದಾರೆ.

ಉತ್ತರಪ್ರದೇಶದ ಕಾರ್ಮಿಕರಾದ ರಾಕೇಶ್(33),ಕೃಷ್ಣ (24), ಹರಿರಾಮ್ (28), ರಾಮ್‌ಧನ್ (28) ಮತ್ತು ಅಶೋಕ್(28) ಗಾಯಗೊಂಡವರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 'ಎಲ್ಲರೂ ನಿರ್ಮಾಣ ಹಂತದ ಮನೆಗಳಿಗೆ ಪಿಒಪಿ ಸೀಲಿಂಗ್ ಹಾಕುವ ಕೆಲಸ ಮಾಡಿಕೊಂಡಿದ್ದರು. ಮಂಗಳವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ಅಡುಗೆ ಮಾಡುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು

ಮದ್ಯ ಹಂಚಿಕೆ: ಬಿಜೆಪಿ ತಾಲ್ಲೂಕು ಅಧ್ಯಕ್ಷ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಜಗದೀಶ್ ಚೌಧರಿ

ನೆಲಮಂಗಲ: ಸಂಸದ ಡಾ.ಕೆ.ಸುಧಾಕರ್ ಅವರ ಅಭಿನಂದನಾ ಸಮಾರಂಭದಲ್ಲಿ ಮದ್ಯ ಹಂಚಿಕೆ ಮಾಡಿದ ಆರೋಪದ ಕಾರಣದಿಂದ ಬಿಜೆಪಿಯ ತಾಲ್ಲೂಕು ಘಟಕದ ಅಧ್ಯಕ್ಷ ಜಗದೀಶ್ ಚೌಧರಿ ಅವರನ್ನು ಪಕ್ಷದಿಂದ ಆರು ವರ್ಷಗಳ ಕಾಲ ಉಚ್ಚಾಟಿಸಲಾಗಿದೆ.

ಸಮೀಪದ ಭಾವಿಕೆರೆ ಬಳಿ ಭಾನುವಾರ(ಜು.7) ಬಿಜೆಪಿ-ಜೆಡಿಎಸ್ ಪಕ್ಷಗಳ ವತಿಯಿಂದ ಸಂಸದರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ಬಹಿರಂಗವಾಗಿಯೇ ಮದ್ಯ ಹಂಚಲಾಗಿತ್ತು. ಇದಕ್ಕೆ ಸಂಬಂಧಿಸಿದ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡಿದ್ದವು. ಮದ್ಯ ಹಂಚಿಕೆಗೆ ಸಾರ್ವಜನಿಕರಿಂದ ಟೀಕೆಗಳೂ ಬಂದಿದ್ದವು.

'ಈ ಘಟನೆ ಪಕ್ಷದ ಶಿಸ್ತಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಕಾರಣದಿಂದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಸೂಚನೆ ಮೇರೆಗೆ ಜಗದೀಶ್ ಚೌಧರಿ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ' ಎಂದು ಬಿಜೆಪಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಆರ್. ರಾಮಕೃಷ್ಣ ಆದೇಶ ಹೊರಡಿಸಿದ್ದಾರೆ.

ವಿದ್ಯುತ್ ಚಿತಾಗಾರ ತಾತ್ಕಾಲಿಕ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ವಲಯ ವ್ಯಾಪ್ತಿಯ ಮೇಡಿ ಅಗ್ರಹಾರ ವಿದ್ಯುತ್ ಚಿತಾಗಾರವನ್ನು ಜುಲೈ 11ರಿಂದ 20ರವರೆಗೆ ಸ್ಥಗಿತಗೊಳಿಸಲಾಗುತ್ತದೆ. ಈ ಅವಧಿಯಲ್ಲಿ ತುರ್ತು ನಿರ್ವಹಣೆ ಕಾರ್ಯ ನಡೆಯಲಿದೆ ಎಂದು ವಲಯ ವಿದ್ಯುತ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ನೇತ್ರಾವತಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ದೇವಸಂದ್ರ, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು–560 054.
ಬೇಕಾಗಿದ್ದಾರೆ
ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಡಿ.ಸಿ.ಎಂ ಆಗಿರುವ 3 ವರ್ಷ ಮೇಲ್ಪಟ್ಟು ಅನುಭವವುಳ್ಳ ಕಂಪ್ಯೂಟರ್ ಮತ್ತು ಕನ್ನಡ ಟೈಪಿಂಗ್ ಬಲ್ಲ ಸಿಬ್ಬಂದಿ ಬೇಕಾಗಿದ್ದಾರೆ.
15 ದಿನಗಳ ಒಳಗಾಗಿ ಅರ್ಜಿಸಲು
Email ID: netravathi.society@gmail.com

JSPM UNIVERSITY PUNE
Sr. No. 719 / 1& 2, Wagholi, Pune-Ahmednagar Rd, Pune-412 207, Maharashtra, India
WALK-IN For an Interview
Venue: Hotel EEFA, Club Road, Belgaum
Date: 14th July 2024 | Time: 9.30 a.m. to 2.30 p.m.
Meet us along with all testimonials & original documents for the following positions:
• Professor
• Associate Professor
• Assistant Professor
} in Computer Science & in Computer Engineering
Eligibility Criteria & 7th Pay Commission pay scales: as per UGC norms
E-mail: careers@jspmuni.ac.in by 13th July 2024
website: www.jspmuni.ac.in
@JSPMUniversitypune @JSPMUniversitypune @JSPMUniversitypune
Inspiring Innovation. Transforming Talent.

ಸ್ಥಾಪನೆ : 1964
ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್.,
ಕೇಂದ್ರ ಕಛೇರಿ : ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್ ರಸ್ತೆ) ಮಲ್ಲೇಶ್ವರಂ, ಬೆಂಗಳೂರು–560 003.
ದೂರವಾಣಿ: 080–23563302 / 23564151,
ಇ–ಮೇಲ್ : anjaneyabank@yahoo.com
ವಜ್ರ ಮಹೋತ್ಸವ ವರ್ಷ – 2024
ಅರವತ್ತನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ
ಬ್ಯಾಂಕಿನ 2023–24ನೇ ಸಾಲಿನ 60ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು **ದಿನಾಂಕ: 14.07.2024ನೇ ಭಾನುವಾರದಂದು ಬೆಳಿಗ್ಗೆ 09.30 ಘಂಟೆಗೆ "ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪ" ನಂ.17, ಗೋಪಾಲ್ ಥಿಯೇಟರ್ ಪಕ್ಕ, ಯಶವಂತಪುರ, ಬೆಂಗಳೂರು–560022.** ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ **ವೆಂಕಟೇಶ್**.ವಿ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿಸಲಾಗಿದೆ. ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಮಾನ್ಯ ಸದಸ್ಯರಲ್ಲಿ ವಿನಂತಿ.
ವಿ.ಸೂ: ಬ್ಯಾಂಕಿನ ಸದಸ್ಯರುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿರುತ್ತದೆ.
ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ಸಹಿ/–
(ಆರ್.ಶಿವಶಂಕರ)
ಪ್ರಧಾನ ವ್ಯವಸ್ಥಾಪಕರು
ಸ್ಥಳ: ಬೆಂಗಳೂರು
ದಿನಾಂಕ: 10.07.2024

ತಂತ್ರಜ್ಞಾನ



ರೋಬೋಟ್‌ಗಳಿಗೆ ಚರ್ಮ ಬಂತು!





ಸಿಕಲ್ ಸೆಲ್ ಕಾಯಿಲೆಗೆ ಹೊಸ ಗುಳಿಗೆ

ಕೊಳ್ಳೇಗಾಲ ಶರ್ಮ

'ಸಿಕಲ್ ಸೆಲ್ ಅನೀಮಿಯಾ' ಭಾರತದಲ್ಲಿ, ಅದರಲ್ಲಿಯೂ ವಿಶೇಷವಾಗಿ, ಕರ್ನಾಟಕದ ಕೆಲವು ಬುಡಕಟ್ಟು ಜನಾಂಗಗಳಲ್ಲಿ ವ್ಯಾಪಕವಾಗಿ ತೋರಿ ಬರುವ ಕಾಯಿಲೆ. ಹುಟ್ಟಾ ಬರುವ ಈ ಕಾಯಿಲೆಯು ಮಕ್ಕಳು ದೊಡ್ಡವರಾಗುವಷ್ಟರಲ್ಲಿ ಅವರನ್ನು ನಿತ್ರಾಣರನ್ನಾಗಿ ಮಾಡಿಬಿಡುತ್ತದೆ. ಕರ್ನಾಟಕದ ಸೋಲಿಗ ಜನಾಂಗದವರನ್ನು ಸರ್ವೇ ಸಾಮಾನ್ಯವಾಗಿ ಕಾಡುವ ಈ ಆನುವಂಶೀಯ ಕಾಯಿಲೆಯನ್ನು ಗುಣಪಡಿಸಬಲ್ಲ ಹೊಸದೊಂದು ಗುಳಿಗೆ ಸಿದ್ಧವಾಗಿದೆಯಂತೆ. ಅಮೆರಿಕೆಯ 'ನೋವಾರ್ಟಿಸ್' ಔಷಧ ಕಂಪೆನಿಯ ವಿಜ್ಞಾನಿ ಜೇಮ್ಸ್ ಬ್ರಾಡ್ನರ್ ಮತ್ತು ಸಂಗಡಿಗರು ಸಿದ್ಧಪಡಿಸಿರುವ ಔಷಧವೊಂದು ಇಂತಹ ರೋಗಿಗಳಲ್ಲಿ ಕಡಿಮೆ ಆಗಿ ತಯಾರಾಗುವ 'ಫೀಟಲ್ ಹೀಮೋಗ್ಲೋಬಿನ್' ಎನ್ನುವ ಅಂಶವು ತಯಾರಾಗುವಂತೆ ಪ್ರಚೋದಿಸುತ್ತದೆಯಂತೆ.

'ಸಿಕಲ್ ಸೆಲ್ ಅನೀಮಿಯಾ' ಕಾಯಿಲೆ ಇರುವವರಲ್ಲಿ ದೇಹದ ವಿವಿಧ ಅಂಗಗಳಿಗೆ ಆಮ್ಲಜನಕವನ್ನು ಪೂರೈಸುವ ವ್ಯವಸ್ಥೆ ಕುಂದಿರುತ್ತದೆ. ಇದಕ್ಕೆ ಕಾರಣ ಇವರ ರಕ್ತದಲ್ಲಿರುವ ಹೀಮೊಗ್ಲೋಬಿನ್ ಅಂಶ. ಇದು ದೋಷಪೂರ್ಣ ಹೀಮೊಗ್ಲೋಬಿನ್. ದೇಹದ ಮೂಲೆ ಮೂಲೆಗೂ ಆಮ್ಲಜನಕವನ್ನು ಹೊತ್ತೊಯ್ಯುವ ಹೊಣೆ ಹೀಮೊಗ್ಲೋಬಿನ್ನಿಗೆ ಇದೆ. ಇದು ದೋಷಪೂರ್ಣವಾದರೆ, ರಕ್ತದಲ್ಲಿರುವ ಕೆಂಪು ರಕ್ತಕಣಗಳು ಆಕಾರಗೆಡುವುದಷ್ಟೆ ಅಲ್ಲ, ಆಮ್ಲಜನಕದ ಪೂರೈಕೆ ಹದಗೆಡುತ್ತದೆ; ರಕ್ತಕೋಶಗಳು ಸಾಯುತ್ತವೆ. ರಕ್ತನಾಳಗಳಲ್ಲಿ ಸತ್ತ ಕೋಶಗಳು ನೆರೆದು ರಕ್ತಪೂರೈಕೆಗೆ ಅಡ್ಡಿಯಾಗುತ್ತವೆ. ಒಳಗೊಳಗೇ ರಕ್ತ ಹೆಪ್ಪುಗಟ್ಟುವುದೂ ಉಂಟು. ಸಾಧಾರಣ ತಲೆನೋವಿನಿಂದ ಆರಂಭಿಸಿ, ಎಲ್ಲ ಮೂಳೆಗಳೂ ಮುರಿದಿದೆಯೋ ಎನ್ನುವಂತಹ ಭಯಂಕರ ನೋವು, ಜ್ವರ ಮೊದಲಾದ ಸಮಸ್ಯೆಗಳು ಕಾಡುತ್ತವೆ. ಅತ್ಯಂತ ಉಲ್ಬಣ ಸ್ಥಿತಿಯಲ್ಲಿ ರೋಗಿ ಸಾಯುವುದು ಖಚಿತ. ಔಷಧವೇ ಇಲ್ಲದ ಈ ಕಾಯಿಲೆಯನ್ನು ಭಾರತ ಸರ್ಕಾರ 2047ನೇ ಇಸವಿಯ ವೇಳೆಗೆ ಹೇಳಹೆಸರಿಲ್ಲದಂತೆ ಮಾಡುತ್ತೇನೆಂದು ಮೊನ್ನೆಯಷ್ಟೆ ಘೋಷಿಸಿತ್ತು. ಆರಂಭದಲ್ಲಿ ಈ ಕಾಯಿಲೆ ಕೇವಲ ಆಫ್ರಿಕಾ ಮೂಲದ ಜನಾಂಗದಲ್ಲಿಯಷ್ಟೆ ಇವೆ ಎಂದು ಗುರುತಿಸಲಾಗಿತ್ತು. ಆದರೆ 1952ರಲ್ಲಿ ಬ್ರಿಟಿಷ್ ವೈದ್ಯ ಹೆನ್ರಿ ಲೆಹ್ಮನ್ ಭಾರತದ ನೀಲಗಿರಿಬೆಟ್ಟಗಳಲ್ಲಿದ್ದ ಬಡಗರು, ತೋಡ ಹಾಗೂ ಇರುಳ ಜನಾಂಗದಲ್ಲಿ ಈ ಕಾಯಿಲೆಗೆ ಕಾರಣವಾದ ಲಕ್ಷಣಗಳು ಇರುವುದನ್ನು ಪತ್ತೆ ಮಾಡಿದ. ಈ ಮೂಲಕ ಈ ಬುಡಕಟ್ಟು ಜನಾಂಗದ ಮೂಲವೂ ಆಫ್ರಿಕಾದ ಮೂಲನಿವಾಸಿಗಳಾಗಿರಬಹುದು ಎನ್ನುವ ತರ್ಕಕ್ಕೆ ಇಂಬುಗೊಟ್ಟ. ಅಂದಿನಿಂದ ಈ ಜನಾಂಗಗಳಿಗೆ ನಿಕಟ ಸಂಬಂಧವಿರುವ ಇತರೆ ಬುಡಕಟ್ಟು ಜನಾಂಗಗಳಲ್ಲಿಯೂ ಈ ಕಾಯಿಲೆ ಕಂಡು ಬಂದಿದೆ. ಇದಕ್ಕೆ ಕಾರಣ ಹಿಮೊಗ್ಲೋಬಿನ್ ಪ್ರೊಟೀನು ತಯಾರಿಸುವ ಎರಡು ಜೀನ್‌ಗಳಲ್ಲಿ ಒಂದು ದೋಷಪೂರ್ಣವಾಗಿರುವುದು. ಹೀಮೊಗ್ಲೋಬಿನ್ನಿನ ಅಣುವಿನಲ್ಲಿ ಎರಡು ಪ್ರೊಟೀನುಗಳ ಅಣುಗಳು ಬೆಸೆದುಕೊಂಡಿರುತ್ತವೆ. ಇವನ್ನು 'ಆಲ್ಫ' ಹಾಗೂ 'ಬೀಟ' 'ಪೆಪ್ಟೈಡು'ಗಳೆನ್ನುತ್ತಾರೆ. ಇದರಲ್ಲಿ ಬೀಟ ಪೆಪ್ಟೈಡಿನಲ್ಲಿ ಸಾಮಾನ್ಯವಾಗಿ ಇರಬೇಕಾದ ಒಂದೇ ಒಂದು ರಾಸಾಯನಿಕ ಬದಲಾದಾಗ, ಅದರ ಆಕಾರವೇ ಬದಲಾಗುತ್ತದೆ. 'ಸಿಕಲ್ ಸೆಲ್ ಅನೀಮಿಯಾ' ಅಥವಾ 'ಎಸ್ಸಿಡಿ' ಎಂದು ವೈದ್ಯರು ಕರೆಯುವ ದೋಷವುಂಟಾಗುತ್ತದೆ. ವ್ಯಕ್ತಿಯ ತಂದೆ, ತಾಯಿ ಇಬ್ಬರಲ್ಲಿಯೂ ಈ ದೋಷಪೂರ್ಣ ಮಾಹಿತಿ ಇದ್ದರೆ ಕಾಯಿಲೆ ಗ್ಯಾರಂಟಿ. ಒಬ್ಬರಲ್ಲಿ ಇದ್ದರೆ ಆಗ ಸಾಮಾನ್ಯವಾದ ಹೀಮೊಗ್ಲೋಬಿನ್ ಕೂಡ ಇರುವುದರಿಂದ ಕಾಯಿಲೆ ತೀವ್ರತೆರನಾಗಿರುವುದಿಲ್ಲ. ಇಂಥ ವ್ಯಕ್ತಿಗಳಲ್ಲಿ ಮೂಳೆಯಲ್ಲಿ ತಯಾರಾಗುವ ಫೀಟಲ್ ಹೀಮೋಗ್ಲೋಬಿನ್ ಅಂಶ ಕಡಿಮೆ ಇರುತ್ತದೆ. ಇದು ಹುಟ್ಟಿನಿಂದಲೇ ಬರುವ ಕಾಯಿಲೆಯಾದ್ದರಿಂದ ಗುಣಪಡಿಸುವುದು ಸಾಧ್ಯವಿಲ್ಲ. ಹೀಗಾಗಿ ತೊಂದರೆಗಳನ್ನು ನಿಭಾಯಿಸುವ ಕೆಲಸವನ್ನಷ್ಟೆ ಮಾಡಬೇಕು. ವೈದ್ಯರು ಇದಕ್ಕಾಗಿ ಬಳಸುವ ಮೂರು ಔಷಧಗಳಲ್ಲಿ 'ಹೈಡ್ರಾಕ್ಸಿಯೂರಿಯಾ' ಎನ್ನುವುದಷ್ಟೆ ಅಗ್ಗದ ಚಿಕಿತ್ಸೆ. 'ಎಲ್ ಗ್ಲುಟಾಮಿನ್' ಮತ್ತು 'ಕ್ರೈಜಾಮ್ಲಿನೂಬ್' ಎನ್ನುವ ಇನ್ನೆರಡು ಔಷಧಗಳು ದುರ್ಲಭ ಹಾಗೂ ದುಬಾರಿ ಕೂಡ. ಇದಲ್ಲದೆ ಈ ಔಷಧಗಳ ನಿರಂತರ ಬಳಕೆ ರಕ್ತಕೋಶಗಳು ಹುಟ್ಟುವ ಮೂಳೆಯ ಮಜ್ಜೆಯನ್ನೂ ತಾಕಬಹುದು. ಈ ಔಷಧಗಳಲ್ಲದೆ ಮಜ್ಜೆಯ ಕಸಿಯನ್ನು ಕೂಡ ಚಿಕಿತ್ಸೆಯನ್ನಾಗಿ ಬಳಸಿದ್ದಾರೆ. ರೋಗಕ್ಕಿಂತಲೂ ಚಿಕಿತ್ಸೆಯೇ ಭಾರಿ ಹೊರೆಯಾಗಬಹುದು.'ಜೀನ್ ಥೆರಪಿ' ಅಥವಾ 'ಜೀನ್ ದುರಸ್ತಿ' ಮಾಡಿ ಗುಣಪಡಿ ಸಬಹುದು ಎನ್ನುವ ನಂಬಿಕೆ ಇದೆ. ಆದರೂ ಆ ತಂತ್ರ ಜಟಿಲವಾಗಿದ್ದು, ಈಗಷ್ಟೆ ಇದಕ್ಕೆ ಕಾನೂನಿನ ಸಮ್ಮತಿ ದಕ್ಕಿದೆ. ಕೋಟ್ಯಂತರ ರೂಪಾಯಿಗಳ ವೆಚ್ಚವೂ ಅಗತ್ಯ. ಬ್ರಾಡ್ನರ್ ತಂಡದ ಹೊಸ ಔಷಧ ಸಿಕಲ್ ಸೆಲ್ ಅನೀಮಿಯಾಗೆ ಅಗ್ಗದ ಚಿಕಿತ್ಸೆ ಸಾಧ್ಯ ಎಂದು ತೋರಿಸಿದೆ.



ಬ್ರಾಡ್ನರ್ ತಂಡ ಹೈಡ್ರಾಕ್ಸಿಯೂರಿಯಾದ ಪ್ರಭಾವವನ್ನೇ ಆಧಾರವಾಗಿಟ್ಟುಕೊಂಡು ಈ ಔಷಧವನ್ನು ರೂಪಿಸಿದ್ದಾರೆ. ಫೀಟಲ್ ಹೀಮೊಗ್ಲೋಬಿನಿನ ತಯಾರಿಕೆಯನ್ನು ಹೆಚ್ಚಿಸುವುದು ಇದರ ಉದ್ದೇಶ. ಇದಕ್ಕಾಗಿ ಇವರು ಮಾನವರ ಮಜ್ಜೆಯಲ್ಲಿರುವ ಕೋಶಗಳನ್ನು ಕೃಷಿ ಮಾಡಿ, ಹಲವಾರು ರಾಸಾಯನಿಕಗಳನ್ನು ಅವುಗಳ ಮೇಲೆ ಪ್ರಯೋಗಿಸಿ 'ಫೀಟಲ್ ಹೀಮೊಗ್ಲೋಬಿನ್' ತಯಾರಿಕೆ ಹೆಚ್ಚುತ್ತದೆಯೇ ಎಂದು ಪರೀಕ್ಷಿಸಿದರು. ಹೀಗೆ ಪರೀಕ್ಷೆಗೊಳಗಾದ ನೂರಾರು ರಾಸಾಯನಿಕಗಳಲ್ಲಿ 'ಸಿ' ಎಂದು ಹೆಸರಿಸಿದ ಅಣು ಫೀಟಲ್ ಹೀಮೊಗ್ಲೋಬಿನ್ ತಯಾರಿಕೆಯನ್ನು ಹೆಚ್ಚಿಸಿತ್ತು. ಆದರೆ ಹೀಮೊಗ್ಲೋಬಿನ್ ತಯಾರಿಕೆಯ ಯಾವ ಹಂತದಲ್ಲಿ, ಯಾವ ರಾಸಾಯನಿಕವನ್ನು ಇದು ತಾಕುತ್ತಿದೆ ಎಂಬುದನ್ನ ಪರೀಕ್ಷಿಸಲು, 'ಸಿ' ರಾಸಾಯನಿಕವನ್ನು ಪ್ರಯೋಗಿಸಿದರು. ಅದು 'ಡಬ್ಲ್ಯೂಐಜೆಡ್' ಅಥವಾ 'ವಿಜ್' ಎಂದು ಗುರುತಿಸಿದ ಪ್ರೊಟೀನಿನ ಪ್ರಮಾಣ ಇಮ್ಮಡಿ ಕಡಿಮೆಯಾಯಿತೆಂದು ಸೂಚಿಸಿತು. ಪ್ರಯೋಗಗಳನ್ನು ಮರುಕಳಿಸಿದಾಗ ಕೇವಲ ಈ ಪ್ರೊಟೀನಷ್ಟೆ ಕಡಿಮೆಯಾಗುತ್ತಿತ್ತು. ಆಕಸ್ಮಿಕವಾಗಿ ಪತ್ತೆಯಾದ ಈ ಪ್ರೊಟೀನಿನ ತಯಾರಿಕೆಯನ್ನು ನಿಲ್ಲಿಸಿದರೆ ಫೀಟಲ್ ಹೀಮೊಗ್ಲೋಬಿನ್ ತಯಾರಿಕೆಯನ್ನು ಹೆಚ್ಚಿಸಬಹುದೇ? ಇದು ಪ್ರಶ್ನೆ. ಇದನ್ನು ಸಾಧಿಸಲು, ಕೇವಲ ವಿಜ್ ಪ್ರೊಟೀನನ್ನಷ್ಟೆ ಹುಡುಕಿ ಹೋಗಿ ಅಂಟಿಕೊಳ್ಳುವ ರಾಸಾಯನಿಕಗಳನ್ನು ಇವರು ಸೃಷ್ಟಿಸಿದ್ದಾರೆ. ಈ ರಾಸಾಯನಿಕಗಳನ್ನು ಜೀವಕೋಶಗಳ ಮೇಲೆ ಪ್ರಯೋಗಿಸಿದಾಗ ವಿಜ್ ಪ್ರಮಾಣ ಕಡಿಮೆಯಾಯಿತು. ಮಾನವರ ಫೀಟಲ್ ಹೀಮೊಗ್ಲೋಬಿನನ್ನು ತಯಾರಿಸುವಂತಹ ಕೋಶಗಳನ್ನು ಇಲಿಗಳಲ್ಲಿ ಬೆಳೆಸಿ, ಇಲಿಗಳಿಗೆ ಔಷಧವನ್ನು ಕೊಟ್ಟು ಪರೀಕ್ಷಿಸಿದ್ದಾರೆ. ಇಲಿಗಳಲ್ಲಿ ಈ ಔಷಧದ ವಿಷ ಪರಿಣಾಮಗಳು ಕಂಡುಬಂದಿಲ್ಲ ಎನ್ನುತ್ತಾರೆ, ಬ್ರಾಡ್ನರ್. ಮನುಷ್ಯರಿಗೂ ಇದು ನಿರಪಾಯಕಾರಿ ಎನ್ನಿಸಿದರೆ, ಸಿಕಲ್ ಸೆಲ್ ಅನೀಮಿಯಾ ರೋಗಿಗಳ ಸಂಕಟಕ್ಕೆ ಹೊಸದೊಂದು ಪರಿಹಾರ ದೊರಕಿದಂತೆಯೇ ಸರಿ.ಈ ವರದಿಯನ್ನು 'ಸೈನ್ಸ್' ಪತ್ರಿಕೆ ತನ್ನ ಇತ್ತೀಚಿನ ಸಂಚಿಕೆಯಲ್ಲಿ ಪ್ರಕಟಿಸಿದೆ. ❖

ನೇಸರ ಕಾಡನಕುಪ್ಪೆ

'ಸ್ಟಾರ್ ಟ್ರೆಕ್' ಅಥವಾ 'ಸ್ಟಾರ್ ವಾರ್ಸ್' ಕಥೆಗಳಲ್ಲಿ ರೋಬೋಟ್‌ಗಳು ಸಂಪೂರ್ಣ ಮನುಷ್ಯಸ್ವರೂಪವನ್ನೇ ಪಡೆದಿರುವುದನ್ನು ನಾವು ಅಚ್ಚರಿಯಿಂದ ಓದಿದ್ದೇವೆ. ಸಿನಿಮಾ, ಕಿರುತೆರೆ ಧಾರಾವಾಹಿಗಳಲ್ಲಿ ವೀಕ್ಷಿಸಿ ಅಚ್ಚರಿ ಪಟ್ಟಿದ್ದೇವೆ; ಕೆಲವೊಮ್ಮೆ ನಿಬ್ಬೆರಗಾಗಿದ್ದೇವೆ. ಇದು ಕೇವಲ ಕಾಲ್ಪನಿಕ ಅಥವಾ ಕಥೆಗಳಲ್ಲಿ ಮಾತ್ರ ಕಾಣುವಂಥದ್ದು ಎನ್ನುವ ಕಾಲ ತೀರಾ ದೂರವಿಲ್ಲ. ಈಗಾಗಲೇ ರೋಬೋಟ್‌ಗಳಿಗೆ ಮನುಷ್ಯನ ಸಹಜರೂಪವನ್ನು ನೀಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಕೃತಕ ಚರ್ಮವನ್ನು ವಿಜ್ಞಾನಿಗಳು ಸಿದ್ಧಪಡಿಸಿಬಿಟ್ಟಿದ್ದಾರೆ.

'ರೋಬೋಟ್' ಎಂದರೆ ಅದಕ್ಕೆ ಲೋಹದ ಮೈ, ಚರ್ಮದ ಜಾಗದಲ್ಲಿ ಪ್ಲಾಸ್ಟಿಕ್ ಅಥವಾ ಫೈಬರ್ ಹೊರಗವಚ ಇರುವುದೆಂಬ ಅಭಿಪ್ರಾಯ ಈಗಿದೆ. ಈಗ ನಾವು ನೋಡುತ್ತಿರುವ ರೋಬೋಟ್‌ಗಳು ಅಥವಾ ಈಗಾಗಲೇ ನೋಡಿರುವ ರೋಬೋಟ್‌ಗಳಿಗೆ ಇದು ಅನ್ವಯಿಸುತ್ತದೆ. ಆದರೆ, ಮುಂದೆಯೂ ಹೀಗೆಯೇ ಇರಬೇಕು ಎಂಬ ನಿಯಮವೇನೂ ಇಲ್ಲ. ಅಲ್ಲದೇ, ದಿನೇ ದಿನೇ ರೋಬೋಟ್‌ಗಳು ಮನುಷ್ಯನ ಸ್ವರೂಪವನ್ನು ಪಡೆಯುತ್ತ, ಸಾಮಾಜಿಕವಾಗಿ ಹೆಚ್ಚು ಮನ್ನಣೆಯನ್ನು ಪಡೆಯುವತ್ತ ಸಾಗುತ್ತಿವೆ. ಕೃತಕವಾದ ಯಾಂತ್ರಿಕ ನೋಟ ರೋಬಾಟ್‌ಗೆ ಇದ್ದಷ್ಟೂ ಅದು ಮನುಷ್ಯನಿಗೆ ಹತ್ತಿರವಾಗದು ಎಂಬ ಸತ್ಯ ಈಗ ವಿಜ್ಞಾನಿಗಳಿಗೆ ತಿಳಿದಿದೆ. ಹಾಗಾಗಿ, ಸ್ನಾಯು, ರಕ್ತ, ಮಾಂಸಗಳನ್ನು ಒಳಗೊಂಡ ರೋಬೋಟ್‌ಗಳು ಸಿದ್ಧವಾಗುತ್ತಿವೆ. ಅದಕ್ಕೆ ಕಳಶವಿತ್ತಂತೆ ಅತ್ಯಂತ ಸಹಜ ನೋಟವನ್ನು ನೀಡಬಲ್ಲ ಚರ್ಮವನ್ನೂ ವಿಜ್ಞಾನಿಗಳು ಸೃಷ್ಟಿಸಿದ್ದಾರೆ.

ಜಪಾನ್‌ನ ಟೋಕಿಯೋ ವಿಶ್ವವಿದ್ಯಾಲಯದ ರೋಬೋಟಿಕ್ ವಿಭಾಗದ ಹಿರಿಯ ವಿಜ್ಞಾನಿ ಶೋಜಿ ಟಕೇಉಚಿ ನೇತೃತ್ವದ ತಂಡವು ಈ ಸಂಶೋಧನೆಯನ್ನು ಮಾಡಿದೆ. ಈ ವಿಜ್ಞಾನಿಗಳ ತಂಡವು ಸೃಷ್ಟಿಸಿರುವ ರೋಬೋಟ್‌ನ ಚರ್ಮಕ್ಕೊಂದು ವೇಳೆ ಗಾಯವಾದರೆ ಆಗ ಅದರಿಂದ ರಕ್ತ ಸುರಿಯುತ್ತದೆ. ಚರ್ಮಕ್ಕೆ ಗಾಸಿಯಾದರೆ, ಅದು ವಾಸಿಯಾಗುತ್ತದೆ. ಚರ್ಮ ಕಾಲಾನುಸಾರವಾಗಿ, ವಯಸ್ಸಿಗೆ ತಕ್ಕಂತೆ ರೂಪಾಂತರಗೊಳ್ಳುತ್ತದೆ. ಯೌವನದಿಂದ ಮುಪ್ಪಿನವರೆಗೂ ಮನುಷ್ಯನ ಚರ್ಮ ಹೇಗೆಲ್ಲಾ ಬದಲಾಗುವುದೋ ಅದೇ ರೀತಿ ಈ ರೋಬೋಟ್‌ನ ಚರ್ಮವೂ ಬದಲಾಗುತ್ತಿರುತ್ತದೆ!

'ಈ ನೈಸರ್ಗಿಕ ಗುಣವನ್ನು ರೋಬೋಟ್ ಚರ್ಮಕ್ಕೆ ನೀಡಬೇಕಾದ್ದು ನಮ್ಮ ಮೊದಲ ಆದ್ಯತೆಯಾಗಿದೆ. ಏಕೆಂದರೆ ಚರ್ಮದ ಮೂಲಕವೇ ಯಾವುದೇ ಜೀವಿಯೊಂದನ್ನು ಗುರುತಿಸುವುದು. ಅದು ಸಹಜವಾಗಿದ್ದಷ್ಟೂ ಅದನ್ನು ಯಂತ್ರವಲ್ಲ ಎಂದು ಭಾವಿಸಬಹುದು. ಜೊತೆಗೆ, ಮನುಷ್ಯರಿಗೆ ಮನುಷ್ಯರನ್ನೇ ಸಂಪೂರ್ಣವಾಗಿ ಹೋಲುವ ರೋಬೋಟ್‌ಗಳನ್ನು ನೀಡಿದರೆ ಮಾತ್ರ ಸಾಮಾಜಿಕವಾಗಿ ಹೆಚ್ಚು ಮನ್ನಣೆ ಸಿಗುತ್ತದೆ. ಆದ್ದರಿಂದ ನಾವು ಸಂಶೋಧಿಸಿರುವ ಚರ್ಮವು ಹೆಚ್ಚು ಸಾಮಾಜಿಕ ಮನ್ನಣೆಯನ್ನು ಪಡೆಯುವ ಗುಣವನ್ನು ಹೊಂದಿರುತ್ತದೆ' ಎಂದು ಶೋಜಿ ವಿವರಣೆಯನ್ನು ನೀಡಿದ್ದಾರೆ.

'ಎಷ್ಟು ಸಾಧ್ಯವೋ ಅಷ್ಟು ಸಹಜತೆಯನ್ನು ನೀಡುವ ಪ್ರಯತ್ನವನ್ನು ನಾವು ಮಾಡಿದ್ದೇವೆ. ಕೀಲುಗಳಿರುವ ಜಾಗಗಳಲ್ಲೆಲ್ಲಾ ಮನುಷ್ಯನ ಚರ್ಮದಲ್ಲಿ ಸುಕ್ಕುಗಳು ಇರುತ್ತವೆ. ಈ ಸುಕ್ಕುಗಳ ಕಾರಣದಿಂದಲೇ ಕೀಲುಗಳು ಮಡುಚಲು ಅಥವಾ ಬಿಚ್ಚಿಕೊಳ್ಳಲು ಜಾಗ ಹಾಗೂ ಸಡಿಲತೆ ಸಿಗುತ್ತದೆ. ಚರ್ಮಕ್ಕೆ ಹಿಗ್ಗುವ, ಕುಗ್ಗುವ ಗುಣ ಇರಬೇಕು. ಆಗ ಮಾತ್ರವೇ ದೇಹದ ಒಳಗಿರುವ ಮೂಳೆ, ಮಾಂಸ, ಸ್ನಾಯು, ರಕ್ತ ಹಾಗೂ ನರಮಂಡಳಕ್ಕೆ ತಕ್ಕಂತೆ ಹೊರ ನೋಟ ಸಿಗಲು ಸಾಧ್ಯವಾಗುತ್ತದೆ. ಈ ನೈಸರ್ಗಿಕ ಸ್ವರೂಪವನ್ನು ನಾವು ನಕಲು ಮಾಡಿ ಚರ್ಮವನ್ನು ಸಿದ್ಧಪಡಿಸಿದ್ದೇವೆ' ಎಂದೂ ಅವರು ವಿಶ್ಲೇಷಿಸಿದ್ದಾರೆ.

ಇವು 'ಆ್ಯಂಡ್ರಾಯ್ಡ್': ಈ ಚರ್ಮವಿರುವ ರೋಬೋಟ್ ಅನ್ನು 'ರೋಬೋಟ್' ಎನ್ನುವುದಕ್ಕಿಂತ 'ಆ್ಯಂಡ್ರಾಯ್ಡ್' ಎಂದು ಕರೆಯಬೇಕಾಗುತ್ತದೆ. ಈ 'ಆ್ಯಂಡ್ರಾಯ್ಡ್'ನಲ್ಲಿ ಅಸ್ಥಿಪಂಜರ, ಸ್ನಾಯು, ಮಾಂಸದಂತಹ ಸಾವಯವ ಅಂಶಗಳು ಇರುತ್ತವೆ. ಅದರ ಹೊರಭಾಗದಲ್ಲಿ ಚರ್ಮವು ಇಡೀ ದೇಹಕ್ಕೆ ಆಸರೆ, ರೂಪ ಹಾಗೂ ಸಹಜತೆಯನ್ನು ಕೊಡುತ್ತದೆ.

ಈ ಚರ್ಮಕ್ಕೆ ವಿಜ್ಞಾನಿಗಳು ಕಚ್ಚಾವಸ್ತುಗಳನ್ನು ಕೃತಕವಾಗಿಯೇ ಸಂಸ್ಕರಿಸಿದ್ದಾರೆ. ಆದರೆ, ಹಲವು ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡಿದ್ದಾರೆ. ಅಂದರೆ, ಚರ್ಮಕ್ಕೆ ಸಹಜತೆಯನ್ನು ನೀಡಲು ವಿವಿಧ ಬಗೆಯ ಎಣ್ಣೆಗಳ ಬಳಕೆಯಾಗಿದೆ. ಈ ಚರ್ಮದಲ್ಲಿ ಬೆವರಿನ ಜೊತೆಗೆ, ಜಿಡ್ಡಿನ ಅಂಶವೂ ಹೊರಸೂಸಿ, ಮನುಷ್ಯರಂತೆಯೇ ವರ್ತಿಸುತ್ತದೆ. ಅಲ್ಲದೇ, ಭಯವಾಗುವಂತಹ ಸಂದರ್ಭಗಳಲ್ಲಿ ಮೈ ಬೆವರುವುದು, ಸೆಕೆಗೆ ಬೆವರಿ ಸ್ಪಂದಿಸುವಂತಹ ಪ್ರಕ್ರಿಯೆಗಳೂ ಇಲ್ಲಿ ನಡೆಯುತ್ತವೆ. ಇವೆಲ್ಲದಕ್ಕೂ ಅಗತ್ಯವಾದ ವಸ್ತುಗಳನ್ನು ರೋಬೋಟ್‌ನ ದೇಹದಲ್ಲಿ ಇರಿಸಲಾಗಿರುತ್ತದೆ ಎಂದು ವಿಜ್ಞಾನಿಗಳು ಮಾಹಿತಿಯನ್ನು ನೀಡಿದ್ದಾರೆ.

ಎಲ್ಲೆಲ್ಲಿ ಬಳಕೆ?: ಸಾಮಾನ್ಯವಾಗಿ ಈ ಬಗೆಯ ರೋಬೋಟ್‌ಗಳು ದಿನಬಳಕೆ ಕ್ಷೇತ್ರಗಳಲ್ಲಿ ಬಳಸಿಕೊಳ್ಳುವ ಯೋಜನೆ ಇದೆ. ಅಂದರೆ, ಮನೆಗಳಲ್ಲಿ, ಕಚೇರಿಗಳಲ್ಲಿ ವಿವಿಧ ಕಾರ್ಯಗಳಿಗೆ ತಕ್ಕಂತೆ ಬಳಕೆ ಸಾಧ್ಯವಿದೆ. ಅಂದರೆ, ಮಾನವನು ನಿಭಾಯಿಸುತ್ತಿರುವ ಯಾವುದೇ ಸಾಮಾಜಿಕ ಪಾತ್ರವನ್ನೂ ಈ ರೋಬೋಟ್‌ಗಳು ನಿಭಾಯಿಸಬಲ್ಲವು. ವೃತ್ತಿಪರರಾಗಿ, ಸ್ನೇಹಿತರಾಗಿ, ಸಹಾಯಕರಾಗಿ ಇತ್ಯಾದಿ. ಅಲ್ಲದೇ, ಈ ರೋಬೋಟ್‌ಗಳು ವಾಸ್ತವದಲ್ಲಿ ಕೃತಕವಾಗಿರುವ ಕಾರಣ ಕೆಲವು ಕಠಿಣ ಪರಿಸ್ಥಿತಿಗಳಲ್ಲಿ ಸುಸ್ತಾಗದೇ ಕಾರ್ಯ ನಿರ್ವಹಿಸುವ ಶಕ್ತಿ-ಸಾಮರ್ಥ್ಯಗಳು ಈ ರೋಬಾಟ್‌ಗಳಿಗೆ ಇರುತ್ತವೆ. ಹಾಗಾಗಿ, ಕೈಗಾರಿಕೆ, ರಕ್ಷಣೆ, ವೈಜ್ಞಾನಿಕ ಪ್ರಯೋಗಗಳಲ್ಲೂ ಕಾರ್ಯನಿರ್ವಹಿಸಲು ಇವು ಅತಿ ಸೂಕ್ತವಾಗಿದೆ ಎಂದು ವಿಜ್ಞಾನಿಗಳು ದೃಢವಾಗಿ ನಂಬಿದ್ದಾರೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

4) ನೈಸರ್ಗಿಕ ಅನಿಲದ ದಹನವನ್ನು ರಾಸಾಯನಿಕ ಕ್ರಿಯೆ ಎಂದು ಹೇಗೆ ತಿಳಿಯುವಿರಿ?

ಉತ್ತರ:– ನೈಸರ್ಗಿಕ ಅನಿಲವನ್ನು ದಹಿಸಿದಾಗ ಶಾಖ ಬಿಡುಗಡೆಯಾಗುವುದರೊಂದಿಗೆ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಉಂಟಾಗುವುದು ಆದ್ದರಿಂದ ಇದು ರಾಸಾಯನಿಕ ಕ್ರಿಯೆ ಎಂದು ತಿಳಿಯುತ್ತದೆ.

5) ಮಂಜುಗಡ್ಡೆ ನೀರಾಗುವುದು ರಾಸಾಯನಿಕ ಕ್ರಿಯೆ ಅಲ್ಲ ಎಂದು ಹೇಗೆ ತಿಳಿಯುವಿರಿ

ಉತ್ತರ:– ಮಂಜುಗಡ್ಡೆ ನೀರಾಗುವುದರಿಂದ ಹೊಸ ಉತ್ಪನ್ನ ಬಿಡುಗಡೆಯಾಗುವುದಿಲ್ಲ, ಆದ್ದರಿಂದ ಇದು ರಾಸಾಯನಿಕ ಕ್ರಿಯೆ ಅಲ್ಲ.

6) ಸರಿದೂಗಿಸಿದ ರಾಸಾಯನಿಕ ಸಮೀಕರಣ ಎಂದರೇನು? ರಾಸಾಯನಿಕ ಸಮೀಕರಣಗಳನ್ನು ಏಕೆ ಸರಿದೂಗಿಸಬೇಕು?

ಉತ್ತರ:– ಪ್ರತಿ ಧಾತುವಿನ ಪರಮಾಣುಗಳ ಸಂಖ್ಯೆ ರಾಸಾಯನಿಕ ಕ್ರಿಯೆಯ ಮೊದಲು ಮತ್ತು ನಂತರ ಒಂದೇ ರೀತಿ ಇರಬೇಕು ಅಂದರೆ ಪ್ರತಿವರ್ತಕ ಮತ್ತು ಉತ್ಪನ್ನಗಳಲ್ಲಿ ಸಮನಾದ ಧಾತುಗಳ ಒಟ್ಟು ರಾಶಿ ಇರುವಿಕೆಯನ್ನು ಸರಿದೂಗಿಸಿದ ರಾಸಾಯನಿಕ ಸಮೀಕರಣ ಎನ್ನುವರು.

ರಾಶಿ ಸಂರಕ್ಷಣೆಯ ನಿಯಮದಂತೆ ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ ಆದ್ದರಿಂದ ಸಮೀಕರಣಗಳನ್ನು ಸರಿದೂಗಿಸಬೇಕು.

7) ಕಂದು ಬಣ್ಣದ ವಸ್ತು x ಅನ್ನು ಕಾಯಿಸಿದಾಗ ಅದರ ಮೇಲ್ಮೈ ಕಪ್ಪಾಗುವುದರೊಂದಿಗೆ y ಉತ್ಪತ್ತಿಯಾಗುವುದು ಬಿಸಿಯಾಗಿರುವ x ವಸ್ತುವಿನ ಮೇಲೆ ಹೈಡ್ರೋಜನ್ ಅನಿಲ ಹಾಯಿಸಿದಾಗ ಪುನಃ ಕಂದು ಬಣ್ಣದ x ವಸ್ತುವಾಗುವುದು.

ಅ) x ಮತ್ತು y ವಸ್ತುಗಳು ಯಾವುವು?

ಬ) ಇದು ಯಾವ ಬಗೆಯ ರಾಸಾಯನಿಕ ಕ್ರಿಯೆ ಆಗಿದೆ?

ಕ) ಈ ರಾಸಾಯನಿಕ ಕ್ರಿಯೆಯ ಸರಿದೂಗಿದ ಸಮೀಕರಣ ಬರೆಯಿರಿ

ಉತ್ತರ:–

ಅ) x ವಸ್ತು:– ತಾಮ್ರ

y ವಸ್ತು : ತಾಮ್ರದ ಆಕ್ಸೈಡ್

ಬ) ತಾಮ್ರವನ್ನು ಕಾಯಿಸಿದಾಗ ಕಪ್ಪು ತಾಮ್ರದ ಆಕ್ಸೈಡ್ ಉಂಟಾಗುವುದು ಉತ್ಕರ್ಷಣ ಕ್ರಿಯೆ

ತಾಮ್ರದ ಆಕ್ಸೈಡ್‌ಗೆ ಹೈಡ್ರೋಜನ್ ಹಾಯಿಸಿದಾಗ ಪುನಃ ತಾಮ್ರ ಉಂಟಾಗುವುದು ರೆಡಾಕ್ಸ್ ಕ್ರಿಯೆ ಅಥವಾ ಉತ್ಕರ್ಷಣ–ಅಪಕರ್ಷಣ ಕ್ರಿಯೆ.

ಕ) ಈ ರಾಸಾಯನಿಕ ಕ್ರಿಯೆಯ ಸರಿದೂಗಿದ ಸಮೀಕರಣ

$$Cu + O_2 \longrightarrow 2CuO$$
$$CuO + H_2 \longrightarrow Cu + H_2O$$

****

ನಿಯಂತ್ರಣ ಮತ್ತು ಸಹಭಾಗಿತ್ವ

ಬಹುಆಯ್ಕೆ ಪ್ರಶ್ನೆಗಳು

1.. ಈ ಕೆಳಗಿನವುಗಳಲ್ಲಿ ಯಾವುದು ಸಸ್ಯ ಹಾರ್ಮೋನ್?

(ಎ) ಇನ್ಸುಲಿನ್ (ಬಿ) ಥೈರಾಕ್ಸಿನ್

(ಸಿ) ಈಸ್ಟ್ರೋಜನ್ (ಡಿ) ಸೈಟೋಕೈನಿನ್

ಉತ್ತರ:– ಡಿ

2. ಎರಡು ನರಕೋಶಗಳ ನಡುವಿನ ಅಂತರವನ್ನು ಹೀಗೆಂದು ಕರೆಯುತ್ತಾರೆ.

(ಎ) ಡೆಂಡ್ರೈಟ್ (ಬಿ) ಸಂಸರ್ಗ

(ಸಿ) ಆಕ್ಸಾನ್ (ಡಿ) ಇಂಪಲ್ಸ್

ಉತ್ತರ:– ಬಿ

3. ಮಿದುಳಿನ ಪ್ರಮುಖ ಕಾರ್ಯವೆಂದರೆ,

(ಎ) ಆಲೋಚನೆ (ಸಿ) ದೇಹದ ಸಮತೋಲನ

(ಬಿ) ಹೃದಯದ ಬಡಿತವನ್ನು ನಿಯಂತ್ರಿಸುವಿಕೆ

(ಡಿ) ಮೇಲಿನ ಎಲ್ಲವೂ.

ಉತ್ತರ:–ಡಿ

4. ಮಿದುಳು ಮತ್ತು ಮಿದುಳುಬಳ್ಳಿ ಒಟ್ಟಾಗಿ ಈ ಕೆಳಗಿನ ಯಾವುದನ್ನು ರೂಪಿಸುತ್ತವೆ?

(ಎ) ಕೇಂದ್ರ ನರವ್ಯೂಹ ವ್ಯವಸ್ಥೆ (central nervous system)

(ಬಿ) ವಿಸರ್ಜನಾಂಗ ವ್ಯೂಹ

(ಸಿ) ಹೃದಯ

(ಡಿ) ಮೇಲಿನಯಾವುದೂ ಅಲ್ಲ

ಉತ್ತರ:– ಎ

1) ಬಿಟ್ಟ ಸ್ಥಳ ತುಂಬಿ

ಅ) ನರ ಅಂಗಾಂಶದ ರಚನಾತ್ಮಕ ಮತ್ತು ಕಾರ್ಯನಿರ್ವಾಹಕ ಘಟಕವನ್ನು ....ಎನ್ನುವರು

ಉತ್ತರ:– ನ್ಯೂರಾನ್

ಆ) ನ್ಯೂರಾನ್‌ನಲ್ಲಿ ಕೋಶ ಕೇಂದ್ರವನ್ನು ಹೊಂದಿರುವ ....ಇದೆ.

ಉತ್ತರ:– ಕೋಶಕಾಯ ಅಥವಾ ಸೈಟಾನ್

ಇ) ನರಕೋಶದಲ್ಲಿ ಕೋಶಕಾಯದಿಂದ ಹೊರಚಾಚಿರುವ ಚಿಕ್ಕ ರಚನೆಗಳಿಗೆ .... ಎನ್ನುವರು

ಉತ್ತರ:– ಡೆಂಡ್ರೈಟ್‌ಗಳು

ಈ) ನರಕೋಶದಲ್ಲಿ ನೀಳವಾದ ಶಾಖೆಗೆ .... ಎನ್ನುವರು

ಉತ್ತರ:– ಆಕ್ಸಾನ್

ಇ) ಆಕ್ಸಾನ್ ತನ್ನ ತುದಿಯಲ್ಲಿ ಹೊಂದಿರುವ ಶಾಖೆಗಳಿಗೆ .... ಎನ್ನುವರು

ಉತ್ತರ:– ಟೀಲೋಡೆಂಡ್ರೈಟ್

ಉ) ಆಕ್ಸಾನ್ ಸುತ್ತ ಇರುವ ಕೊಬ್ಬಿನ ಪದರಕ್ಕೆ .... ಹೊದಿಕೆ ಎನ್ನುವರು

ಉತ್ತರ:– ಮಯೋಲಿನ್

ಕೆಳಗಿನ ಹೇಳಿಕೆಗಳಿಗೆ ಉತ್ತರಿಸಿ

1) ಮಾನವನ ಮಿದುಳಿನ ಯಾವ ಭಾಗಗಳು ಈ ಕೆಳಗಿನ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ?

1) ಅನೈಚ್ಛಿಕ ಚಟುವಟಿಕೆಗಳು 2) ಆಲೋಚನೆ ಪ್ರಕ್ರಿಯೆ

3) ದೇಹದ ಭಂಗಿ ಮತ್ತು ಸಮತೋಲನ

ಉತ್ತರ:– 1) ಮೆಡುಲ್ಲಾ 2) ಮಹಾಮಸ್ತಿಷ್ಕ

3) ಅನುಮಸ್ತಿಷ್ಕ (2024 ಮಾರ್ಚ್ ಪ್ರಶ್ನೆಪತ್ರಿಕೆ)

1) ನರವ್ಯೂಹದ ಬಗ್ಗೆ ಬರೆಯಿರಿ

ಉತ್ತರ:– ನರಕೋಶ (neuron)ವೊಂದರ ಡೆಂಡ್ರೈಟ್ (dendrite)ಗಳ ತುದಿಯಲ್ಲಿ ಸಂಗ್ರಹಿತವಾದ ಮಾಹಿತಿಯು ಒಂದು ರಾಸಾಯನಿಕ ಕ್ರಿಯೆಯನ್ನು ಉಂಟುಮಾಡುತ್ತದೆ. ಇದು ಒಂದು ವಿದ್ಯುತ್ ಆವೇಗವನ್ನು ಸೃಷ್ಟಿಸುತ್ತದೆ. ಈ ಆವೇಗವು ಡೆಂಡ್ರೈಟ್‌ಗಳಿಂದ ಕೋಶಕಾಯಕ್ಕೆ ನಂತರ ಆಕ್ಸಾನ್‌ನ ಉದ್ದಕ್ಕೂ ಅದರ ತುದಿಯವರೆಗೆ ಚಲಿಸುತ್ತದೆ. ಆಕ್ಸಾನ್‌ನ ತುದಿಯಲ್ಲಿ ವಿದ್ಯುತ್ ಆ ವೇಗವು ಕೆಲವು ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತದೆ. ಈ ರಾಸಾಯನಿಕಗಳು ಸಂಸರ್ಗವನ್ನು (synapse) ದಾಟುತ್ತವೆ ಮತ್ತು ಮುಂದಿನ (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

MOLECULAR BASIS OF INHERITANCE

12. Differences Between Autosomal and Sex-linked Disorders.

Autosomal Disorders	*Sex-linked Disorders*
The disorder is due to a defective allele present over an autosomal chromosome.	The disorder is due to defective allele present over a sex chromosome.
The alleles producing the disorder are equally distributed to both male and female individuals.	The alleles situated on X-chromosome show criss cross inheritance while Y–linked alleles directly pass to the male offspring.
Both male and female individuals are equally affected.	Being hemizygous, males are more prone to sex-liked disorder.

13. Match the following:-

Column - A
a) Xeroderma pigmentosum
b) Bar eye of Drosophila melanogaster
c) AB blood group
d) Double fertilization
e) Mitosis

Column - B
1) Skin cancer, X – linked
2) Micro tubules, Congression
3) Co-dominance, universal recipient
4) Dominant Mutation, crossing over
5) Zygote & endosperm and Diploid and triploid cells

Ans:- (a) - (1); (b) - (4); (c) – (3); (d) – (2)

14. Fill the gaps of the following paragraph choosing words from the bracket below - (first, second, meiosis, mitosis, 1:1, 1:2, gametes, male, female, 50%, 100%).

In human beings male has XY and female has XX chromosome complement. The sex chromosomes segregate during the (i) …… division of (ii) ……. The X-chromosome constitutes (iii) ………. % of produced sperms and (iv) ………. % of eggs. If randomly mated, the ratio of sex expression is(v)……... The sex of the offspring is determined by (vi) …….. of (vii) ………..

Ans:- (i) First;
(ii) meiosis;
(iii) 50%
(iv) 100%
(v) 1 : 1
(vi) gametes
(vii) male

15. Colour blindness is a sex-linked disease. It is due to X-chromosome. Normal parents have three normal daughters and one colour blind son. What is the reason for it? Ten possible reasons are given. Find out which are correct.

(i) It is an autosomal linked inheritance.
(ii) It is a sex-linked inheritance.
(iii) Father is a carrier.
(iv) Mother is a carrier
(v) Son acquired character from mother.
(vi) Son acquired character from father.
(vii) Daughter is heterozygous for colour blindness.
(viii) Daughter is homozygous for colour blindness.
(ix) Daughter is heterozygous and homozygous for normal vision.
(x) In future the family may have normal sons.

Ans:- (ii) It is a sex-linked inheritance.
(iv) Mother is a carrier
(v) Son acquired character from mother.
(vii) Daughter is heterozygous for colour blindness(50%).
(x) In future the family may have normal sons.

16. (i) Fill in the blanks:-

T.H. Morgan discovered the process of …… and defined the linear arrangement of …… in the chromosome.

Ans:- linkage, genes.

(ii) Fill in the blanks:-

(a) Mutation can be defined as ……… variation.
(b) Mutation leads to evolution of …… of a gene.
(c) Genes expressed only in homozygous state are ……… .
(d) When both the alleles of a gene are expressed, it is ……… .
(e) Gene which is most frequent is ……… type.

Ans:- (a) discontinuous
(b) allele
(c) recessive
(d) co-dominance
(e) wild

17. Define polypoidy.

Ans:- Polyploidy - is the increase in number of genomes or chromosome sets beyond the normal diploid condition, e.g., 3N, 4N, 5N, 6N.

18. Answer the following questions referring the data below.

Grey colour (b^+/b), normal winged (Vg^+/Vg) F_1 female X black coloured (b/b) vestigial winged (Vg/Vg) male.

The offspring were grey normal 126, grey vestigial 24, black normal 26 and black vestigial 124.

i) What ratio is expected in this cross?
ii) What is the cause?
iii) Explain the above with diagram of position of the above genes in the chromosomes.

Ans:- i) Expected Ratio - 9 : 3 : 3 : 1

(Contd….)

38 ಪ್ರಾಚಾರ್ಯರಿಗೆ ಹಿಂಬಡ್ತಿ ಭೀತಿ

'ಸುಪ್ರೀಂ' ತೀರ್ಪು ಜಾರಿಗೂ ಕೈಗಾರಿಕಾ ತರಬೇತಿ ಇಲಾಖೆ ಹಿಂದೇಟು– ಆರೋಪ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ (ಐಟಿಐ) ಕಿರಿಯ ತರಬೇತಿ ಅಧಿಕಾರಿ (ಜೆಟಿಒ) ಹುದ್ದೆಯಿಂದ ನೇರವಾಗಿ ಪ್ರಾಚಾರ್ಯ ಹುದ್ದೆಗೆ ಮುಂಬಡ್ತಿ ನೀಡಿರುವುದು ನಿಯಮ-ಬಾಹಿರವೆಂದು ಕೆಎಟಿ, ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದು ಆರು ತಿಂಗಳು ಕಳೆದಿದೆ. ಆದರೂ, ಹೀಗೆ ಮುಂಬಡ್ತಿ ಪಡೆದ 38 ಜೆಟಿಒಗಳಿಗೆ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಿಂಬಡ್ತಿ ನೀಡದಿರುವುದು ಇಲಾಖೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ.

1985ರ ವೃಂದ ಮತ್ತು ನೇಮಕಾತಿ ನಿಯಮವನ್ನು 1998ರಲ್ಲಿ ತಿದ್ದುಪಡಿ ಮಾಡಿದ್ದ ಇಲಾಖೆ, ಪ್ರಾಚಾರ್ಯರ ದರ್ಜೆ-2ರ ಹುದ್ದೆಗಳಿಗೆ ಮುಂಬಡ್ತಿ ನೀಡುವಾಗ ಬಿ.ಇ ಎಂಜಿನಿಯರಿಂಗ್ ಪದವೀಧರ ಜೆಟಿಒಗಳಿಗೆ ಶೇ 33ರಷ್ಟು ಕೋಟಾ ನಿಗದಿಪಡಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ್ದ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) 2008ರಲ್ಲಿಯೇ ಈ ಕೋಟಾವನ್ನು ಅನೂರ್ಜಿತಗೊಳಿಸಿತ್ತು.

ಹೀಗೆ ನಿಯಮ ತಿದ್ದುಪಡಿಯ ನಂತರ ಇಲಾಖೆಯು (1999ರಿಂದ 2011ರವರೆಗೆ) ಒಟ್ಟು 58 ಜೆಟಿಒಗಳಿಗೆ ನೇರವಾಗಿ ಪ್ರಾಚಾರ್ಯ ಹುದ್ದೆಗೆ ಮುಂಬಡ್ತಿ ನೀಡಿದೆ. ಈ ಪೈಕಿ, 20 ಮಂದಿ ನಿವೃತ್ತರಾಗಿದ್ದು, ಸದ್ಯ 38 ಮಂದಿ ಕೆಲಸ ಮಾಡುತ್ತಿದ್ದಾರೆ. ಕೋರ್ಟ್ ತೀರ್ಪಿನಿಂದಾಗಿ ಅವರೆಲ್ಲರೂ ಹಿಂಬಡ್ತಿಯ ಭೀತಿ ಎದುರಿಸುತ್ತಿದ್ದಾರೆ. ವಿಶೇಷವೆಂದರೆ, ಕೆಎಟಿ ತೀರ್ಪು ನೀಡಿದ ನಂತರ 17 ಮಂದಿಗೆ ಇಲಾಖೆ ಬಡ್ತಿ ನೀಡಿದೆ!

ಕೆಎಟಿ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಕೆಎಟಿ ತೀರ್ಪನ್ನು ಹೈಕೋರ್ಟ್ 2012ರಲ್ಲಿ ಎತ್ತಿಹಿಡಿದಿತ್ತು. ಇದರಿಂದಾಗಿ ಹಿಂಬಡ್ತಿ ಭೀತಿಗೆ ಒಳಗಾದ ಅಧಿಕಾರಿಗಳು ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ (ಎಸ್‌ಎಲ್‌ಪಿ) ಸಲ್ಲಿಸಿದ್ದರು. 2012ರಲ್ಲಿಯೇ ಮಧ್ಯಂತರ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಇದೇ ಜನವರಿಯಲ್ಲಿ ಎಸ್‌ಎಲ್‌ಪಿಯನ್ನು ವಜಾಗೊಳಿಸಿದೆ.

'ಕೆಎಟಿ ತೀರ್ಪು ನೀಡಿ 16 ವರ್ಷ, ಹೈಕೋರ್ಟ್ ತೀರ್ಪು ನೀಡಿ 12 ವರ್ಷ ಕಳೆದಿದೆ. ಸುಪ್ರೀಂ ಕೋರ್ಟ್ ತೀರ್ಪು ನೀಡಿ ಆರು ತಿಂಗಳಾಯಿತು. ಆದರೂ ಜೆಟಿಒ ಹುದ್ದೆಯಿಂದ ನೇರವಾಗಿ (ಎರಡು, ಮೂರು ವೃಂದಗಳನ್ನು ಕಡೆಗಣಿಸಿ) ಸಹಾಯಕ ನಿರ್ದೇಶಕರು, ಪ್ರಾಚಾರ್ಯರ ಹುದ್ದೆಗಳಿಗೆ ನಿಯಮಬಾಹಿರವಾಗಿ ಮುಂಬಡ್ತಿ ಪಡೆದಿರುವವರಿಗೆ ಹಿಂಬಡ್ತಿ ನೀಡಿಲ್ಲ. ಅಲ್ಲದೆ, ಕೋರ್ಟ್ ಆದೇಶ ಜಾರಿಯಾಗದ ಕಾರಣಕ್ಕೆ, ಕೆಪಿಎಸ್‌ಸಿ ಮೂಲಕ 2008ರಲ್ಲಿ ಇಲಾಖೆಗೆ ನೇರವಾಗಿ ನೇಮಕವಾದ ಅಧಿಕಾರಿಗಳ ಪೈಕಿ 30 ಮಂದಿ ಮುಂಬಡ್ತಿಯಿಂದ ವಂಚಿತರಾಗಿದ್ದಾರೆ' ಎಂದು ಅಧಿಕಾರಿ-ಯೊಬ್ಬರು ಹೇಳಿದರು.

'ಹಲವು ವರ್ಷಗಳ ನಿರಂತರ ಕಾನೂನು ಹೋರಾಟದಲ್ಲಿ ಗೆಲುವು ಸಿಕ್ಕಿದರೂ, ತೀರ್ಪು ಜಾರಿಗೊಳಿಸಲು ಇಲಾಖೆ ಮೀನಾಮೇಷ ಎಣಿಸುತ್ತಿದೆ. ಇಲಾಖೆ ಮಾಡಿದ ತಪ್ಪಿನಿಂದಾಗಿ 1998ರಿಂದಲೂ ಮುಂಬಡ್ತಿ ಇಲ್ಲದೆ ಹಲವು ಸಿಬ್ಬಂದಿ ನಿವೃತ್ತರಾಗಿದ್ದಾರೆ. ಇಲಾಖೆಯಲ್ಲಿ ಸುಮಾರು 15 ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವರು ನ್ಯಾಯಯುತವಾಗಿ ಸಿಗಬೇಕಾಗಿರುವ ಮುಂಬಡ್ತಿಯಿಂದ ವಂಚಿತರಾಗಿದ್ದಾರೆ. ಕೋರ್ಟ್ ತೀರ್ಪಿನಂತೆ ಅನರ್ಹರ ಬಡ್ತಿ ಹಿಂಪಡೆದು, ಅರ್ಹರಿಗೆ ನೀಡಬೇಕಾಗಿದೆ' ಎಂದೂ ಹೇಳಿದರು.

'ತಿದ್ದುಪಡಿ ನಿಯಮಬಾಹಿರ'

1985ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರಾಚಾರ್ಯರು ದರ್ಜೆ-2, ಸಹಾಯಕ ನಿರ್ದೇಶಕ ಹುದ್ದೆಗಳಿಗೆ ಶೇ 50ರಷ್ಟು ನೇರ ನೇಮಕಾತಿ, ಉಳಿದ ಶೇ 50ರಷ್ಟನ್ನು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿಪ್ಲೊಮಾ ವಿದ್ಯಾರ್ಹತೆ ಹೊಂದಿದ ತರಬೇತಿ ಅಧಿಕಾರಿಗಳ ವೃಂದದಿಂದ ಭರ್ತಿ ಮಾಡಲು ಅವಕಾಶವಿದೆ. ಈ ನಿಯಮವನ್ನು 1998ರಲ್ಲಿ ತಿದ್ದುಪಡಿ ಮಾಡಿದ ಇಲಾಖೆ, ಈ ಹುದ್ದೆಗಳಿಗೆ ಬಡ್ತಿಗೆ ಮೂರು ಪೂರಕ (ಫೀಡರ್) ವೃಂದಗಳನ್ನು ಸೃಜಿಸಿತ್ತು. ತಲಾ ಶೇ 33.33ರಂತೆ ನೇರ ನೇಮಕಾತಿ, ಡಿಪ್ಲೊಮಾ ವಿದ್ಯಾರ್ಹತೆ ಹೊಂದಿದ ತರಬೇತಿ ಅಧಿಕಾರಿಗಳ ವೃಂದ ಮತ್ತು ಜೆಟಿಒ ಹುದ್ದೆಯಲ್ಲಿ ಕಾಯನಿರ್ವಹಿಸುತ್ತಿ-ರುವ ಬಿ.ಇ ಎಂಜಿನಿಯರಿಂಗ್ ಪದವೀಧರರ ವರ್ಗಾವಣೆಯಿಂದ ಮುಂಬಡ್ತಿಗೆ ಅವಕಾಶ ಕಲ್ಪಿಸಲಾಗಿತ್ತು. ಈ ತಿದ್ದುಪಡಿ ನಿಯಮ ಬಾಹಿರವೆಂದು ಇಲಾಖೆಯ ಅಧಿಕಾರಿಗಳಾದ ಬಿ. ಶಂಕರದೇವೆಗೌಡ ಮತ್ತು ಇತರರು ಕೆಎಟಿ ಮೆಟ್ಟಿಲೇರಿದ್ದರು. ಅಧಿಕಾರಿಗಳ ವಾದವನ್ನು ಕೆಎಟಿ ಎತ್ತಿ ಹಿಡಿದಿತ್ತು.

ಈ ವಿಷಯಕ್ಕೆ ಸಂಬಂಧಿಸಿದ ಕಡತವನ್ನು ಮುಂದಿನ ಕ್ರಮಕ್ಕಾಗಿ ಕೌಶಲ ಅಭಿವೃದ್ಧಿ ಇಲಾಖೆಗೆ ಕಳುಹಿಸಿದ್ದು, ಉಪ ನಿರ್ದೇಶಕ ಮತ್ತು ಪ್ರಾಚಾರ್ಯ ಗ್ರೇಡ್– 1 ಹುದ್ದೆಗೆ ಬಡ್ತಿ ನೀಡುವಂತೆಯೂ ಶಿಫಾರಸು ಮಾಡಿದ್ದೇವೆ

ರಾಗಪ್ರಿಯ, ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ

ಜೆಟಿಒ ಹುದ್ದೆಯಿಂದ ನೇರವಾಗಿ ಪ್ರಾಚಾರ್ಯ ಹುದ್ದೆಗೆ ಬಡ್ತಿ ನೀಡಿರುವುದಕ್ಕೆ ಸಂಬಂಧಿಸಿದಂತೆ ಕೋರ್ಟ್ ನೀಡಿರುವ ತೀರ್ಪಿನ ಅನ್ವಯ ಕ್ರಮ ತೆಗೆದುಕೊಳ್ಳುವ ವಿಚಾರವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ

ಉಮಾ ಮಹದೇವನ್

ಎಸಿಎಸ್, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

ಬೈಕ್ ಕಳವು ಪ್ರಕರಣ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಮತ್ತು ಉತ್ತರ ವಿಭಾಗದ ಪೊಲೀಸರು ಮೂರು ಪ್ರತ್ಯೇಕ ಬೈಕ್ ಕಳವು ಪ್ರಕರಣಗಳಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಮನೆ ಎದುರು ನಿಲುಗಡೆ ಮಾಡಿದ್ದ ಬೈಕ್ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಜೆ.ಪಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕರಿಸಂದ್ರ ನಿವಾಸಿಗಳಾದ ಶೇಖ್ ಮುಜಾಮಿಲ್ ಪಾಷಾ(25) ಮತ್ತು ಮೊಹಮ್ಮದ್ ಫಯಾಜ್(2) ಬಂಧಿತರು.

ಆರೋಪಿಗಳಿಂದ ₹4 ಲಕ್ಷ ಮೌಲ್ಯದ ಏಳು ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳು ಮೋಜಿನ ಜೀವನಕ್ಕಾಗಿ ಮನೆ ಎದುರು ನಿಲುಗಡೆ ಮಾಡಿದ್ದ ಬೈಕ್‌ಗಳ ಹ್ಯಾಂಡಲ್ ಲಾಕ್ ಮುರಿದು ಕಳವು ಮಾಡಿ, ಬೇರೆಡೆ ಮಾರಾಟ ಮಾಡುತ್ತಿದ್ದರು. ಇತ್ತೀಚೆಗೆ ಠಾಣೆ ವ್ಯಾಪ್ತಿಯಲ್ಲಿ ಬೈಕ್‌ವೊಂದನ್ನು ಕದ್ದಿದ್ದರು. ಈ ಮಾಹಿತಿ ಮೇರೆಗೆ ದಾಖಲಾದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಜೆ.ಪಿ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹4 ಲಕ್ಷ ಮೌಲ್ಯದ ಬೈಕ್‌ಗಳು ಜಪ್ತಿ: ಹೋಟೆಲ್ ಎದುರು ನಿಲುಗಡೆ ಮಾಡಿದ್ದ ಬೈಕ್‌ಗಳ ಕಳವು ಮಾಡುತ್ತಿದ್ದ ಇಲಿಯಾಸ್ ನಗರದ ನಿವಾಸಿ ಸಾದಿಕ್ (23) ಎಂಬಾತನನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ₹4 ಲಕ್ಷ ಮೌಲ್ಯದ ಏಳು ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಇನ್ನೊಂದು ಪ್ರಕರಣದಲ್ಲಿ ಮನೆ ಎದುರು ನಿಲುಗಡೆ ಮಾಡಿದ್ದ ಬೈಕ್‌ಗಳ ಕಳವು ಮಾಡಿ ಬೈಕ್‌ನಲ್ಲಿ ಕೆಲವು ಬಿಡಿಭಾ-ಗಗಳನ್ನು ತೆಗೆದು ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ತುಮಕೂರಿನ ತಿಲಕ್(30) ಬಂಧಿತ ಆರೋಪಿ.

ಆರೋಪಿಯಿಂದ ₹8 ಲಕ್ಷ ಮೌಲ್ಯದ ಏಳು ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

₹65 ಲಕ್ಷ ಸಾಲ: ಮರು ಪಾವತಿ ವಿಳಂಬ

ಹೋಟೆಲ್ ಮಾಲೀಕನ ಕೊಲೆ: ಸೆರೆ

ಪ್ರಜಾವಾಣಿ ವಾರ್ತೆ

ಆರೋಪಿ ದಯಾಳ್

ಕೊಲೆಯಾದ ಕುಮಾರ್

ಬೆಂಗಳೂರು: ಸಾಲ ವಾಪಸ್ ನೀಡುವ ವಿಚಾರವಾಗಿ ನಡೆದ ಗಲಾಟೆಯಲ್ಲಿ ಹೋಟೆಲ್ ಮಾಲೀಕರೊಬ್ಬರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಫೈನಾನ್ಸಿಯರ್ ಅನ್ನು ಶ್ರೀರಾಂಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶ್ರೀರಾಂಪುರದ ಸಾಯಿಬಾಬಾ ನಗರದ ನಿವಾಸಿ ಕುಮಾರ್(38) ಕೊಲೆಯಾದವರು. ಕೃತ್ಯ ಎಸಗಿದ ಆರೋಪಿದಡಿ ದಯಾಳ್(46) ಎಂಬುವವರನ್ನು ಘಟನೆ ನಡೆದ ನಾಲ್ಕು ತಾಸಿನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮಂಗಳವಾರ ಮುಂಜಾನೆ ಓಕಳೀಪುರದ ನ್ಯೂಕಾಳಪ್ಪ ಬ್ಲಾಕ್‌ನಲ್ಲಿ ಕೊಲೆ ಮಾಡಿ ಆರೋಪಿ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಕೊಲೆಯಾದ ಕುಮಾರ್ ಹಾಗೂ ಆರೋಪಿ 15 ವರ್ಷದಿಂದ ಸ್ನೇಹಿತರಾಗಿದ್ದರು. ದಯಾಳ್ ಅವರು ಫೈನಾನ್ಸ್ ವ್ಯವಹಾರ ನಡೆಸುತ್ತಿದ್ದರೆ, ಕುಮಾರ್ ಮನೆ ಸಮೀಪದಲ್ಲೇ ಹೋಟೆಲ್ ನಡೆಸುತ್ತಿದ್ದರು. ಇಬ್ಬರೂ ಸಾಯಿಬಾಬಾ ನಗರದಲ್ಲೇ ಕುಟುಂಬ ಸಮೇತ ನೆಲೆಸಿದ್ದರು. ಸ್ನೇಹಿತನೇ ಫೈನಾನ್ಸ್ ವ್ಯವಹಾರ ನಡೆಸುತ್ತಿದ್ದರಿಂದ ಕುಮಾರ್ ಅವರು ₹65 ಲಕ್ಷ ಸಾಲ ಪಡೆದುಕೊಂಡಿದ್ದರು. ಮನೆ ನಿರ್ಮಾಣ, ಹೋಟೆಲ್ ಅಭಿವೃದ್ಧಿಗೆ ಪಡೆದಿದ್ದ ಸಾಲವನ್ನು ವಾಪಸ್ ನೀಡಿರಲಿಲ್ಲ. ಸಾಲವನ್ನು ವಾಪಸ್ ನೀಡುವಂತೆ ದಯಾಳ್ ಅವರು ಆಗಾಗ್ಗೆ ಮನವಿ ಮಾಡುತ್ತಿದ್ದರು. ಸಾಲ ಮರುಪಾವತಿ ಅವಧಿಯನ್ನು ಕೊಲೆಯಾದ ವ್ಯಕ್ತಿ ಮುಂದೂಡುತ್ತಲೇ ಇದ್ದರು. ಇದೇ ಕೊಲೆಗೆ ಕಾರಣವಾಗಿದೆ ಎಂದು ಪೊಲೀಸರು ಹೇಳಿದರು.

ಚಾಕು ಖರೀದಿಸಿದ್ದ ಫೈನಾನ್ಸಿಯರ್: ಆರೋಪಿ ದಯಾಳ್‌ಗೆ ಸಾಲ ಕೊಟ್ಟವರು ಹಣ ಮರಳಿಸುವಂತೆ ಪೀಡಿಸುತ್ತಿದ್ದರು. ಅದರಿಂದ ಕೋಪಗೊಂಡಿದ್ದ ಆರೋಪಿ, 'ಸಾಲಗಾರರ ಒತ್ತಡ ಹೆಚ್ಚಾಗಿದ್ದು, ಹಣ ವಾಪಸ್ ಕೊಡಲಿಲ್ಲವೆಂದರೆ ಸಮಸ್ಯೆ ಆಗಲಿದೆ' ಎಂದು ಕುಮಾರ್‌ಗೆ ಎಚ್ಚರಿಸಿದ್ದರು. ಆಗಲೂ ಕುಮಾರ್, ನಿರ್ಲಕ್ಷ್ಯ ತೋರಿದ್ದರು ಎನ್ನಲಾಗಿದೆ.

ಇದರಿಂದ ಇನ್ನಷ್ಟು ಆಕ್ರೋಶಗೊಂಡ ಆರೋಪಿ, ಕುಮಾರ್ ಅವರನ್ನು ಕೊಲೆ ಮಾಡಲು ನಿರ್ಧರಿಸಿ, ಸೋಮವಾರ ಮಧ್ಯಾಹ್ನವೇ ತರಕಾರಿ ಕತ್ತರಿಸುವ ಚಾಕು ಖರೀದಿಸಿದ್ದರು. ರಾತ್ರಿ 8 ಗಂಟೆ ಸುಮಾರಿಗೆ ಮನೆಯಲ್ಲಿದ್ದ ಕುಮಾರ್‌ನನ್ನು ಜತೆಗೆ ಕರೆದೊಯ್ದು ರಾಜಾಜಿನಗರದ ರಾಮಮಂದಿರದ ಸಮೀಪದ ಬಾರ್‌ನಲ್ಲಿ ತಡರಾತ್ರಿವರೆಗೂ ಮದ್ಯ ಸೇವಿಸಿದ್ದರು. ಬಳಿಕ ಮುಂಜಾನೆ 2.30ರ ಸುಮಾರಿಗೆ ಓಕಳೀಪುರದ ನ್ಯೂಕಾಳಪ್ಪ ಬ್ಲಾಕ್‌ನಲ್ಲಿ ಬರುವಾಗ ಕೊಲೆ ಮಾಡಿ ಪರಾರಿ ಆಗಿದ್ದರು ಎಂದು ಪೊಲೀಸರು ತಿಳಿಸಿದರು. ಶ್ರೀರಾಮಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇಬಲ್ ಸಂಕಷ್ಟ...

ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಅಪಾಯ ತಂದೊಡ್ಡುವಂತೆ ವಿದ್ಯುತ್ ಕಂಬವೊಂದಕ್ಕೆ ಕೇಬಲ್‌ಗಳು ನೇತಾಡುತ್ತಿವೆ. ಮಳೆಯಿಂದ ರಕ್ಷಣೆ ಪಡೆಯಲು ವ್ಯಾಪಾರಿಯೊಬ್ಬರು ಅದೇ ಕಂಬಕ್ಕೆ ಸೋಮವಾರ ತಾಡಪಾಲು ಕಟ್ಟಿದರು

–ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಸಂಪ್‌ಗೆ ಒಳಚರಂಡಿ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್‌ಪೇಟೆಯ 23ನೇ ಅಡ್ಡರಸ್ತೆಯಲ್ಲಿ ಒಳಚರಂಡಿಯ ಮ್ಯಾನ್‌ಹೋಲ್ ತುಂಬಿಕೊಂಡು, ಒಳಚರಂಡಿ ನೀರು ಹರಿಯದಿರುವುದರಿಂದ ಪಕ್ಕದ ಮನೆಗಳಲ್ಲಿರುವ ಕುಡಿಯುವ ನೀರಿನ ಸಂಪ್‌ಗಳಿಗೆ ಕಲ್ಮಶದ ನೀರು ಹರಿಯುತ್ತಿದೆ.

'ಒಳಚರಂಡಿ ಮ್ಯಾನ್‌ಹೋಲ್ ತುಂಬಿ ಹರಿಯುತ್ತಿರುವುದು ಹಾಗೂ ಮನೆಗಳ ಸಂಪ್‌ಗಳಿಗೆ ಒಳಚರಂಡಿ ನೀರು ಹರಿಯುತ್ತಿದೆ ಎಂದು ಬನ್ನಪ್ಪ ಪಾರ್ಕ್ ಸೇವಾ ಕೇಂದ್ರದಲ್ಲಿ 15 ದಿನಗಳಿಂದ ಹಲವು ಬಾರಿ ದೂರು ನೀಡಿದ್ದೇವೆ. ಕೇಂದ್ರದಲ್ಲಿರುವ ಕಡತದಲ್ಲಿ ದೂರು ದಾಖಲಿಸಿದ್ದರೂ ಪ್ರಯೋಜನವಾಗಿಲ್ಲ' ಎಂದು ಮನೆ ನಂ. 4/1ರ ನಿವಾಸಿ ಕೃಷ್ಣಮೂರ್ತಿ ಅವರು ದೂರಿದರು.

'ಮ್ಯಾನ್‌ಹೋಲ್ ತುಂಬಿ ಹರಿಯುತ್ತಿದ್ದು ಬೇಗ ಕ್ರಮ ಕೈಗೊಳ್ಳಿ ಎಂದು ಸಾಕಷ್ಟು ಬಾರಿ ಒತ್ತಾಯಿಸಿದ ಬಳಿಕ ಬಂದ ಇಬ್ಬರು ಸಿಬ್ಬಂದಿ ಮ್ಯಾನ್‌ಹೋಲ್‌ನ ಮೇಲ್ಭಾಗವನ್ನು ಸ್ವಚ್ಛಗೊಳಿಸಿದಂತೆ ಮಾಡಿ, ಕಲ್ಮಶವನ್ನೆಲ್ಲ ಪಕ್ಕದ್ದಲ್ಲೇ ಸುರಿದು ಹೋಗಿದ್ದಾರೆ. ಪೂರ್ಣ ಸ್ವಚ್ಛಗೊಳಿಸಿ ಎಂದು ಒತ್ತಾಯಿಸಿದರೂ ಮಾಡಿಲ್ಲ. ಹೀಗಾಗಿ ಮತ್ತೆ ಒಳಚರಂಡಿ ನೀರು ಸಂಪ್‌ಗಳಿಗೆ ಹರಿಯುತ್ತಿದೆ' ಎಂದರು.

ಕಬ್ಬನ್‌ಪೇಟೆಯ 23ನೇ ಅಡ್ಡರಸ್ತೆಯಲ್ಲಿ ಒಳಚರಂಡಿಯ ಮ್ಯಾನ್‌ಹೋಲ್ ಅನ್ನು ಪೂರ್ಣವಾಗಿ ಸ್ವಚ್ಛಗೊಳಿಸದೆ, ಮೇಲ್ಭಾಗದ ಕಲ್ಮಶವನ್ನು ರಸ್ತೆಯಲ್ಲೇ ಹಾಕಿರುವುದು

'ಡೆಂಗಿ ಹಾಗೂ ಸಾಂಕ್ರಾಮಿಕ ರೋಗಗಳು ಹೆಚ್ಚಾಗು-ತ್ತಿರುವ ಸಂದರ್ಭದಲ್ಲಿ ಸಂಪ್‌ಗಳಿಗೆ ಒಳಚರಂಡಿ ನೀರು ಹರಿದರೆ ಆರೋಗ್ಯ ಹದಗೆಡುತ್ತದೆ. ಅಕ್ಕಪಕ್ಕದ ಮೂರ್ನಾಲ್ಕು ಮನೆಯವರು ನೀರು ಕುಡಿಯದಂತಹ ಸ್ಥಿತಿ ಉಂಟಾಗಿದೆ. ಜಲಮಂಡಳಿ ಅಧಿಕಾರಿಗಳು ಶೀಘ್ರವೇ ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

ದೊಡ್ಡಬಳ್ಳಾಪುರ: ಆರು ಡೆಂಗಿ ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ನಗರದ ವಿವಿಧ ಆಸ್ಪತ್ರೆಗಳಲ್ಲಿ 6 ಡೆಂಗಿ ಪ್ರಕರಣಗಳು ಮಂಗಳವಾರ ದೃಢಪಟ್ಟಿವೆ ಎಂದು ಸರ್ಕಾರಿ ಆಸ್ಪತ್ರೆ ಆಡಳಿತಾಧಿಕಾರಿ ಡಾ.ರಮೇಶ್ ತಿಳಿಸಿದ್ದಾರೆ.

ಈಗಾಗಲೇ ಡೆಂಗಿ ಜ್ವರ ಚಿಕಿತ್ಸೆ ಪಡೆಯುತ್ತಿರುವ ಎಲ್ಲ ರೋಗಿಗಳ ಆರೋಗ್ಯದಲ್ಲೂ ಚೇತರಿಕೆ ಕಂಡು ಬಂದಿದೆ. ಆದರೆ, ಸಾರ್ವಜನಿಕರು ಸೊಳ್ಳೆ ಕಡಿತದಿಂದ ಸುರಕ್ಷಿತವಾಗಿರಲು ಅಗತ್ಯ ಇರುವ ಮುಂಜಾಗ್ರತ ಕ್ರಮ ವಹಿಸಬೇಕು. ಮನೆಗಳ ಸುತ್ತಮುತ್ತ ಮಳೆ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಸಾಧ್ಯವಾದಷ್ಟು ಬಿಸಿನೀರು ಕುಡಿಯುವ ಕಡೆಗೆ ಆದ್ಯತೆ ನೀಡಬೇಕಿದೆ ಎಂದರು.

ಜಿಕೆವಿಕೆಯಲ್ಲಿ ಪ್ರತಿ ತಿಂಗಳು 'ಕೃಷಿ ಉತ್ಪನ್ನ ಸಂತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೃಷಿ ವಿಶ್ವವಿದ್ಯಾಲಯದ (ಜಿಕೆವಿಕೆ) ಆವರಣದಲ್ಲಿ ಇನ್ನು ಮುಂದೆ ಪ್ರತಿ ತಿಂಗಳ 4ನೇ ಶನಿವಾರ 'ಕೃಷಿ ಉತ್ಪನ್ನ ಸಂತೆ' ಆಯೋಜಿಸಲಾಗುತ್ತಿದೆ.

ಕಳೆದ ತಿಂಗಳು ಪ್ರಾಯೋಗಿಕವಾಗಿ ನಡೆದ ಕೃಷಿ ಉತ್ಪನ್ನಗಳ ಸಂತೆಗೆ ಸಾರ್ವಜನಿಕರಿಂದ ಉತ್ತಮ ಸ್ಪಂದನ ದೊರಕಿರುವುದರಿಂದ ಉತ್ತೇಜನಗೊಂಡಿರುವ ವಿ.ವಿ, ತಿಂಗಳಿಗೊಮ್ಮೆ ಸಂತೆ ನಡೆಸಲು ನಿರ್ಧರಿಸಿದೆ.

'ಎರಡನೇ ಪ್ರಯೋಗವಾಗಿ ಪ್ರತಿ ತಿಂಗಳ ಒಂದು ದಿನ ಸಂತೆ ನಡೆಸಲು ನಿರ್ಧರಿಸಿದೆವು. ಈ ಬಾರಿ ಜುಲೈ 27ರಂದು ಸಂತೆ ನಡೆಸುತ್ತಿದ್ದೇವೆ' ಎಂದು ವಿಶ್ವ ವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ್ ತಿಳಿಸಿದರು.

'ಹಿಂದಿನ ಸಂತೆಯಲ್ಲಿ ಕೃಷಿ ವಿಶ್ವವಿದ್ಯಾಲಯದ ಉತ್ಪನ್ನಗಳನ್ನಷ್ಟೇ ಮಾರಾಟಕ್ಕೆ ಇಡಲಾಗಿತ್ತು. ಈ ಬಾರಿ ಕೃಷಿ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರದ ಬೆಂಬಲದೊಂದಿಗೆ ರಚನೆಯಾಗಿರುವ ರೈತ ಉತ್ಪಾದಕ ಸಂಸ್ಥೆಗಳು, ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯರು ತಯಾರಿಸಿರುವ ಉತ್ಪನ್ನಗಳ ಮಾರಾಟಕ್ಕೂ ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ವಿವರಿಸಿದರು.

'ಸಂತೆಯ ಉದ್ದೇಶ, ಉತ್ಪನ್ನಗಳ ಮಾರಾಟವಷ್ಟೇ ಅಲ್ಲದೇ, ಕೃಷಿ ವಿಶ್ವವಿದ್ಯಾಲಯದ ಚಟುವಟಿಕೆಗಳನ್ನು ಜನರಿಗೆ ಪರಿಚಯಿಸುವುದೂ ಆಗಿದೆ. ಜೊತೆಗೆ, ಕೈತೋಟಕ್ಕೆ ಬೇಕಾದ ತರಕಾರಿ, ಹೂವಿನ ಗಿಡಗಳ ಬೀಜಗಳು, ಹಣ್ಣಿನ ಗಿಡಗಳು ಲಭ್ಯವಿರುತ್ತವೆ. ಕೈತೋಟಕ್ಕೆ ಬೇಕಾದ ಉಪಕರಣಗಳು, ಯಂತ್ರೋಪಕರಣಗಳೂ ಇರುತ್ತವೆ' ಎಂದರು. ಈ ಪ್ರಯೋಗವೂ ಯಶಸ್ವಿಯಾದರೆ, ಮುಂದಿನ ಸಂತೆಯನ್ನು ಇನ್ನಷ್ಟು ದೊಡ್ಡ ವೇದಿಕೆಯಲ್ಲಿ ನಡೆಸುವ ಯೋಚನೆ ಇದೆ ಎಂದರು.

ಶೇ 40ರಷ್ಟೇ ಸಹಜ ಮಣ್ಣು: ಮುಖ್ಯಮಂತ್ರಿ ಸಿದ್ದರಾಮಯ್ಯ

‘ರಾಜ್ಯದಲ್ಲಿ ಮಣ್ಣಿನ ಫಲವತ್ತತೆ ಕುಸಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಮಣ್ಣಿನ ಫಲವತ್ತತೆಗೆ ಸಂಬಂಧಿಸಿದಂತೆ ನಡೆದ ಮಾದರಿ ಸಮೀಕ್ಷೆಯ ಪ್ರಕಾರ ಶೇ 33.78ರಷ್ಟು ಮಣ್ಣು ಆಮ್ಲೀಯ, ಶೇ 26.7ರಷ್ಟು ಕ್ಷಾರೀಯ ಆಗಿದೆ. ಸಹಜ ಮಣ್ಣಿನ ಪ್ರಮಾಣ ಸುಮಾರು ಶೇ 40ರಷ್ಟು ಮಾತ್ರ...’

ಮಣ್ಣಿನ ಫಲವತ್ತತೆ ಕುಸಿತವಾಗು ತ್ತಿರುವ ಬಗ್ಗೆ ಆತಂಕಕಾರಿ ಮಾಹಿತಿ ನೀಡಿದವರು ಮುಖ್ಯಮಂತ್ರಿ ಸಿದ್ದರಾಮಯ್ಯ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ 2 ದಿನ ಸುದೀರ್ಘ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಮಣ್ಣಿನ ಫಲವತ್ತತೆ ಕಡಿಮೆ ಆಗುತ್ತಿರುವುದರಿಂದ ಭವಿಷ್ಯದ ಕರ್ನಾಟಕ ಕುರಿತು ಆತಂಕ ಉಂಟಾಗಿದೆ’ ಎಂದು ಹೇಳಿದರು.

‘ಸಾವಯವ ಕೃಷಿಗೆ ಒತ್ತು ನೀಡುವ ಮೂಲಕ ನೈಸರ್ಗಿಕ ಇಂಗಾಲದ ಪ್ರಮಾಣ ಹೆಚ್ಚಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು. ‘ಜನರು ರಸಗೊಬ್ಬರ ಬಳಸುವ ಪ್ರಮಾಣ ಹೆಚ್ಚಾಗುತ್ತಿದೆ. 2014-15ರಲ್ಲಿ 37.4 ಲಕ್ಷ ಟನ್ ರಸಗೊಬ್ಬರ ಬಳಕೆಯಾಗಿದ್ದರೆ, 2023-24ರಲ್ಲಿ ಆ ಪ್ರಮಾಣ 40 ಲಕ್ಷ ಟನ್‌ಗೆ ಏರಿಕೆಯಾಗಿದೆ. 2017-18ರಲ್ಲಿ 16.66 ಲಕ್ಷ ಮಣ್ಣು ಮಾದರಿಗಳ ಪರೀಕ್ಷೆ ಮಾಡಲಾಗಿತ್ತು. ಆ ಪರೀಕ್ಷೆಯ ಪ್ರಕಾರ ಶೇ 50.41ರಷ್ಟು ಸಹಜ ಇಂಗಾಲದ ಕೊರತೆಯಿದೆ. ಸಾರಜನಕ ಶೇ 73.77, ಪೊಟ್ಯಾಶಿಯಂ ಶೇ 24.94 ರಷ್ಟು ಕೊರತೆಯಿದೆ’ ಎಂದರು.

‘ಕೊರತೆಯ ಪ್ರಮಾಣವನ್ನು ತುಂಬಲು ರೈತರು ರಸಗೊಬ್ಬರದ ಮೊರೆ ಹೋಗಿದ್ದಾರೆ. ಭವಿಷ್ಯದಲ್ಲಿ ಇದು ಬಹಳ ದೊಡ್ಡ ಸಮಸ್ಯೆಯನ್ನು ಹುಟ್ಟು ಹಾಕಲಿದೆ. ರೈತರ ಖರ್ಚು ಹೆಚ್ಚುತ್ತಿದೆ. ಅದಕ್ಕೆ ತಕ್ಕವಾಗಿ ಆದಾಯ ಸಿಗುತ್ತಿಲ್ಲ. ನಮ್ಮ ರೈತರ ಉತ್ಪನ್ನಗಳಲ್ಲಿ ರಾಸಾಯನಿಕ ಅಂಶಗಳು ಹೆಚ್ಚಾಗುತ್ತಿವೆ. ಇದರಿಂದಾಗಿ ಜನರಲ್ಲಿ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ರೋಗಿಗಳ ಸಂಖ್ಯೆಯೂ ಹೆಚ್ಚುತ್ತಿದೆ’ ಎಂದೂ ಅವರು ಹೇಳಿದರು.

‘ಕಲುಷಿತ ನೀರು: ಅಧಿಕಾರಿಗಳ ವಿರುದ್ಧ ಕ್ರಮ’

‘ಕಲುಷಿತ ನೀರು ಕುಡಿದು ಹಲವು ಸಾವು- ನೋವುಗಳು ಸಂಭವಿಸಿವೆ. ಇಂತಹ ಪ್ರಕರಣಗಳು ಮರುಕಳಿಸಿದರೆ ಹಿರಿಯ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಎಚ್ಚರಿಕೆ ನೀಡಿದರು.

‘ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷೆ ಮಾಡಬೇಕೆಂದು ಸೂಚಿಸಲಾಗಿದೆ. ಮುಂದಿನ ದಿನಗಳಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಾವುಗಳು ಸಂಭವಿಸಿದರೆ ಅಂಥ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲೂ ಹಿಂಜರಿಯುವುದಿಲ್ಲ ಎಂಬ ಸಂದೇಶ ನೀಡಲಾಗಿದೆ’ ಎಂದರು.

ಭಾಷಾ ನಿಯಮ ಪಾಲನೆಗೆ ಶಾಲೆಗಳಿಗೆ ‘ಸಿಐಎಸ್‌ಸಿಇ’ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬಿಎಸ್‌ಸಿ, ಐಸಿಎಸ್‌ಇ ಪಠ್ಯಕ್ರಮ ಅನುಸರಿಸುವ ಎಲ್ಲ ಶಾಲೆಗಳೂ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಲಿಸಬೇಕು ಎನ್ನುವ ರಾಜ್ಯ ಸರ್ಕಾರದ ಆದೇಶವನ್ನು ಪಾಲಿಸುವಂತೆ ‘ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್’ (ಸಿಐಎಸ್‌ಸಿಇ) ಸೂಚಿಸಿದೆ.

ನಗರದಲ್ಲಿ ಮಂಗಳವಾರ ನಡೆದ ಶಾಲಾ ಮುಖ್ಯಸ್ಥರ ಸಭೆಯಲ್ಲಿ ಸೂಚನೆ ನೀಡಿದ ಸಿಐಎಸ್‌ಸಿಇ ಮುಖ್ಯ ಕಾರ್ಯನಿರ್ವಾಹಕ ಜೋಸೆಫ್ ಇಮ್ಯಾನುಯೆಲ್, ‘ಕರ್ನಾಟಕ ಶಿಕ್ಷಣ ಸಂಸ್ಥೆಗಳ (ನಿರಾಕ್ಷೇಪಣಾ ಪ್ರಮಾಣಪತ್ರ ಮತ್ತು ನಿಯಂತ್ರಣದ ವಿತರಣೆ) ನಿಯಮಗಳನ್ನು ಪಾಲಿಸಬೇಕು. ಶಾಲೆಗಳು ಆಯಾ ರಾಜ್ಯಗಳ ಭಾಷಾ ನೀತಿಗೆ ಬದ್ಧವಾಗಿರಬೇಕು’ ಎಂದರು.

‘ಪಠ್ಯ ಪುಸ್ತಕಗಳ ಬೆಲೆ ಅಧಿಕವಾಗಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಎಂಟನೇ ತರಗತಿಯವರೆಗೆ ಶಾಲೆಗಳೇ ಪಠ್ಯಪುಸ್ತಕ ಆಯ್ಕೆ ಮಾಡುವ ಸ್ವಾತಂತ್ರ್ಯ ಬಳಸಿಕೊಳ್ಳಬೇಕು. ಆಗ ಪುಸ್ತಕಗಳ ಬೆಲೆಯ ಹೊರೆಯನ್ನು ಪೋಷಕರಿಗೆ ಕಡಿಮೆ ಮಾಡಬಹುದು’ ಎಂದು ಸಲಹೆ ನೀಡಿದರು.

‘ಮುಂಬರುವ ದಿನಗಳಲ್ಲಿ ಶಾಲೆಗಳ ಕಾರ್ಯಕ್ಷಮತೆಯನ್ನು ವಿಶ್ವ ಶ್ರೇಯಾಂಕಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಲಾಗುವುದು. ಶೇ 40ರಷ್ಟು ಮೌಲ್ಯಮಾಪನವು ಬೋಧನೆ ಮತ್ತು ಕಲಿಕೆಯ ಮೇಲೆ ಆಧಾರಿತವಾಗಿರುತ್ತದೆ. ಶಾಲೆಗಳ ನಡುವೆ ಆರೋಗ್ಯಕರ ಸ್ಪರ್ಧೆಗೆ ಮಾನದಂಡವಾಗಿ ಕಾರ್ಯನಿರ್ವಹಿಸಲು ಅವಕಾಶವಾಗಲಿದೆ’ ಎಂದು ಹೇಳಿದರು.

ರಾಜ್ಯ ಸರ್ಕಾರಕ್ಕೆ ಎಸ್‌ಸಿ ಆಯೋಗ ನೋಟಿಸ್

ನವದೆಹಲಿ(ಪಿಟಿಐ): ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ಮೀಸಲಾಗಿದ್ದ ನಿಧಿಗಳನ್ನು ಬೇರೆ ಉದ್ದೇಶಕ್ಕೆ ಬಳಸಲಾಗುತ್ತಿದೆ ಎಂಬ ಆರೋಪಗಳ ಕುರಿತು ವಿಸ್ತೃತ ವರದಿಯನ್ನು ಏಳು ದಿನಗಳಲ್ಲಿ ಸಲ್ಲಿಸುವಂತೆ ಕರ್ನಾಟಕ ಸರ್ಕಾರಕ್ಕೆ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ (ಎನ್‌ಸಿಎಸ್‌ಸಿ) ಸೂಚಿಸಿದೆ.

ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ನಿಧಿಗಳನ್ನು ಬೇರೆ ಉದ್ದೇಶಕ್ಕೆ ಬಳಸಲಾಗಿದೆ ಎಂಬ ಆರೋಪಗಳ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳನ್ನು ಆಧರಿಸಿ ಆಯೋಗವು ಸ್ವಯಂ ಪ್ರೇರಿತ ಕ್ರಮ ಕೈಗೊಂಡಿದೆ.

ಈ ಕುರಿತು ಕರ್ನಾಟಕದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಆಯೋಗವು, ‘ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿ ತೆಗೆದಿರಿಸಲಾಗಿದ್ದ ₹14,730 ಕೋಟಿಯನ್ನು ‘ಐದು ಗ್ಯಾರಂಟಿ ಯೋಜನೆ’ ಹೆಸರಿನಡಿ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಮರುಹಂಚಿಕೆ ಮಾಡಲು ಕರ್ನಾಟಕ ಸರ್ಕಾರ ನಿರ್ಧರಿಸಿದೆ’ ಎಂದು ವಿವರಿಸಿದೆ.

ಪರಿಶಿಷ್ಟ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಅಭ್ಯುದಯಕ್ಕಾಗಿ ಈ ನಿಧಿಗಳ ಬಳಕೆಯ ಮಹತ್ವವನ್ನು ಸಹ ಆಯೋಗವು ಪತ್ರದಲ್ಲಿ ವಿವರಿಸಿದೆ.

ಮಳೆ ನೀರು ಸಂಗ್ರಹಕ್ಕೆ ಆದ್ಯತೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಸಿರೀಕರಣಕ್ಕೆ ಸಂಬಂಧಿಸಿದಂತೆ ಯುವಜನರ ಸಲಹೆ ಕುರಿತ ವರದಿಯನ್ನು ವಿಮೋವೆ ಫೌಂಡೇಷನ್ ಮಂಗಳವಾರ ಸರ್ಕಾರಕ್ಕೆ ಸಲ್ಲಿಸಿತು.

ಯೂತ್ ವಾಯ್ಸ್ ಫಾರ್ ಗ್ರೀನ್ ಬ್ರ್ಯಾಂಡ್ ಬೆಂಗಳೂರು ಹೆಸರಿನಲ್ಲಿ ಮೂರು ತಿಂಗಳು ಅಭಿಯಾನ ನಡೆಸಲಾಯಿತು. ಇದರಲ್ಲಿ ಪಿಯು, ಪದವಿ ಕಾಲೇಜು ವಿದ್ಯಾರ್ಥಿಗಳು ಹಾಗೂ ಐ.ಟಿ ಉದ್ಯೋಗಿಗಳು ಪಾಲ್ಗೊಂಡು ನಗರದ ಹಸಿರೀಕರಣಕ್ಕೆ ತಮ್ಮ ಸಲಹೆ ನೀಡಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಫೌಂಡೇಷನ್‌ನ ನಿರ್ದೇಶಕ ವಿನಯ್ ಶಿಂಧೆ ಅವರು ವರದಿಯ ಪ್ರತಿಯನ್ನು ಸಲ್ಲಿಸಿದರು.

ನಗರದಲ್ಲಿ ಉದ್ಯಾನಗಳ ಸಂಖ್ಯೆ ಹೆಚ್ಚಿಸುವುದು, ಶೌಚಾಲಯಗಳ ನಿರ್ವಹಣೆ, ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಮಳೆ ನೀರು ಸಂಗ್ರಹಕ್ಕೆ ಆದ್ಯತೆ ನೀಡುವುದು ಹಾಗೂ ಕೆರೆ, ಕಲ್ಯಾಣಿಗಳ ರಕ್ಷಣೆಗೆ ಪ್ರಾಮುಖ್ಯತೆ ನೀಡುವಂತೆ ಯುವಜನತೆ ಸಲಹೆ ನೀಡಿದ್ದಾರೆ.

ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಬಜೆಟ್ ರೂಪಿಸುವಲ್ಲಿ ಯುವಜನರ ಅಭಿಪ್ರಾಯ ಪಡೆಯಬೇಕು.

ಬೆಂಗಳೂರಿನ ವಿಮೋವೆ ಫೌಂಡೇಷನ್ ನಿರ್ದೇಶಕ ವಿನಯ್ ಶಿಂಧೆ ಅವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ವರದಿ ಪ್ರತಿ ಸಲ್ಲಿಸಿದರು.

ಗಿಡ, ಮರಗಳನ್ನು ಹೆಚ್ಚು ಬೆಳೆಸಬೇಕು, ಆಟದ ಮೈದಾನ ಹಾಗೂ ಉದ್ಯಾನಗಳನ್ನು ಅಭಿವೃದ್ಧಿ ಪಡಿಸಬೇಕು. ನಗರದ ಅಭಿವೃದ್ಧಿಗೆ ಪೌರಕಾರ್ಮಿಕರ ಸಲಹೆಗಳನ್ನು ಸ್ವೀಕರಿಸಬೇಕು. ಪರಿಸರ ಜಾಗೃತಿ ಕಾರ್ಯಕ್ರಮಗಳು ಮತ್ತು ಶಾಲಾ ಪಠ್ಯದಲ್ಲಿ ಪರಿಸರ ವಿಷಯ ಇರಬೇಕು ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

‘ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ದೇಶದಲ್ಲಿ ಮಕ್ಕಳ ಹಕ್ಕುಗಳ ಪರಿಸ್ಥಿತಿ ಚಿಂತಾಜನಕವಾಗಿದೆ. ಮಕ್ಕಳ ಮೇಲೆ ನಾನಾ ರೀತಿಯ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಲೇ ಇವೆ’ ಎಂದು ನಿವೃತ್ತ ಐಎಎಸ್ ಅಧಿಕಾರಿ ಲೂಕೋಸ್ ವಲ್ಲತ್ತರೈ ಹೇಳಿದರು.

ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ, ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ‘ಮಕ್ಕಳ ಹಕ್ಕುಗಳು, ಕಾನೂನು ಮತ್ತು ರಕ್ಷಣಾ ವ್ಯವಸ್ಥೆ’ಯ ಕುರಿತು ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮಕ್ಕಳನ್ನು ದೌರ್ಜನ್ಯದಿಂದ ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರ ಮತ್ತು ಸಂಘ–ಸಂಸ್ಥೆಗಳು ಸಮನ್ವಯದಿಂದ ಕೆಲಸ ಮಾಡಬೇಕಿದೆ’ ಎಂದರು.

‘ಮಕ್ಕಳ ಹಕ್ಕುಗಳು, ಕಾನೂನು ಮತ್ತು ರಕ್ಷಣಾ ವ್ಯವಸ್ಥೆ’ಯ ಕುರಿತು ಕಾರ್ಯಾಗಾರಕ್ಕೆ ಲೂಕೋಸ್ ವಲ್ಲತ್ತರೈ ಅವರು ಮಂಗಳವಾರ ಚಾಲನೆ ನೀಡಿದರು. ಎನ್‌.ಎ. ವಾಸುದೇವ ಶರ್ಮಾ, ಕೋಸಿ ಮ್ಯಾಥ್ಯೂವ್, ಸರಸ್ವತಿ, ಎಂ. ವೆಂಕಟೇಶ್ ಭಾಗವಹಿಸಿದ್ದರು.

‘ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ನಿಯಂತ್ರಿಸಲು ಇರುವ ಕಾನೂನುಗಳು ಸಹ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರುತ್ತಿಲ್ಲ. ಇದು ಸಮುದಾಯದ ಅಭಿವೃದ್ಧಿ ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ದೊಡ್ಡ ಸವಾಲಾಗಿದೆ’ ಎಂರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಂ. ವೆಂಕಟೇಶ್ ಮಾತನಾಡಿ, ‘ದೇಶದಲ್ಲಿ ಬಾಲಕಾರ್ಮಿಕ ಮಕ್ಕಳ ಸ್ಥಿತಗತಿ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಬಾಲ್ಯ ವಿವಾಹ, ಹೆಚ್ಚುತ್ತಿರುವ ಭ್ರೂಣ ಹತ್ಯೆಗಳಂತಹ ಸಾಮಾಜಿಕ ಪಿಡುಗುಗಳ ವಿರುದ್ಧ ಸರ್ಕಾರ ಮತ್ತು ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಆ ಮೂಲಕ ಮಕ್ಕಳ ಮೇಲಿನ ದೌರ್ಜನ್ಯವನ್ನು ನಿಯಂತ್ರಿಸಬೇಕಿದೆ’ ಎಂದರು.

ಸಾಮಾಜಿಕ ಅಭಿವೃದ್ಧಿಯ ವಿವಿಧ ಆಯಾಮಗಳಲ್ಲಿ ಭಾರತದ ಸಂವಿಧಾನದ ಆಶಯಗಳು, ಸುಸ್ಥಿರ ಅಭಿವೃದ್ಧಿಯ ಗುರಿಗಳು ಮತ್ತು ವಿಶ್ವ ಮಕ್ಕಳ ಹಕ್ಕುಗಳ ಒಡಂಬಡಿಕೆ, ಮಕ್ಕಳ ಹಕ್ಕುಗಳು ಎಂಬ ವಿಷಯಗಳ ಕುರಿತು ಕರ್ನಾಟಕ ಮಕ್ಕಳ ಹಕ್ಕು ನಿಗಾ ಕೇಂದ್ರದ ರಾಜ್ಯ ಸಂಚಾಲಕ ಎನ್‌.ಎ. ವಾಸುದೇವ ಶರ್ಮಾ ಮಾತನಾಡಿದರು.

ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಬಣ್ಣನೆ

‘ಬಸವಾದಿ ಶರಣರ ಪರಿಚಯಿಸಿದ ಹಳಕಟ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಫ.ಗು. ಹಳಕಟ್ಟಿ ಅವರು ವಚನ ಸಂರಕ್ಷಣೆಯ ಕೆಲಸ ಮಾಡದಿದ್ದರೆ ಬಸವಾದಿ ಶರಣರ ಬಗ್ಗೆ ಜನರಿಗೆ ಗೊತ್ತೇ ಆಗುತ್ತಿರಲಿಲ್ಲ’ ಎಂದು ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ಮಹಿಳಾ ವೇದಿಕೆ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಫ.ಗು. ಹಳಕಟ್ಟಿ ಅವರು ಹತ್ತು ಸಾವಿರ ವಚನಗಳನ್ನು ಸಂಗ್ರಹಿಸಿದ್ದರು. ಅವರಿಂದಾಗಿ 250 ವಚನಕಾರರು ಮಹತ್ವ ಗೊತ್ತಾಗಿದೆ. ಬಿ.ಎಂ.ಶ್ರೀ ಅವರು ಹೇಳಿದ ಹಾಗೆ ಹಳಕಟ್ಟಿ ಅವರು ವಚನ ಗುಮ್ಮಟವಾಗಿದ್ದರು. ಮಂಗಳೂರಿನ ಬಾಸೆಲ್ ಮಿಷನ್ ಸಂಸ್ಥೆಯು ಕ್ರೈಸ್ತ ಧರ್ಮಕ್ಕೆ ಧಕ್ಕೆ ಆಗುತ್ತದೆ ಎಂದು ಹೇಳಿ ಹಳಕಟ್ಟಿ ಅವರು ಕೊಟ್ಟ ವಚನಗಳನ್ನು ಮುದ್ರಿಸಿರಲಿಲ್ಲ. ಆಗ ಹಳಕಟ್ಟಿ ಅವರು ಸ್ವಂತ ಮನೆ ಮಾರಾಟ ಮಾಡಿ, ವಚನಗಳನ್ನು ಅಚ್ಚು ಹಾಕಿಸಿದರು.

ಫ.ಗು. ಹಳಕಟ್ಟಿ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಎಂ.ಬಿ.ಪಾಟೀಲ, ಸಾಹಿತಿ ಚಂದ್ರಶೇಖರ ಕಂಬಾರ, ಶರಣ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಘಟಕದ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ, ತೋಂಟದ ಸಿದ್ಧರಾಮ ಸ್ವಾಮೀಜಿ, ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಪ್ರಮೀಳಾ ಗರಡಿ ಮತ್ತು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ಅವರು ಫ. ಗು. ಹಳಕಟ್ಟಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಬಸವಣ್ಣನಂತೆಯೇ ಹಳಕಟ್ಟಿ ಅವರೂ ನಿತ್ಯ ಸ್ಮರಣೀಯರು’ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ಮಾತನಾಡಿ, ‘12ನೇ ಶತಮಾನದ ವಚನ ಸಾಹಿತ್ಯವನ್ನು ಪುನರ್ ಸೃಷ್ಟಿಸಿದ ಕೀರ್ತಿ ಹಳಕಟ್ಟಿ ಅವರಿಗೆ ಸಲ್ಲಬೇಕು. ಅವರು ಸಮಾಜದ ಎಲ್ಲ ಕ್ಷೇತ್ರಗಳಿಗೂ ಸೇವೆಯ ಸ್ಪರ್ಶ ನೀಡಿದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿಗೆ ಅನುದಾನ ನೀಡುವುದಾಗಿ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದರು. ಅದರಂತೆ ಸರ್ಕಾರವು 31 ಜಿಲ್ಲೆಗಳಲ್ಲಿರುವ ಪ್ರತಿ ಘಟಕಕ್ಕೂ ತಲಾ ₹ 4 ಲಕ್ಷ ಅನುದಾನ ನೀಡಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಎಂ.ಬಿ. ಪಾಟೀಲ, ‘ಈ ಬಗ್ಗೆ ಮುಖ್ಯಮಂತ್ರಿಯವರ ಜತೆಗೆ ಚರ್ಚಿಸುತ್ತೇನೆ’ ಎಂದು ಭರವಸೆ ನೀಡಿದರು.

ಗದಗದ ತೋಂಟದಾರ್ಯ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಮಾತನಾಡಿ, ‘ವಚನ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ಗೌರವ ತಂದುಕೊಟ್ಟಿದೆ’ ಎಂದು ಹೇಳಿದರು.

ಕೆಂಗೇರಿ ಹೊರವರ್ತುಲ ರಸ್ತೆಯಲ್ಲಿ 'ಉಲ್ಲಾಳು ಗ್ರೇಡ್ ಸೆಪರೇಟರ್' ಕೆಲಸಕ್ಕೆ ಸಿಗದ ವೇಗ; ವಾಹನ ಸವಾರರ ಪರದಾಟ

ಗಡುವು ಮುಗಿದರೂ ಕಾಣದ ಪ್ರಗತಿ

• ಆರ್. ಮಂಜುನಾಥ್

ಬೆಂಗಳೂರು: ಟೆಂಡರ್ ಮೊತ್ತದ ನಂತರವೂ ಶೇ 10ರಷ್ಟು ಹೆಚ್ಚು 'ಪ್ರೀಮಿಯಂ ದರ' ನೀಡಲಾಗುತ್ತಿರುವ 'ಉಲ್ಲಾಳು ಮುಖ್ಯರಸ್ತೆ ಗ್ರೇಡ್ ಸೆಪರೇಟರ್' ಕಾಮಗಾರಿ ಮೂರು ವರ್ಷದ ಹಿಂದೆ ಆರಂಭವಾದ ಸ್ಥಿತಿಯಲ್ಲೇ ಇದೆ.

ಬಿಬಿಎಂಪಿ ಕಾಮಗಾರಿ ಮುಗಿಸೋದು ಯಾವಾಗ ರೀ?

ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆಯನ್ನು ಸಂಪರ್ಕಿಸುವ ಕೆಂಗೇರಿ ಹೊರವರ್ತುಲ ರಸ್ತೆಯಲ್ಲಿ ಸುಗಮ ಹಾಗೂ ಸಿಗ್ನಲ್ ಮುಕ್ತ ಸಂಚಾರಕ್ಕಾಗಿ ಉಲ್ಲಾಳು ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲಾಗುತ್ತಿದೆ. ಕಾಮಗಾರಿಯನ್ನು 'ಟರ್ನ್ ಕೀ' ಆಧಾರದಲ್ಲಿ ಗುತ್ತಿಗೆ ನೀಡಿರುವುದರಿಂದ ಎಷ್ಟು ವರ್ಷ ವಿಳಂಬವಾದರೂ ಬಿಬಿಎಂಪಿಗೆ ಹೆಚ್ಚಿನ ಆರ್ಥಿಕ ಹೊರೆಯಾಗುವುದಿಲ್ಲ. ಆದರೆ ನಾಗರಿಕರಿಗೆ ಮಾತ್ರ ಮೂರು ವರ್ಷಗಳಿಂತ ನಿತ್ಯವೂ ಸಂಕಷ್ಟ, ಕಿರಿಕಿರಿ ತಪ್ಪಿಲ್ಲ.

ಜ್ಞಾನಭಾರತಿಯಿಂದ ಉಲ್ಲಾಳು ಮುಖ್ಯರಸ್ತೆ ಹಾಗೂ ಕೆಂಗೇರಿ, ನಾಗರಬಾವಿ ಕಡೆಗಳಿಗೆ ತಿರುವು ಪಡೆದುಕೊಳ್ಳುವ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಿಸಲು ₹28.22 ಕೋಟಿಗೆ ಗುತ್ತಿಗೆ ನೀಡಿ, 2020ರಲ್ಲಿ ಕಾರ್ಯಾದೇಶ ನೀಡಲಾಗಿದೆ. 'ಟೆಂಡರ್ ಪ್ರೀಮಿಯಂ' ವರ್ಗದಲ್ಲಿ ₹2.58 ಕೋಟಿಯನ್ನು ಮೂಲ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಿ ನೀಡಲಾಗುತ್ತಿದೆ. ಸರಕು ಮತ್ತು ಸೇವಾ ತೆರಿಗೆಯೂ ಸೇರಿ ಒಟ್ಟಾರೆ ವೆಚ್ಚ ₹32.84 ಕೋಟಿಯನ್ನು ನಮೂದಿಸಲಾಗಿದೆ. ಗಡುವಿನ ಪ್ರಕಾರ, ಈ ವೇಳೆಗಾಗಲೇ ಕಾಮಗಾರಿ ಮುಗಿದು ಎರಡು ವರ್ಷವಾಗಬೇಕಿತ್ತು. ಆದರೆ, ಕಾಮಗಾರಿ ಆರಂಭವಾದ ದಿನಗಳಲ್ಲಿನ ಸ್ಥಿತಿಯೇ ಮುಂದುವರಿದ್ದು, ಒಂದು ಭಾಗದಲ್ಲಿ ಮಾತ್ರ ತಡೆಗೋಡೆಯನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿದೆ.

ಉಲ್ಲಾಳು ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಯಾವುದೇ ರೀತಿಯ ಭೂಸ್ವಾಧೀನದ ಪ್ರಕ್ರಿಯೆ ನಡೆಸಬೇಕಾಗಿಲ್ಲ. ಆದರೂ ಕಾಮಗಾರಿ ನಾಲ್ಕು ವರ್ಷದಿಂದ ಪ್ರಗತಿ ಕಾಣುತ್ತಿಲ್ಲ. ದಿನವೂ ಈ ಜಂಕ್ಷನ್‌ನಲ್ಲಿನ ವಾಹನ ದಟ್ಟಣೆಯಿಂದ ಜ್ಞಾನಭಾರತಿ ಕ್ಯಾಂಪಸ್, ಉಲ್ಲಾಳು ಮುಖ್ಯರಸ್ತೆ ಹಾಗೂ ಕೆಂಗೇರಿ ಹೊರವರ್ತುಲ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ರಸ್ತೆಗಳು ಕಿರಿದಾಗಿರುವುದರಿಂದ ಪಾದಚಾರಿ ಮಾರ್ಗದಲ್ಲೂ ವಾಹನಗಳೇ ಸಂಚರಿಸುತ್ತಿರುತ್ತವೆ. ಇದರಿಂದ ನಾಗರಿಕರ ಓಡಾಟಕ್ಕೂ ಸಂಕಷ್ಟ ಎದುರಾಗಿದೆ.

'ನಾವೇನು ಮಾಡೋದು, ನಮಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಹಣವೇ ಇಲ್ಲದಿದ್ದರೆ ಕೆಲಸ ಹೇಗೆ ಮುಗಿಸೋದು' ಎಂದು ಎರಡೂ ಗ್ರೇಡ್ ಸೆಪರೇಟರ್‌ಗಳ ಕಾಮಗಾರಿಯ ನೇತೃತ್ವ ವಹಿಸಿಕೊಂಡವರು ಸಬೂಬು ಹೇಳುತ್ತಾರೆ ಎಂದು ಸ್ಥಳೀಯರು ದೂರುತ್ತಾರೆ.

ಉಲ್ಲಾಳು ಮುಖ್ಯರಸ್ತೆ ಜಂಕ್ಷನ್‌ನ ಗ್ರೇಡ್ ಸೆಪರೇಟರ್ ಕಾಮಗಾರಿ ನಡೆಯಬೇಕಿರುವ ಸ್ಥಳದಲ್ಲಿ ರಸ್ತೆ ಆಗೆದಿರುವುದರಿಂದ ನಿತ್ಯ ವಾಹನ ದಟ್ಟಣೆ ಉಂಟಾಗುತ್ತಿದೆ ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

₹32.84 ಕೋಟಿ	27 ಆಗಸ್ಟ್ 2020	20 ತಿಂಗಳು	₹6.77 ಕೋಟಿ	ಗುತ್ತಿಗೆದಾರರು
ಉಲ್ಲಾಳು ಜಂಕ್ಷನ್ ಗ್ರೇಡ್ ಸೆಪರೇಟರ್‌ಗೆ ಒಟ್ಟು ವೆಚ್ಚ	ಕಾಮಗಾರಿಗೆ ಕಾರ್ಯಾದೇಶ ನೀಡಿದ ದಿನ	ಕಾಮಗಾರಿ ಮುಗಿಸಲು ನೀಡಲಾಗಿದ್ದ ಗಡುವು	ಗುತ್ತಿಗೆದಾರರಿಗೆ ಹಣ ಬಿಡುಗಡೆ	ಪಿಜಿಬಿ ಎಂಜಿನಿಯರ್ಸ್, ರಿಚ್ಮಂಡ್ ರಸ್ತೆ

ಶೀಘ್ರ ಕೆಲಸ ಆರಂಭ: ಪ್ರಹ್ಲಾದ್

'ಉಲ್ಲಾಳು ಮುಖ್ಯರಸ್ತೆ ಜಂಕ್ಷನ್ ಗ್ರೇಡ್ ಸೆಪರೇಟರ್ ನಿರ್ಮಾಣ ಕಾಮಗಾರಿ ಹಲವಾರು ಕಾರಣದಿಂದ ಮುಂದಕ್ಕೆ ಹೋಗುತ್ತಿದೆ. ದೇವಸ್ಥಾನವನ್ನು ಬೇರಡೆಗೆ ಸ್ಥಳಾಂತರಿಸಿದೆವು. ಇನ್ನು ಕೆಲವು ದಿನಗಳಲ್ಲಿ ಕೆಲಸ ಆರಂಭಿಸುತ್ತೇವೆ' ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಕೂಡ ಆಗಿರುವ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

'ಕಾಮಗಾರಿ ಏಕೆ ಆರಂಭಿಸಬೇಕಿತ್ತು?'

'ಗ್ರೇಡ್ ಸೆಪರೇಟರ್ ಎಂದು ಹೇಳುತ್ತಿದ್ದಾರೆ. ಮೂರು ವರ್ಷದಿಂದ ಏನು ಮಾಡುತ್ತಿದ್ದಾರೋ ಗೊತ್ತಿಲ್ಲ. ಗ್ರೇಡ್ ಸೆಪರೇಟರ್ ಆಗಿದ್ದರೆ ಜಂಕ್ಷನ್ ಅಗೆಯಬೇಕಿತ್ತು. ಮೇಲ್ಸೇತುವೆಯಾಗಿದ್ದರೆ ಪಿಲ್ಲರ್‌ಗಳನ್ನಾದರೂ ನಿರ್ಮಿಸಬೇಕಿತ್ತು. ಆದರೆ, ಉಲ್ಲಾಳು ಮುಖ್ಯರಸ್ತೆ ಅಥವಾ ಹೊರ ವರ್ತುಲ ರಸ್ತೆಯಲ್ಲಿ ಇದರ ಯಾವುದೇ ಕುರುಹು ಇಲ್ಲ. ರಸ್ತೆಯ ಒಂದು ಭಾಗದಲ್ಲಿ ವಿಶ್ವವಿದ್ಯಾಲಯದ ಗೋಡೆ ತೆಗೆದು ತಡೆಗೋಡೆ ನಿರ್ಮಿಸಿರುವುದು ಬಿಟ್ಟರೆ ಯಾವ ಕೆಲಸವೂ ಆಗಿಲ್ಲ. ಅಲ್ಲೂ ಗಿಡಗಳು ಬೆಳೆದು ಮರಗಳಾಗಿವೆ. ಕೆಲಸ ಮಾಡಲು ಸಾಧ್ಯವಾಗದಿದ್ದರೆ, ಕೆಲಸ ಮಾಡುವವರಿಗೆ ಹಣ ನೀಡಲು ಆಗದಿದ್ದರೆ ಕಾಮಗಾರಿ ಏಕೆ ಆರಂಭಿಸಬೇಕು? ಬಿಬಿಎಂಪಿ ಯಾರದೋ ಒತ್ತಾಸೆಗೆ ಬಿದ್ದು ಕಾಮಗಾರಿ ಆರಂಭಿಸಿದಂತಿದೆ. ಜನರಿಗೆ ತೊಂದರೆ ಕೊಡಲೆಂದೇ ಇದೆಲ್ಲ ಮಾಡುತ್ತಿದ್ದಾರೆ' ಎಂದು ಉಲ್ಲಾಳು ಮುಖ್ಯರಸ್ತೆ ಜಂಕ್ಷನ್ ವ್ಯಾಪಾರಿಗಳಾದ ನಾಗೇಂದ್ರಪ್ಪ, ರಮೇಶ್, ನಟರಾಜ್, ಗೌರಮ್ಮ, ರಾಜೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ವಿವಿ ಆವರಣದಲ್ಲೂ ದಟ್ಟಣೆ

'ಉಲ್ಲಾಳು ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿ ಮೂರು ವರ್ಷಗಳಿಗೂ ಹೆಚ್ಚು ಕಾಲದಿಂದ ನಡೆಯುತ್ತಿದ್ದು, ನಿತ್ಯವೂ ಇಲ್ಲಿ ಓಡಾಡಲು ಸಮಸ್ಯೆಯಾಗುತ್ತಿದೆ. ಉಲ್ಲಾಳು, ವಿಶ್ವೇಶ್ವರಯ್ಯ ಬಡಾವಣೆ, ಜ್ಞಾನಭಾರತಿ ಬಡಾವಣೆ, ಮಲ್ಲತ್ತಹಳ್ಳಿ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ತರಗತಿಗಳಿಗೆ ಸರಿಯಾದ ಸಮಯಕ್ಕೆ ಹಾಜರಾಗಲು ಆಗುತ್ತಿಲ್ಲ. ವಿಶ್ವವಿದ್ಯಾಲಯದ ಆವರಣದಲ್ಲೂ ವಾಹನ ದಟ್ಟಣೆ ಉಂಟಾಗುತ್ತಿದೆ' ಎಂದು ಮಲ್ಲತ್ತಹಳ್ಳಿ ವಿದ್ಯಾರ್ಥಿ ಜಗದೀಶ್ ಹೇಳಿದರು.

ದಟ್ಟಣೆಯಿಂದ ಸಮಯ ವ್ಯಯ

'ಗ್ರೇಡ್ ಸೆಪರೇಟರ್ ಕಾಮಗಾರಿಯಿಂದ ವಿ.ವಿ ಒಳಗಿನ ರಸ್ತೆ ಮೂಲಕ ಕೆಂಗೇರಿ ವರ್ತುಲ ರಸ್ತೆಗೆ ಸಂಚರಿಸುತ್ತಿದ್ದೇವೆ. ನೂರಾರು ವಾಹನಗಳೂ ಇದೇ ಮಾರ್ಗದಲ್ಲಿ ಬರುತ್ತಿರುವುದರಿಂದ ಇಲ್ಲೂ ದಟ್ಟಣೆ ಉಂಟಾಗುತ್ತಿದೆ. ನಾಗದೇವನಹಳ್ಳಿ, ದೊಡ್ಡಬಸ್ತಿ ಕಡೆಗೆ ಹೋಗುವವರಿಗೆ ನಿತ್ಯವೂ ಗಂಟೆಗಟ್ಟಲೆ ಈ ಮಾರ್ಗದಲ್ಲೇ ಸಮಯ ವ್ಯಯವಾಗುತ್ತಿದೆ' ಎಂದು ದೊಡ್ಡಬಸ್ತಿ ನಿವಾಸಿ ಕುಮಾರ ಅವರು ರಸ್ತೆ ಅವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಬಾಗಲಗುಂಟೆ ವಾರ್ಡ್‌ನ ಜಲಮಂಡಳಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಶಾಸಕ ಎಸ್.ಮುನಿರಾಜು, ಮುಖ್ಯ ಎಂಜಿನಿಯರ್ ಪರಮೇಶ್ವರಪ್ಪ ಅವರು ವಾಲ್‌ಮ್ಯಾನ್‌ಗಳೊಂದಿಗೆ ಮಾತನಾಡಿದರು.

'ನೀರು ಪೂರೈಸುವಲ್ಲಿ ತಾರತಮ್ಯ ಮಾಡಿದರೆ ಕ್ರಮ'

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: 'ಮನೆಗಳಿಗೆ ನೀರು ಪೂರೈಸುವಲ್ಲಿ ತಾರತಮ್ಯ ಮಾಡಿದರೆ, ಸಂಬಂಧಿಸಿದ ವಾಲ್‌ಮ್ಯಾನ್ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಬೆಂಗಳೂರು ಜಲಮಂಡಳಿ ಮುಖ್ಯ ಎಂಜಿನಿಯರ್ ಪರಮೇಶ್ವರಪ್ಪ ಎಚ್ಚರಿಸಿದರು.

ಬಾಗಲಗುಂಟೆ ವಾರ್ಡ್‌ನ ಬಿಡಬ್ಲ್ಯುಎಸ್‌ಎಸ್‌ಬಿ ಕಚೇರಿಯಲ್ಲಿ ನಡೆದ ಅಧಿಕಾರಿಗಳು ಹಾಗೂ ವಾಲ್‌ಮ್ಯಾನ್‌ಗಳ ಸಭೆಯಲ್ಲಿ ಅವರು ಮಾತನಾಡಿದರು.

'ನಾಗರಿಕರೊಂದಿಗೆ ಸಂಘರ್ಷಕ್ಕೆ ಇಳಿಯದೇ ತಾಳ್ಮೆಯಿಂದ ವರ್ತಿಸಿ. ನಿಮ್ಮ ವ್ಯಾಪ್ತಿಯಲ್ಲಿ ನೀರಿನ ಕೊರತೆಯಾಗದಂತೆ ನೋಡಿಕೊಳ್ಳಿ. ನಿಮ್ಮ ಜೊತೆ ನಾವಿದ್ದೇವೆ' ಎಂದು ವಾಲ್‌ಮ್ಯಾನ್‌ಗಳಿಗೆ ಸಲಹೆ ನೀಡಿದರು.

ಶಾಸಕ ಎಸ್.ಮುನಿರಾಜು ಮಾತನಾಡಿ, 'ಪ್ರತಿ ನಿತ್ಯ ಕ್ಷೇತ್ರದ ಸಮಸ್ಯೆಗಳಲ್ಲಿ ನೀರು ಪೂರೈಕೆಯಲ್ಲಾಗುತ್ತಿರುವ ವ್ಯತ್ಯಾಸಗಳ ಬಗ್ಗೆಯೇ ಹೆಚ್ಚು ದೂರುಗಳಿರುತ್ತವೆ. ಸರಿಯಾದ ಸಮಯಕ್ಕೆ ನೀರು ಬರುವುದಿಲ್ಲ, ಅಲ್ಪ ಪ್ರಮಾಣದಲ್ಲಿ ನೀರು ಬಿಡುತ್ತಾರೆ, ಕೇಳಿದರೆ ಉಡಾಫೆ ಉತ್ತರ ನೀಡುತ್ತಾರೆ ಎಂದು ವಾಲ್‌ಮ್ಯಾನ್‌ಗಳ ವಿರುದ್ಧ ದೂರು ಹೇಳುತ್ತಾರೆ. ಇನ್ನು ಮುಂದೆ ಇಂಥ ದೂರು ಬರದಂತೆ ಎಚ್ಚರವಹಿಸಿ. ದೂರುಗಳು ಬಂದರೆ, ಈಗಿರುವ ವಾಲ್‌ಮ್ಯಾನ್‌ಗಳ ಬದಲಿಗೆ ಬೇರೆಯವರನ್ನು ನೇಮಕ ಮಾಡಲಾಗುತ್ತದೆ' ಎಂದು ಎಚ್ಚರಿಸಿದರು.

ಸಭೆಯಲ್ಲಿ ಜಲಮಂಡಳಿಯ ಹೆಚ್ಚುವರಿ ಮುಖ್ಯ ಎಂಜಿನಿಯರ್ ಬಿ.ಎಸ್. ದಲಾಯತ್, ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾದ ಮಿರಗಂಜಿ ಮಂಜುನಾಥ್, ಹರಿನಾಥ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನಾಗರಾಜು ಕೆ.ಬಿ, ಸಹಾಯಕ ಎಂಜಿನಿಯರ್‌ಗಳಾದ ಕಾರ್ತಿಕ್, ಕೀರ್ತನ ಮತ್ತು ವಾಲ್‌ಮ್ಯಾನ್‌ಗಳು ಹಾಜರಿದ್ದರು.

ನಗರದ ಅನಿಲ್ ಕುಂಬ್ಳೆ ವೃತ್ತದ ಬಳಿ ಬಿಎಂಟಿಸಿ ಬಸ್‌ಗೆ ಬೆಂಕಿ ಹೊತ್ತಿ ಕೊಂಡಿರುವುದನ್ನು ಅಗ್ನಿ ಶಾಮಕ ದಳದ ಸಿಬ್ಬಂದಿ ನಂದಿಸಿದರು –ಪ್ರಜಾವಾಣಿ ಚಿತ್ರ

ಬೆಂಕಿ: ಬಿಎಂಟಿಸಿ ಬಸ್ ಭಸ್ಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂ.ಜಿ ರಸ್ತೆಯಲ್ಲಿ ಮಂಗಳವಾರ ಬೆಳಿಗ್ಗೆ ಬಿಎಂಟಿಸಿ ಬಸ್ ಬೆಂಕಿ ಹೊತ್ತಿಕೊಂಡು ಭಸ್ಮವಾಗಿದೆ. ಪ್ರಯಾಣಿಕರಿಗೆ ಯಾವುದೇ ಸಮಸ್ಯೆಯಾಗಿಲ್ಲ.

ರೋಸ್ ಗಾರ್ಡನ್‌ನಿಂದ ಶಿವಾಜಿನಗರದ ಕಡೆಗೆ 144–ಇ ಸಂಖ್ಯೆ ಬಸ್ ತೆರಳುತ್ತಿತ್ತು. ಮಾರ್ಗ ಮಧ್ಯೆ ಅನಿಲ್ ಕುಂಬ್ಳೆ ವೃತ್ತದ ಬಳಿ ಎಂಜಿನ್‌ನಲ್ಲಿನ ತಾಂತ್ರಿಕ ತೊಂದರೆಯಿಂದಾಗಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಚಾಲಕ ಬಸ್‌ನಲ್ಲಿದ್ದ ಸುಮಾರು 20 ಪ್ರಯಾಣಿಕರನ್ನು ಕೆಳಗೆ ಇಳಿಸಿದ್ದಾರೆ. ಬಸ್‌ನಲ್ಲಿದ್ದ ಅಗ್ನಿ ನಂದಕ ಉಪಕರಣ ಬಳಸಿ ಬೆಂಕಿ ನಂದಿಸಲು ಪ್ರಯತ್ನಿಸಲಾಯಿತು.

ಅಗ್ನಿ ಶಾಮಕ ಸಿಬ್ಬಂದಿ ಸ್ಥಳಕ್ಕೆ ಬರುವಷ್ಟರಲ್ಲಿ ಬೆಂಕಿಯ ಕೆನ್ನಾಲಿಗೆಗೆ ಬಸ್ ಸಂಪೂರ್ಣ ಸುಟ್ಟು ಹೋಗಿದೆ. ಈ ಘಟನೆಯಿಂದಾಗಿ ಕೆಲ ಕಾಲ ಸಂಚಾರ ಅಸ್ತವ್ಯಸ್ತಗೊಂಡಿತು. ಬಳಿಕ ವಾಹನವನ್ನು ಶಾಂತಿನಗರದ ಬಿಎಂಟಿಸಿ ಕೇಂದ್ರ ವರ್ಕ್‌ಶಾಪ್‌ಗೆ ಕೊಂಡೊಯ್ಯಲಾಯಿತು.

'ಎಂಜಿನಿಯರ್‌ಗಳ ತಂಡವು ಅವಘಡಕ್ಕೆ ಕಾರಣವನ್ನು ಪರಿಶೀಲಿಸುತ್ತಿದೆ. ಪ್ರತಿ ವರ್ಷ ಬಸ್‌ಗಳಿಗೆ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಫಿಟ್ ನೆಸ್ ಪ್ರಮಾಣಪತ್ರ ಪಡೆಯುತ್ತೇವೆ' ಎಂದು ಬಿಎಂಟಿಸಿಯ ಅಧಿಕಾರಿಯೊಬ್ಬರು ತಿಳಿಸಿದರು.

ನಿಖಿಲ್- ಪೊಲೀಸರ ನಡುವೆ ತಳ್ಳಾಟ; ಲಾಠಿ ಪ್ರಹಾರ

ರಾಮನಗರ: ತಾಲ್ಲೂಕಿನ ಹಳ್ಳಿಮಾಳ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆಯಬೇಕಿದ್ದ ಚುನಾವಣೆ ರದ್ದುಪಡಿಸಿರುವುದನ್ನು ಖಂಡಿಸಿ ಜೆಡಿಎಸ್–ಬಿಜೆಪಿ ಕಾರ್ಯಕರ್ತರು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ನಗರದಲ್ಲಿ ಮಂಗಳವಾರ ನಡೆಸಿದ ಪ್ರತಿಭಟನೆಯು ತಳ್ಳಾಟ ಮತ್ತು ಲಾಠಿ ಚಾರ್ಜ್‌ಗೆ ಸಾಕ್ಷಿಯಾಯಿತು.

ಕಂದಾಯ ಭವನದಲ್ಲಿರುವ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಕಾರರು ಚುನಾವಣೆ ಮುಂದೂಡಿದ ಅಧಿಕಾರಿ ಅಮಾನತುಗೊಳಿಸಿ ಮತ್ತೆ ಚುನಾವಣೆಗೆ ದಿನಾಂಕ ನಿಗದಿಪಡಿಸಬೇಕೆಂದು ಆಗ್ರಹಿಸಿದರು.

ಬೇಡಿಕೆಗೆ ಸಂಬಂಧಪಟ್ಟವರು ಸ್ಪಂದಿ ಸದಿದ್ದರಿಂದ ಆಕ್ರೋಶಗೊಂಡ ಪ್ರತಿಭಟನಕಾರರು ಕಚೇರಿಗೆ ಮುತ್ತಿಗೆ ಹಾಕಲು ಮುಂದಾದರು. ಮುಖಂಡರು ಬ್ಯಾರಿಕೇಡ್‌ಗಳನ್ನು ತಳ್ಳಿ ನುಗ್ಗಿದಾಗ ಪ್ರವೇಶದ್ವಾರ ಗಾಜು ಒಡೆಯಿತು. ಆಗ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ, ಪ್ರತಿಭಟನಕಾರರನ್ನು ಚದುರಿಸಿದರು.

ಬೆಂಗಳೂರು ದಕ್ಷಿಣ: ಡಿಕೆಶಿ ಪಣ

ಒಂದನೇ ಪುಟದಿಂದ...

'ಬೆಂಗಳೂರಿನ ಒಂದು ದಿಕ್ಕಿನಲ್ಲಿ ಆಂಧ್ರ ಪ್ರದೇಶ, ಮತ್ತೊಂದು ದಿಕ್ಕಿನಲ್ಲಿ ತಮಿಳುನಾಡು ರಾಜ್ಯದ ಗಡಿ ಬರುತ್ತದೆ. ಹೀಗಾಗಿ ಬೆಂಗಳೂರಿನ ಅಭಿವೃದ್ಧಿ ವಿಸ್ತರಣೆಗೆ ನಮಗೆ ಉಳಿದಿರುವುದು ತುಮಕೂರು ಹಾಗೂ ರಾಮನಗರ ಭಾಗ ಮಾತ್ರ. ಬೆಂಗಳೂರು ಎಂಬ ಹೆಸರು ಜಾಗತಿಕ ಮನ್ನಣೆ ಹೊಂದಿದೆ. ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮಾಡುವುದರಿಂದ ಮುಂದೆ ರಾಮನಗರ, ಚನ್ನಪಟ್ಟಣ, ಮಾಗಡಿ ಸೇರಿದಂತೆ ಮೈಸೂರಿನವರೆಗೂ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ. ಹೊಸ ಕೈಗಾರಿಕೆಗಳ ಸ್ಥಾಪನೆ, ಆಸ್ತಿ ಮೌಲ್ಯ ಹೆಚ್ಚಳಕ್ಕೂ ನೆರವಾಗುತ್ತದೆ' ಎಂದು ಅವರು ವಿವರಿಸಿದರು.

ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ, ಶಾಸಕರಾದ ಇಕ್ಬಾಲ್ ಹುಸೇನ್, ಎಚ್.ಸಿ. ಬಾಲಕೃಷ್ಣ, ಮಾಜಿ ಸಂಸದ ಡಿ.ಕೆ. ಸುರೇಶ್, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಎಸ್. ರವಿ, ಸುಧಾಮದಾಸ್, ಮಾಜಿ ಶಾಸಕರಾದ ಸಿ.ಎಂ. ಲಿಂಗಪ್ಪ, ರಾಜು, ಅಶ್ವಥ್ ಹಾಗೂ ರಘುನಂದನ್ ರಾಮಣ್ಣ ನಿಯೋಗದಲ್ಲಿದ್ದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಸಚಿವರು, ಶಾಸಕರು ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ, ಚರ್ಚೆ ನಡೆಸಿತು. ಸಚಿವ ರಾಮಲಿಂಗಾರೆಡ್ಡಿ, ಶಾಸಕ ಇಕ್ಬಾಲ್ ಹುಸೇನ್, ಮಾಜಿ ಸಂಸದ ಡಿ.ಕೆ.ಸುರೇಶ್ ಇದ್ದರು

ರಾಮನಗರ ಜಿಲ್ಲೆಯ ಹೆಸರು ಬದಲಾವಣೆ ಮಾಡುವ ಸರ್ಕಾರದ ಸಂಚಿನ ಹಿಂದೆ ರಾಮ ದ್ವೇಷ, ರಿಯಲ್ ಎಸ್ಟೇಟ್ ವ್ಯವಹಾರ ಅಡಗಿದೆ
ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಇವರು ಜಿಲ್ಲೆಯ ಅಭಿವೃದ್ಧಿಗೆ ಏನೂ ಮಾಡಲಿಲ್ಲ. ರಾಮ ಎಂಬ ಹೆಸರಿರುವುದು ಕಾಂಗ್ರೆಸ್‌ನವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ.
ಸಿ.ಎನ್.ಅಶ್ವತ್ಥನಾರಾಯಣ, ಬಿಜೆಪಿ ಶಾಸಕ

ರಿಯಲ್ ಎಸ್ಟೇಟ್ ದಂಧೆಕೋರರಿಗೆ ರಾಮನಗರ ಜಿಲ್ಲೆಯನ್ನು ಸ್ವರ್ಗವನ್ನಾಗಿ ಮಾಡುವುದು ಮತ್ತು ಕೆಲವರ ತುಷ್ಟೀಕರಣವೇ ಇದರ ಉದ್ದೇಶ
ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ

ಮೂತ್ರಪಿಂಡ ಕಸಿ ಜಾಲ: 7 ಬಂಧನ

ನವದೆಹಲಿ(ಪಿಟಿಐ): ಬಾಂಗ್ಲಾದೇಶ ಮತ್ತು ದೆಹಲಿಯಲ್ಲಿ ಮೂತ್ರಪಿಂಡ ಕಸಿ ಜಾಲ ನಡೆಸುತ್ತಿದ್ದ ಆರೋಪದಡಿ ದೆಹಲಿ ಮೂಲದ ವೈದ್ಯೆ ಹಾಗೂ ಬಾಂಗ್ಲಾದೇಶ ಪ್ರಜೆಗಳು ಸೇರಿದಂತೆ 7 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಇಂದ್ರಪ್ರಸ್ಥ ಅಪೊಲೊ ಆಸ್ಪತ್ರೆಯಲ್ಲಿ ಮೂತ್ರಪಿಂಡ ಕಸಿ ತಜ್ಞೆಯಾಗಿರುವ ಡಾ.ಡಿ.ವಿಜಯಾ ರಾಜಕುಮಾರಿ, ವೈದ್ಯೆಯ ಸಹಾಯಕ ವಿಕ್ರಮ್ ಸಿಂಗ್, ಬಾಂಗ್ಲಾದೇಶ ಪ್ರಜೆಗಳಾದ ರಸೆಲ್, ಮೊಹಮ್ಮದ್ ಸುಮೊನ್ ಮಿಯಾ ಮತ್ತು ಮೊಹಮ್ಮದ್ ರಕೋನ್ ಅಲಿಯಾಸ್ ರಾಹುಲ್ ಸರ್ಕಾರ್ ಬಂಧಿತ ಇತರರು.

ರಾ.ರಾಜಕುಮಾರಿ ಅವರು ನೊಯ್ಡಾದ ಯತಾರ್ಥ ಆಸ್ಪತ್ರೆಯಲ್ಲಿ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸಿದ್ದರು ಎಂದು ಆರೋಪಿಸಲಾಗಿದೆ.

'ರಸೆಲ್ ಈ ಜಾಲದ ಸಂಚುಕೋರ. ಈತ 2019ರಲ್ಲಿ ಭಾರತಕ್ಕೆ ಬಂದಿದ್ದ ನಲ್ಲದೇ, ಬಾಂಗ್ಲಾದೇಶದ ರೋಗಿಯೊಬ್ಬರಿಗೆ ತನ್ನ ಮೂತ್ರಪಿಂಡ ದಾನ ಮಾಡಿದ್ದ' ಎಂದು ಡಿಸಿಪಿ (ಕ್ರೈಂ) ಅಮಿತ್ ಗೋಯೆಲ್ ತಿಳಿಸಿದ್ದಾರೆ.

ಕಸಿ ಶಸ್ತ್ರಚಿಕಿತ್ಸೆಗೆ ಒಳಗಾದವರ ಪೈಕಿ ಬಹುತೇಕರು ಬಾಂಗ್ಲಾದೇಶದವರು. ನಕಲಿ ದಾಖಲೆ ಸೃಷ್ಟಿಸಿ ಅವರನ್ನು ಭಾರತಕ್ಕೆ ಕರೆತಂದು ಶಸ್ತ್ರಚಿಕಿತ್ಸೆ ನೆರವೇರಿಸಲಾಗುತ್ತಿತ್ತು. 'ಮೂತ್ರಪಿಂಡ ಕಸಿಗೆ ಒಬ್ಬ ರೋಗಿ ₹25–30 ಲಕ್ಷ ವ್ಯಯಿಸಬೇಕಾಗುತ್ತದೆ. ರಸೆಲ್ ಶೇ 20–25ರಷ್ಟನ್ನು ಕಮಿಷನ್ ಪಡೆಯುತ್ತಿದ್ದ' ಎಂದರು.

ಆಜಂ ಖಾನ್ ಕುಟುಂಬ ಒಡೆತನದ 'ಅಕ್ರಮ' ರೆಸಾರ್ಟ್ ನೆಲಸಮ

ರಾಂಪುರ(ಉತ್ತರ ಪ್ರದೇಶ)(ಪಿಟಿಐ): ಸಮಾಜವಾದಿ ಪಕ್ಷದ ನಾಯಕ ಆಜಂ ಖಾನ್ ಕುಟುಂಬದ ಒಡೆತನದಲ್ಲಿರುವ 'ಅಕ್ರಮ' ರೆಸಾರ್ಟ್‌ಅನ್ನು ರಾಂಪುರ ಜಿಲ್ಲಾಡಳಿತ ಮಂಗಳವಾರ ನೆಲಸಮಗೊಳಿಸಿದೆ.

ಜಿಲ್ಲೆಯ ಪಸಿಯಾಪುರದಲ್ಲಿ 'ಅಕ್ರಮ'ವಾಗಿ ನಿರ್ಮಿಸಲಾಗಿದ್ದ 'ಹಮ್‌ಸಫರ್ ರೆಸಾರ್ಟ್' ಅನ್ನು ಉಪವಿಭಾಗಾಧಿಕಾರಿ ಮೋನಿಕಾ ಸಿಂಗ್ ನೇತೃತ್ವದ ಅಧಿಕಾರಿಗಳ ತಂಡ ನೆಲಸಮಗೊಳಿಸಿದೆ. ಈ ವೇಳೆ, ಭಾರಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಸರ್ಕಾರಿ ಜಮೀನಿನಲ್ಲಿ ರಸಗೊಬ್ಬರ ಘಟಕವಿದ್ದು, ಉಳಿದ ಜಾಗದಲ್ಲಿ 'ಕಾನೂನುಬಾಹಿರ'ವಾಗಿ ರೆಸಾರ್ಟ್ ನಿರ್ಮಿಸಲಾಗಿದ್ದ ರೆಸಾರ್ಟ್ ನೆಲಸಮಗೊಳಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ. ಈ 'ಅಕ್ರಮ' ರೆಸಾರ್ಟ್ ಕುರಿತು ರಾಂಪುರ ಕ್ಷೇತ್ರದ ಬಿಜೆಪಿ ಶಾಸಕ ಆಕಾಸ್ ಸಕ್ಸೇನಾ ದೂರು ನೀಡಿದ್ದರು.

ನಗರದಲ್ಲಿ ಇಂದು

ಬಾಲ್ಯ ವಿವಾಹಗಳನ್ನು ತಡೆಗಟ್ಟಲು ರಾಜ್ಯಮಟ್ಟದ ವಕೀಲಿ ತರಬೇತಿ: ಉದ್ಘಾಟನೆ: ಎಂ.ಆರ್. ರವಿ, ಅಧ್ಯಕ್ಷತೆ: ತಂಗಪೆರುಮಾಳ್ ಪೋನ್‌ಪಾಂಡಿ, ಅರುಣ್ ಚಕ್ರವರ್ತಿ, ಎನ್.ವಿ. ವಾಸುದೇವ ಶರ್ಮಾ, ನಾಗರಾಜ್, ಆಯೋಜನೆ: ಕರ್ನಾಟಕ ಬಾಲ್ಯ ವಿವಾಹ ವಿರೋಧಿ ವೇದಿಕೆ, ಸ್ಥಳ: ಹೋಟೆಲ್ ಪರಾಗ್, ರಾಜಭವನ ರಸ್ತೆ, ಬೆಳಿಗ್ಗೆ 11

ಮಾಸದ ಮಾತು–7: 'ಮಾನಸಿಕ ಆರೋಗ್ಯ ಹಾಗೂ ಒತ್ತಡ ನಿವಾರಣೆ' ಕುರಿತು ಉಪನ್ಯಾಸ: ಡಾ.ಜಿ.ಎಸ್. ಫಾಲಾಕ್ಷ, ಅತಿಥಿಗಳು: ಟಿ.ಎನ್. ವೀರಭದ್ರೇಗೌಡ, ಕುಸುಮಾ ರಾಜಶೇಖರ್, ಬಿ.ಎನ್. ಶಿವಲಿಂಗ, ಎಸ್. ರಾಜುಹಾಸನ್, ಉಪಸ್ಥಿತಿ: ಎಸ್. ವಿನೋದ್ ಕುಮಾರ್, ಆಯೋಜನೆ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ವಿಮಾನಪುರ, ಮಧ್ಯಾಹ್ನ 3.30

ಡಾ. ರಾಜೀವ್ ತಾರಾನಾಥ್, ಎಂ.ಎ. ಜಯರಾಮರಾವ್ ಸ್ವರಣಾಂಜಲಿ, ನುಡಿನಮನ, ಗೀತಗಾಯನ: ನುಡಿ ನಮನ: ಕೃಷ್ಣಾ ಮನವಳ್ಳಿ, ಎಂ.ಕೆ. ಶಂಕರ್, ಶ್ರೀನಿವಾಸ್ ಜಿ. ಕಪ್ಪಣ್ಣ, ಗಂಗಮ್ಮ ಕೇಶವಮೂರ್ತಿ, ಗೀತ ಗಾಯನ: ವೈ. ಜನಾರ್ದನ್, ವಿಜೇತ್ ಅಣತಿ, ಶುಭ ಧನಂಜಯ, ಆಯೋಜನೆ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

'ನೆಸೊ ಮತ್ತು ನಾಜ್' ಪುಸ್ತಕ ಬಿಡುಗಡೆ: ಭಾಷಣಕಾರರು: ಎಸ್ತರ್ ಡಫ್ಲೋ, ಚೆಯೆನ್ನೆ ಒಲಿವಿಯರ್, ರೂಪಾ ಪೈ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

ನಕಲಿ ದಾಖಲೆಗಳ ಸೃಷ್ಟಿ: ಮೈಸೂರಿನ ಈರನಗೆರೆ ಗ್ರಾಮದ ಜಮೀನಿಗೆ ಜೆ.ಪಿ.ನಗರದಲ್ಲಿ ನಿವೇಶನ

ಬೇನಾಮಿ ಹೆಸರಿಗೆ ನಿವೇಶನ ಮಂಜೂರು

• ಎಂ. ಮಹೇಶ

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೇನಾಮಿ ವ್ಯಕ್ತಿಗೆ ನಿವೇಶನ ಮಂಜೂರು ಮಾಡಿರುವ ಮತ್ತೊಂದು ಪ್ರಕರಣ ಬಯಲಾಗಿದೆ. ನಿವೇಶನ ಮಂಜೂರಾಗಿರುವ ವ್ಯಕ್ತಿಯ ದೆಂದು ಮುಡಾ ಉಲ್ಲೇಖಿಸಿರುವ ವಿಳಾಸ ದಲ್ಲಿ ಅವರು ವಾಸವೇ ಇಲ್ಲ.

ಶೇ 50:50 ಅನುಪಾತದ ಯೋಜನೆಯಲ್ಲಿ ಜಮೀನು ಕಳೆದುಕೊಂಡವರಿಗೆ ಭೂಪರಿಹಾರದ ರೂಪದಲ್ಲಿ ನಿವೇಶನ ಕೊಡಲಾಗಿದೆ. ವ್ಯಕ್ತಿಯು ತಾಲ್ಲೂಕಿನ ಕಸಬಾ ಹೋಬಳಿಯ ಈರನಗೆರೆ ಗ್ರಾಮದಲ್ಲಿ ಜಮೀನು ಕಳೆದುಕೊಂಡಂತೆ ದಾಖಲೆಗಳನ್ನು ಸೃಷ್ಟಿಸಿ, ಜೆ.ಪಿ. ನಗರ 1ನೇ ಹಂತದ ‘ಇ’ ಬ್ಲಾಕ್‌ನಲ್ಲಿ ನಿವೇಶನ (ಸಂಖ್ಯೆ 551/1)ವನ್ನು ಕೊಡಲಾಗಿದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳು ‘ಪ್ರಜಾವಾಣಿ’ಗೆ ಲಭ್ಯವಾಗಿದೆ.

ಈರನಗೆರೆಯಲ್ಲಿ ಪಡೆದ ಜಮೀನಿಗೆ ಮಾರುಕಟ್ಟೆ ಮೌಲ್ಯ ಜಾಸ್ತಿ ಇರುವ ಜೆ.ಪಿ. ನಗರದಲ್ಲಿ ನಿವೇಶನ ಕೊಟ್ಟಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ದೂರು ಸಲ್ಲಿಕೆ: ಈ ಬಗ್ಗೆ ತನಿಖೆ ನಡೆಸುವಂತೆ ಕೋರಿ, ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ರಾಜ್ಯ ಘಟಕದ ಕಾರ್ಯದರ್ಶಿ ಕೆ.ಎಸ್. ಸೋಮಸುಂದರ್ ಅವರು, ನಗರ ಪೊಲೀಸ್ ಆಯುಕ್ತರ ಕಚೇರಿಗೆ ಹಾಗೂ ಲಕ್ಷ್ಮೀಪುರಂ ಪೊಲೀಸ್ ಠಾಣೆಗೆ ದಾಖಲೆ ಸಹಿತ ದೂರು ನೀಡಿದ್ದಾರೆ. ‘ಕಾನೂನು ಬಾಹಿರವಾಗಿ ನಿವೇಶನ ಹಂಚಿಕೆ ಮಾಡಲಾಗಿದೆ’ ಎಂದು ಆರೋಪಿಸಿದ್ದಾರೆ.

‘ರಾಜೇಂದ್ರ ನಗರದ 2ನೇ ಕ್ರಾಸ್‌ನ ಮನೆ ನಂ.34ರ ನಿವಾಸಿ ಸೈಯದ್ ಯೂಸುಫ್ ಎನ್ನುವವರಿಗೆ ನಿವೇಶನ ಮಂಜೂರು ಮಾಡಲಾಗಿದೆ. ಅವರು ಈರನಗೆರೆ ಸರ್ವೆ ನಂ. 85/1ರಲ್ಲಿ 2.6 ಎಕರೆ ಜಮೀನನ್ನು ಕಳೆದುಕೊಂಡಿದ್ದು, ಪರಿಹಾರವನ್ನು ನಿವೇಶನದ ರೂಪದಲ್ಲಿ ನೀಡಲು ತೀರ್ಮಾನಿಸಲಾಗಿದೆ ಎಂದು ಹಿಂದಿನ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಉಲ್ಲೇಖಿಸಿದ್ದಾರೆ. 23,881 ಚದರ ಅಡಿಗೆ ಸಂಬಂಧಿಸಿ ಮಂಜೂರಾತಿ ಮಾಡಿ ಕ್ರಯಪತ್ರಗಳನ್ನು ವಿತರಿಸಲಾಗಿದೆ. ಒಂದು ನಿವೇಶನದ ದಾಖಲೆ ಪ್ರತಿ ಲಭ್ಯವಾಗಿದ್ದು, ಪೊಲೀಸ್ ಆಯುಕ್ತರ ಕಚೇರಿಗೆ ನೀಡಿದ್ದೇವೆ’ ಎಂದು ಸೋಮಸುಂದರ್ ಮಾಹಿತಿ ನೀಡಿದರು.

‘ಸೈಯದ್ ಯೂಸುಫ್ ಎಂಬುವವರು ಸ್ವೀಕೃತಿ ಶಾಖೆಯಲ್ಲಿ ನೋಂದಣಿಯನ್ನೇ ಮಾಡಿಕೊಂಡಿಲ್ಲ ಹಾಗೂ ಭೂಸ್ವಾಧೀನ ಶಾಖೆಯಲ್ಲಿ ವಿಷಯದ ಕಡತವನ್ನು ನಿರ್ವಹಿಸದಿದ್ದರೂ 2023ರ ಜೂನ್ 7ರಂದು ಆಯುಕ್ತರು, ಅಭಿವೃದ್ಧಿಪಡಿಸಿದ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ನಿವೇಶನವನ್ನು ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಮಂಜೂರಾತಿ ಪತ್ರದಲ್ಲಿ ನಮೂದಾಗಿರುವ ವಿಳಾಸದಲ್ಲಿ ಸೈಯದ್ ಯೂಸುಫ್ ಎಂಬ ಹೆಸರಿನ ವ್ಯಕ್ತಿ ವಾಸವಿಲ್ಲ. ನಾವು ಸ್ಥಳ ಪರಿಶೀಲಿಸಿದಾಗ ಈ ವಿಷಯ ಖಚಿತವಾಗಿದೆ. ನಿವೇಶನ ಮಂಜೂರಾತಿಗಾಗಿಯೇ ಬೇನಾಮಿ ವ್ಯಕ್ತಿಯನ್ನು ಸೃಷ್ಟಿಸಿ ಕ್ರಯಪತ್ರ ಮಾಡಿ ಕೊಡಲಾಗಿದೆ’ ಎಂದು ತಿಳಿಸಿದರು.

ನೌಕರನೇ ಸಾಕ್ಷಿದಾರ: ‘ಈ ಪ್ರಕರಣದಲ್ಲಿ ಮುಡಾ ನೌಕರರೊಬ್ಬರನ್ನು ಸಾಕ್ಷಿದಾರ (ಗುರುತಿಸುವವರು) ಎಂದು ನಮೂದಿಸಿ ಅಕ್ರಮ ಎಸಗಲಾಗಿದೆ. ಜಮೀನು ಸ್ವಾಧೀನಪಡಿಸಿಕೊಂಡ ಬಗ್ಗೆ ಸಂಬಂಧಿಸಿದ ಕಂದಾಯ ಇಲಾಖೆ ಅಧಿಕಾರಿಗಳಿಂದ ವರದಿಯನ್ನೂ ಪಡೆದಿಲ್ಲ. ಕೆಲವೇ ದಿನಗಳಲ್ಲಿ ಪ್ರತಿಷ್ಠಿತ ಬಡಾವಣೆಯ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನಕಲಿ ದಾಖಲೆಗಳ ಆಧಾರದಲ್ಲೇ ಮಂಜೂರು ಮಾಡಲಾಗಿದೆ. ನಕಲಿ ಸಹಿ ಮಾಡಲಾಗಿದೆ. ಇದು ಗಂಭೀರ ಸ್ವರೂಪದ ಪ್ರಕರಣ’ ಎನ್ನುತ್ತಾರೆ ಅವರು.

‘ಜಮೀನು ಸ್ವಾಧೀನಪಡಿಸಿಕೊಳ್ಳದೇ ರಸ್ತೆ ಮತ್ತು ಬಡಾವಣೆಗಾಗಿ ಉಪಯೋಗಿಸಿಕೊಂಡಿರುವುದರಿಂದ ನಿವೇಶನ ಮಂಜೂರು ಮಾಡಲಾಗಿದೆ ಎಂದು ಮಂಜೂರಾತಿ ಪತ್ರದಲ್ಲಿ ತಿಳಿಸಲಾಗಿದೆ. ಅದರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗಿದೆ. ಹಲವು ಮಂದಿಗೆ ನಕಲಿ ದಾಖಲೆಗಳನ್ನು ಬೇನಾಮಿಯಾಗಿ ಸೃಷ್ಟಿಸಿ ಕೊಟ್ಟಿರುವ ಅನುಮಾನವಿದೆ. ಕಾಣದ ಕೈಗಳು ಸಾಕಷ್ಟಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು’ ಎಂದು ಪೊಲೀಸ್ ಆಯುಕ್ತರಿಗೆ ಜುಲೈ 2ರಂದು ಸಲ್ಲಿಸಿರುವ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

848 ನಿವೇಶನ ಹಕ್ಕು ಅಕ್ರಮ ವರ್ಗಾವಣೆ

‘ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೂ ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಮುಡಾ ಅಕ್ರಮವಾಗಿ 848 ನಿವೇಶನಗಳ ಹಕ್ಕನ್ನು ವರ್ಗಾಯಿಸಿದೆ’ ಎಂದು ನಗರಾಭಿವೃದ್ಧಿ ಇಲಾಖೆಯ ತಾಂತ್ರಿಕ ಸಮಿತಿ ಹೇಳಿದೆ.

ತಾಲ್ಲೂಕಿನ ಜಯಪುರ ಹೋಬಳಿ ಕೇರ್ಗಳ್ಳಿಯ ವಿವಿಧ ಸರ್ವೆ ಸಂಖ್ಯೆಗಳ 230 ಎಕರೆ 1 ಗುಂಟೆ ಜಮೀನಿನಲ್ಲಿ ಸಹಕಾರ ಸಂಘವು ಬಡಾವಣೆ ರಚಿಸಿತ್ತು. 2ನೇ ಕಂತಿನ ಶೇ 30ರಷ್ಟು ನಿವೇಶನಗಳ ಬಿಡುಗಡೆ ಬಗ್ಗೆ ಮುಡಾ ಸಭೆಯಲ್ಲಿ ಮಂಡಿಸಲಾಗಿತ್ತು.

2019ರಲ್ಲಿಯೇ ಕೆಲವು ಸರ್ವೆ ಸಂಖ್ಯೆಗಳ ಭೂ ವ್ಯಾಜ್ಯಗಳು ಸಿವಿಲ್ ನ್ಯಾಯಾಲಯದಲ್ಲಿದ್ದವು. ಬಡಾವಣೆ ನಿವೇಶನಗಳ ಹಕ್ಕು ವರ್ಗಾವಣೆ ಮಾಡದಂತೆ ಕೋರ್ಟ್ ನಿರ್ದೇಶನವಿದ್ದರೂ, ಉಲ್ಲಂಘಿಸಿ, ಆಯುಕ್ತರು ನಿವೇಶನಗಳ ಬಿಡುಗಡೆಗೆ ಸಹಿ ಹಾಕಿದ್ದಾರೆ.

ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿರುವ ಬಗ್ಗೆ ಸಭೆಯ ನಡಾವಳಿಯಲ್ಲಿ ಚರ್ಚಿಸಿಲ್ಲ. ರಾಜ್ಯ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ ಕಲಂ 13 (1)ರ ಅನ್ವಯ ಆಯುಕ್ತರು ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ತಾಂತ್ರಿಕ ಸಮಿತಿಯು ವರದಿಯಲ್ಲಿ ಉಲ್ಲೇಖಿಸಿದೆ.

ನಿವೇಶನ ಬಿಡುಗಡೆ ಮುನ್ನ ದಂಡ ಶುಲ್ಕ ₹3.97 ಕೋಟಿ ಅನ್ನು ಅರ್ಜಿದಾರರಿಂದ ಪಾವತಿಸಿಕೊಳ್ಳಬೇಕಿತ್ತು. ಅದನ್ನೂ ಮಾಡದ್ದರಿಂದ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗಿದೆ ಎಂದು ಸಮಿತಿಯು ಹೇಳಿದೆ.

ಸಿ.ಎಂ ಸೇರಿ ಹತ್ತು ಮಂದಿ ವಿರುದ್ಧ ದೂರು

ಮುಡಾ ಡಿನೋಟಿಫೈ ಮಾಡಿದ್ದ ಜಮೀನನ್ನು ಕೃಷಿ ಜಮೀನೆಂದು ನಕಲಿ ದಾಖಲೆ ಸೃಷ್ಟಿಸಿ, ಪರಿಹಾರವಾಗಿ 14 ಬದಲಿ ನಿವೇಶನ ಪಡೆದ ಆರೋಪದ ಮೇರೆಗೆ ಸಿ.ಎಂ. ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಭಾಮೈದ ಮಲ್ಲಿಕಾರ್ಜುನ ಸೇರಿದಂತೆ 10 ಮಂದಿ ವಿರುದ್ಧ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಎಂಬುವರು ಕಳೆದ ಬುಧವಾರ ಇಲ್ಲಿನ ವಿಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘ಜಮೀನಿನ ಮೂಲ ಮಾಲೀಕರ ಪುತ್ರ ದೇವರಾಜು, ಪತ್ನಿ ಸರೋಜಮ್ಮ, ಮಕ್ಕಳಾದ ಡಿ.ಶಶಿಧರ್, ಡಿ.ಶೋಭಾ, ಡಿ.ದಿನಕರ್ ರಾಜ್, ಡಿ.ಪ್ರತಿಭಾ, ಡಿ.ಪ್ರಭಾ ಅವರೂ ಸೇರಿದಂತೆ ಪ್ರಕರಣದಲ್ಲಿ ಭಾಗಿಯಾದ ಜಿಲ್ಲಾಧಿಕಾರಿ, ತಹಶೀಲ್ದಾರ್, ಮುಡಾ ಆಯುಕ್ತ ಹಾಗೂ ಉಪನೋಂದಣಾಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕು’ ಎಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

‘ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464 ಜಾಗವು ಮುಡಾ ಸ್ವಾಧೀನಕ್ಕೆ ಒಳಪಟ್ಟಿರುವ ದಾಖಲೆಗಳಿದ್ದರೂ, ಬಡಾವಣೆಯಾಗಿ ಅಭಿವೃದ್ಧಿಗೊಂಡಿದ್ದರೂ 2004ರ ಆ.25ರಂದು ಲಿಂಗ ಉರುಫ್ ಜವರ ಎಂಬುವರ ಪುತ್ರ ದೇವರಾಜು ಕುಟುಂಬದವರಿಂದ ಸಿದ್ದರಾಮಯ್ಯ ಭಾಮೈದ ಬಿ.ಎಂ.ಮಲ್ಲಿಕಾರ್ಜುನ ಅವರು ಭೂಮಿ ಖರೀದಿಸಿದ್ದು, ಕ್ರಯ ಪತ್ರದಲ್ಲಿ ಕೃಷಿ ಭೂಮಿಯೆಂದು ನೋಂದಣಿ ಮಾಡಿಸಿಕೊಂಡಿದ್ದಾರೆ’ ಎಂದು ಆರೋಪಿಸಿದ್ದಾರೆ.

‘2010ರಲ್ಲಿ ಮಲ್ಲಿಕಾರ್ಜುನ ಅವರು ಸೋದರಿ ಬಿ.ಎಂ.ಪಾರ್ವತಿ ಅವರಿಗೆ ದಾನವಾಗಿ ಭೂಮಿ ನೀಡಿದ್ದಾರೆ. ಸಿದ್ದರಾಮಯ್ಯ ಪ್ರಭಾವಕ್ಕೆ ಒಳಗಾಗಿ ಉಪನೋಂದಣಾಧಿಕಾರಿ ಸುಳ್ಳು ಕ್ರಯಪತ್ರ ಹಾಗೂ ದಾನಪತ್ರ ನೋಂದಣಿ ಮಾಡಿಕೊಟ್ಟಿದ್ದಾರೆ’ ಎಂದು ಹೇಳಿದ್ದಾರೆ.

ತನಿಖಾ ತಂಡಕ್ಕೆ ದೂರು ಸಲ್ಲಿಕೆ: ‘ಮುಡಾ ನಿವೇಶನ ಅಕ್ರಮ ಹಂಚಿಕೆ ಬಗ್ಗೆ ಸರ್ಕಾರ ತನಿಖಾ ತಂಡ ರಚಿಸಿದ್ದು, ನೀವು ನೀಡಿದ ದೂರು ಅದೇ ವಿಚಾರದ್ದಾಗಿರುವುದರಿಂದ ತನಿಖಾ ತಂಡಕ್ಕೆ ವಿಲೇವಾರಿ ಮಾಡಲಾಗಿದೆ’ ಎಂದು ವಿಜಯನಗರ ಠಾಣಾ ಇನ್‌ಸ್ಪೆಕ್ಟರ್, ಕೃಷ್ಣ ಅವರಿಗೆ ಹಿಂಬರಹ ನೀಡಿದ್ದಾರೆ.

ಅದೇ ವಿಚಾರದ ಬಗ್ಗೆ ಅಧಿಕಾರಿಗಳ ನಿರ್ಲಕ್ಷ್ಯ ಪ್ರಶ್ನಿಸಿ ರಾಜ್ಯಪಾಲ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಅಧಿಕಾರಿಗೂ ಸ್ನೇಹಮಯಿ ಕೃಷ್ಣ ದೂರು ಅರ್ಜಿ ಕಳುಹಿಸಿದ್ದಾರೆ.

‘ನನ್ನ ಹೆಂಡತಿಗೊಂದು, ಸಿ.ಎಂ ಹೆಂಡತಿಗೊಂದು ನ್ಯಾಯವೇ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಡಾ ನಿವೇಶನ ಹಂಚಿಕೆಯಲ್ಲಿ ನನ್ನ ಹೆಂಡತಿಗೊಂದು ನ್ಯಾಯ, ಸಿ.ಎಂ ಸಿದ್ದರಾಮಯ್ಯ ಹೆಂಡತಿಗೊಂದು ನ್ಯಾಯವೇ’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ನನಗೂ, ಸಿದ್ದರಾಮಯ್ಯಗೂ ಒಂದೇ ಅವಧಿಯಲ್ಲಿ ನಿವೇಶನ ಮಂಜೂರಾದರೂ ತಾರತಮ್ಯ ಮಾಡಲಾಗಿದೆ. ಅವರಿಗೆ ಕೊಟ್ಟಂತೆ ನಮ್ಮ ಕುಟುಂಬಕ್ಕೂ ವಿಜಯನಗರದಲ್ಲೇನೂ ನಿವೇಶನ ಕೊಟ್ಟಿಲ್ಲ’ ಎಂದು ದೂರಿದರು.

‘ವಿಶ್ವನಾಥ್ ಕೂಡ ಬದಲಿ ನಿವೇಶನ ಪಡೆದಿದ್ದಾರೆಂದು ಮುಡಾ ಅಧ್ಯಕ್ಷ ಮರೀಗೌಡ ಆರೋಪಿಸಿದ್ದಾರೆ. ಆದರೆ, ದೇವನೂರು ಮೂರನೇ ಹಂತದ ಬಡಾವಣೆಯಲ್ಲಿ ವರುಣ ಕಾಲುವೆ ಪಕ್ಕ ಮೊದಲು ನಿವೇಶನ ಸಿಕ್ಕಿತ್ತು. ಕಾಲುವೆ ಇದ್ದುದರಿಂದ ಮನೆ ಕಟ್ಟಲು ಯೋಗ್ಯವಲ್ಲವೆಂದು ಪ್ರಾಧಿಕಾರವೇ ಮತ್ತೆ ಅದೇ ಬಡಾವಣೆಯ ಎತ್ತರದ ಜಾಗದಲ್ಲಿ ಕೊಟ್ಟಿತ್ತು. ಇದು ಬದಲಿ ನಿವೇಶನವೇ?’ ಎಂದು ತಿರುಗೇಟು ನೀಡಿದರು.

‘2001ರಲ್ಲಿ ಪತ್ನಿ ಶಾಂತಮ್ಮ ಹೆಸರಲ್ಲಿ ನಿವೇಶನಕ್ಕೆ ಅರ್ಜಿ ಹಾಕಿದ್ದು, ಅದು 20 ವರ್ಷದ ನಂತರ ಮಂಜೂರಾಗಿದೆ. ಆದರೆ, ಸಿದ್ದರಾಮಯ್ಯ ಅವರಿಗೆ ದೇವನೂರು ಬಡಾವಣೆಯಲ್ಲಿ ನಿವೇಶನ ಖಾಲಿ ಇರಲಿಲ್ಲವೆಂದು ವಿಜಯನಗರದಲ್ಲಿ ಕೊಡಲಾಗಿದೆ. ನಮಗೆ ಮಾತ್ರ ನಿವೇಶನ ಖಾಲಿ ಇತ್ತೇ? ಈಗಲೂ ಅಲ್ಲಿ 800 ನಿವೇಶನಗಳು ಖಾಲಿ ಇವೆ’ ಎಂದು ವಾಗ್ದಾಳಿ ನಡೆಸಿದರು.

‘50:50’ ಅನುಪಾತ ಕಾನೂನುಬದ್ಧ

ಪ್ರಜಾವಾಣಿ ವಾರ್ತೆ

> **ಕೋರ್ಟ್ ತೀರ್ಪು ಆಧರಿಸಿಯೇ ಮುಡಾ ಸಭೆ ನಿರ್ಣಯ ಕೈಗೊಂಡಿದೆ. ಅಧಿಕಾರಿಗಳು ತಪ್ಪೆಸಗಿದ್ದರೆ ಕಾನೂನುಕ್ರಮ ಇದ್ದೇ ಇದೆ**
> **ಎಚ್.ವಿ.ರಾಜೀವ,** ಮುಡಾ ಮಾಜಿ ಅಧ್ಯಕ್ಷ

ಮೈಸೂರು: ‘ಮುಡಾದ ನಿವೇಶನ ಹಂಚಿಕೆ ಕಾನೂನುಬದ್ಧವಾಗಿದೆ’ ಎಂದು ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಪ್ರತಿಪಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ನಷ್ಟವನ್ನು ತಪ್ಪಿಸಲು, ಭೂ ಮಾಲೀಕರಿಗೆ ಕಚೇರಿ ಅಲೆದಾಟ ತಪ್ಪಿಸಲು ಸಭೆಯಲ್ಲಿ ಸರ್ವಾನುಮತದಿಂದ 50:50 ಅನುಪಾತದಲ್ಲಿ ನಿವೇಶನ ಹಂಚುವ ನಿರ್ಣಯ ಕೈಗೊಳ್ಳಲಾಯಿತು’ ಎಂದರು.

‘2013ರ ಭೂಸ್ವಾಧೀನ ತಿದ್ದುಪಡಿ ಕಾಯ್ದೆ, ಶ್ರೀರಾಂಪುರದ ಸುಂದರಮ್ಮ ಹಾಗೂ ಮುಡಾ ವಿರುದ್ಧದ ಪ್ರಕರಣ, ಬೆಳ್ಳಿಯಪ್ಪ ಮತ್ತು ಬಿಡಿಎ ವಿರುದ್ಧದ ಪ್ರಕರಣದಲ್ಲಿ ಹೈಕೋರ್ಟ್ ನೀಡಿದ ತೀರ್ಪು ಹಾಗೂ ಇಂದೋರ್ ಅಭಿವೃದ್ಧಿ ಪ್ರಾಧಿಕಾರ – ಮನೋಹರಲಾಲ್ ಮತ್ತು ಇತರರು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಆಧರಿಸಿ ನಿವೇಶನ ಹಂಚುವ ತೀರ್ಮಾನ ಮಾಡಲಾಗಿದೆ’ ಎಂದು ವಿವರಿಸಿದರು.

‘ಭೂಸ್ವಾಧೀನ ಮಾಡದೆ ರೈತರ ಜಮೀನನ್ನು ಬಡಾವಣೆಯಾಗಿ ಅಭಿವೃದ್ಧಿಪಡಿಸಿ, ಪರಿಹಾರವನ್ನೂ ಹಂಚಿಕೆ ಮಾಡದ ಪ್ರಕರಣಗಳು ಇದ್ದವು. ಪರಿಹಾರಕ್ಕಾಗಿ ಭೂ ಮಾಲೀಕರು ಕಚೇರಿಗೆ ಅಲೆಯುವಂತಾಗಿತ್ತು. ಶೇ 100ರಷ್ಟು ಜಮೀನನ್ನು ಮೂಲ ಮಾಲೀಕರಿಗೆ ವಾಪಸ್ ಮಾಡುವ ತೀರ್ಪನ್ನು ಹೈಕೋರ್ಟ್ ನೀಡಿದ್ದರಿಂದ ಮುಡಾಗೆ ಆಗುವ ನಷ್ಟ ತಪ್ಪಿಸಲು ಸಭೆ ಈ ನಿರ್ಧಾರ ಮಾಡಿತ್ತು’ ಎಂದು ಹೇಳಿದರು.

ದಕ್ಷಿಣ ಕನ್ನಡ, ಉಡುಪಿಯಲ್ಲಿ ತಗ್ಗಿದ ಅಬ್ಬರ; ಚಿಕ್ಕಮಗಳೂರಿನಲ್ಲಿ ಜಡಿ ಮಳೆ

ಕೊಡಗು: ಭಾಗಮಂಡಲದಲ್ಲಿ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಮಳೆಯ ಬಿರುಸು ಮುಂದುವರೆದಿದ್ದು, ಉಳಿದೆಡೆ ಸಾಧಾರಣ ಮಳೆಯಾಗುತ್ತಿದೆ.

ಮಡಿಕೇರಿಯಲ್ಲಿ ದಿನವಿಡೀ ಜಿಟಿಜಿಟಿ ಮಳೆಯಾಯಿತು. ವಿರಾಜಪೇಟೆಯಲ್ಲಿ ಸಾಧಾರಣ ಮಳೆಯಾಗಿದೆ.

ಮಳೆಯ ಪ್ರಮಾಣ ತಗ್ಗಿರುವುದರಿಂದ ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ 3,290 ಕ್ಯುಸೆಕ್‌ನಿಂದ 2,121 ಕ್ಯುಸೆಕ್‌ಗೆ ಇಳಿಕೆಯಾಗಿದೆ. ನದಿಗೆ ಬಿಡುತ್ತಿರುವ ನೀರಿನ ಪ್ರಮಾಣವನ್ನು 1 ಸಾವಿರ ಕ್ಯುಸೆಕ್‌ನಿಂದ 700 ಕ್ಯುಸೆಕ್‌ಗೆ ಇಳಿಕೆ ಮಾಡಲಾಗಿದೆ.

(ಉಡುಪಿ ವರದಿ): ಕೆಲ ದಿನಗಳಿಂದ ಜಿಲ್ಲೆಯಾದ್ಯಂತ ಅಬ್ಬರಿಸಿದ್ದ ಮಳೆ ಮಂಗಳವಾರ ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ಬಿಡುವು ನೀಡಿತ್ತು. ಮಧ್ಯಾಹ್ನದ ನಂತರ ಸಾಧಾರಣ ಮಳೆ ಸುರಿಯಿತು.

ಉಡುಪಿಯ ಗುಂಡಿಬೈಲು, ಬಡಗುಪೇಟೆ, ಮಠದಬೆಟ್ಟು, ಬನ್ನಂಜೆ, ಪಾಡಿಗಾರು, ಕನ್ನರ್ಪಾಡಿ, ಕರಂಬಳ್ಳಿ ಮೊದಲಾದೆಡೆ ನೆರೆ ನೀರು ಸಂಪೂರ್ಣವಾಗಿ ಇಳಿಕೆಯಾಗಿದೆ. ‘ನೆರೆಯಿಂದ ಸಮಸ್ಯೆಯಾದವರಿಗಾಗಿ ಉಡುಪಿಯಲ್ಲಿ ಎರಡು ಕಡೆ ಪರಿಹಾರ ಕೇಂದ್ರ ಸ್ಥಾಪಿಸಿದ್ದೆವು. ಮಂಗಳವಾರ ಬೆಳಿಗ್ಗೆಯೇ ಜನ ಮನೆಗಳಿಗೆ ಮರಳಿದ್ದಾರೆ’ ಎಂದು ನಗರ ಸಭೆಯ ಪೌರಾಯುಕ್ತ ರಾಯಪ್ಪ ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಮಳೆಯ ಆರ್ಭಟ ಕಡಿಮೆ ಯಾಗಿತ್ತು. ಬಹುತೇಕ ಕಡೆ ಸಂಜೆವರೆಗೂ ಬಿಸಿಲಿನಿಂದ ಕೂಡಿದ ವಾತಾವರಣವಿತ್ತು. ಸಂಜೆ ಸಾಧಾರಣ ಮಳೆಯಾಯಿತು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜುಲೈ 10ರಂದು ಗುಡುಗಿನಿಂದ ಕೂಡಿದ ವ್ಯಾಪಕ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಸಂಜೆಯ ನಂತರ ಜಡಿ ಮಳೆ ಸುರಿಯಿತು.



ಮಳೆಯಿಂದ ಜೀವಕಳೆ ಪಡೆದಿರುವ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಸೂರ್ಲಬ್ಬಿ ಸಮೀಪದ ಮೇದುರ ಜಲಪಾತ ಧುಮ್ಮಿಕ್ಕುತ್ತಿದೆ

ಪ್ರಜಾವಾಣಿ ಚಿತ್ರ: ಡಿ.ಪಿ.ಲೋಕೇಶ್

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್ ಎಸ್ *	124.80	103.60	5,663	582
ಹಾರಂಗಿ	2,859	2,849.30	2,121	700
ಕಬಿನಿ	2,284.00	2,282.61	6,985	5,000
ಹೇಮಾವತಿ	2,922	2,898.45	6,166	250
ಲಿಂಗನಮಕ್ಕಿ	1,819	1,770.80	23,420	1,405,29
ಸೂಪಾ (ಮೀ)	564	533.00	19,687	2,033
ಮಾಣಿ	595	576.22	3,059	000
ತುಂಗಭದ್ರಾ	1,633	1,600.99	23,079	156
ಮಲಪ್ರಭಾ	2,079.5	2,052.00	8,504	194
ಘಟಪ್ರಭಾ	2,175	2,128.50	25,677	116
ಭದ್ರಾ	186	134.2	7,806	156
ಆಲಮಟ್ಟಿ (ಮೀ)	519.6	515.85	78,668	430
ನಾರಾಯಣಪುರ (ಮೀ)	492.25	489.20	200	95

* ನೆಲಮಟ್ಟದಿಂದ

ಸೂರಜ್ ಜಾಮೀನು ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಸೂರಜ್ ರೇವಣ್ಣ

ಬೆಂಗಳೂರು: ಯುವಕನಿಗೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಅವರ ಜಾಮೀನು ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ಜಾಮೀನು ಕೋರಿ ಸೂರಜ್ ರೇವಣ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಮಂಗಳವಾರ ಪ್ರಕಟಿಸಿದರು.

ವಿಚಾರಣೆ ವೇಳೆ ವಾದ ಮಂಡಿಸಿದ್ದ, ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ನಾಯಕ್, ‘ಮೇಲ್ನೋಟಕ್ಕೆ ಆರೋಪಿ ವಿರುದ್ಧ ಬಲವಾದ ಸಾಕ್ಷ್ಯಗಳಿವೆ. ಜನಪ್ರತಿನಿಧಿಯೊಬ್ಬರ ಇಂತಹ ಕುಕೃತ್ಯ ಅಕ್ಷಮ್ಯ. ಒಂದು ವೇಳೆ ಆರೋಪಿಗೆ ಜಾಮೀನು ನೀಡಿದರೆ ಪ್ರಾಸಿಕ್ಯೂಷನ್ ಸಾಕ್ಷ್ಯ ನಾಶ ಮಾಡಬಹುದು. ರಾಜಕೀಯವಾಗಿ ಬಲಾಢ್ಯ ಹಿನ್ನಲೆಯ ಕುಟುಂಬದ ವ್ಯಕ್ತಿಯಾಗಿರುವ ಕಾರಣ ಇಂತಹವರಿಗೆ ಜಾಮೀನು ನೀಡಿದರೆ ಸಮಾಜಕ್ಕೆ ಕೆಟ್ಟ ಸಂದೇಶ ರವಾನೆ ಮಾಡಿದಂತಾಗುತ್ತದೆ’ ಎಂಬ ವಾದ ಸರಣಿಯನ್ನು ನ್ಯಾಯಾಲಯ ಮಾನ್ಯ ಮಾಡಿದೆ.

ಸೂರಜ್ ಪರ ಹೈಕೋರ್ಟ್‌ನ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಇದು ಸೂರಜ್ ವಿರುದ್ಧದ ಷಡ್ಯಂತ್ರ. ರಾಜ್ಯ ಸರ್ಕಾರ ಸೂರಜ್ ಅವರ ಕುಟುಂಬವನ್ನು ಗುರಿಯಾಗಿಸಿಕೊಂಡಿದೆ. ಈ ಪ್ರಕರಣದಲ್ಲಿ ಪ್ರತಿ ದೂರು ದಾಖಲಾಗಿದೆ. ತಮ್ಮ ಮೇಲಿನ ಸುಲಿಗೆ ಆರೋಪದಿಂದ ತಪ್ಪಿಸಿಕೊಳ್ಳಲು ಈ ದೂರುದಾರ ಈ ಫಿರ್ಯಾದು ನೀಡಿದ್ದಾರೆ. ದೂರುದಾರ ಹಣಕ್ಕಾಗಿ ಬೇಡಿಕೆ ಇರಿಸಿರುವುದು ವೈರಲ್ ಆದ ಆಡಿಯೊದಲ್ಲಿದೆ. ಅರ್ಜಿದಾರ ಬಲವಂತದಿಂದ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂಬುದೆಲ್ಲಾ ಸುಳ್ಳು. ಸಂತ್ರಸ್ತ 27 ವರ್ಷದ ವ್ಯಕ್ತಿಯಾಗಿದ್ದು ಇಲ್ಲಿ ಬಲವಂತದ ಪ್ರಶ್ನೆಯೇ ಬರುವುದಿಲ್ಲ. ಸೂರಜ್ ಎಲ್ಲೂ ತಲೆ ಮರೆಸಿಕೊಂಡಿರಲಿಲ್ಲ. ಸ್ವತಃ ತಾವೇ ಠಾಣೆಗೆ ಹೋದಾಗ ಪೊಲೀಸರು ಬಂಧಿಸಿದ್ದಾರೆ. ಈಗಾಗಲೇ ಪ್ರಕರಣದ ಸಂಪೂರ್ಣ ತನಿಖೆ ಮುಗಿದಿದೆ. ಆದ್ದರಿಂದ ಜಾಮೀನು ನೀಡಬೇಕು’ ಎಂದು ಮನವಿ ಮಾಡಿದ್ದರು. ಆದರೆ, ನ್ಯಾಯಾಲಯ ಜಾಮೀನು ತಿರಸ್ಕರಿಸಿ ಆದೇಶಿಸಿದೆ.

ರಾಹುಲ್ ಗಾಂಧಿಗೆ ಅವಮಾನ: ಮಹಿಳೆ ವಿರುದ್ಧ ದೂರು

ಕುಮಟಾ (ಉತ್ತರ ಕನ್ನಡ ಜಿಲ್ಲೆ): ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭಾವಚಿತ್ರಕ್ಕೆ ಚಪ್ಪಲಿ ಮುದ್ರೆ ಇಟ್ಟ ಚಿತ್ರವನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡ ಬೆಂಗಳೂರಿನ ಹೋಂಟೌನ್ ನಿವಾಸಿ ನಂದಿನಿ ಭಂಡಾರಕರ್ ಎಂಬುವರ ವಿರುದ್ಧ ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಆರ್.ಎಚ್.ನಾಯ್ಕ ಮಂಗಳವಾರ ದೂರು ನೀಡಿದ್ದಾರೆ.

‘ನಂದಿನಿ ಭಂಡಾರಕರ್ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಭಾವನೆಗೆ ಗಾಸಿಗೊಳಿಸಿ ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟು ಮಾಡುವ ಉದ್ದೇಶ ಹೊಂದಿದ್ದಾರೆ. ನಂದಿನಿ ಅವರ ಪೋಸ್ಟ್‌ಗೆ ಫೇಸ್‌ಬುಕ್‌ನಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ತಕ್ಷಣ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸಬೇಕು’ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಮನೆ ಊಟ ಕೋರಿದ ದರ್ಶನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ನಟ ದರ್ಶನ್ ತೂಗುದೀಪ ಶ್ರೀನಿವಾಸ್, ‘ನನಗೆ ಮನೆ ಊಟ ಪಡೆಯಲು ಅನುಮತಿಸುವಂತೆ ಬೆಂಗಳೂರಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹ ಮೇಲ್ವಿಚಾರಕರಿಗೆ ನಿರ್ದೇಶಿಸಬೇಕು’ ಎಂದು ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದಾರೆ.

‘ಜೈಲಿನಲ್ಲಿ ನೀಡಲಾಗುತ್ತಿರುವ ಆಹಾರ ಜೀರ್ಣಿಸಿಕೊಳ್ಳಲು ನನಗೆ ಆಗುತ್ತಿಲ್ಲ. ಜೈಲಿನ ಊಟದಿಂದಾಗಿ ಅತಿಸಾರ ಉಂಟಾಗಿದ್ದು ಪದೇ ಪದೇ ಭೇದಿ ಆಗುತ್ತಿದೆ. ಪರಿಣಾಮ ದೇಹದ ತೂಕ ಕಡಿಮೆಯಾಗಿದೆ. ಹೀಗಾಗಿ ಮನೆ ಆಹಾರ ತರಿಸಿಕೊಳ್ಳಲು ಜೈಲು ಅಧಿಕಾರಿಗಳಿಗೆ ಮೌಖಿಕವಾಗಿ ಮನವಿ ಮಾಡಿದ್ದೆ. ಆದರೆ, ಅವರು ಇದಕ್ಕೆ ಒಪ್ಪಿಲ್ಲ’ ಎಂದು ದರ್ಶನ್ ಅರ್ಜಿಯಲ್ಲಿ ವಿವರಿಸಿದ್ದಾರೆ. ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

‘ಕರ್ನಾಟಕ ಬಂದೀಖಾನೆ ಕಾಯ್ದೆ-1963ರ ಕಲಂ 30ರ ಅನುಸಾರ ವಿಚಾರಣಾಧೀನ ಕೈದಿಗಳು ಮನೆಯಿಂದ ಆಹಾರ, ಹಾಸಿಗೆ, ಬಟ್ಟೆ, ಪುಸ್ತಕ... ಇತ್ಯಾದಿ ವಸ್ತುಗಳನ್ನು ತರಿಸಿಕೊಳ್ಳಲು ಅವಕಾಶವಿದೆ. ಇದನ್ನು ಕಾರಾಗೃಹ ಇಲಾಖೆಯ ಪೊಲೀಸ್ ಮಹಾ ನಿರ್ದೇಶಕರು ಪರಿಶೀಲಿಸಿ ಅನುಮತಿಸಬಹುದಾಗಿದೆ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ದರ್ಶನ್ 12 ದಿನಗಳ ಪೊಲೀಸ್ ಕಸ್ಟಡಿಯಲ್ಲಿದ್ದರು. ತದನಂತರ 2024ರ ಜೂನ್ 22ರಿಂದ ನ್ಯಾಯಾಂಗ ಬಂಧನದಲ್ಲಿದ್ದು, ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾ ಕೈದಿಯಾಗಿದ್ದಾರೆ. ದರ್ಶನ್ ವಿರುದ್ಧ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 302, 120ಬಿ, 201, 364, 355, 384, 143, 147, 148 ಮತ್ತು 149 ಅಡಿ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹೊರಗುತ್ತಿಗೆ ಮೀಸಲು: ತಿದ್ದುಪಡಿ

ಒಂದನೇ ಪುಟದಿಂದ...

‘ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿದ ಯಾವುದೇ ಹುದ್ದೆಗೆ ಮೀಸಲಾತಿ ಅನ್ವಯವಾಗುವುದಿಲ್ಲ’ ಎಂದು ಈ ಕಾಯ್ದೆಯ 3(ಡಿ) ಸೆಕ್ಷನ್ ಸ್ಪಷ್ಟವಾಗಿ ಹೇಳುತ್ತದೆ. ಹೀಗಾಗಿ, ಸರ್ಕಾರವು ಹೊರಗುತ್ತಿಗೆಯಲ್ಲಿ ಮೀಸಲಾತಿ ನೀಡಿ ಎಂದು ಸುತ್ತೋಲೆ ಹೊರಡಿಸಿದರೂ ಅದನ್ನು ಅನುಷ್ಠಾನಕ್ಕೆ ತರಲು ಸಾಧ್ಯ ಇರಲಿಲ್ಲ.

‘ಕಾಯ್ದೆಯ 3(ಡಿ) ಸೆಕ್ಷನ್ ಅನ್ನು ತೆಗೆದುಹಾಕಿ, 2ನೇ ಸೆಕ್ಷನ್‌ಗೆ 2(ಎ) ಎಂಬ ಹೊಸ ಉಪಸೆಕ್ಷನ್ ಅನ್ನು ಸೇರಿಸಲಾಗಿದೆ. ‘ಹೊರಗುತ್ತಿಗೆ ಮೂಲಕ ನೇಮಕಾತಿ’ ಎಂದು ಈ ಹೊಸ ಸೆಕ್ಷನ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಈ ಮಸೂದೆಯನ್ನು ಮುಂಬರುವ ಅಧಿವೇಶನದಲ್ಲಿ ಮಂಡಿಸಲಾಗುವುದು’ ಎಂದು ಇಲಾಖೆ ಮೂಲಗಳು ಹೇಳಿವೆ.

ಸುತ್ತೋಲೆಯಲ್ಲಿ ಇದ್ದ ಈ ತಾಂತ್ರಿಕ ಸಮಸ್ಯೆಯ ಬಗ್ಗೆ ಕಾನೂನು ತಜ್ಞರು, ಹಲವು ಸಂಘಸಂಸ್ಥೆಗಳು ಸರ್ಕಾರದ ಗಮನ ಸೆಳೆದಿದ್ದವು.

‘ಈ ತಾಂತ್ರಿಕ ಸಮಸ್ಯೆಯನ್ನು ನಿವಾರಿಸಬೇಕು. ಹೊರಗುತ್ತಿಗೆ ಮೀಸಲಾತಿಯು 20 ಮತ್ತು ಅದಕ್ಕಿಂತಲೂ ಹೆಚ್ಚು ಹುದ್ದೆಗಳಿಗೆ ನೇಮಕಾತಿ ನಡೆಯುವಾಗ ಅನ್ವಯವಾಗುತ್ತದೆ. ಕಡಿಮೆ ಸಂಖ್ಯೆಯ ಹುದ್ದೆಗಳಿಗೆ ನೇಮಕಾತಿ ನಡೆಸಿದಾಗ ಮೀಸಲಾತಿ ನೀಡಬೇಕಾಗುವುದಿಲ್ಲ. ಈ ಸಮಸ್ಯೆಯನ್ನೂ ನಿವಾರಿಸಬೇಕು’ ಎಂದು ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಗುತ್ತಿಗೆದಾರರ ಸಂಘವು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿತ್ತು.

ಸುಧಾ ಓದಿರಿ

ಶಾಸಕರಿಗೆ ಎಸ್‌ಐಟಿ ಪ್ರಶ್ನಾ ಊಟಿ

ಒಂದನೇ ಪುಟದಿಂದ...

ಬಂಧಿತರು ವಿಚಾರಣೆ ವೇಳೆ ನೀಡಿದ್ದ ಮಾಹಿತಿ ಆಧರಿಸಿ ನಾಗೇಂದ್ರ ಅವರನ್ನು ಸುದೀರ್ಘವಾಗಿ ವಿಚಾರಣೆ ನಡೆಸಲಾಯಿತು. ಕೆಲವು ಪ್ರಶ್ನೆ ಕೇಳಿದಾಗ ನಾಗೇಂದ್ರ ಅವರು ಮೌನವಾಗಿದ್ದರು. ಮತ್ತೆ ಕೆಲವು ಪ್ರಶ್ನೆಗಳಿಗೆ, ‘ನನಗೆ ಗೊತ್ತಿಲ್ಲ, ಮಾಹಿತಿ ಇಲ್ಲ’ ಎಂಬುದಾಗಿ ಉತ್ತರಿಸಿದ್ದಾರೆ’ ಎಂದು ಗೊತ್ತಾಗಿದೆ.

ಆಡಿಯೊ ಹಾಗೂ ವಿಡಿಯೊ ಸಾಕ್ಷ್ಯಗಳನ್ನೂ ತೋರಿಸಿ ಅವರನ್ನು ಪ್ರಶ್ನಿಸಲಾಗಿದೆ ಎಂದು ಮೂಲಗಳು ಹೇಳಿವೆ.

‘ದದ್ದಲ್ ಅವರಿಗೆ ಮಧ್ಯಾಹ್ನ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಅದೇ ಸಮಯಕ್ಕೆ ಬಂದ ಅವರಿಗೂ ಹಲವು ಪ್ರಶ್ನೆ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಬಂಧಿತರಾಗಿರುವ ನಿಗಮದ ಇಬ್ಬರು ಅಧಿಕಾರಿಗಳು ದದ್ದಲ್ ಹೆಸರು ಪ್ರಸ್ತಾಪಿಸಿರುವ ಬಗ್ಗೆಯೂ ಪ್ರಶ್ನೆ ಕೇಳಲಾಯಿತು. ವಾಟ್ಸ್‌ಆ್ಯಪ್ ಚಾಟಿಂಗ್ ಅನ್ನು ಅವರ ಮುಂದಿಡಲಾಯಿತು’ ಎಂದು ಮೂಲಗಳು ಹೇಳಿವೆ.

ನಿಗಮದ ಖಾತೆಯಿಂದ ₹94.97 ಕೋಟಿ ಹಣ ಅಕ್ರಮವಾಗಿ ಹೈದರಾಬಾದ್‌ನ ‘ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ’ಯ (ಎಫ್‌ಎಫ್‌ಸಿಸಿಎಸ್‌ಎಲ್) ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಆಗಿತ್ತು. ಅಲ್ಲಿಂದ ಬೇರೆ ಬೇರೆ ಖಾತೆಗಳಿಗೆ ವರ್ಗಾಯಿಸಿ ಆರೋಪಿಗಳು ಡ್ರಾ ಮಾಡಿಕೊಂಡಿದ್ದರು. ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ರಾಜ್ಯ ಸರ್ಕಾರ ಎಸ್‌ಐಟಿಗೆ ವಹಿಸಿದ್ದು, ಹೈದರಾಬಾದ್ ಹಾಗೂ ಬೆಂಗಳೂರಿನ 11 ಮಂದಿಯನ್ನು ಬಂಧಿಸಲಾಗಿದೆ. ಆರೋಪಿಗಳು ಡ್ರಾ ಮಾಡಿಕೊಂಡಿದ್ದ ಹಣ ಹಾಗೂ ಖರೀದಿಸಿದ್ದ ಚಿನ್ನಾಭರಣವನ್ನು ಜಪ್ತಿ ಮಾಡಲಾಗಿದೆ.

ಮೂವರ ಎಸ್‌ಐಟಿ ಕಸ್ಟಡಿ ವಿಸ್ತರಣೆ

ಆರೋಪಿಗಳಾದ ಜೆ.ಬಿ.ಪದ್ಮನಾಭ, ಪರಶುರಾಮ್ ಜಿ. ದುರ್ಗಣ್ಣನವರ ಹಾಗೂ ನೆಕ್ಕಂಟಿ ನಾಗರಾಜ್ ಅವರ ಎಸ್‌ಐಟಿ ಕಸ್ಟಡಿ ಅವಧಿಯನ್ನು ಜುಲೈ 12ರ ವರೆಗೆ ವಿಸ್ತರಿಸಿ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.

ಎಸ್‌ಐಟಿ ಕಸ್ಟಡಿ ಅಂತ್ಯವಾಗಿದ್ದರಿಂದ ನ್ಯಾಯಾಲಯಕ್ಕೆ ಮೂವರನ್ನು ಹಾಜರು ಪಡಿಸಲಾಗಿತ್ತು. ಹೆಚ್ಚಿನ ವಿಚಾರಣೆಗಾಗಿ ಮತ್ತೆ ಕಸ್ಟಡಿಗೆ ನೀಡುವಂತೆ ತನಿಖಾಧಿಕಾರಿಗಳು ಮಾಡಿದ ಮನವಿಗೆ ನ್ಯಾಯಾಲಯ ಅನುಮತಿಸಿತು.

ಪ್ರಾಂಶುಪಾಲರ ಹುದ್ದೆಗೆ ಗುತ್ತಿಗೆ ನೇಮಕ

ಒಂದನೇ ಪುಟದಿಂದ...

ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳಿಗೆ ಕಾಯಂ ನೇಮಕ ಪ್ರಕ್ರಿಯೆ ಹಲವು ದಶಕಗಳಿಂದಲೂ ನಿಯಮಿತವಾಗಿ ನಡೆದಿಲ್ಲ. ಸೇವಾ ಹಿರಿತನದ ಆಧಾರದ ಮೇಲೆ ಹಲವು ಪ್ರಾಧ್ಯಾಪಕರಿಗೆ 2008–2009ನೇ ಸಾಲಿನಲ್ಲಿ ಪ್ರಾಂಶುಪಾಲರ ಹುದ್ದೆಗಳಿಗೆ ಬಡ್ತಿ ನೀಡಲಾಗಿತ್ತು. ಒಂದು ಸಾವಿರ ವಿದ್ಯಾರ್ಥಿಗಳಿಗಿಂತ ಕಡಿಮೆ ಇರುವ ಹಾಗೂ ಒಂದು ಸಾವಿರಕ್ಕಿಂತ ಹೆಚ್ಚಿರುವ ಕಾಲೇಜುಗಳನ್ನು ವಿಂಗಡಿಸಿ ಗ್ರೇಡ್–1 ಹಾಗೂ ಗ್ರೇಡ್–2 ಪ್ರಾಂಶುಪಾಲರು ಎಂದು ಪರಿಗಣಿಸಿ ಬಡ್ತಿಗೆ ಪರಿಗಣಿಸಲಾಗಿತ್ತು. ಅಂದು ಪ್ರಾಂಶುಪಾಲರಾಗಿ ಬಡ್ತಿ ಹೊಂದಿದ್ದ ಎಲ್ಲರೂ ನಿವೃತ್ತರಾಗಿದ್ದಾರೆ. ಪ್ರಸ್ತುತ 400ಕ್ಕೂ ಹೆಚ್ಚು ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆ ಖಾಲಿ ಇವೆ. ಆಯಾ ಕಾಲೇಜುಗಳಲ್ಲಿರುವ ಹಿರಿಯ ಪ್ರಾಧ್ಯಾಪಕರೇ ಪ್ರಭಾರ ಜವಾಬ್ದಾರಿ ನಿಭಾಯಿಸುತ್ತಿದ್ದಾರೆ.

ಬೋಧಕರಲ್ಲದವರಿಗೂ ಸೇವಾ ಪ್ರಮಾಣಪತ್ರ: ಪ್ರಾಂಶುಪಾಲರ ಹುದ್ದೆಗೆ ಆಯ್ಕೆ ಬಯಸುವವರು ಪದವಿ ಕಾಲೇಜುಗಳಲ್ಲಿ ಸೇವಾನುಭವ ಹೊಂದಿರುವ ಜೊತೆಗೆ ಕಾಲಕಾಲಕ್ಕೆ ನಿಗದಿಪಡಿಸಿದ ವೇತನ ಶ್ರೇಣಿ ಪಡೆಯುತ್ತಿರಬೇಕು ಎಂದು 2016ರಲ್ಲೇ ವಿಶ್ವವಿದ್ಯಾಲಯ ಅನುದಾನ ಆಯೋಗ ನಿಯಮ ರೂಪಿಸಿದೆ. ಆದರೆ, ರಾಜ್ಯದ ಯಾವ ಖಾಸಗಿ ಕಾಲೇಜುಗಳೂ ಯುಜಿಸಿ ನಿಗದಿಪಡಿಸಿದ ವೇತನ ಶ್ರೇಣಿ ನೀಡುತ್ತಿಲ್ಲ. ಇದರಿಂದ ಖಾಸಗಿ ಸಂಸ್ಥೆಗಳ ಅಭ್ಯರ್ಥಿಗಳಿಗೆ ಯುಜಿಸಿ ನಿಯಮ ಅಡ್ಡಿಯಾಗಬಾರದು ಎಂಬ ಕಾರಣಕ್ಕೆ ರಾಜ್ಯ ಸರ್ಕಾರ ತಿದ್ದುಪಡಿ ತಂದು ‘ವೇತನ ಶ್ರೇಣಿ ಅರ್ಹತೆ’ಯ ಅಂಶವನ್ನೇ ಕೈಬಿಟ್ಟಿದೆ.

‘ವೇತನ ಶ್ರೇಣಿ ನಿಯಮ ಕೈಬಿಟ್ಟಿದ್ದರಿಂದ ಪದವಿ ಕಾಲೇಜುಗಳಲ್ಲಿ ಒಂದು ವರ್ಷವೂ ಸೇವಾನುಭವ ಹೊಂದಿಲ್ಲದ ಹಲವರು ಪ್ರಭಾವ ಬಳಸಿ, ಖಾಸಗಿ ಶಿಕ್ಷಣ ಸಂಸ್ಥೆಗಳಿಂದ 15 ವರ್ಷಗಳ ಸೇವಾ ದೃಢೀಕರಣ ಪಡೆದಿದ್ದಾರೆ. ಸರ್ಕಾರದ ಉನ್ನತಾಧಿಕಾರಿಯೊಬ್ಬರ ಪತ್ನಿ ಯಾವ ಕಾಲೇಜಿನಲ್ಲೂ ಬೋಧನಾನುಭವ ಹೊಂದಿಲ್ಲ. ಆದರೆ, ಅವರು ಅರ್ಜಿ ಸಲ್ಲಿಸಿ, ಪರೀಕ್ಷೆ ಬರೆದಿದ್ದಾರೆ. ಈಚೆಗೆ ಬಿಡುಗಡೆ ಮಾಡಿದ ತಾತ್ಕಾಲಿಕ ಅಂಕಗಳ ಪಟ್ಟಿಯಲ್ಲೂ ಉನ್ನತ ಸ್ಥಾನದಲ್ಲಿದ್ದಾರೆ. ಇಂತಹ ಪ್ರಕರಣಗಳಿಂದ ಸರ್ಕಾರಿ ಕಾಲೇಜುಗಳ ಅರ್ಹ ಪ್ರಾಧ್ಯಾಪಕರು ಪ್ರಾಂಶುಪಾಲರ ಹುದ್ದೆಗೆ ಹೋಗಲು ಸಾಧ್ಯವಾಗುತ್ತಿಲ್ಲ’ ಎನ್ನುವುದು ಪ್ರಾಧ್ಯಾಪಕ ಮಂಜುನಾಥ್ ಆರೋಪ.

ಸರ್ಕಾರಿ ಪ್ರಾಧ್ಯಾಪಕರ ಆಕ್ಷೇಪ; ತಡೆ

15 ವರ್ಷಗಳಿಂದ ಪ್ರಾಂಶುಪಾಲರ ಹುದ್ದೆಗೆ ನೇಮಕಾತಿ ಪ್ರಕ್ರಿಯೆಗಳೇ ನಡೆದಿರಲಿಲ್ಲ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾರ್ಚ್ 2022ರಲ್ಲಿ ಅಧಿಸೂಚನೆ ಹೊರಡಿಸಿತ್ತು. ತಾಂತ್ರಿಕ ಕಾರಣಗಳಿಂದ ನಿಗದಿಯಾಗಿದ್ದ ಪರೀಕ್ಷೆಗಳನ್ನು ಎರಡು ಬಾರಿ ಮುಂದೂಡಲಾಗಿತ್ತು. ಅಂತಿಮವಾಗಿ ಕಳೆದ ಜುಲೈ 30ರಂದು ಪರೀಕ್ಷೆ ನಡೆಸಲಾಗಿತ್ತು. ಪರೀಕ್ಷೆ ನಡೆದು ವರ್ಷವಾದರೂ ಅಂತಿಮ ಪಟ್ಟಿ ಪ್ರಕಟವಾಗಿಲ್ಲ.

‘ಎಂಜಿನಿಯರಿಂಗ್ ಸೇರಿದಂತೆ ಇತರೆ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡಿದವರು ಆಯ್ಕೆಯಾದರೆ ನಿಯಮದಂತೆ ಅವರು ವಾರಕ್ಕೆ ಆರು ಗಂಟೆ ಯಾವ ವಿಷಯ ಬೋಧಿಸಲು ಸಾಧ್ಯ? ಒಳಹೊರಗಿನವರ ಶೀತಲ ಸಮರಕ್ಕೂ ದಾರಿಯಾಗುತ್ತದೆ, ಇಲಾಖೆಯ ಒಳಗಿನವರ ಸೇವಾ ಜ್ಯೇಷ್ಠತೆಗೂ ಧಕ್ಕೆಯಾಗುತ್ತದೆ. ತಾತ್ಕಾಲಿಕ ಅವಧಿಯಿಂದಾಗಿ ಶಿಕ್ಷಣಾಡಳಿತ ಹುದ್ದೆಯಾಗದು, ವಯೋಮಿತಿ ಇಲ್ಲದ ಕಾರಣ ಆಯ್ಕೆಯಾದವರು ಒಂದೇ ತಿಂಗಳಿಗೆ ನಿವೃತ್ತರಾದರೆ ಮತ್ತೆ ಪ್ರಭಾರ ಅನಿವಾರ್ಯವಾಗುತ್ತದೆ. ಈ ಕಾರಣಕ್ಕೆ ನೇಮಕಾತಿ ಪ್ರಕ್ರಿಯೆಯನ್ನೇ ರದ್ದು ಮಾಡಬೇಕು’ ಎಂದು ಕೋರಿ ಸರ್ಕಾರಿ ಕಾಲೇಜುಗಳ ಪ್ರಾಧ್ಯಾಪಕರು ಮುಖ್ಯಮಂತ್ರಿಗೆ ದೂರು ಸಲ್ಲಿಸಿದ್ದಾರೆ. ಅದರ ಬೆನ್ನಲ್ಲೇ, ಕಾನೂನು ಸಲಹೆ ಬರುವರೆಗೂ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ.

‘ಬಿಜೆಪಿಯಿಂದ ಅನ್ಯಾಯ’

ವಿಜಯಪುರ: ‘ಬಿಜೆಪಿ ದಲಿತ ವಿರೋಧಿ. ಆ ಪಕ್ಷ ಸೇರುವುದು ಬೇಡ ಎಂದು ಅನೇಕ ಸ್ನೇಹಿತರು ನನ್ನೊಂದಿಗೆ ಮೊದಲೇ ವಾದ ಮಾಡಿದರೂ ಯೋಚಿಸದೇ ಸೇರಿದೆ. ಬಳಿಕ ಏಳು ಬಾರಿ ಸಂಸದನಾದೆ. ಆದರೂ ನನಗೆ ಕೇಂದ್ರ ಸಚಿವ ಸ್ಥಾನ ಸಿಗಲಿಲ್ಲ’ ಎಂದು ಬಿಜೆಪಿ ಸಂಸದ ರಮೇಶ ಜಿಗಜಿಣಗಿ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ಸಂಸದರ ಕಚೇರಿಯ ಪೂಜೆ ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನನಗೆ ಸಚಿವ ಸ್ಥಾನ ನೀಡದಿರುವುದಕ್ಕೆ ಕ್ಷೇತ್ರದ ಜನರು ಬೇಸರಗೊಂಡಿದ್ದಾರೆ. ಛೀ, ಥೂ ಎನ್ನುತ್ತಿದ್ದಾರೆ. ನನಗೆ ಪಕ್ಷದಿಂದ ಅನ್ಯಾಯವಾಗಿದೆ’ ಎಂದು ಖಾರವಾಗಿ ಹೇಳಿದರು.

‘ದಲಿತನಾಗಿ ದಕ್ಷಿಣ ಭಾರತದಿಂದ ನಾನೊಬ್ಬನೇ ಏಳು ಬಾರಿ ಸಂಸದನಾಗಿ ಗೆದ್ದಿರುವೆ. ಕೇಂದ್ರ ಸರ್ಕಾರದಲ್ಲಿ ಈ ಬಾರಿ ಎಲ್ಲ ಮೇಲ್ಜಾತಿಯವರೇ ಸಚಿವರಾಗಿದ್ದಾರೆ. ದಲಿತರು ಬಿಜೆಪಿಗೆ ಮತ ಹಾಕಿಲ್ಲವೇ’ ಎಂದು ಅವರು ಪ್ರಶ್ನಿಸಿದರು.

ಮಂಗಳೂರು- ಹಾಸನ ಪೊಲೀಸರ ಜಂಟಿ ಕಾರ್ಯಾಚರಣೆ

‘ಚಡ್ಡಿ ಗ್ಯಾಂಗ್’ನ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ



ಮಂಗಳೂರು: ಮನೆಗಳ ಕಿಟಕಿಯ ಗ್ರಿಲ್ ಕತ್ತರಿಸಿ ಮನೆಯವರನ್ನು ಬೆದರಿಸಿ ಕಳವು ನಡೆಸುತ್ತಿದ್ದ ಮಧ್ಯಪ್ರದೇಶದ ದರೋಡೆಕೋರರ ತಂಡದ ನಾಲ್ವರು ಆರೋಪಿಗಳನ್ನು ಮಂಗಳೂರು ಪೊಲೀಸ್ ಕಮಿಷನರೇಟ್ ಹಾಗೂ ಹಾಸನ ಜಿಲ್ಲೆಯ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಮಂಗಳವಾರ ಬಂಧಿಸಿದ್ದಾರೆ. ಕೃತ್ಯ ನಡೆದ ಐದೇ ಗಂಟೆಗಳಲ್ಲಿ ಆರೋಪಿಗಳು ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

‘ಮಧ್ಯಪ್ರದೇಶದ ಗುಣಾ ಜಿಲ್ಲೆಯ ರಗೋಗರ್ ತಾಲ್ಲೂಕಿನ ವಿಶ್ವನಗರದ ರಾಜು ಸಿಂಘಾನಿಯಾ (24 ವರ್ಷ), ಕೋತ್ವಾಲಿಯ ಜಗನ್ಪುರ್ ಚಾಕ್‌ನ ವಿಕ್ಕಿ (21), ಭೋಪಾಲ್‌ನ ಗುಲಾಬ್‌ಗಂಜ್‌ನ ಮಯೂರ್ (30 ವರ್ಷ) ಹಾಗೂ ಅಶೋಕನಗರದ ಮಾಧವಗಢದ ಬಾಲಿ (22) ಬಂಧಿತರು’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

ನಗರದ ಉರ್ವ ಠಾಣೆಯ ವ್ಯಾಪ್ತಿಯ ದೇರೆಬೈಲು ಗ್ರಾಮದ ಕೊಟ್ಟೆಕಣಿ ರಸ್ತೆಯ ಬಳಿಯ ಮನೆಯಲ್ಲಿ ಮಂಗಳವಾರ ಮುಂಜಾನೆ ವೃದ್ಧ ದಂಪತಿ ಮೇಲೆ ಹಲ್ಲೆ ನಡೆಸಿದ್ದ ನಾಲ್ವರು ದರೋಡೆಕೋರರ ತಂಡ ನಗ-ನಗದು ದೋಚಿತ್ತು. ಆ ಮನೆಯ ಕಾರಿನಲ್ಲೇ ಪರಾರಿಯಾಗಿತ್ತು. ಈ ಬಗ್ಗೆ ದೂರು ಬಂದ ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು ಮೂಲ್ಕಿಯಲ್ಲಿ ಕಾರನ್ನು ಪತ್ತೆಹಚ್ಚಿದ್ದರು. ಆರೋಪಿಗಳು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಂಗಳೂರಿಗೆ ಪ್ರಯಾಣಿಸಿದ್ದು ಸಿ.ಸಿ. ಟಿವಿ ದೃಶ್ಯಗಳಿಂದ ಗೊತ್ತಾಗಿತ್ತು. ಆರೋಪಿಗಳು ಮಂಗಳೂರಿನಿಂದ ಬೆಂಗಳೂರಿಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸಿದ್ದರು‘ ಎಂದು ತಿಳಿಸಿದ್ದಾರೆ.

‘ಈ ಬಗ್ಗೆ ಹಾಸನ ಜಿಲ್ಲೆಯ ಪೊಲೀಸರಿಗೆ ಮಾಹಿತಿ ನೀಡಿದ್ದೆವು. ಅಲ್ಲಿನ ಪೊಲೀಸರು ಸಕಲೇಶಪುರದಲ್ಲಿ ಬಸ್ ಅನ್ನು ತಡೆದು, ಅದರಲ್ಲಿ ಪ್ರಯಾಣಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಕಳವಾಗಿದ್ದ ಚಿನ್ನ ಮತ್ತು ವಜ್ರದ ಆಭರಣಗಳು (ಸುಮಾರು ₹ 12 ಲಕ್ಷ ಮೌಲ್ಯ) 10 ಬ್ರ್ಯಾಂಡೆಡ್ ಕೈ ಗಡಿಯಾರ, ₹ 3 ಸಾವಿರ ನಗದನ್ನು ವಶಪಡಿಸಿಕೊಂಡಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ.

‘ಬಂಧಿತರೆಲ್ಲರೂ ಮಧ್ಯಪ್ರದೇಶದವರು. ಚಡ್ಡಿ ಧರಿಸಿಕೊಂಡು ಕಳವು ನಡೆಸುವುದಕ್ಕೆ ಕುಖ್ಯಾತಿ ಪಡೆದ ‘ಚಡ್ಡಿ ಗ್ಯಾಂಗ್’ನ ಸದಸ್ಯರು. ಮನೆಯ ಕಿಟಕಿ ಗ್ರಿಲ್ ಕತ್ತರಿಸಿ ಕಳವು ನಡೆಸಲು ಅಗತ್ಯವಿರುವ ಪರಿಕರಗಳನ್ನು ಜೊತೆಯಲ್ಲೇ ಇಟ್ಟುಕೊಂಡಿರುತ್ತಾರೆ. ಭಾನುವಾರ ಉರ್ವ ಠಾಣೆಯ ವ್ಯಾಪ್ತಿಯ ಕೋಡಿಕಲ್ ರಸ್ತೆ ಬಳಿಯ ಮನೆಯೊಂದರ ಕಿಟಕಿ ಗ್ರಿಲ್ ಕತ್ತರಿಸಿ ₹10 ಸಾವಿರ ಕಳವು ಮಾಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಮಧ್ಯವರ್ತಿ ಹಾವಳಿ ತಡೆಗಟ್ಟಿ: ಸಿ.ಎಂ

ಡಿಸಿ, ಸಿಇಒಗಳಿಗೆ ನಿರ್ದೇಶನ ● ಲೋಪ ದೋಷಗಳು ಮುಂದುವರಿದರೆ ಮುಲಾಜಿಲ್ಲದೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ಸವಲತ್ತುಗಳನ್ನು ಮಧ್ಯವರ್ತಿಗಳ ಹಾವಳಿ ಇಲ್ಲದೆ ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು. ಸರ್ಕಾರದ ಹಣ ದುರುಪಯೋಗ ಆಗದಂತೆ ಕೆಲಸ ಮಾಡಬೇಕು. ಉದ್ದೇಶಪೂರ್ವಕವಾಗಿ ಲೋಪ ದೋಷಗಳನ್ನು ಮುಂದುವರೆಸಿದರೆ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಎರಡು ದಿನ ನಡೆದ ಸಭೆಯ ಅಂತ್ಯದಲ್ಲಿ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 'ಮೂರು ತಿಂಗಳ ನಂತರ ಮತ್ತೆ ಸಭೆ ನಡೆಸುತ್ತೇನೆ. ಆಗ ಪರಿಸ್ಥಿತಿ ಸುಧಾರಣೆ ಆಗದಿದ್ದರೆ ಸಹಿಸಲಾಗದು' ಎಂದರು.

ಅದಕ್ಕೂ ಮೊದಲು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ, 'ಚೆನ್ನಾಗಿ ಕೆಲಸ ಮಾಡುವವರ ಬೆನ್ನು ತಟ್ಟುವ, ಸರಿಯಾಗಿ ಕೆಲಸ ಮಾಡದವರ ಕಿವಿ ಹಿಂಡಿ ಚುರುಕುಗೊಳಿಸುವುದು ಈ ಸಭೆಯ ಉದ್ದೇಶವಾದರೆ, ಮತ್ತೊಂದು ಮುಖ್ಯ ಉದ್ದೇಶ ಸರ್ಕಾರದ ಧ್ಯೇಯೋದ್ದೇಶಗಳೇನು? ಆಶಯಗಳೇನು? ಆಸಕ್ತಿಗಳೇನು? ಆದ್ಯತೆಗಳೇನು? ಎಂಬುದನ್ನು ಮನವರಿಕೆ ಮಾಡಿಕೊಟ್ಟು ಕೆಲಸ ಮಾಡಿಸುವುದೂ ಆಗಿದೆ' ಎಂದರು.

'ಸಭೆಯಲ್ಲಿ ವಿಪತ್ತು ನಿರ್ವಹಣೆ, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರು, ನರೇಗಾ, ಹೆದ್ದಾರಿ, ಮೂಲಸೌಕರ್ಯ ನಿರ್ಮಾಣಕ್ಕೆ ಭೂಸ್ವಾಧೀನ ಪ್ರಕ್ರಿಯೆ, ಅನರ್ಹ ಪಡಿತರ ಚೀಟಿಗಳ ರದ್ದು ಸೇರಿದಂತೆ 30 ಇಲಾಖೆಗಳ 68 ವಿಷಯಗಳ ಕುರಿತು ಚರ್ಚಿಸಲಾಯಿತು. ವಿವಿಧ ಕಾರ್ಯಕ್ರಮಗಳ ಪ್ರಗತಿಯನ್ನು ಜಿಲ್ಲಾವಾರು ಪರಿಶೀಲಿಸಲಾಯಿತು. ಕಡಿಮೆ ಸಾಧನೆಯಾದ ಜಿಲ್ಲೆಗಳ ಅಧಿಕಾರಿಗಳಿಗೆ ಕೆಲಸಗಳನ್ನು ಚುರುಕುಗೊಳಿಸುವಂತೆ ಸೂಚಿಸಲಾಯಿತು' ಎಂದರು.

'ಕರಾವಳಿ ಹಾಗೂ ಮಲೆನಾಡು ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದ್ದು, 27 ಜಿಲ್ಲೆಗಳ 177 ತಾಲ್ಲೂಕುಗಳ 1,247 ಗ್ರಾಮ ಪಂಚಾಯಿತಿಗಳಲ್ಲಿ ಪ್ರವಾಹದ ಅಪಾಯ ಹೊಂದಿರುವ 2,225 ಗ್ರಾಮಗಳನ್ನು ಗುರುತಿಸಲಾಗಿದೆ. ಈ ಪ್ರದೇಶಗಳ 20.38 ಲಕ್ಷ ಜನರು ಪ್ರವಾಹ ಪೀಡಿತರಾಗುವ ಸಾಧ್ಯತೆ ಇದೆ ಎಂದು ಗುರುತಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 201 ಸ್ಥಳಗಳನ್ನು ಪ್ರವಾಹ ಪೀಡಿತ ಪ್ರದೇಶಗಳೆಂದು ಗುರುತಿಸಲಾಗಿದೆ. ಈ ಪ್ರದೇಶಗಳಲ್ಲಿ ಪರಿಸ್ಥಿತಿ ಎದುರಿಸಲು ಜಿಲ್ಲಾಧಿಕಾರಿಗಳು ಸನ್ನದ್ಧರಾಗಿರುವಂತೆ ಸೂಚಿಸಲಾಗಿದೆ' ಎಂದರು.

'ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿ ₹783.69 ಕೋಟಿ ಅನುದಾನ ಲಭ್ಯವಿದೆ. ಪೂರ್ವ ಮುಂಗಾರು ಅವಧಿಯಲ್ಲಿ 3,714 ಮನೆ ಹಾನಿ ಹಾಗೂ ಬೆಳೆ ಹಾನಿ ಸಂಭವಿಸಿದೆ. ಇದಕ್ಕೆ ಎಸ್‌ಡಿಆರ್‌ಎಫ್ ಮಾನದಂಡಗಳಂತೆ ಪರಿಹಾರ ವಿತರಿಸಲು ಸೂಚಿಸಲಾಗಿದೆ' ಎಂದರು.

'9,811 ಶಾಲಾ ಕೊಠಡಿಗಳನ್ನು ನಿರ್ಮಿಸಲು ಅನುಮೋದನೆ ನೀಡಲಾಗಿದೆ. ಅವುಗಳಲ್ಲಿ 1,000 ಪಿ.ಯು. ಕಾಲೇಜುಗಳ ಕೊಠಡಿಗಳೂ ಸೇರಿವೆ. ವಸತಿ ನಿಲಯ, ವಸತಿ ಶಾಲೆಗಳಿಗೆ 114 ಕಡೆ ಮತ್ತು 8,058 ಅಂಗನವಾಡಿಗಳಿಗೆ ಜಾಗ ಕೊಡಲು ಬಾಕಿ ಇದೆ. ತಕ್ಷಣ ಜಾಗ ಜಾಗ ಕೊಡಬೇಕೆಂದು ನಿರ್ದೇಶನ ನೀಡಲಾಗಿದೆ' ಎಂದರು.

'ಕಂದಾಯ ನ್ಯಾಯಾಲಯಗಳಲ್ಲಿ ಕಳೆದ ಒಂದು ವರ್ಷದಲ್ಲಿ 52,238 ಪ್ರಕರಣಗಳು ಇತ್ಯರ್ಥವಾಗಿವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಪ್ರತಿ ಪ್ರಕರಣ ಇತ್ಯರ್ಥವಾಗಲು ಸರಾಸರಿ 212 ದಿನಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಈಗ ಅದು 97 ದಿನಗಳಿಗೆ ಇಳಿಕೆಯಾಗಿದೆ. ಆದರೂ ವಿವಿಧ ಕಾರಣಗಳಿಗಾಗಿ ಹೊಸದಾಗಿ ದಾಖಲಿಸಿಕೊಂಡ ಮೇಲ್ಮನವಿಗಳೂ ಸೇರಿ 56 ಸಾವಿರ ಪ್ರಕರಣಗಳು ಕಂದಾಯ ನ್ಯಾಯಾಲಯಗಳಲ್ಲಿವೆ. ಅವುಗಳನ್ನು ಕಾಲಮಿತಿಯಲ್ಲಿ ಇತ್ಯರ್ಥಗೊಳಿಸಲು ನಿರ್ದೇಶನ ನೀಡಲಾಗಿದೆ' ಎಂದರು.

'ಜಿಲ್ಲಾಧಿಕಾರಿಗಳು ಪ್ರವಾಸಿ ತಾಣಗಳ ಅಭಿವೃದ್ಧಿ ಸಾಧ್ಯತೆಗಳನ್ನು ಗುರುತಿಸಬೇಕು. ಖಾಸಗಿ ಸಹಭಾಗಿತ್ವದಲ್ಲಿ ಮಾತ್ರವಲ್ಲ ಸರ್ಕಾರದ ವತಿಯಿಂದಲೂ ಹೆಜ್ಜೆ ಇರಿಸಬೇಕು. ರಾಜ್ಯದಲ್ಲಿ ನಿರುದ್ಯೋಗ ನಿವಾರಿಸಲು ಸಮರ್ಥ ಕ್ಷೇತ್ರ ಪ್ರವಾಸೋದ್ಯಮ. ಕರಾವಳಿ, ಮಲೆನಾಡು ಮತ್ತು ಬಯಲು ಸೀಮೆಗಳ ವಿವಿಧ ಪ್ರದೇಶಗಳು ಪ್ರವಾಸೋದ್ಯಮಕ್ಕೆ ಪೂರಕವಾಗಿವೆ. ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿ ಪ್ರವಾಸೋದ್ಯಮದ ಚಟುವಟಿಕೆ ಹೆಚ್ಚಿಸಲು ಸೂಕ್ತ ಕ್ರಮ ವಹಿಸಬೇಕೆಂದು ಸೂಚಿಸಲಾಗಿದೆ' ಎಂದು ಹೇಳಿದರು.

ಸಭೆಯಲ್ಲಿ ಸಿ.ಎಂ ಹೇಳಿದ್ದೇನು

- ಹೊಸದಾಗಿ 750 ಸರ್ವೆಯರ್‌ಗಳ ನೇಮಕ
- ಅಂಗನವಾಡಿ ಕಾರ್ಯಕರ್ತೆಯರ 4,180 ಹುದ್ದೆ, ಸಹಾಯಕಿಯರ 9,411 ಹುದ್ದೆಗಳಿಗೆ ಡಿಸೆಂಬರ್ ಅಂತ್ಯದ ಒಳಗೆ ನೇಮಕಾತಿ
- ಪಿಡಿಒಗಳು, ಗ್ರಾಮ ಲೆಕ್ಕಾಧಿಕಾರಿಗಳು ಕೆಲಸ ಮಾಡುವ ಕೇಂದ್ರ ಸ್ಥಾನದಲ್ಲಿಯೇ ನೆಲಸಬೇಕು
- ಬಾಲ್ಯ ವಿವಾಹ ಪ್ರಕರಣ ತಡೆಯಬೇಕು
- ಮೂರು ತಿಂಗಳಿಗೊಮ್ಮೆ ಜಿಲ್ಲೆಗಳಲ್ಲಿ ಉಪ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ಕಡ್ಡಾಯವಾಗಿ ನಡೆಸಬೇಕು
- ಗಂಗಾಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇರುವ 5,203 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು
- 22,581 ವಕ್ಫ್ ಖಾತೆ ಮ್ಯುಟೇಶನ್ ಬಾಕಿಯಿದ್ದು, ಅದನ್ನು ತ್ವರಿತಗೊಳಿಸಬೇಕು
- ಅಲೆಮಾರಿ ಕುರಿಗಾರರು ಬಂದೂಕು ಪರವಾನಗಿ ಕೇಳಿದರೆ ತಕ್ಷಣ ಕೊಡಬೇಕು, ಅರಣ್ಯಗಳಲ್ಲಿ ಕುರಿ ಮೇಯಿಸಲು ಅಡ್ಡಿ ಮಾಡಬಾರದು
- ಕುರಿಗಾಹಿಗಳಿಗೆ ಗುರುತಿನ ಚೀಟಿ ವಿತರಿಸಬೇಕು
- ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಎದುರಾಗುವ ತಾಂತ್ರಿಕ ತೊಂದರೆಗಳನ್ನು ಎರಡು ತಿಂಗಳ ಒಳಗೆ ಬಗೆಹರಿಸಬೇಕು

ನಿಗಮ ಮಂಡಳಿ: ಆಯ್ಕೆ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ನಿಗಮ–ಮಂಡಳಿಗಳಿಗೆ ನಿರ್ದೇಶಕರು ಮತ್ತು ಸದಸ್ಯರನ್ನು ಆಯ್ಕೆ ಮಾಡಲು ಗೃಹ ಸಚಿವ ಜಿ.ಪರಮೇಶ್ವರ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ.

ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಸತೀಶ ಜಾರಕಿಹೊಳಿ, ಸಂತೋಷ್ ಎಸ್.ಲಾಡ್, ಶರಣಪ್ರಕಾಶ ಪಾಟೀಲ ಅವರನ್ನು ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ. ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಶಾಸಕರಾದ ರಿಜ್ವಾನ್ ಅರ್ಷದ್ ಮತ್ತು ಎಂ. ರೂಪಕಲಾ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ವಿ.ಆರ್.ಸುದರ್ಶನ್ ಮತ್ತು ಕೆ.ಹರೀಶ್‌ಕುಮಾರ್ ಅವರನ್ನು ಆಯ್ಕೆ ಸಮಿತಿ ಒಳಗೊಂಡಿದೆ. ಜೂನ್ 24ರಂದು ಪರಮೇಶ್ವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯಲ್ಲಿ ಸಚಿವ ಸಂತೋಷ ಲಾಡ್, ಶಾಸಕ ರಿಜ್ವಾನ್ ಅರ್ಷದ್ ಅವರು ಸದಸ್ಯರಾಗಿದ್ದರು.

ಡೆಂಗಿ ಶಂಕೆ: ಇಬ್ಬರ ಸಾವು

ಹರಿಹರ/ರಿಪ್ಪನ್‌ಪೇಟೆ: ತೀವ್ರ ಜ್ವರದಿಂದ ಬಳಲುತ್ತಿದ್ದ ಹರಿಹರದ ಅರುಣ್ (22) ದಾವಣಗೆರೆಯ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟಿದ್ದರೆ, ರಿಪ್ಪನ್‌ಪೇಟೆ ನಿವಾಸಿ ರಶ್ಮಿ ರಾಘವೇಂದ್ರ ನಾಯಕ್ (42) ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ಮೃತಪಟ್ಟಿದ್ದಾರೆ. ಇಬ್ಬರ ಸಾವಿಗೂ ಡೆಂಗಿ ಜ್ವರ ಕಾರಣವೆಂದು ಶಂಕಿಸಲಾಗಿದೆ.

ಆಟೊ ಚಾಲಕನಾಗಿದ್ದ ಅರುಣ್ 10 ದಿನಗಳ ಹಿಂದೆ ಜ್ವರದಿಂದ ಬಳಲಿದ್ದರಿಂದ ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದ. ನಂತರ ದಾವಣಗೆರೆ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾದರೂ ಗುಣಮುಖನಾಗದ್ದರಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ. ಸ್ಥಳೀಯ ಪ್ರಯೋಗಾಲಯಗಳಲ್ಲಿ ನಡೆಸಲಾದ ರಕ್ತ ಪರೀಕ್ಷೆಯಲ್ಲಿ ಡೆಂಗಿ ಖಚಿತವಾಗಿಲ್ಲ. ಯುವಕನ ರಕ್ತದ ಮಾದರಿಯನ್ನು ಪುಣೆಯ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ಫಲಿತಾಂಶಕ್ಕಾಗಿ ಕಾಯುತ್ತಿದ್ದೇವೆ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಶ್ಮಿ ಅವರು 20 ದಿನಗಳಿಂದ ತೀವ್ರ ಜ್ವರದಿಂದ ಬಳಲುತ್ತಿದ್ದು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಕಾರ್ಯಪಡೆ ರಚಿಸಲು ಸಿದ್ದರಾಮಯ್ಯ ಸೂಚನೆ

ಬೆಂಗಳೂರು: 'ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಹೆಚ್ಚುತ್ತಿದ್ದು, ನಿಯಂತ್ರಿಸಲು ಜಿಲ್ಲಾ ಮಟ್ಟದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಕಾರ್ಯಪಡೆ ರಚಿಸಬೇಕು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

'ಪ್ರತಿ ಜಿಲ್ಲಾಸ್ಪತ್ರೆಯಲ್ಲಿ ಡೆಂಗಿ ಜ್ವರ ಚಿಕಿತ್ಸೆಗೆ ವಿಶೇಷ ವಾರ್ಡ್ ಸಜ್ಜುಗೊಳಿಸಬೇಕು. ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ವೈದ್ಯಾಧಿಕಾರಿ ಪ್ರತಿ ದಿನ ಸಮನ್ವಯದಿಂದ ಸಭೆ ನಡೆಸಿ ಡೆಂಗಿ ಹರಡದಂತೆ ಕ್ರಮ ತೆಗೆದುಕೊಳ್ಳಬೇಕು' ಎಂದು ಅವರು ಸೂಚನೆ ನೀಡಿದರು.

'ವೈದ್ಯಕೀಯ ಕಾಲೇಜುಗಳಲ್ಲಿಯೂ ಡೆಂಗಿ ಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸಬೇಕು. ಡೆಂಗಿ ಪತ್ತೆಗೆ ತಪಾಸಣೆ ಹೆಚ್ಚಿಸಬೇಕು. ಡೆಂಗಿ ಪಾಸಿಟಿವ್ ಇರುವ ವ್ಯಕ್ತಿಗಳ ಆರೋಗ್ಯ ಸ್ಥಿತಿಯ ಮೇಲೆ ನಿಗಾ ಇರಿಸಬೇಕು. ಮಳೆಗಾಲ ಮುಗಿಯುವ ತನಕ ಅಧಿಕಾರಿಗಳು ಪ್ರತಿದಿನ ಪರಿಶೀಲನೆ ನಡೆಸಬೇಕು. ಒಂದೂ ಸಾವು ಆಗದಂತೆ ಕ್ರಮವಹಿಸಬೇಕು. ಯಾವುದೇ ರೀತಿಯ ಉದಾಸೀನ ಪ್ರವೃತ್ತಿಯನ್ನು ಸಹಿಸುವುದಿಲ್ಲ' ಎಂದು ಎಚ್ಚರಿಕೆ ನೀಡಿದರು.

ರಾಜ್ಯಕ್ಕೆ ಮತ್ತೆ 3 ವೈದ್ಯ ಕಾಲೇಜು

ಬೆಂಗಳೂರು: ರಾಜ್ಯದಲ್ಲಿ ಮತ್ತೆ 3 ಹೊಸ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಅನುಮತಿ ನೀಡಿದ್ದು, ಕಾಲೇಜುಗಳ ಸಂಖ್ಯೆ 73ಕ್ಕೇರಿದೆ.

ಬೆಂಗಳೂರಿನ ಬಿಜಿಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಎಲೆಕ್ಟ್ರಾನಿಕ್ ಸಿಟಿಯ ಪಿಇಎಸ್ ವಿಶ್ವ ವಿದ್ಯಾನಿಲಯ ಮತ್ತು ಬಾಗಲಕೋಟೆ ಎಸ್‌ಆರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಿಗೆ ಮಾನ್ಯತೆ ದೊರೆತಿದ್ದು, ಈ ಮೂರೂ ವೈದ್ಯಕೀಯ ಕಾಲೇಜುಗಳು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಆರಂಭವಾಗಲಿವೆ.

ಬಿಜಿಎಸ್‌ಗೆ 150, ಪಿಇಎಸ್‌ಗೆ ಹಾಗೂ ಬಾಗಲಕೋಟೆ ಎಸ್‌ಆರ್ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಿಗೆ ತಲಾ 100 ವೈದ್ಯಕೀಯ ಸೀಟುಗಳು ಲಭ್ಯವಾಗಲಿವೆ. ಪ್ರಸ್ತುತ ರಾಜ್ಯದಲ್ಲಿ 11,745 ವೈದ್ಯಕೀಯ ಸೀಟುಗಳು ಲಭ್ಯವಿದ್ದವು. 2024-25ನೇ ಸಾಲಿನ ಶೈಕ್ಷಣಿಕ ವರ್ಷದಿಂದ ವೈದ್ಯಕೀಯ ಸೀಟುಗಳ ಸಂಖ್ಯೆ 12,095 ಇರುತ್ತದೆ.

ಬಂಧಮುಕ್ತವಾದ ಸಂಭ್ರಮದಲ್ಲಿ ಮನೆಯತ್ತ ಹೆಜ್ಜೆ...

ಸನ್ನಡತೆ: 77 ಕೈದಿಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಸನ್ನಡತೆ ಆಧಾರದಲ್ಲಿ ಬಿಡುಗಡೆಯಾದ ಕೈದಿಯೊಬ್ಬರಿಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ಪ್ರಮಾಣ ಪತ್ರ ವಿತರಿಸಿದರು. ಕಾರಾಗೃಹ ಮತ್ತು ಸುಧಾರಣಾ ಇಲಾಖೆ ಮಹಾನಿರ್ದೇಶಕಿ ಮಾಲಿನಿ ಕೃಷ್ಣಮೂರ್ತಿ, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಇದ್ದರು

ಬೆಂಗಳೂರು: ರಾಜ್ಯದ ಏಳು ಕೇಂದ್ರ ಕಾರಾಗೃಹಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದ 77 ಕೈದಿಗಳಿಗೆ ಮಂಗಳವಾರ ಬಿಡುಗಡೆ ಭಾಗ್ಯ ಸಿಕ್ಕಿತು.

ರಾಜ್ಯದ ವಿವಿಧ ಜೈಲುಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಕೈದಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದರು. ಆ ಬಳಿಕ ಗೃಹ ಇಲಾಖೆ ಆದೇಶ ಹೊರಡಿಸಿತ್ತು. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದಲೂ 34 ಕೈದಿಗಳು ಬಿಡುಗಡೆಯಾದರು.

ಗೃಹ ಸಚಿವ ಜಿ.ಪರಮೇಶ್ವರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ, ಬಂಧನದಿಂದ ಬಿಡುಗಡೆಯಾದ ಕೈದಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಇದೇ ವೇಳೆ ಮೈಸೂರು ಕೇಂದ್ರ ಕಾರಾಗೃಹದಿಂದ ಏಳು, ಬೆಳಗಾವಿ ಜೈಲಿನಿಂದ ಐದು, ಕಲಬುರಗಿ ಕಾರಾಗೃಹದಿಂದ ಒಂಬತ್ತು, ವಿಜಯಪುರ ಜೈಲಿನಿಂದ ಆರು, ಬಳ್ಳಾರಿ ಕೇಂದ್ರ ಕಾರಾಗೃಹದಿಂದ 10, ಧಾರವಾಡ ಜೈಲಿನಿಂದ ಆರು ಕೈದಿಗಳು ಬಿಡುಗಡೆಯಾದರು.

ಕೆಲವರನ್ನು ಕರೆದೊಯ್ಯಲು ಕುಟುಂಬಸ್ಥರು ಜೈಲಿನ ಬಳಿಗೆ ಬಂದಿದ್ದರು. ಬಿಡುಗಡೆಯಾದವರನ್ನು ಸಂಭ್ರಮದಿಂದ ಸ್ವಾಗತಿಸಿ ಮನೆಗೆ ಕರೆದೊಯ್ದರು. 'ಇನ್ನು ಮುಂದೆ ಈ ರೀತಿಯ ಪ್ರಮಾದ ಎಸಗುವುದಿಲ್ಲ ಎಂಬುದಾಗಿ ಪತ್ರಕ್ಕೆ ಸಹಿ ಹಾಕಿಸಿಕೊಂಡು ಎಲ್ಲರನ್ನೂ ಕಳುಹಿಸಲಾಯಿತು' ಎಂದು ಜೈಲಾಧಿಕಾರಿಯೊಬ್ಬರು ತಿಳಿಸಿದರು.

'ಪುನರ್ಜನ್ಮ ಸಿಕ್ಕಿದೆ...': '15 ವರ್ಷ ಜೈಲುವಾಸ ಅನುಭವಿಸಿದ್ದೇನೆ. ಆಕಸ್ಮಿಕ ಘಟನೆಯಿಂದ ಜೈಲಿಗೆ ಬರಬೇಕಾಯಿತು. ನನ್ನ ಪುತ್ರಿಯ ಉನ್ನತ ವ್ಯಾಸಂಗದ ಗುರಿ ಸಾಧಿಸಲು ಆಗಲಿಲ್ಲ. ಜೈಲಿನಲ್ಲಿದ್ದುಕೊಂಡು ಬಿ.ಎ ಪದವಿ ಪೂರ್ಣಗೊಳಿಸಿದ್ದೇನೆ. ಈ ದಿನ ನನಗೆ ಪುನರ್ಜನ್ಮ ಸಿಕ್ಕಿದೆ' ಎಂದು ಬಂಧಮುಕ್ತರಾದ ದಾನೇಶ್ ಹರ್ಷ ವ್ಯಕ್ತಪಡಿಸಿದರು.

'ದರ್ಶನ್‌ಗೆ ವಿಶೇಷ ಸೌಲಭ್ಯವಿಲ್ಲ'

'ಕೊಲೆ ಆರೋಪಿ ದರ್ಶನ್ ಅವರಿಗೆ ಜೈಲಿನಲ್ಲಿ ವಿಶೇಷ ಆತಿಥ್ಯ ನೀಡುತ್ತಿಲ್ಲ. ಇತರ ಕೈದಿಗಳಿಗೆ ಯಾವ ಸೌಲಭ್ಯವಿದೆಯೊ ಅದನ್ನೇ ದರ್ಶನ್ ಅವರಿಗೂ ನೀಡಲಾಗುತ್ತಿದೆ. ಬಿರಿಯಾನಿ ಕೊಟ್ಟರು ಎಂದು ಕೆಲವರು ಆರೋಪಿಸಿದ್ದಾರೆ. ಅಂತಹ ಯಾವುದೇ ಘಟನೆ ನಡೆದಿಲ್ಲ' ಎಂದು ಸಚಿವ ಪರಮೇಶ್ವರ ಹೇಳಿದರು.

'ಜೈಲಿನಲ್ಲಿ ಅತ್ಯಾಧುನಿಕ ವ್ಯವಸ್ಥೆಯುಳ್ಳ ಜಾಮರ್ ಹಾಕಿರುವುದರಿಂದ ಸುಮಾರು 800 ಮೀಟರ್ ವ್ಯಾಪ್ತಿಯವರೆಗೂ ಕಾರ್ಯನಿರ್ವಹಿಸುತ್ತದೆ. ಇದರಿಂದ ಜೈಲಿನ ಸುತ್ತಮುತ್ತಲ ನಿವಾಸಿಗಳಿಗೆ ನೆಟ್‌ವರ್ಕ್ ಸಿಗುತ್ತಿರಲಿಲ್ಲ. ಜಾಮರ್ ಕಾರ್ಯನಿರ್ವಹಣೆ ವ್ಯಾಪ್ತಿಯನ್ನು 100 ಮೀಟರ್‌ಗೆ ಇಳಿಸಲಾಗಿದೆ. ಜಾಮರ್‌ಗಳನ್ನು ತೆಗೆಯುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

> **ಇಂದಿನಿಂದ ಹೊಸ ಅಧ್ಯಾಯ ಆರಂಭವಾಗಿದೆ. ಆಹಾರ ಮತ್ತು ಸ್ವಾತಂತ್ರ್ಯದ ಮಹತ್ವ ಏನೆಂಬುದು ಜೈಲು ವಾಸದಲ್ಲಿ ಗೊತ್ತಾಗಿದೆ**
>
> **ಸತೀಶ್ ಆಚಾರ್ಯ,** ಬಿಡುಗಡೆಯಾದವರು

ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಸಚಿವ ಪರಮೇಶ್ವರ ಅವರು, 'ಪರಿವರ್ತನೆ ತಂದುಕೊಂಡರೆ ಸಮಾಜದಲ್ಲಿ ಬದುಕಲು ಮತ್ತೊಂದು ಅವಕಾಶ ಸಿಗುತ್ತದೆ. ಯಾವುದೇ ಕಾರಣಕ್ಕೂ ಮತ್ತೆ ತಪ್ಪು ಮಾಡಲು ಹೋಗಬೇಡಿ. ಜೀವನದ ಉಳಿದ ಅವಧಿಯನ್ನು ಕುಟುಂಬದವರ ಜತೆಗೆ ಉತ್ತಮ ರೀತಿಯಲ್ಲಿ ಕಳೆಯಿರಿ' ಎಂದು ಕಿವಿಮಾತು ಹೇಳಿದರು.

'ರಾಜ್ಯದ 54 ಕಾರಾಗೃಹಗಳಲ್ಲಿ 15 ಸಾವಿರಕ್ಕೂ ಹೆಚ್ಚು ಮಂದಿ ಇದ್ದಾರೆ. ಎಲ್ಲರನ್ನೂ ಸುರಕ್ಷಿತವಾಗಿಡಬೇಕು. ಕೌಶಲ ತರಬೇತಿ, ಶಿಕ್ಷಣದ ಮೂಲಕ ಅವರನ್ನು ಸುಧಾರಿಸಿ ಪರಿವರ್ತನೆ ತರುವ ಜವಾಬ್ದಾರಿ ಇಲಾಖೆಯ ಮೇಲಿದೆ. ಕಾರಾಗೃಹ ಮತ್ತು ಸುಧಾರಣಾ ಇಲಾಖೆ ಅನೇಕ ಪ್ರಸ್ತಾವಗಳನ್ನು ಸಲ್ಲಿಸಿದ್ದು ಸುಧಾರಣೆಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಕೆ-ಸೆಟ್: ನಾಳೆಯಿಂದ ದಾಖಲೆಗಳ ಪರಿಶೀಲನೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷಾ (ಕೆ-ಸೆಟ್) ಫಲಿತಾಂಶದ ತಾತ್ಕಾಲಿಕ ಪಟ್ಟಿಯಲ್ಲಿರುವ ಅರ್ಹ ಅಭ್ಯರ್ಥಿಗಳ ದಾಖಲಾತಿ ಪರಿಶೀಲನಾ ಕಾರ್ಯ ಜುಲೈ 11ರಿಂದ 22ರವರೆಗೆ ನಡೆಯಲಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಕ್ರಮ ಸಂಖ್ಯೆ ಆಧಾರಿತ ವೇಳಾಪಟ್ಟಿಯಂತೆ ಮಲ್ಲೇಶ್ವರದಲ್ಲಿರುವ ಕೆಇಎ ಕಚೇರಿಗೆ ನಿಗದಿತ ದಿನ ಹಾಗೂ ಸಮಯಕ್ಕೆ ಅನುಗುಣವಾಗಿ ಅಭ್ಯರ್ಥಿಗಳು ಹಾಜರಾಗಬೇಕು. ಮೂಲ ದಾಖಲೆ ತರಬೇಕು, ಸೂಚನೆಗಳನ್ನು ಪಾಲಿಸಬೇಕು ಎಂದು ಕೆಇಎ ಹೇಳಿದೆ.

ಇದೇ ಜ.13ರಂದು ಕೆ–ಸೆಟ್ ಪರೀಕ್ಷೆ ನಡೆದಿತ್ತು.

ಬಿಟ್ ಕಾಯಿನ್ ಕೈದಿ ಹೇಳಿಕೆ ದಾಖಲು

ಬೆಳಗಾವಿ: ಬಿಟ್ ಕಾಯಿನ್ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರನ ಹೇಳಿಕೆ ಪಡೆಯಲು, ಎಸ್‌ಐಟಿ ತಂಡವು ಇಲ್ಲಿನ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿತು ಎಂದು ಮೂಲಗಳು ಖಚಿತಪಡಿಸಿವೆ.

ಹಗರಣದಲ್ಲಿ ಬಂಧಿಖಾನೆ ಇಲಾಖೆ ಡಿಐಜಿ ಟಿ.ಪಿ.ಶೇಷ ಭಾಗಿಯಾದ ಬಗ್ಗೆ ನಾಗೇಂದ್ರ ಅಲಿಯಾಸ್ ನಾಗ ಎಂಬ ಕೈದಿ ಜೂನ್ 26ರಂದು ದೂರು ನೀಡಿದ್ದ. ಆತ ಈಗ ಹಿಂಡಲಗಾ ಜೈಲಿನಲ್ಲಿದ್ದಾನೆ.

ಸಲಿಂಗ ವಿವಾಹಕ್ಕೆ ಮಾನ್ಯತೆ: ಬಹಿರಂಗ ವಿಚಾರಣೆಗೆ ನಕಾರ

ನವದೆಹಲಿ (ಪಿಟಿಐ): ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲು ನಿರಾಕರಿಸಿ ನೀಡಿದ್ದ ತೀರ್ಪಿನ ಮರುಪರಿಶೀಲನೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಬಹಿರಂಗ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ಅಸಮ್ಮತಿ ಸೂಚಿಸಿದೆ.

ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲು ನಿರಾಕರಿಸಿ ಸುಪ್ರೀಂ ಕೋರ್ಟ್ ಕಳೆದ ವರ್ಷ ಅಕ್ಟೋಬರ್ 17ರಂದು ತೀರ್ಪು ನೀಡಿತ್ತು. ಆ ತೀರ್ಪಿನ ಮರುಪರಿಶೀಲನೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಬುಧವಾರ (ಜುಲೈ 10) ಪರಿಶೀಲಿಸಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಹಿಮಾ ಕೊಹ್ಲಿ, ಬಿ.ವಿ.ನಾಗರತ್ನಾ ಹಾಗೂ ಪಿ.ಎಸ್.ನರಸಿಂಹ ಅವರನ್ನೊಳಗೊಂಡ ಐವರು ಸದಸ್ಯರ ಪೀಠವು ಅರ್ಜಿಗಳನ್ನು ಪರಿಶೀಲಿಸಲಿದೆ.

ಹಿರಿಯ ವಕೀಲರಾದ ಅಭಿಷೇಕ್ ಸಿಂಘ್ವಿ ಮತ್ತು ಎನ್.ಕೆ.ಕೌಲ್ ಅವರು ಮಂಗಳವಾರ 'ಈ ಅರ್ಜಿಗಳ ವಿಚಾರಣೆಯನ್ನು ಬಹಿರಂಗವಾಗಿ ನಡೆಸಬಹುದು ಎಂದು ನಾವು ಹೇಳುತ್ತೇವೆ' ಎಂಬುದಾಗಿ ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.

'ಸಂವಿಧಾನ ಪೀಠವು ಪರಿಶೀಲಿಸುವಂತಹ ಅರ್ಜಿಗಳು ಇದಾಗಿರುವ ಕಾರಣ ಕೊಠಡಿಯಲ್ಲೇ ಪರಿಶೀಲನೆ ನಡೆಯಲಿದೆ' ಎಂದು ಸಿಜೆಐ ಚಂದ್ರಚೂಡ್ ಅವರು ತಿಳಿಸಿದರು.

ಸುಪ್ರೀಂ ಕೋರ್ಟ್‌ನ ನಿಯಮಗಳ ಪ್ರಕಾರ, ತೀರ್ಪಿನ ಪುನರ್ ಪರಿಶೀಲನಾ ಅರ್ಜಿಯನ್ನು ಸಂಬಂಧಪಟ್ಟ ನ್ಯಾಯಮೂರ್ತಿಗಳು ತಮ್ಮ ಕೊಠಡಿಯಲ್ಲಿಯೇ ಪರಿಶೀಲಿಸುತ್ತಾರೆ.

ಹಾಥರಸ್ ಕಾಲ್ತುಳಿತ: ಎಸ್‌ಐಟಿ ವರದಿ ಸಲ್ಲಿಕೆ • ಪಿತೂರಿ ಇರುವ ಕುರಿತು ಉಲ್ಲೇಖ

ವರದಿಯಲ್ಲಿ ಬಾಬಾ ಹೆಸರೇ ಇಲ್ಲ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ/ನವದೆಹಲಿ: ಹಾಥರಸ್‌ನಲ್ಲಿ ನಡೆದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಉತ್ತರ ಪ್ರದೇಶ ಸರ್ಕಾರಕ್ಕೆ ವರದಿ ನೀಡಿದ್ದು, ಸ್ವಯಂ ಘೋಷಿತ ದೇವಮಾನವ ಭೋಲೆ ಬಾಬಾ ಹೆಸರನ್ನು ಎಲ್ಲಿಯೂ ಉಲ್ಲೇಖಿಸಿಲ್ಲ. ಆದರೆ, ಸತ್ಸಂಗ ಆಯೋಜಕರನ್ನು ದೂರಲಾಗಿದೆ. ಜೊತೆಗೆ ದುರಂತ ನಡೆಯುವಲ್ಲಿ ಯಾವುದೋ ಪಿತೂರಿ ಇರುವುದಾಗಿ ಕಂಡು ಬರುತ್ತಿದೆ ಎಂದೂ ಹೇಳಲಾಗಿದೆ.

ಎಸ್‌ಐಟಿ ಮಂಗಳವಾರ ನೀಡಿರುವ ವರದಿಯಲ್ಲಿ, ಯಾರ ಸತ್ಸಂಗದಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರೋ, ಅವರ ಹೆಸರನ್ನೇ ಪ್ರಸ್ತಾಪಿಸಿಲ್ಲ ಹಾಗೂ ಅವರ ತಪ್ಪುಗಳ ಬಗ್ಗೆಯೂ ಪ್ರಸ್ತಾಪವಿಲ್ಲ. ಭೋಲೆ ಬಾಬಾ ಅವರು ತಮ್ಮ ಪ್ರವಚನ ಮುಗಿಸಿ ಹೊರಡುವ ವೇಳೆ, ಅವರ ಪಾದವನ್ನು ಮುಟ್ಟಲು ಭಕ್ತರು ಮುಗಿಬಿದ್ದಿದ್ದರು. ಈ ವೇಳೆ ನಡೆದ ದುರಂತದಲ್ಲಿ 121 ಜನರು ಮೃತಪಟ್ಟಿದ್ದರು.

'ಉಪವಿಭಾಗೀಯ ಮ್ಯಾಜಿಸ್ಟ್ರೇಟರ್, ಸರ್ಕಲ್ ಇನ್‌ಸ್ಪೆಕ್ಟರ್, ತಹಶೀಲ್ದಾರ್, ಕಂದಾಯ ನಿರೀಕ್ಷಕ ಹಾಗೂ ಹೊರ ಠಾಣೆ ಉಸ್ತುವಾರಿ ಈ ದುರಂತ ಸಂಭವಿಸುವುದಕ್ಕೆ ಕಾರಣರಾಗಿದ್ದಾರೆ. ಇವರು ತಮ್ಮ ಕರ್ತವ್ಯವನ್ನು ಸೂಕ್ತವಾಗಿ ನಿರ್ವಹಿಸಿಲ್ಲ' ಎಂದು ವರದಿಯಲ್ಲಿ ಹೇಳಲಾಗಿದ್ದು, ಇದರ ಆಧಾರದಲ್ಲಿ ಆರು ಮಂದಿಯನ್ನು ಅಮಾನತು ಮಾಡಲಾಗಿದೆ.

ವರದಿಯು 850 ಪುಟಗಳಷ್ಟಿದೆ. ಸತ್ಸಂಗ ಕಾರ್ಯಕ್ರಮ ನಡೆಸಲು ಅನುಮತಿ ಪಡೆಯುವ ವೇಳೆ ಆಯೋಜಕರು, ಕಾರ್ಯಕ್ರಮಕ್ಕೆ ಎಷ್ಟು ಮಂದಿ ಬರಲಿದ್ದಾರೆ ಎನ್ನುವುದನ್ನು ಅಧಿಕಾರಿಗಳಿಗೆ ತಿಳಿಸಿರಲಿಲ್ಲ. ಜೊತೆಗೆ, 'ಕಾರ್ಯಕ್ರಮಕ್ಕೆ ಅನುಮತಿ ನೀಡುವಾಗ ಅಧಿಕಾರಿಗಳು ವಿಧಿಸಿದ್ದ ಷರತ್ತುಗಳನ್ನೂ ಪಾಲಿಸಿಲ್ಲ. ದೊಡ್ಡ ಸಂಖ್ಯೆಯಲ್ಲಿ ಭಕ್ತರನ್ನು ಸತ್ಸಂಗಕ್ಕೆ ಆಹ್ವಾನಿಸಲಾಗಿತ್ತು. ಆದರೆ, ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿಕೊಂಡಿರಲಿಲ್ಲ' ಎಂದು ವರದಿಯಲ್ಲಿ ಹೇಳಲಾಗಿದೆ.

ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಪರಿಶೀಲನೆ ನಡೆಸಲು ಬಂದ ಪೊಲೀಸರನ್ನು ತಡೆಯಲಾಗಿತ್ತು ಎಂದೂ ಹೇಳಲಾಗಿದೆ. 'ಬ್ಯಾರಿಕೇಡ್ ಹಾಕಿರಲಿಲ್ಲ. ಘಟನಾ ಸ್ಥಳದಲ್ಲಿ ಜನರ ಸುಗಮ ಸಂಚಾರಕ್ಕಾಗಿ ಯಾವುದೇ ಮಾರ್ಗಗಳನ್ನು ಸೂಚಿಸಿರಲಿಲ್ಲ. ಘಟನೆ ನಡೆಯುತ್ತಿದ್ದಂತೆಯೇ ಆಯೋಜಕರು ಘಟನಾ ಸ್ಥಳದಿಂದ ಓಡಿ ಹೋಗಿದ್ದಾರೆ' ಎಂದು ವರದಿಯಲ್ಲಿ ಹೇಳಲಾಗಿದೆ.

ಸ್ಥಳೀಯ ಆಡಳಿತವು ಕಾರ್ಯಕ್ರಮವನ್ನು ಗಂಭೀರವಾಗಿಯೇ ಪರಿಗಣಿಸಲಿಲ್ಲ ಮತ್ತು ಸತ್ಸಂಗಕ್ಕೆ ಎಷ್ಟು ಜನರು ಆಗಮಿಸಬಹುದು ಎಂದು ಅಂದಾಜು ಮಾಡುವಲ್ಲಿಯೂ ಆಡಳಿತ ಸೋತಿದೆ. 'ಕಾರ್ಯಕ್ರಮ ನಡೆಯುವ ಸ್ಥಳವನ್ನೇ ಪರಿಶೀಲಿಸದೆ, ಕಾರ್ಯಕ್ರಮಕ್ಕೆ ಅನುಮತಿ ನೀಡಲಾಗಿತ್ತು' ಎಂಬ ಮಾಹಿತಿ ವರದಿಯಲ್ಲಿದೆ.

'ಪಿತೂರಿ ಕಾರಣ': ಈ ಮಧ್ಯೆ, ದುರಂತ ಸಂಭವಿಸಲು ಯಾವುದೋ ಪಿತೂರಿ ಕಾರಣ ಇರಬಹುದು ಎಂಬುದಾಗಿಯೂ ಉಲ್ಲೇಖಿಸಲಾಗಿದೆ. ಆದ್ದರಿಂದ, ಪಿತೂರಿ ಕುರಿತು ಸಂಪೂರ್ಣ ತನಿಖೆಯಾಗಬೇಕು ಎಂದು ವರದಿ ಹೇಳಿದೆ.

ಬಾಬಾ ಅವರ ಪಾದವನ್ನು ಮುಟ್ಟಲು ನೂಕುನುಗ್ಗಲು ಆಗಿದ್ದಕ್ಕಾಗಿಯೇ ದುರಂತ ಸಂಭವಿಸಿದೆ ಎನ್ನುವ ಆರೋಪವನ್ನು ಬಾಬಾ ಅವರ ವಕೀಲ ಎ.ಪಿ. ಸಿಂಗ್ ಅವರು ತಳ್ಳಿಹಾಕಿದ್ದಾರೆ. 'ಬಾಬಾ ಅವರು ಎಂದಿಗೂ ಭಕ್ತರಿಗೆ ತಮ್ಮ ಪಾದ ಮುಟ್ಟುವುದಕ್ಕೆ ಅನುಮತಿಯನ್ನೇ ನೀಡುತ್ತಿರಲಿಲ್ಲ. ಕೆಲವು ಪುಂಡರು ಸತ್ಸಂಗ ನಡೆಯುವಾಗ ಯಾವುದೋ ವಿಷಕಾರಿ ದ್ರವವನ್ನು ಸಿಂಪಡಿಸಿದ್ದಾರೆ. ಇದರಿಂದಲೇ ಕಾಲ್ತುಳಿತ ಸಂಭವಿಸಿದೆ' ಎಂದು ದೂರಿದ್ದಾರೆ.

128 ಪ್ರತ್ಯಕ್ಷದರ್ಶಿಗಳ ಹೇಳಿಕೆಗಳನ್ನು ಪಡೆದುಕೊಂಡು ಈ ತೀರ್ಮಾನಕ್ಕೆ ಬರಲಾಗಿದೆ ಎಂದು ಕೆಲವು ಮೂಲಗಳು ಹೇಳಿವೆ. ಎಸ್‌ಐಟಿ ವರದಿಯು ಇನ್ನುವರೆಗೂ ಬಹಿರಂಗಗೊಂಡಿಲ್ಲ. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅನುಪಮ್ ಕುಲಶ್ರೇಷ್ಠಾ ಮತ್ತು ಅಲಿಗಢ ವಿಭಾಗೀಯ ಆಯುಕ್ತೆ ಚೈತ್ರಾ ವಿ. ಅವರು ಎಸ್‌ಐಟಿ ತಂಡದಲ್ಲಿ ಇದ್ದರು.

ಮೂಲಗಳ ಪ್ರಕಾರ, ಎಸ್‌ಐಟಿ ವರದಿಯನ್ನು ನ್ಯಾಯಾಂಗ ತನಿಖೆ ನಡೆಸುತ್ತಿರುವ ತಂಡಕ್ಕೆ ನೀಡಲಾಗುತ್ತದೆ. ನ್ಯಾಯಾಂಗ ತನಿಖೆ ನಡೆಸುತ್ತಿರುವ ತಂಡದಲ್ಲಿ ಅಲಹಾಬಾದ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್ ಶ್ರೀವಾಸ್ತವ್ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿ ಹೇಮಂತ್ ರಾವ್ ಇದ್ದಾರೆ.

'ಸತ್ಸಂಗ ಆಯೋಜಕರೇ ಈ ದುರಂತಕ್ಕೆ ಕಾರಣ. 80 ಸಾವಿರ ಜನರಿಗೆ ಅನುಮತಿ ನೀಡಲಾಗಿತ್ತು. ಆದರೆ, 2.5 ಲಕ್ಷ ಜನರು ಕಾರ್ಯಕ್ರಮಕ್ಕೆ ಬಂದಿದ್ದರು' ಎಂದು ಪೊಲೀಸರು ಈ ಹಿಂದೆ ದೂರಿದ್ದರು. ಇಲ್ಲಿಯವರೆಗೆ ಪ್ರಕರಣ ಸಂಬಂಧ 9 ಮಂದಿಯನ್ನು ಬಂಧಿಸಲಾಗಿದೆ.

'ಕಾರ್ಯಕ್ರಮಗಳಲ್ಲಿ ಜನರು ಪಾಲ್ಗೊಳ್ಳುವ ನಿರ್ದಿಷ್ಟ ಸಂಖ್ಯೆಯನ್ನು ಮರೆಮಾಚಿ, ಕಾರ್ಯಕ್ರಮ ಆಯೋಜನೆಗೆ ಅನುಮತಿ ಪಡೆದುಕೊಂಡಿರುವುದು ಇದೇ ಮೊದಲೇನಲ್ಲ. ಕೋವಿಡ್ ಕಾಲದಲ್ಲಿ, ಅಂದರೆ 2022ರಲ್ಲಿ ರ‍್ಯಾಲಿ ನಡೆಸಲು ಭೋಲೆ ಬಾಬಾ ಅವರು ಅನುಮತಿ ಪಡೆದುಕೊಂಡಿದ್ದರು. 50 ಜನ ಸೇರುವುದಾಗಿ ಹೇಳಿದ್ದರು. ಆದರೆ, ಆ ರ‍್ಯಾಲಿಯಲ್ಲಿ 50 ಸಾವಿರ ಮಂದಿ ಪಾಲ್ಗೊಂಡಿದ್ದರು' ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ವಿಚಾರಣೆಗೆ ದಿನಾಂಕ ನಿಗದಿಯಾಗಿದೆ'

'ಹಾಥರಸ್ ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿ ಸಲ್ಲಿಸಲಾಗಿರುವ ಪಿಐಎಲ್ ಸಂಬಂಧ ತುರ್ತು ವಿಚಾರಣೆ ನಡೆಸಿ' ಎಂದು ಅರ್ಜಿದಾರ, ವಕೀಲ ವಿಶಾಲ್ ತಿವಾರಿ ಅವರು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು, 'ವಿಚಾರಣೆ ದಿನಾಂಕವನ್ನು ನಿಗದಿ ಮಾಡಿ ಸೋಮವಾರವೇ ಆದೇಶ ನೀಡಿದ್ದೇನೆ' ಎಂದು ಹೇಳಿದರು. ಆದರೆ, ಯಾವ ದಿನಾಂಕದಲ್ಲಿ ವಿಚಾರಣೆ ನಡೆಯಲಿದೆ ಎಂದು ಸ್ಪಷ್ಟಪಡಿಸಲಿಲ್ಲ. 'ಶೀಘ್ರದಲ್ಲಿಯೇ ವಿಚಾರಣೆ ನಡೆಯಲಿದೆ' ಎಂದಷ್ಟೇ ಹೇಳಿದರು.

'ಸುಪ್ರೀಂ ಕೋರ್ಟ್‌ನ ಐವರು ನಿವೃತ್ತ ನ್ಯಾಯಮೂರ್ತಿಗಳನ್ನು ಒಳಗೊಂಡ ತಜ್ಞರ ಸಮಿತಿಯನ್ನು ರಚಿಸಬೇಕು. ಜೊತೆಗೆ, ಜುಲೈ 2ರಂದು ನಡೆದ ದುರಂತದ ಕುರಿತು ವಸ್ತುಸ್ಥಿತಿ ವರದಿ ನೀಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚಿಸಬೇಕು. ನಿರ್ಲಕ್ಷ್ಯದಿಂದ ಕಾರ್ಯನಿರ್ವಹಿಸಿದ ಅಧಿಕಾರಿಗಳು ಹಾಗೂ ಸಂಬಂಧಿತರ ಮೇಲೆ ಕಾನೂನುಕ್ರಮ ಕೈಗೊಳ್ಳಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

'ಸಾರ್ವಜನಿಕ ಸ್ಥಳಗಳಲ್ಲಿ ಇಂಥ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವಾಗ ಯಾವೆಲ್ಲ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದರ ಕುರಿತು ತಜ್ಞರ ಸಮಿತಿಯು ಶಿಫಾರಸು ಮಾಡಬೇಕು' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ವರದಿಯಲ್ಲಿನ ಇತರ ಮುಖ್ಯಾಂಶಗಳು

- ಅಗತ್ಯವಾದ ಪೊಲೀಸ್ ಪರಿಶೀಲನೆ ಇಲ್ಲದೆಯೇ, ಕೆಲವು ಸ್ವಯಂ ಸೇವಕರನ್ನು ಆಯೋಜನೆಗೆ ನಿಯುಕ್ತಿಗೊಳಿಸಲಾಗಿತ್ತು
- ಸ್ಥಳ ಪರಿಶೀಲನೆಗೆ ಬಂದ ಪೊಲೀಸರೊಂದಿಗೆ ಆಯೋಜಕರು ಅನುಚಿತವಾಗಿ ವರ್ತಿಸಿದ್ದಾರೆ
- ಯಾವುದೇ ಭದ್ರತಾ ವ್ಯವಸ್ಥೆ ಇಲ್ಲದೆ, ಭೋಲೆ ಬಾಬಾ ಅವರು ಲಕ್ಷಾಂತರ ಸಂಖ್ಯೆಯಲ್ಲಿದ್ದ ಜನರ ಮಧ್ಯೆ ಬಂದಿದ್ದಾರೆ

ಸುದ್ದಿ 2 ನಿಮಿಷ

ಚುಂಬನ ವಿವಾದ: ದಲೈಲಾಮ ವಿರುದ್ಧದ ಅರ್ಜಿ ವಜಾ

ನವದೆಹಲಿ (ಪಿಟಿಐ): ಟಿಬೆಟನ್ ಧರ್ಮಗುರು ದಲೈಲಾಮ ಅವರು ಬಾಲಕನೊಬ್ಬನಿಗೆ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿ ಹೈಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ದಲೈಲಾಮ ಅವರು ಬಾಲಕನ ತುಟಿ ಚುಂಬಿಸಿ, ತಮ್ಮ ನಾಲಿಗೆ ಚೀಪುವಂತೆ ಹೇಳುವ ವಿಡಿಯೊ ಕಳೆದ ವರ್ಷ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ ವಿವಾದಕ್ಕೆ ಕಾರಣವಾಗಿತ್ತು.

ದಲೈಲಾಮ ವಿರುದ್ಧ ಪೋಕ್ಸೊ ಅಡಿ ಪ್ರಕರಣ ದಾಖಲಿಸಿಕೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ಕೋರಿ 'ಕಾನ್ಫಡರೇಷನ್ ಆಫ್ ಎನ್‌ಜಿಒ' ಅರ್ಜಿಯಲ್ಲಿ ಮನವಿ ಮಾಡಿತ್ತು.

ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ನೇತೃತ್ವದ ಪೀಠವು 'ಘಟನೆಯು ಪೂರ್ವಯೋಜಿತ' ಅಲ್ಲ ಎಂದಿತಲ್ಲದೆ, ಅರ್ಜಿಯನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಹೇಳಿತು.

'ನ್ಯಾಯಾಲಯವು ವಿಡಿಯೊವನ್ನು ನೋಡಿದ್ದು, ಆ ಘಟನೆಯು ಸಾರ್ವಜನಿಕ ವೇದಿಕೆಯಲ್ಲಿ ನಡೆದಿದೆ ಎಂಬುದನ್ನು ಕಂಡುಕೊಂಡಿದೆ. ಬಾಲಕನು ಪ್ರತಿವಾದಿ ನಂ.4ನ್ನು (ದಲೈಲಾಮ) ಭೇಟಿಯಾಗಿ ಅಪ್ಪಿಕೊಳ್ಳುವ ಬಯಕೆಯನ್ನು ವ್ಯಕ್ತಪಡಿಸಿದ್ದ ಎಂಬುದನ್ನೂ ನ್ಯಾಯಾಲಯ ಗಮನಿಸಿದೆ' ಎಂದು ಹೈಕೋರ್ಟ್ ತಿಳಿಸಿತು.

'ದಲೈಲಾಮ ಅವರು ತಮಾಷೆ ಮತ್ತು ಹಾಸ್ಯ ಮಾಡುವ ಉದ್ದೇಶದಿಂದ ಬಾಲಕನ ಜತೆ ಆ ರೀತಿ ವರ್ತಿಸಿರುವುದು ವಿಡಿಯೊವನ್ನು ನೋಡುವಾಗ ಸ್ಪಷ್ಟವಾಗುತ್ತದೆ. ಟಿಬೆಟನ್ ಸಂಸ್ಕೃತಿಯ ಹಿನ್ನೆಲೆಯಲ್ಲಿ ಈ ಘಟನೆಯನ್ನು ನೋಡಬೇಕು' ಎಂದಿತು.

ನೀಟ್: ಮತ್ತಿಬ್ಬರ ಬಂಧನ

ನವದೆಹಲಿ (ಪಿಟಿಐ): ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಟ್ನಾದಲ್ಲಿ ಅಭ್ಯರ್ಥಿ ಸೇರಿ ಇಬ್ಬರನ್ನು ಸಿಬಿಐ ಬಂಧಿಸಿದೆ. ಇದರೊಂದಿಗೆ ಬಂಧಿತರ ಸಂಖ್ಯೆ 11ಕ್ಕೆ ತಲುಪಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದರು.

ನಳಂದ ಮೂಲದ ಸನ್ನಿ ಹಾಗೂ ಮತ್ತೊಬ್ಬ ಅಭ್ಯರ್ಥಿ ರಂಜಿತ್ ಕುಮಾರ್ ಅವರ ತಂದೆಯನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಬಿಹಾರದಿಂದ ಎಂಟು ಮಂದಿ, ಗುಜರಾತ್‌ನ ಗೋಧ್ರಾ ಮತ್ತು ಲಾತೂರ್‌ನಿಂದ ತಲಾ ಒಬ್ಬರು ಮತ್ತು ಡೆಹ್ರಾಡೂನ್‌ನಿಂದ ಒಬ್ಬರನ್ನು ಸಿಬಿಐ ಬಂಧಿಸಿದೆ.

ವೈದ್ಯಕೀಯ ಪ್ರವೇಶ ಪರೀಕ್ಷೆಯ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ಆರು ಎಫ್‌ಐಆರ್‌ಗಳನ್ನು ದಾಖಲಿಸಿದೆ.

ಚಿಣ್ಣರ ಆಟ ನವದೆಹಲಿಯಲ್ಲಿ ಮಂಗಳವಾರ ಸುರಿದ ಮಳೆಯಲ್ಲೇ ಆಡಿ ಖುಷಿಪಟ್ಟ ಮಕ್ಕಳು –ಪಿಟಿಐ ಚಿತ್ರ

'ಜನಸಂಖ್ಯಾ ಸ್ವರೂಪದಲ್ಲಿ ಅಸಮತೋಲನ'

ನವದೆಹಲಿ (ಪಿಟಿಐ): ಮುಸ್ಲಿಮರ ಜನಸಂಖ್ಯೆ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿರುವುದು ದೇಶದ ಕೆಲವೆಡೆ 'ಜನಸಂಖ್ಯಾ ಸ್ವರೂಪದ ಅಸಮತೋಲನ'ಕ್ಕೆ ಕಾರಣವಾಗಿದೆ ಎಂದು ಆರ್‌ಎಸ್‌ಎಸ್ ಮುಖವಾಣಿ 'ಆರ್ಗನೈಸರ್' ತನ್ನ ಸಂಪಾದಕೀಯದಲ್ಲಿ ಹೇಳಿದೆ.

ಜನಸಂಖ್ಯೆ ದೃಷ್ಟಿಯಿಂದ ಆಗಿರುವ 'ಪ್ರಾದೇಶಿಕ ಅಸಮತೋಲನ'ದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ರಾಷ್ಟ್ರಮಟ್ಟದಲ್ಲಿ ಜನಸಂಖ್ಯೆ ನಿಯಂತ್ರಣಕ್ಕೆ ಸಮಗ್ರ ನೀತಿಯೊಂದನ್ನು ರೂಪಿಸಬೇಕು ಎಂದು ಒತ್ತಾಯಿಸಿದೆ.

'ರಾಷ್ಟ್ರಮಟ್ಟದಲ್ಲಿ ಜನಸಂಖ್ಯೆಯನ್ನು ಸ್ಥಿರಗೊಳಿಸಲು ಆಗಿದೆಯಾದರೂ, ಎಲ್ಲಾ ಧರ್ಮಗಳು ಮತ್ತು ಪ್ರದೇಶಗಳಲ್ಲಿ ಇದು ಒಂದೇ ತೆರನಾಗಿಲ್ಲ. ಕೆಲವು ಪ್ರದೇಶಗಳಲ್ಲಿ, ವಿಶೇಷವಾಗಿ ಗಡಿ ಜಿಲ್ಲೆಗಳಲ್ಲಿ ಮುಸ್ಲಿಂ ಜನಸಂಖ್ಯೆಯ ಗಮನಾರ್ಹ ಬೆಳವಣಿಗೆ ಇದೆ' ಎಂದು ತಿಳಿಸಿದೆ.

'ಪಶ್ಚಿಮ ಬಂಗಾಳ, ಬಿಹಾರ ಮತ್ತು ಅಸ್ಸಾಂ ರಾಜ್ಯಗಳ ಗಡಿಯುದ್ದಕ್ಕೂ 'ಅಕ್ರಮ ವಲಸೆ'ಯಿಂದ ಜನಸಂಖ್ಯೆಯ 'ಅಸ್ವಾಭಾವಿಕ' ಬೆಳವಣಿಗೆಯನ್ನು ಕಾಣಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಜನಸಂಖ್ಯೆಯು ನಿರ್ಣಾಯಕವಾದಾಗ ನಾವು ಈ ಬಗ್ಗೆ ಹೆಚ್ಚು ಜಾಗರೂಕರಾಗಿಬೇಕು' ಎಂದು ಎಚ್ಚರಿಸಿದೆ.

'ದೇಶದಲ್ಲಿ ಪಶ್ಚಿಮ ಮತ್ತು ದಕ್ಷಿಣದ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ತುಲನಾತ್ಮಕವಾಗಿ ಉತ್ತಮ ಕೆಲಸ ಮಾಡಿವೆ. ಈ ಕಾರಣ ಜನಗಣತಿಯ ನಂತರ ಈ ರಾಜ್ಯಗಳು ಸಂಸತ್ತಿನಲ್ಲಿ ತನ್ನ ಕೆಲವು ಸ್ಥಾನಗಳನ್ನು (ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಬಹುದು) ಕಳೆದುಕೊಳ್ಳುವ ಸಾಧ್ಯತೆಯಿದೆ' ಎಂದಿದೆ.

ರಾಹುಲ್, ಮಮತಾ ವಿರುದ್ಧ ಟೀಕೆ

'ರಾಹುಲ್ ಗಾಂಧಿ ಅವರಂತಹ ರಾಜಕಾರಣಿಗಳು ಆಗೊಮ್ಮೆ, ಈಗೊಮ್ಮೆ ಹಿಂದೂಗಳ ಭಾವನೆಗಳಿಗೆ ನೋವುಂಟುಮಾಡಲು ಶಕ್ತರಾಗುತ್ತಾರೆ. ಮಮತಾ ಬ್ಯಾನರ್ಜಿ (ಪಶ್ಚಿಮ ಬಂಗಾಳದ ಮುಖ್ಯಮಂತ್ರಿ) ಅವರು ಮುಸ್ಲಿಮರ ಓಲೈಕೆಗಾಗಿ, ಸಂದೇಶ್‌ಖಾಲಿಯಲ್ಲಿ ಇಸ್ಲಾಮಿಸ್ಟ್‌ಗಳು ಮಹಿಳೆಯರ ಮೇಲೆ ನಡೆಸಿದ ದೌರ್ಜನ್ಯವನ್ನು ಒಪ್ಪಿಕೊಳ್ಳಲು ಸಿದ್ಧರಿದ್ದಾರೆ. ದ್ರಾವಿಡ ಪಕ್ಷಗಳು ಸನಾತನ ಧರ್ಮವನ್ನು ಅವಹೇಳನ ಮಾಡುವುದೇ ತಮ್ಮ ಹೆಮ್ಮೆ ಎಂದು ಅಂದುಕೊಂಡಿವೆ. ಜನಸಂಖ್ಯಾ ಸ್ವರೂಪದ ಅಸಮತೋಲದಿಂದ ಸೃಷ್ಟಿಯಾಗಿರುವ 'ಮುಸ್ಲಿಂ ಮತ ಬ್ಯಾಂಕ್' ತಮ್ಮ ಪರ ಇದೆ ಎಂಬ ವಿಶ್ವಾಸವೇ ಇದಕ್ಕೆಲ್ಲ ಕಾರಣ' ಎಂದು ಸಂಪಾದಕೀಯದಲ್ಲಿ ಆರೋಪಿಸಲಾಗಿದೆ.

ಪ್ಯಾಲೆಸ್ಟೀನ್ ಧ್ವಜ ಪ್ರದರ್ಶನ: ಬಂಧನ

ಭದೋಹಿ (ಉತ್ತರ ಪ್ರದೇಶ) (ಪಿಟಿಐ): ಮೊಹರಂ ತಿಂಗಳ ಚಂದ್ರ ದರ್ಶನದ ಬಳಿಕ ನಡೆದ ಮೆರವಣಿಗೆಯಲ್ಲಿ ಪ್ಯಾಲೆಸ್ಟೀನ್ ಧ್ವಜ ಪ್ರದರ್ಶಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬೆನ್ನಲ್ಲೇ, ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದರು.

'ಕೆಲ ಯುವಕರು ಅನುಮತಿ ಪಡೆಯದೆ ಮಾಧೋಸಿಂಗ್ ಪ್ರದೇಶದ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ರಾತ್ರಿ ಮೆರವಣಿಗೆ ನಡೆಸಿದ್ದಾರೆ. ಈ ವೇಳೆ ಪ್ಯಾಲೆಸ್ಟೀನ್ ಧ್ವಜ ಪ್ರದರ್ಶಿಸಿ, ಘೋಷಣೆಗಳನ್ನು ಕೂಗಲಾಗಿತ್ತು' ಎಂದು ಅಧಿಕಾರಿ ತಿಳಿಸಿದರು.

'ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿದ ಬೆನ್ನಲ್ಲೇ ತನಿಖೆ ಚುರುಕುಗೊಳಿಸಿ, ಸಾಹಿಲ್ ಅಲಿಯಾಸ್ ಬಾದ್‌ಶಾ ಮತ್ತು ಗೋರಖ್ ಎಂಬವರನ್ನು ಆರೋಪಿಗಳೆಂದು ಗುರುತಿಸಲಾಯಿತು. ಸಾಹಿಲ್ ಅವರನ್ನು ಸೋಮವಾರ ರಾತ್ರಿ ಬಂಧಿಸಲಾಗಿದೆ. ಗೋರಖ್ ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ' ಎಂದರು.

ಪರವಾನಗಿ ಅಮಾನತಿನ ಪರಿಣಾಮ: 'ಸುಪ್ರೀಂ'ಗೆ ಪತಂಜಲಿ ಹೇಳಿಕೆ

14 ಉತ್ಪನ್ನಗಳ ಮಾರಾಟ ಸ್ಥಗಿತ

ನವದೆಹಲಿ(ಪಿಟಿಐ): ಉತ್ತರಾಖಂಡ ರಾಜ್ಯದ ಪರವಾನಗಿ ಪ್ರಾಧಿಕಾರವು ಏಪ್ರಿಲ್‌ನಲ್ಲಿ ಉತ್ಪಾದನಾ ಪರವಾನಗಿ ಅಮಾನತುಗೊಳಿಸಿದ್ದರಿಂದ 14 ಉತ್ಪನ್ನಗಳ ಮಾರಾಟ ಸ್ಥಗಿತಗೊಳಿಸಲಾಗಿದೆ ಎಂದು ಪತಂಜಲಿ ಆಯುರ್ವೇದ ಲಿಮಿಟೆಡ್ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಈ ಉತ್ಪನ್ನಗಳನ್ನು ಮಾರುಕಟ್ಟೆಯಿಂದ ಹಿಂತೆಗೆದುಕೊಳ್ಳುವಂತೆ 5,606 ಫ್ರಾಂಚೈಸ್ ಸ್ಟೋರ್‌ಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಕಂಪನಿಯು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠಕ್ಕೆ ತಿಳಿಸಿದೆ.

ಅಲ್ಲದೆ, ಈ 14 ಉತ್ಪನ್ನಗಳ ಜಾಹೀರಾತುಗಳನ್ನು ಎಲ್ಲ ಮಾಧ್ಯಮ ವೇದಿಕೆಗಳಿಂದಲೂ ಹಿಂಪಡೆಯಲು ಸೂಚನೆ ನೀಡಲಾಗಿದೆ ಎಂದು ಅದು ಹೇಳಿದೆ.

ಜಾಹೀರಾತುಗಳನ್ನು ತೆಗೆದುಹಾಕಲು ಸಾಮಾಜಿಕ ಮಾಧ್ಯಮದ ಮಧ್ಯವರ್ತಿಗಳಿಗೆ ಮಾಡಿದ ಮನವಿಯನ್ನು ಅಂಗೀಕರಿಸಲಾಗಿದೆಯೇ ಮತ್ತು ಈ 14 ಉತ್ಪನ್ನಗಳ ಜಾಹೀರಾತುಗಳನ್ನು ಹಿಂಪಡೆಯಲಾಗಿದೆಯೇ ಎನ್ನುವುದರ ಕುರಿತು ಎರಡು ವಾರಗಳಲ್ಲಿ ಅಫಿಡವಿಟ್ ಸಲ್ಲಿಸುವಂತೆ ಪೀಠವು, ಪತಂಜಲಿ ಆಯುರ್ವೇದ ಲಿಮಿಟೆಡ್‌ಗೆ ಸೂಚಿಸಿತು.

ಪೀಠವು ಮುಂದಿನ ವಿಚಾರಣೆಯನ್ನು ಜುಲೈ 30ಕ್ಕೆ ಮುಂದೂಡಿತು.

ಕೋವಿಡ್ ಲಸಿಕಾ ಅಭಿಯಾನ ಮತ್ತು ಆಧುನಿಕ ವೈದ್ಯಕೀಯ ವ್ಯವಸ್ಥೆಗಳ ವಿರುದ್ಧ ಪತಂಜಲಿ ನಡೆಸಿದ ಅಪಪ್ರಚಾರದ ವಿರುದ್ಧ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸಲ್ಲಿಸಿದ ಮನವಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.

ಪತಂಜಲಿ ಆಯುರ್ವೇದ ಲಿಮಿಟೆಡ್ ಮತ್ತು ದಿವ್ಯ ಫಾರ್ಮಸಿಯ 14 ಉತ್ಪನ್ನಗಳ ಉತ್ಪಾದನಾ ಪರವಾನಗಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ ಎಂದು ಉತ್ತರಾಖಂಡ ರಾಜ್ಯ ಪರವಾನಗಿ ಪ್ರಾಧಿಕಾರವು ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು.

ದಿಕ್ಕು ತಪ್ಪಿಸುವ ಜಾಹೀರಾತು ಪ್ರಕರಣದಲ್ಲಿ ಯೋಗ ಗುರು ರಾಮ್‌ದೇವ್, ಅವರ ಸಹಾಯಕ ಬಾಲಕೃಷ್ಣ ಮತ್ತು ಪತಂಜಲಿ ಆಯುರ್ವೇದ ಲಿಮಿಟೆಡ್‌ಗೆ ನೀಡಲಾದ ನ್ಯಾಯಾಂಗ ನಿಂದನೆ ನೋಟಿಸ್‌ನ ಆದೇಶವನ್ನು ಸುಪ್ರೀಂ ಕೋರ್ಟ್ ಮೇ 14 ರಂದು ಕಾಯ್ದಿರಿಸಿತ್ತು.

'ಮಾಧ್ಯಮಗಳಲ್ಲಿ ಕ್ಷಮೆಯಾಚನೆ ಪ್ರಕಟ'

ಪತಂಜಲಿ ಪ್ರಕರಣದ ವಿಚಾರಣೆಗೆ ಸಂಬಂಧಿಸಿದಂತೆ ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಆರ್.ವಿ.ಅಶೋಕನ್ ಅವರು ಸುಪ್ರೀಂ ಕೋರ್ಟ್ ವಿರುದ್ಧ ಹೇಳಿಕೆ ನೀಡಿದ್ದಕ್ಕಾಗಿ ಮಾಧ್ಯಮಗಳಲ್ಲಿ ಸಾರ್ವಜನಿಕವಾಗಿ ಕ್ಷಮೆಯಾಚನೆಯನ್ನು ಪ್ರಕಟಿಸಿದ್ದಾರೆ ಎಂದು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಲಾಗಿದೆ.

ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠದ ಮುಂದೆ ಐಎಂಎ ಪರವಾಗಿ ಹಾಜರಾದ ಹಿರಿಯ ವಕೀಲ ಪಿ.ಎಸ್. ಪಟ್ವಾಲಿಯಾ ಅವರು, ಅಶೋಕನ್ ಪರವಾಗಿ ಕ್ಷಮಾಪಣೆಯನ್ನು ಐಎಂಎ ವೆಬ್‌ಸೈಟ್‌ನಲ್ಲಿ ಮತ್ತು ಅದರ ಮಾಸಿಕ ಜರ್ನಲ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪತಂಜಲಿ ಆಯುರ್ವೇದ ಕಂಪನಿ ಜನರ ದಿಕ್ಕು ತಪ್ಪಿಸುವ ಜಾಹೀರಾತು ನೀಡಿದ ಪ್ರಕರಣದಲ್ಲಿ ಯೋಗ ಗುರು ಬಾಬಾ ರಾಮ್‌ದೇವ್ ಮತ್ತು ಪತಂಜಲಿಯ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಅವರ ವಿರುದ್ಧ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಐಎಂಎ ಅಧ್ಯಕ್ಷ ಡಾ. ಅಶೋಕನ್ ಅವರು ನೀಡಿದ ನ್ಯಾಯಾಂಗ ನಿಂದನೆಯ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ, ಇದು ನ್ಯಾಯಾಂಗದ ಮೇಲಿನ ದಾಳಿ ಎಂದು ಚಾಟಿ ಬೀಸಿತ್ತು.

ನ್ಯಾಯಾಲಯಕ್ಕೆ ಖುದ್ದಾಗಿ ಹಾಜರಾಗುವ ಸಂದರ್ಭದಲ್ಲಿ ಅಶೋಕ್ ಅವರು ಸಲ್ಲಿಸಿದ ಬೇಷರತ್ ಕ್ಷಮೆಯನ್ನು ಸ್ವೀಕರಿಸಲು ಪೀಠವು ನಿರಾಕರಿಸಿತು, ಅವರ ನಡವಳಿಕೆ ಬಗ್ಗೆ ಉತ್ತರ ನೀಡಬೇಕು. ರಾಮ್‌ದೇವ್ ರೀತಿಯೇ ಸಾರ್ವಜನಿಕವಾಗಿ ಏಕೆ ಕ್ಷಮೆಯಾಚಿಸಬಾರದು ಎಂದು ಪ್ರಶ್ನಿಸಿತು.

ಮಂಗಳವಾರದ ವಿಚಾರಣೆಯ ಸಂದರ್ಭದಲ್ಲಿ, ಡಾ.ಅಶೋಕನ್ ಅವರು ಜುಲೈ 6ರಂದು ಸಲ್ಲಿಸಿದ ಅಫಿಡವಿಟ್ ಅನ್ನು ನ್ಯಾಯಾಲಯವು ಪರಿಶೀಲಿಸಿತು. ಮುಂದಿನ ವಿಚಾರಣೆಯನ್ನು ಆಗಸ್ಟ್ 6ಕ್ಕೆ ನಿಗದಿಪಡಿಸಿತು. ನ್ಯಾಯಾಲಯಕ್ಕೆ ಹಾಜರಾಗಿದ್ದ ಅಶೋಕನ್‌ಗೆ ಮುಂದಿನ ದಿನಾಂಕದಂದು ಖುದ್ದು ಹಾಜರಿಯಿಂದ ವಿನಾಯಿತಿ ನೀಡಿದೆ

ಕೇಂದ್ರ ಸರ್ಕಾರದ ವಿರುದ್ಧ 'ಸುಪ್ರೀಂ' ಗರಂ

ಭರ್ತಿಯಾಗದ ಬ್ಯಾಕ್‌ಲಾಗ್ ಹುದ್ದೆ, ಪರಿಣಾಮಕಾರಿಯಾಗಿ ಜಾರಿಯಾಗದ ಕಾಯ್ದೆ

ನವದೆಹಲಿ (ಪಿಟಿಐ): ಅಂಗವಿಕಲ ವ್ಯಕ್ತಿಗಳ ಕಾಯ್ದೆಯ (ಪಿಡಬ್ಲ್ಯುಡಿ) ಪರಿಣಾಮಕಾರಿಯಾಗಿ ಜಾರಿ ಮತ್ತು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಲು ವಿಫಲವಾಗಿರುವ ಕೇಂದ್ರ ಸರ್ಕಾರವನ್ನು ಸುಪ್ರಿಂ ಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿದೆ.

2009ರಲ್ಲಿ ನಾಗರಿಕ ಸೇವಾ ಪರೀಕ್ಷೆ ತೇರ್ಗಡೆಯಾಗಿರುವ, ಶೇ 100ರಷ್ಟು ಅಂಧತ್ವ ಹೊಂದಿರುವ ಅಭ್ಯರ್ಥಿಯನ್ನು ಮೂರು ತಿಂಗಳ ಒಳಗಾಗಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುವಂತೆಯೂ ಸರ್ಕಾರಕ್ಕೆ ಆದೇಶಿಸಿತು.

1995ರ ಪಿಡಬ್ಲ್ಯುಡಿ ಕಾಯ್ದೆಯ ನಿಬಂಧನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸುವಲ್ಲಿ ಕೇಂದ್ರ ಸರ್ಕಾರದ ಕಡೆಯಿಂದ 'ಎದ್ದು ಕಾಣುವಂತಹ ಕರ್ತವ್ಯಲೋಪ' ಉಂಟಾಗಿದೆ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಪಂಕಜ್ ಮಿತ್ತಲ್ ಅವರಿದ್ದ ಪೀಠ ಹೇಳಿತು.

'ದುರದೃಷ್ಟವಶಾತ್, ಈ ಪ್ರಕರಣದಲ್ಲಿ ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಇರುವ ಕಾನೂನುಗಳನ್ನು ಜಾರಿಗೊಳಿಸುವ ಉದ್ದೇಶವನ್ನೇ ವ್ಯರ್ಥಗೊಳಿಸುವ ನಿಲುವನ್ನು ಮೇಲ್ಮನವಿದಾರರು ತೆಗೆದುಕೊಂಡಿದ್ದಾರೆ. ಮೇಲ್ಮನವಿದಾರರು 1995ರ ಪಿಡಬ್ಲ್ಯುಡಿ ಕಾಯ್ದೆಯನ್ನು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅದರ ನೈಜರೂಪದಲ್ಲಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಿದ್ದಲ್ಲಿ, ಪ್ರತಿವಾದಿಯು (ಅಂಧ ಅಭ್ಯರ್ಥಿ) ನ್ಯಾಯಕ್ಕಾಗಿ ಅಲೆದಾಡುವ ಪ್ರಮೇಯವೇ ಉಂಟಾಗುತ್ತಿರಲಿಲ್ಲ' ಎಂದಿತು.

ಪೂರ್ಣ ಅಂಧತ್ವ ಹೊಂದಿರುವ ಪಂಕಜ್ ಕುಮಾರ್ ಶ್ರೀವಾಸ್ತವ ಎಂಬವರು 2009ರಲ್ಲಿ ನಾಗರಿಕ ಸೇವೆ ಪರೀಕ್ಷೆ ಬರೆದಿದ್ದರು. ಈ ವೇಳೆ ಅವರು ತಮ್ಮ ನಾಲ್ಕು ಆದ್ಯತೆಗಳನ್ನು ಕ್ರಮವಾಗಿ ಐಎಎಸ್, ಐಆರ್‌ಎಸ್-ಐಟಿ, ಐಆರ್‌ಪಿಎಸ್ ಮತ್ತು ಐಆರ್‌ಎಸ್-ಸಿಆ್ಯಂಡ್‌ಇಗೆ ನೀಡಿದ್ದರು. ಪರೀಕ್ಷೆ ಹಾಗೂ ಸಂದರ್ಶನದಲ್ಲಿ ತೇರ್ಗಡೆಯಾದರೂ ಅವರಿಗೆ ನೇಮಕಾತಿ ನಿರಾಕರಿಸಲಾಗಿತ್ತು.

ಇದರಿಂದ ಅವರು ಕೇಂದ್ರೀಯ ಆಡಳಿತ ನ್ಯಾಯಮಂಡಳಿ (ಸಿಎಟಿ) ಮೊರೆಹೋಗಿದ್ದರು. ಶ್ರೀವಾಸ್ತವ ಅವರನ್ನು ನೇಮಕಾತಿಗೆ ಪರಿಗಣಿಸುವಂತೆ ಸಿಎಟಿ, ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿತ್ತು. ಸಿಎಟಿ ತೀರ್ಪನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ದೆಹಲಿ ಹೈಕೋರ್ಟ್ ತಳ್ಳಿಹಾಕಿತ್ತು. ಇದರಿಂದ ಸರ್ಕಾರ, ಸುಪ್ರೀಂ ಕೋರ್ಟ್ ಮೊರೆಹೋಗಿತ್ತು.

'ವಿಶೇಷ ದತ್ತು ಸಂಸ್ಥೆ' ಸ್ಥಾಪಿಸದ್ದಕ್ಕೆ ಅಸಮಾಧಾನ

ನವದೆಹಲಿ(ಪಿಟಿಐ): ಮಕ್ಕಳ ದತ್ತು ಸ್ವೀಕಾರ ಪ್ರಕ್ರಿಯೆ ವ್ಯವಸ್ಥಿತವಾಗಿ ನಡೆಯುವಂತೆ ಮಾಡುವುದಕ್ಕಾಗಿ ರೂಪಿಸಿರುವ 'ವಿಶೇಷ ದತ್ತು ಸಂಸ್ಥೆ'ಗಳನ್ನು (ಎಸ್‌ಎಎ) ದೇಶದ 760ರ ಪೈಕಿ 370 ಜಿಲ್ಲೆಗಳಲ್ಲಿ ಸ್ಥಾಪಿಸದೇ ಇರುವುದಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ವಿಶೇಷ ದತ್ತು ಸಂಸ್ಥೆಗಳ ಸ್ಥಾಪನೆ ಸಂಬಂಧ ಹೊರಡಿಸಿರುವ ಆದೇಶ ಪಾಲನೆ ಮಾಡಿ ಇಲ್ಲವೇ ನ್ಯಾಯಾಂಗ ನಿಂದನೆ ಕ್ರಮ ಎದುರಿಸಿ ಎಂದು 29 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಆದೇಶಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ, ಆಗಸ್ಟ್ 30ರ ಒಳಗಾಗಿ ಆದೇಶ ಪಾಲನೆ ಕುರಿತ ವರದಿ ಸಲ್ಲಿಸುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಿದೆ.

ಒಂದು ವೇಳೆ, ಈ ವರದಿಯನ್ನು ಸಲ್ಲಿಸುವಲ್ಲಿ ವಿಫಲರಾದಲ್ಲಿ, ಸೆಪ್ಟೆಂಬರ್ 2ರಂದು ನ್ಯಾಯಾಲಯಕ್ಕೆ ಹಾಜರಾಗಿ, ತಮ್ಮ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ಯಾಕೆ ಜರುಗಿಸಬಾರದು ಎಂಬುದಕ್ಕೆ ಸೂಕ್ತ ವಿವರಣೆ ನೀಡುವಂತೆಯೂ ಸೂಚಿಸಿದೆ.

ಪ್ರತಿ ಜಿಲ್ಲೆಯಲ್ಲಿಯೂ 'ವಿಶೇಷ ದತ್ತು ಸಂಸ್ಥೆ' ಸ್ಥಾಪಿಸಬೇಕು ಎಂದು 34 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಜನವರಿ 31ರಂದು ಆದೇಶಿಸಿತ್ತು. ಇವುಗಳ ಪೈಕಿ, ರಾಜ್ಯಗಳಾದ ಕರ್ನಾಟಕ, ಕೇರಳ, ರಾಜಸ್ಥಾನ ಮತ್ತು ಗೋವಾ, ಕೇಂದ್ರಾಡಳಿತ ಪ್ರದೇಶವಾದ ಚಂಡೀಗಢ ಮಾತ್ರ ಸುಪ್ರೀಂ ಕೋರ್ಟ್‌ನ ಈ ಆದೇಶವನ್ನು ಅನುಷ್ಠಾನಕ್ಕೆ ತಂದಿವೆ.

ಮಕ್ಕಳನ್ನು ದತ್ತು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಯನ್ನು ಪ್ರಕ್ರಿಯೆಯನ್ನು ಸರಳಗೊಳಿಸುವಂತೆ ಕೋರಿ 'ದಿ ಟೆಂಪಲ್ ಆಫ್ ಹೀಲಿಂಗ್' ಎಂಬ ಸಂಸ್ಥೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದೆ.

ಕಾರುಣ್ಯ ಡೀಮ್ಡ್ ವಿವಿಯಲ್ಲಿ 29ನೇ ಘಟಿಕೋತ್ಸವ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಕೊಯಮತ್ತೂರು: ಕಾರುಣ್ಯ ಡೀಮ್ಡ್ ವಿಶ್ವವಿದ್ಯಾಲಯವು ಇತ್ತೀಚೆಗೆ 29ನೇ ಘಟಿಕೋತ್ಸವ ಸಮಾರಂಭವನ್ನು ಹೆಮ್ಮೆಯಿಂದ ಆಯೋಜಿಸಿ, ಪದವಿ ಪಡೆದ ವಿದ್ಯಾರ್ಥಿಗಳ ಶೈಕ್ಷಣಿಕ ಪಯಣದಲ್ಲಿ ಮಹತ್ವದ ಮೈಲಿಗಲ್ಲನ್ನು ಗುರುತಿಸಿದೆ.

ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ರಮಣೀಯ ಕ್ಯಾಂಪಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಣ್ಯ ಅತಿಥಿಗಳು, ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಕುಟುಂಬದವರು ಭಾಗವಹಿಸಿದ್ದರು. ಕಾರುಣ್ಯ ವಿವಿಯ ಗೀತೆಯೊಂದಿಗೆ ಆರಂಭವಾದ ಘಟಿಕೋತ್ಸವವನ್ನು ಕುಲಪತಿ ಡಾ. ಪೌಲ್ ದಿನಕರನ್ ಅವರು ಉದ್ಘಾಟಿಸಿ, ವಿಶ್ವವಿದ್ಯಾನಿಲಯದ ಶ್ರೇಷ್ಠತೆ ಮತ್ತು ನಾವೀನ್ಯತೆಗೆ ನೀಡಿರುವ ಬದ್ಧತೆಯನ್ನು ವಿವರಿಸಿದರು.

ಮುಖ್ಯ ಅತಿಥಿ ಭಾಗವಹಿಸಿದ್ದ ಎಐಸಿಟಿಇ ಪ್ರೊ. ಎಸ್.ಎಸ್. ಮಂಥಾ ಅವರು ಪದವೀಧರರು ತಮ್ಮ ವೃತ್ತಿ ಪ್ರಯಾಣ ಪ್ರಾರಂಭಿಸುವಾಗ ನಾವೀನ್ಯತೆ, ಸ್ಥಿತಿಸ್ಥಾಪಕತ್ವ ಮತ್ತು ಉದ್ದೇಶವನ್ನು ಅಳವಡಿಸಿಕೊಳ್ಳಲು ಕರೆ ನೀಡಿದರು. ಪರಿಶ್ರಮ ಮತ್ತು ವೈಫಲ್ಯಗಳಿಂದ ಕಲಿಯುವ ಪ್ರಾಮುಖ್ಯತೆ ಬಗ್ಗೆ ಎಲೋನ್ ಮಸ್ಕ್ ಅವರನ್ನು ಉದಾಹರಿಸಿದರು.ಕುಲಪತಿ ಡಾ. ಪಾಲ್ ದಿನಕರನ್ ಅವರು ಪದವೀಧರರಿಗೆ ನೀಡಿದ ಸಂದೇಶ ಶೈಕ್ಷಣಿಕ ಉತ್ಕೃಷ್ಟತೆ ಮಾತ್ರ ವಲ್ಲದೆ, ವಿದ್ಯಾರ್ಥಿಗಳಲ್ಲಿ ನೈತಿಕತೆ ಮತ್ತು ನೈತಿಕ ಮೌಲ್ಯಗಳನ್ನು ಪೋಷಿಸುವ ಕಾರುಣ್ಯ ವಿವಿಯ ಧ್ಯೇಯದ ಬಗ್ಗೆ ಅವರಿಗಿರುವ ಕಾಳಜಿ ಎತ್ತಿ ತೋರಿಸುತ್ತದೆ ಎಂದರು.

ರಾಷ್ಟ್ರದ ಮೂಲಸೌಕರ್ಯ ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಿಗೆ ಕೊಡುಗೆ ನೀಡಿರುವ ಭಾರತದ "ಮೆಟ್ರೋ ಮ್ಯಾನ್" ಎಂದೇ ಖ್ಯಾತಿ ಹೊಂದಿರುವ ಇ. ಶ್ರೀಧರನ್ ಅವರಿಗೆ 'ಗೌರವ ಪದವಿ ಪ್ರದಾನ' ಮಾಡಲಾಯಿತು. ಡಾ.ಪಾಲ್ ಅವರು ಪದವೀಧರರಿಗೆ ಪದಕ ಮತ್ತು ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಿದರು.

ಕುಲಪತಿ ಪ್ರಶಸ್ತಿ ಪುರಸ್ಕೃತರು: ರಿಚಿ ಸುರೇಶ್ ಕೋಶಿ (ಬಿ.ಟೆಕ್, ಎಐ ಮತ್ತು ಡಾಟಾ ಸೈನ್ಸ್), ಗುರಂ ಆಕಾಶ್ (ಬಿ.ಟೆಕ್, ರೋಬೋಟಿಕ್ ಮತ್ತು ಆಟೋಮೇಷನ್), ಸ್ಯಾಮ್ಯುಲ್ ಡಿ.ಎ (ಬಿ.ಎಸ್ಸಿ, ಮಾಹಿತಿ ಭದ್ರತೆ ಮತ್ತು ಡಿಜಿಟಲ್ ವಿಜ್ಞಾನ), ಕಾವಿಯ ಬಿ (ಎಂ.ಟೆಕ್, ಬಯೋಮೆಡಿಕಲ್ ಇನ್‌ಸ್ಟ್ರುಮೆಂಟೇಷನ್) ಮತ್ತು ಹರ್ಷಿನಿ ಆರ್ (ಬಿ.ಎಸ್ಸಿ, ಹಾನರ್ಸ್ ಕೃಷಿ).

ಹೆಲಿಕಾಪ್ಟರ್, ಯುಎವಿ, ಶ್ವಾನಗಳನ್ನು ಬಳಸಿ ಸೇನೆಯಿಂದ ಕಾರ್ಯಾಚರಣೆ

ಕಠುವಾ: ಉಗ್ರರ ಪತ್ತೆಗೆ ಜಂಟಿ ಕಾರ್ಯಾಚರಣೆ ತೀವ್ರ

ಜಮ್ಮು(ಪಿಟಿಐ): ಜಮ್ಮು-ಕಾಶ್ಮೀರದ ಕಠುವಾ ಜಿಲ್ಲೆಯಲ್ಲಿ ಸೇನಾ ವಾಹನದ ಮೇಲೆ ದಾಳಿ ನಡೆಸಿರುವ ಉಗ್ರರ ಪತ್ತೆಗಾಗಿ ಸೇನೆಯು ಮಂಗಳವಾರ ಜಂಟಿ ಶೋಧ ಕಾರ್ಯ ಆರಂಭಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಹೆಲಿಕಾಪ್ಟರ್ ಹಾಗೂ ಮಾನವರಹಿತ ವೈಮಾನಿಕ ವಾಹನಗಳ (ಯುಎವಿ) ನೆರವಿನೊಂದಿಗೆ ಸೇನೆಯು ಕಣ್ಗಾವಲನ್ನು ತೀವ್ರಗೊಳಿಸಿದೆ. ಕಾರ್ಯಾಚರಣೆ ನಡೆಯುತ್ತಿರುವ ಪ್ರದೇಶವು ದಟ್ಟ ಅರಣ್ಯದಿಂದ ಕೂಡಿರುವ ಕಾರಣ, ಲೋಹ ಪತ್ತೆ ಸಾಧನಗಳು, ವಾಸನೆ ಗ್ರಹಿಸುವ ಶ್ವಾನಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಡಿಜಿಪಿ ಆರ್.ಆರ್.ಸ್ವೇನ್ ಅವರು ಕಾರ್ಯಾಚರಣೆ ನಡೆಯುತ್ತಿರುವ ಸ್ಥಳಕ್ಕೆ ತೆರಳಿದ್ದಾರೆ. ಎಡಿಜಿಪಿ ಆನಂದ್ ಜೈನ್ ಕೂಡ ಸ್ವೇನ್ ಅವರೊಂದಿಗಿದ್ದು, ಶೋಧ ಕಾರ್ಯಾಚರಣೆ ನಡೆಯುತ್ತಿರುವ ಪ್ರದೇಶದ ವೈಮಾನಿಕ ಸಮೀಕ್ಷೆಯನ್ನೂ ನಡೆಸಿದ್ದಾರೆ.

3-4 ಉಗ್ರರು ಈ ದಾಳಿ ನಡೆಸಿರುವ ಸಾಧ್ಯತೆ ಇದೆ ಎಂದು ತಿಳಿಸಿರುವ ಮೂಲಗಳು, ಈ ಉಗ್ರರೆಲ್ಲಾ ಬಹುತೇಕ ವಿದೇಶಿಯರು ಎಂದು ಮೂಲಗಳು ಹೇಳಿವೆ.

ಮಚೇಡಿ-ಕಿಂಡ್ಲಿ- ಮೊಲ್ಹಾರ್ ರಸ್ತೆಯಲ್ಲಿ ಯೋಧರು ಗಸ್ತು ತಿರುಗುತ್ತಿದ್ದಾಗ ಭಯೋತ್ಪಾದಕರು ಸೋಮವಾರ ಗ್ರೆನೇಡ್ ಮತ್ತು ಗುಂಡಿನ ದಾಳಿ ನಡೆಸಿದ್ದರು. ಈ ದಾಳಿಯಲ್ಲಿ ಗಾಯಗೊಂಡಿದ್ದ 10 ಮಂದಿ ಯೋಧರ ಪೈಕಿ, ಐವರು ಮೃತಪಟ್ಟಿದ್ದರು.

ಹಸ್ತಾಂತರ: ದಾಳಿಯಲ್ಲಿ ಹುತಾತ್ಮರಾದ ಯೋಧರ ದೇಹಗಳನ್ನು ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಬಿಲ್ಲಾವರದ ಹೆಚ್ಚುವರಿ ಜಿಲ್ಲಾಧಿಕಾರಿ ವಿನಯ್ ಖೋಸ್ಲಾ ತಿಳಿಸಿದ್ದಾರೆ.

> **ಐವರು ಯೋಧರು ಹುತಾತ್ಮರಾಗಿದ್ದಕ್ಕೆ ದುಃಖಿತನಾಗಿದ್ದೇನೆ. ಜಮ್ಮು-ಕಾಶ್ಮೀರದಲ್ಲಿ ಶಾಂತಿ ನೆಲಸುವಂತೆ ಮಾಡಲು ಸಶಸ್ತ್ರ ಪಡೆಗಳು ದೃಢಸಂಕಲ್ಪ ಮಾಡಿವೆ**
> **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

> **ದೇಶಕ್ಕಾಗಿ ಯೋಧರು ಸಲ್ಲಿಸಿರುವ ನಿಸ್ವಾರ್ಥ ಸೇವೆ ಸದಾ ಸ್ಮರಿಸಲಾಗುವುದು. ಅವರ ಬಲಿದಾನಕ್ಕೆ ಪ್ರತೀಕಾರ ತೀರಿಸಿಕೊಳ್ಳದೇ ಬಿಡುವುದಿಲ್ಲ**
> **ಗಿರಿಧರ ಅರಮನೆ,** ರಕ್ಷಣಾ ಕಾರ್ಯದರ್ಶಿ

ಇಬ್ಬರು ಮಕ್ಕಳನ್ನು ಕಳೆದುಕೊಂಡ ಕುಟುಂಬ

ಡೆಹ್ರಾಡೂನ್: ಭಾರತೀಯ ಸೇನೆಯಲ್ಲಿ ಮೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದ 33 ವರ್ಷದ ಯೋಧ ಪ್ರಣಯ್ ನೇಗಿಯವರನ್ನು ಕಳೆದುಕೊಂಡ ದುಃಖದಿಂದ ಇನ್ನೂ ಹೊರಬರದ ಕುಟುಂಬವು ಮತ್ತೊಬ್ಬ ಮಗ, ರೈಫಲ್‌ಮ್ಯಾನ್ ಆದರ್ಶ್ ನೇಗಿ ಹುತಾತ್ಮನಾಗಿರುವುದರಿಂದ ಮತ್ತೊಂದು ಭಾರಿ ಆಘಾತಕ್ಕೆ ಸಿಲುಕಿದೆ.

ಸೋಮವಾರ ಉಗ್ರರು ನಡೆಸಿದ ಹೊಂಚು ದಾಳಿಯಲ್ಲಿ 26 ವರ್ಷದ ಆದರ್ಶ್ ನೇಗಿ ಹುತಾತ್ಮರಾಗಿದ್ದಾರೆ. ಇವರು ಹುತಾತ್ಮ ಯೋಧ ಪ್ರಣಯ್ ನೇಗಿ ಸೋದರ ಸಂಬಂಧಿ. 'ಮಗ ಮೇಜರ್ ಪ್ರಣಯ್ ನೇಗಿಯನ್ನು 2 ತಿಂಗಳ ಹಿಂದೆ ಕಳೆದುಕೊಂಡಿದ್ದೆವು. ಈಗ, ಜಮ್ಮು ಮತ್ತು ಕಾಶ್ಮೀರದ ಪೌರಿ-ಗಢವಾಲ್ ಪ್ರದೇಶದ ಮಚೇಡಿಯಲ್ಲಿ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ ಐವರು ಸೈನಿಕರಲ್ಲಿ ನನ್ನ ಅಣ್ಣನ ಮಗ ಆದರ್ಶ್ ನೇಗಿ ಕೂಡ ಇದ್ದಾನೆ' ಎಂದು ಆದರ್ಶ್ ಚಿಕ್ಕಪ್ಪ, ಉತ್ತರಾಖಂಡದ ತೆಹ್ರಿ ಜಿಲ್ಲೆಯ ಥಾಟಿ ದಗರ್ ಗ್ರಾಮದ ನಿವಾಸಿ ಬಲ್ವಂತ್ ಸಿಂಗ್ ನೇಗಿ ಹೇಳಿದರು ಎಂದು 'ಎನ್‌ಡಿಟಿವಿ' ವರದಿ ಮಾಡಿದೆ.

ಎನ್‌ಐಎ ನೆರವು

ಕಠುವಾ ಜಿಲ್ಲೆಯಲ್ಲಿ ಸೇನೆ ವಾಹನ ಮೇಲೆ ನಡೆದ ಉಗ್ರರ ದಾಳಿ ಕುರಿತು ತನಿಖೆ ನಡೆಸುತ್ತಿರುವ ಜಮ್ಮು-ಕಾಶ್ಮೀರ ಪೊಲೀಸರಿಗೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ನೆರವು ನೀಡಲಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

‘ಭಾರತೀಯರ ಬಿಡುಗಡೆಗೆ ಒಪ್ಪಿಗೆ’

ಸೇನೆಯಲ್ಲಿ ಸಹಾಯಕ ಸಿಬ್ಬಂದಿ ಆಗಿ ಕೆಲಸ • ಕಝಾನ್, ಯೆಕತರಿನ್‌ಬರ್ಗ್‌ನಲ್ಲಿ ಕಾನ್ಸುಲೇಟ್

ಮಾಸ್ಕೊ (ಪಿಟಿಐ): ಯೋಧರಿಗೆ ಸಹಾಯಕ ಸಿಬ್ಬಂದಿಯಾಗಿ ರಷ್ಯಾ ಸೇನೆಯಲ್ಲಿ ಕೆಲಸ ಮಾಡುತ್ತಿರುವ ಭಾರತದ ಎಲ್ಲ ಪ್ರಜೆಗಳನ್ನು ಕೆಲಸದಿಂದ ಬಿಡುಗಡೆಗೊಳಿಸಲು ರಷ್ಯಾ ಸರ್ಕಾರ ಬಹುತೇಕ ಒಪ್ಪಿಕೊಂಡಿದೆ.

‘ಸೇನೆಯಲ್ಲಿರುವ ಭಾರತೀಯರ ಬಿಡುಗಡೆಗೆ ಮಾಸ್ಕೊ ಸಮ್ಮತಿಸಿದೆ’ ಎಂದು ಉನ್ನತ ಮೂಲಗಳು ಮಂಗಳವಾರ ದೃಢಪಡಿಸಿವೆ. ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ನಡೆಸಿದ ಔಪಚಾರಿಕ ಸಭೆಯಲ್ಲಿ ಇದನ್ನು ಪ್ರಸ್ತಾಪಿಸಿದ್ದರು.

ರಷ್ಯಾ ಸೇನೆಯಲ್ಲಿದ್ದ ಇಬ್ಬರು ಭಾರತೀಯರು ಮೃತಪಟ್ಟಿರುವ ವಿಷಯ ಜೂನ್ 11ರಂದು ಬಯಲಾಗಿ, ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಇದಕ್ಕೆ ಕಟುವಾಗಿ ಪ್ರತಿಕ್ರಿಯಿಸಿದ್ದ ಭಾರತ, ‘ಸೇನೆಗೆ ಭಾರತೀಯರ ನೇಮಕವನ್ನು ಕೂಡಲೇ ನಿಲ್ಲಿಸಬೇಕು’ ಎಂದು ಒತ್ತಾಯಿಸಿತ್ತು.

ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಮಾಸ್ಕೊದಲ್ಲಿ ಸ್ಥಳೀಯ ಸಾಂಸ್ಕೃತಿಕ ತಂಡದ ಕಲಾವಿದರ ಜೊತೆ ಸಂವಾದ ನಡೆಸಿದರು ಪಿಟಿಐ ಚಿತ್ರ

ರಷ್ಯಾ ಸೇನೆಯಲ್ಲಿ ಸಹಾಯಕ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಸೂರತ್‌ನ 23 ವರ್ಷ ವಯಸ್ಸಿನ ಹೇಮಲ್ ಅಶ್ವಿನಿಭಾಯಿ ಫೆಬ್ರುವರಿ ತಿಂಗಳಲ್ಲಿ, ಹೈದರಾಬಾದ್‌ನ 30 ವರ್ಷ ವಯಸ್ಸಿನ ಮೊಹಮ್ಮದ್ ಅಸ್ಫಾನ್ ಮಾರ್ಚ್ ತಿಂಗಳಲ್ಲಿ, ಅಸುನೀಗಿದ್ದರು.

‘2 ಕಾನ್ಸುಲೇಟ್ ಆರಂಭಕ್ಕೆ ನಿರ್ಧಾರ’: ರಷ್ಯಾದ ಕಝಾನ್, ಯೆಕತರಿನ್‌ಬರ್ಗ್ ನಗರಗಳಲ್ಲಿ ಭಾರತವು ಕಾನ್ಸುಲೇಟ್‌ಗಳನ್ನು ಆರಂಭಿಸಲಿದೆ. ಇದರಿಂದ ಭವಿಷ್ಯದಲ್ಲಿ ಪ್ರವಾಸ ಮತ್ತು ವಾಣಿಜ್ಯ ಚಟುವಟಿಕೆಯ ಚೇತರಿಕೆಗೆ ನೆರವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಇಲ್ಲಿ ಪ್ರಕಟಿಸಿದರು.

ಪ್ರಸ್ತುತ ಸೇಂಟ್ ಪೀಟರ್ಸ್‌ಬರ್ಗ್ ಮತ್ತು ವ್ಲಾಡಿವೊಸ್ಟೊಕ್ ನಗರಗಳಲ್ಲಿ ಭಾರತದ ಕಾನ್ಸುಲೇಟ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿ, ಭಾರತ ಮೂಲದ ಜನಸಮೂಹವನ್ನು ಉದ್ದೇಶಿಸಿ ಮಾತನಾಡಿದ ಅವರು ಈ ವಿಷಯ ತಿಳಿಸಿದರು.

ಆಸ್ಟ್ರಿಯಾಗೆ ಪ್ರಧಾನಿ: ರಷ್ಯಾಕ್ಕೆ ಎರಡು ದಿನದ ಪ್ರವಾಸ ಪೂರ್ಣಗೊಳಿಸಿದ ಪ್ರಧಾನಿ ನರೇಂದ್ರ ಮೋದಿ, ಮಂಗಳವಾರ ಆಸ್ಟ್ರಿಯಾ ಪ್ರವಾಸಕ್ಕಾಗಿ ವಿಯೆನ್ನಾಗೆ ತೆರಳಿದರು.

ಮೋದಿ ಭೇಟಿಯೊಂದಿಗೆ 40 ವರ್ಷದ ಬಳಿಕ ಆಸ್ಟ್ರಿಯಾಗೆ ಭಾರತದ ಪ್ರಧಾನಿ ಭೇಟಿ ನೀಡಿದಂತಾಗಲಿದೆ. ಹಿಂದೆ 1983ರಲ್ಲಿ ಆಗಿನ ಪ್ರಧಾನಿ ಇಂದಿರಾಗಾಂಧಿ ಭೇಟಿ ನೀಡಿದ್ದರು.

ಮುಂಬೈ ಅಪಘಾತ: ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಸಲ್ಲಿಕೆ

ಪ್ರಮುಖ ಆರೋಪಿ ಮಿಹಿರ್ ಸೆರೆ

ಮುಂಬೈ (ಪಿಟಿಐ): ಬಿಎಂಡಬ್ಲ್ಯು ಕಾರು ಅಪಘಾತಕ್ಕೀಡಾದ ನಂತರ ತಲೆಮರೆಸಿಕೊಂಡಿದ್ದ ಪ್ರಕರಣದ ಪ್ರಮುಖ ಆರೋಪಿ, ಶಿವಸೇನಾ (ಶಿಂದೆ ಬಣ) ಮುಖಂಡನ ಪುತ್ರ ಮಿಹಿರ್ ಶಾನನ್ನು ಮುಂಬೈ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ವರ್ಲಿಯಲ್ಲಿ ಭಾನುವಾರ ಬೆಳಿಗ್ಗೆ ಸಂಭವಿಸಿದ್ದ ಅಪಘಾತದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ಆಕೆಯ ಪತಿ ಗಾಯಗೊಂಡಿದ್ದರು. ಘಟನೆ ನಡೆದ ಎರಡು ದಿನಗಳ ನಂತರ ಪ್ರಮುಖ ಆರೋಪಿಯನ್ನು ವಿರಾರ್‌ನಲ್ಲಿ ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆರೋಪಿಯ ಬಂಧನಕ್ಕಾಗಿ 11 ತಂಡಗಳನ್ನು ರಚಿಸಿದ್ದ ಪೊಲೀಸರು, ಲುಕ್‌ಔಟ್ ನೋಟಿಸ್ ಹೊರಡಿಸಿದ್ದರು.

ಪ್ರಕರಣದ ತನಿಖೆಯನ್ನು ಮುಂಬೈ ಪೊಲೀಸರು ಚುರುಕುಗೊಳಿಸಿದ್ದು, ಮಿಹಿರ್‌ನ ತಾಯಿ ಹಾಗೂ ಇಬ್ಬರು ಸಹೋದರಿಯನ್ನು ಹೆಚ್ಚಿನ ವಿಚಾರಣೆಗಾಗಿ ಠಾಣೆ ಜಿಲ್ಲೆಯ ಶಹಾಪುರದಿಂದ ಮುಂಬೈಗೆ ಕರೆತಂದಿದ್ದಾರೆ. ಇವರೊಟ್ಟಿಗೆ ಇತರ 10 ಜನರನ್ನು ತನಿಖೆಗೊಳಪಡಿಸಿದ್ದಾರೆ. ಅಪಘಾತದ ನಂತರ ಪುತ್ರನನ್ನು ರಕ್ಷಿಸಲು ಆರೋಪಿಯ ತಂದೆ, ಶಿವಸೇನಾ ಮುಖಂಡ ರಾಜೇಶ್ ಶಾ ಯೋಜಿಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಾರ್‌ಗೆ ಬೀಗ: ತನ್ನ ಸ್ನೇಹಿತರೊಂದಿಗೆ ಶನಿವಾರ ರಾತ್ರಿ ಮಿಹಿರ್ ಭೇಟಿ ನೀಡಿದ್ದ ಮುಂಬೈನ ಜುಹು ಪ್ರದೇಶದಲ್ಲಿನ ಬಾರ್‌ಗೆ ಬೀಗ ಹಾಕಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿ 25 ವರ್ಷ ಪೂರ್ಣಗೊಂಡವರು ಮಾತ್ರ ಮದ್ಯ ಸೇವಿಸಬಹುದು ಎಂಬ ಕಾನೂನಿದೆ. ಮಿಹಿರ್‌ಗೆ 24 ವರ್ಷ ತುಂಬದಿದ್ದರೂ ಬಾರ್‌ನಲ್ಲಿ ಮದ್ಯ ನೀಡಲಾಗಿದೆ. ನಿಯಮ ಉಲ್ಲಂಘಿಸಿರುವುದರಿಂದ ಜಿಲ್ಲಾಧಿಕಾರಿ ಆದೇಶದಂತೆ ಬಾರ್ ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕಸ್ಟಡಿ ಅವಧಿ ವಿಸ್ತರಣೆ: ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನದಲ್ಲಿರುವ ಕಾರು ಚಾಲಕ ರಾಜಋಷಿ ಬಿದಾವತ್‌ನ ಪೊಲೀಸ್ ಕಸ್ಟಡಿ ಅವಧಿಯನ್ನು, ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಎಸ್.ಪಿ. ಭೋಸಲೆ ಅವರು ಜುಲೈ 11ರವರೆಗೂ ವಿಸ್ತರಿಸಿ ಮಂಗಳವಾರ ಆದೇಶಿಸಿದರು.

‘ಬಾನೆಟ್ ಮೇಲೆ ಬಿದ್ದಿದ್ದ ಮಹಿಳೆ’

‘ದ್ವಿಚಕ್ರ ವಾಹನಕ್ಕೆ ಬಿಎಂಡಬ್ಲ್ಯು ಕಾರು ಡಿಕ್ಕಿ ಹೊಡೆದಾಗ, ಕಾವೇರಿ ನಖವಾ ಬಾನೆಟ್ ಮೇಲೆ ಬಿದ್ದಿದ್ದಾರೆ. ಸುಮಾರು 1.5 ಕಿ.ಮೀ. ದೂರ ಹಾಗೆಯೇ ಚಲಿಸಿದೆ. ವರ್ಲಿಯಲ್ಲಿ ಕಾರನ್ನು ನಿಲ್ಲಿಸಿದಾಗ ಆಕೆ ಕೆಳಗುರುಳಿ ಮುಂಭಾಗದ ಚಕ್ರಕ್ಕೆ ಸಿಲುಕಿದ್ದಾರೆ. ಆರೋಪಿಗಳಾದ ಮಿಹಿರ್ ಮತ್ತು ಬಿದಾವತ್ ತಕ್ಷಣವೇ ನಖವಾ ದೇಹವನ್ನು ಚಕ್ರದಿಂದ ಬೇರ್ಪಡಿಸಿ ರಸ್ತೆ ಪಕ್ಕಕ್ಕೆ ಎಳೆದಿದ್ದಾರೆ.’

‘ಈ ಘಟನೆ ನಂತರ ಇಬ್ಬರೂ ತಮ್ಮ ಆಸನಗಳನ್ನು ಬದಲಾಯಿಸಿಕೊಂಡಿದ್ದಾರೆ. ಸ್ಥಳದಿಂದ ಪರಾರಿಯಾಗಲು ಕಾರನ್ನು ಹಿಮ್ಮುಖವಾಗಿ ಚಲಿಸಿದ್ದಾರೆ. ಆ ಸಂದರ್ಭವೂ ಕಾರು ಕಾವೇರಿ ಮೇಲೆ ಹರಿದಿದೆ. ಬಳಿಕ ಸ್ಥಳದಿಂದ ಪರಾರಿಯಾಗಿದ್ದಾರೆ. ಈ ಸಂದರ್ಭದ ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಾವಳಿಯನ್ನು ಕೋರ್ಟ್‌ಗೆ ಸಲ್ಲಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಸುಖ–ದುಃಖದ ಗೆಳೆಯ’ ರಷ್ಯಾ–ಮೋದಿ

ಮಾಸ್ಕೊ (ಪಿಟಿಐ): ಭಾರತ–ರಷ್ಯಾ ಬಾಂಧವ್ಯ ವೃದ್ಧಿಯಲ್ಲಿ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ನಾಯಕತ್ವದ ಕೊಡುಗೆ ಹೆಚ್ಚು ಎಂದು ಶ್ಲಾಘಿಸಿರುವ ಪ್ರಧಾನಿ ನರೇಂದ್ರ ಮೋದಿ, ‘ಭಾರತದ ಸುಖ–ದುಃಖದಲ್ಲಿ ಜೊತೆಗಿರುವ ಗೆಳೆಯನಂತೆ ರಷ್ಯಾ’ ಎಂದು ಬಣ್ಣಿಸಿದ್ದಾರೆ.

ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ಪಶ್ಚಿಮ ರಾಷ್ಟ್ರಗಳು ರಷ್ಯಾದ ಸಾಮರ್ಥ್ಯವನ್ನು ನಿಸ್ತೇಜಗೊಳಿಸಲು ಯತ್ನಿಸುತ್ತಿರುವ ಹೊತ್ತಿನಲ್ಲಿಯೇ ಪ್ರಧಾನಿ ಈ ಮಾತು ಹೇಳಿದ್ದಾರೆ. ಅವರು ಇಲ್ಲಿ ಭಾರತ ಮೂಲದ ಜನಸಮೂಹವನ್ನು ಉದ್ದೇಶಿಸಿ ಮಾತನಾಡಿದರು.

‘ರಷ್ಯಾದ ಹೆಸರು ಕೇಳುತ್ತಿದ್ದಂತೆಯೇ ಪ್ರತಿ ಭಾರತೀಯನಲ್ಲೂ ರಷ್ಯಾ ನಂಬಿಕಸ್ಥ ಪಾಲುದಾರ. ಕಷ್ಟ–ಸುಖದಲ್ಲಿ ಜೊತೆಗಿರುವ ಗೆಳೆಯ ಎಂಬ ಭಾವನೆ ಮೂಡುತ್ತದೆ’ ಎಂದು ಹೇಳಿದರು.

‘ಚಳಿಗಾಲದಲ್ಲಿ ರಷ್ಯಾದ ತಾಪಮಾನ ಎಷ್ಟೇ ಮೈನಸ್ ಡಿಗ್ರಿ ಸೆಲ್ಸಿಯಸ್ ಇರಲಿ. ಭಾರತ–ರಷ್ಯಾದ ಬಾಂಧವ್ಯ ಎಂದಿಗೂ ಪ್ಲಸ್ ಆಗಿರಲಿದೆ. ಮಧುರವಾಗಿರಲಿದೆ. ಈ ಬಾಂಧವ್ಯವು ದೃಢವಾದ, ಪರಸ್ಪರ ನಂಬಿಕೆ ಮತ್ತು ಗೌರವದ ಅಡಿಪಾಯವನ್ನು ಅವಲಂಬಿಸಿದೆ’ ಎಂದು ಮೋದಿ ಹೇಳಿದರು.

‘ಜಗತ್ತಿಗೆ ಈಗ ಬೇಕಾಗಿರುವುದು ಕೂಡಿ ಬಾಳುವ ಮನೋಧರ್ಮ; ಪ್ರಭಾವ ಬೀರುವ ಧೋರಣೆ ಅಲ್ಲ. ಕೂಡಿ ಬಾಳುವುದರ ಪ್ರಾಮುಖ್ಯವನ್ನು ಭಾರತದಷ್ಟು ಹೆಚ್ಚು ಅರ್ಥಪೂರ್ಣವಾಗಿ ಜಗತ್ತಿಗೆ ಬೇರಾರೂ ಸಾರಲು ಸಾಧ್ಯವಿಲ್ಲ. ಏಕೆಂದರೆ, ಭಾರತದಲ್ಲಿ ಈ ಭಾವನೆಯನ್ನು ಪೂಜಿಸುವ ಸಂಪ್ರದಾಯವಿದೆ’ ಎಂದು ಹೇಳಿದರು.

‘ಪ್ರಗತಿ ಕುರಿತು ಭಾರತದಲ್ಲಿ 10 ವರ್ಷಗಳಲ್ಲಿ ನೋಡಿರುವುದು ಟ್ರೇಲರ್ ಮಾತ್ರ. ಮುಂದಿನ 10 ವರ್ಷಗಳಲ್ಲಿ ಇನ್ನಷ್ಟು ತ್ವರಿತಗತಿಯ ಪ್ರಗತಿ ನೋಡಲಿದ್ದೇವೆ’ ಎಂದು ಹೇಳಿದರು.

ಭಾರತ–ರಷ್ಯಾ ಆರ್ಥಿಕ ಸಹಕಾರ–2030: ಹಲವು ನಿರ್ಧಾರ

ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಉಪಸ್ಥಿತಿಯಲ್ಲಿ ಕೈಗೊಂಡ ತೀರ್ಮಾನಗಳು

- ದ್ವಿಪಕ್ಷೀಯ ವ್ಯಾಪಾರದ ಉದಾರೀಕರಣ ಮತ್ತು ತೆರಿಗೆ ನಿರ್ಬಂಧಗಳ ತೆರವು
- ಇಎಇಯು–ಭಾರತ ಮುಕ್ತ ಮಾರಾಟ ವಲಯದ ಸೃಷ್ಟಿಸುವುದು
- 2030ರ ಹೊತ್ತಿಗೆ 100 ಶತಕೋಟಿ ಡಾಲರ್‌ನಷ್ಟು ವಹಿವಾಟಿನ ಗುರಿ
- ರಾಷ್ಟ್ರೀಯ ಕರೆನ್ಸಿ ಬಳಕೆ ಮೂಲಕ ದ್ವಿಪಕ್ಷೀಯ ಪಾವತಿ ವ್ಯವಸ್ಥೆ ರೂಪಿಸುವುದು
- ಪರಸ್ಪರ ಒಪ್ಪಂದಗಳಲ್ಲಿ ಡಿಜಿಟಲ್ ಹಣಕಾಸು ವ್ಯವಸ್ಥೆಯ ಬಳಕೆ
- ಹೊಸ ಮಾರ್ಗಗಳ ಪರಿಚಯದ ಮೂಲಕ ಭಾರತದ ಜೊತೆಗೆ ಸರಕು ವಹಿವಾಟು ವೃದ್ಧಿ
- ಇದಕ್ಕಾಗಿ ದಕ್ಷಿಣ–ಉತ್ತರ ಅಂತರರಾಷ್ಟ್ರೀಯ ಟ್ರಾನ್ಸ್‌ಪೋರ್ಟ್ ಕಾರಿಡಾರ್, ಉತ್ತರದ ಸಮುದ್ರ ಮಾರ್ಗ, ಚೆನ್ನೈ–ವ್ಲಾಡಿವೊಸ್ಟೊಕ್ ಸಮುದ್ರ ಮಾರ್ಗಗಳ ಪರಿಚಯ.
- ದ್ವಿಪಕ್ಷೀಯ ವ್ಯಾಪಾರದಲ್ಲಿ ಕೃಷಿ ಉತ್ಪನ್ನ, ಆಹಾರ ಮತ್ತು ರಸಗೊಬ್ಬರಗಳ ಪ್ರಮಾಣ ಏರಿಕೆ
- ಇಂಧನ, ಅಣುಶಕ್ತಿ, ತೈಲ ಸಂಸ್ಕರಣೆ, ಪೆಟ್ರೊಕೆಮಿಕಲ್ಸ್ ವಲಯದಲ್ಲಿ ಪರಸ್ಪರ ಸಹಕಾರ ವೃದ್ಧಿ

ಮಾನವ ಕಳ್ಳಸಾಗಣೆ: ನಾಲ್ವರ ವಿರುದ್ಧ ಬಂಧನ ವಾರಂಟ್

ಹೈದರಾಬಾದ್: ಅಮೆರಿಕದ ಉತ್ತರ ಟೆಕ್ಸಾಸ್‌ನಲ್ಲಿ ನೆಲೆಸಿರುವ ನಾಲ್ವರು ತೆಲುಗು ಭಾಷಿಕರ ವಿರುದ್ಧ ಮಾನವ ಕಳ್ಳಸಾಗಣೆ ಆರೋಪದ ಮೇಲೆ ಪೊಲೀಸರು ಸೋಮವಾರ ಬಂಧನ ವಾರಂಟ್ ಹೊರಡಿಸಿದ್ದಾರೆ.

ಸಂತೋಷ್ ಕಟ್ಕೂರಿ (31), ದ್ವಾರಕಾ ಗುಂಡ (31), ಚಂದನ್ ದಾಸೀರೆಡ್ಡಿ (24) ಮತ್ತು ಅನಿಲ್ ಮಾಳೆ (37) ವಿರುದ್ಧ ವಾರಂಟ್ ಹೊರಡಿಸಲಾಗಿದೆ.

ಸಂತೋಷ್, ದ್ವಾರಕಾ ಮತ್ತು ಚಂದನ್ ಮೆಲಿಸ್ಸಾ ನಿವಾಸಿಗಳು ಮತ್ತು ಅನಿಲ್ ಪ್ರಾಸ್ಪರ್‌ನ ನಿವಾಸಿ.

ಅನುಮಾನಾಸ್ಪದ ಚಟುವಟಿಕೆ ಮತ್ತು ಮಾನವ ಕಳ್ಳಸಾಗಾಣಿಕೆ ವಿರುದ್ಧದ ಧ್ವನಿಗೆ ಪ್ರತಿಯಾಗಿ ‘1000 ಗಿನ್ಸ್‌ಬರ್ಗ್ ಲೇನ್’ ಪ್ರದೇಶಕ್ಕೆ ಕಳೆದ ಮಾರ್ಚ್ 13ರಂದು ಅಧಿಕಾರಿಗಳ ತಂಡವನ್ನು ಕಳುಹಿಸಲಾಗಿತ್ತು ಎಂದು ಪ್ರಿನ್ಸ್‌ಟನ್ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಥಮಿಕ ವರದಿ ಬಳಿಕ ಪ್ರಿನ್ಸ್‌ಟನ್ ಪೊಲೀಸರು ಸಂತೋಷ್ ಕಟ್ಕೂರಿ ಅವರ ಮನೆಯಲ್ಲಿ ಶೋಧ ನಡೆಸಿದ್ದರು. ಈ ಸಂದರ್ಭದಲ್ಲಿ 15 ಮಂದಿ ವಯಸ್ಕ ಮಹಿಳೆಯರು ಅಲ್ಲಿ ಇದ್ದರು. ಶೋಧದ ವೇಳೆ ಹಲವು ಲ್ಯಾಪ್‌ಟಾಪ್, ಫೋನ್‌ಗಳು, ಪ್ರಿಂಟರ್‌ಗಳು ಮತ್ತು ಕೆಲ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿತ್ತು.

ಮಧ್ಯಪ್ರದೇಶ ಸಂಪುಟಕ್ಕೆ ರಾಮ್‌ನಿವಾಸ್ ರಾವತ್ ಸೇರ್ಪಡೆ

ತಪ್ಪು ಉಚ್ಚಾರಣೆ: 2 ಸಲ ಪ್ರಮಾಣವಚನ

ಭೋಪಾಲ್ (ಪಿಟಿಐ): ಕಾಂಗ್ರೆಸ್ ತೊರೆದು ಏಪ್ರಿಲ್‌ನಲ್ಲಿ ಬಿಜೆಪಿಗೆ ಸೇರ್ಪಡೆಯಾಗಿದ್ದ ರಾಮ್‌ನಿವಾಸ್ ರಾವತ್ ಅವರು ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಅವರ ಸಚಿವ ಸಂಪುಟಕ್ಕೆ ಸೋಮವಾರ ಸೇರ್ಪಡೆಯಾದರು.

ಪ್ರಮಾಣವಚನ ಸ್ವೀಕರಿಸುವ ವೇಳೆ ರಾವತ್ ‘ರಾಜ್ಯ ಕೆ ಮಂತ್ರಿ’ (ಸಂಪುಟ ದರ್ಜೆ ಸಚಿವ) ಎಂದು ಹೇಳುವ ಬದಲು ರಾಜ್ಯಮಂತ್ರಿ (ರಾಜ್ಯ ದರ್ಜೆ ಸಚಿವ) ಎಂದರು. ಈ ವೇಳೆ ಅಲ್ಲಿದ್ದ ಮಾಧ್ಯಮ ಪ್ರತಿನಿಧಿಗಳು ಗೊಂದಲಕ್ಕೆ ಒಳಗಾದರು.

ಅಧಿಕಾರಿಗಳಿಗೆ ಈ ವಿಚಾರ ತಿಳಿದ ನಂತರ ಮತ್ತೊಮ್ಮೆ ಪ್ರಮಾಣವಚನ ಸ್ವೀಕರಿಸಲು ವ್ಯವಸ್ಥೆ ಮಾಡಿದರು.

ರಾಜಭವನದ ದರ್ಬಾರ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಮಂಗುಭಾಯಿ ಪಟೇಲ್ ಅವರು ರಾವತ್‌ಗೆ ಮತ್ತೊಮ್ಮೆ ಪ್ರಮಾಣ ವಚನ ಬೋಧಿಸಿದರು. ಆಗ ರಾವತ್ ಅವರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಸಭಾ ಚುನಾವಣಾ ಸಂದರ್ಭದಲ್ಲಿ ರಾವತ್ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ, ಬಿಜೆಪಿಗೆ ಸೇರ್ಪಡೆಯಾಗಿದ್ದರು. ವಿಜಯಪುರ ವಿಧಾನಸಭಾ ಕ್ಷೇತ್ರದಿಂದ ರಾಮ್ ನಿವಾಸ್ ರಾವತ್ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಕಾಂಗ್ರೆಸ್‌ನಿಂದ ಗೆದ್ದಿದ್ದ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಸ್ಪೀಕರ್ ನರೇಂದ್ರ ಸಿಂಗ್ ತೋಮರ್ ಅಂಗೀಕರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾವತ್ ಸೇರ್ಪಡೆಯಿಂದ ಮೋಹನ್ ಯಾದವ್ ಸಂಪುಟದ ಸದಸ್ಯರ ಸಂಖ್ಯೆ 32ಕ್ಕೆ ಏರಿಕೆಯಾಗಿದೆ.

‘ಎಎಪಿ ಮುಗಿಸಲು ಕೇಂದ್ರ ಪಿತೂರಿ’

ನವದೆಹಲಿ(ಪಿಟಿಐ): ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಎಎಪಿ ವಿರುದ್ಧ ದೊಡ್ಡ ಪಿತೂರಿ ನಡೆಸುತ್ತಿದೆ ಎಂದು ಆ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಪಂಕಜ್ ಗುಪ್ತಾ ಅವರು ಮಂಗಳವಾರ ಆರೋಪಿಸಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಎಎಪಿಯನ್ನು ಹೆಸರಿಸಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಪೂರಕ ಚಾರ್ಜ್ ಶೀಟ್ ಕುರಿತು ಅವರು ಈ ಆರೋಪಮಾಡಿದ್ದಾರೆ.ಪಂಜಾಬ್‌ಮತ್ತು ದೆಹಲಿಯಲ್ಲಿ ಆಡಳಿತ ನಡೆಸುತ್ತಿರುವ ಎಎಪಿಯನ್ನು ಯಾವುದೇ ಬೆಲೆ ತೆತ್ತಾದರೂ ಮುಗಿಸಲು ಬಿಜೆಪಿ ಬಯಸುತ್ತಿದೆ ಎಂದು ಗುಪ್ತಾ ಆರೋಪಿಸಿದ್ದಾರೆ.

‘ಎಸ್‌ಎಫ್‌ಜೆ’ ಮೇಲಿನ ನಿಷೇಧ ಮತ್ತೆ 5 ವರ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ: ಖಾಲಿಸ್ತಾನಿ ಸಂಘಟನೆ ‘ಸಿಖ್ಸ್ ಫಾರ್ ಜಸ್ಟಿಸ್’ (ಎಸ್‌ಎಫ್‌ಜೆ) ಮೇಲಿನ ನಿಷೇಧವನ್ನು ಮಂಗಳವಾರ ಮತ್ತೆ ಐದು ವರ್ಷಗಳವರೆಗೆ ವಿಸ್ತರಿಸಿದ್ದು, ಈ ಸಂಘಟನೆ ದೇಶದ ಆಂತರಿಕ ಭದ್ರತೆಗೆ ಹಾನಿ ಉಂಟುಮಾಡುವ ಚಟುವಟಿಕೆಗಳಲ್ಲಿ ತೊಡಗಿದೆ ಎಂದು ಗೃಹ ವ್ಯವಹಾರಗಳ ಸಚಿವಾಲಯ (ಎಂಎಚ್‌ಎ) ಹೇಳಿದೆ.

ಮಂಗಳವಾರದ ಗೆಜೆಟ್ ಅಧಿಸೂಚನೆಯಲ್ಲಿ, ದೇಶದ ಸಮಗ್ರತೆ ಮತ್ತು ಭದ್ರತೆಗೆ ಹಾನಿಯಾಗುವ ಚಟುವಟಿಕೆಗಳಲ್ಲಿ ಎಸ್‌ಎಫ್‌ಜೆ ತೊಡಗಿದೆ ಎಂದು ಕೇಂದ್ರ ಸರ್ಕಾರ ಅಭಿಪ್ರಾಯಪಟ್ಟಿದೆ ಎಂದು ಎಂಎಚ್‌ಎ ಹೇಳಿದೆ.

ಈ ಹಿಂದೆ ಹೇರಲಾಗಿದ್ದ ಐದು ವರ್ಷಗಳ ನಿಷೇಧವು ಬುಧವಾರ ಕೊನೆಗೊಳ್ಳುತ್ತಿದೆ.

ನಿರುದ್ಯೋಗ: ಕೇಂದ್ರದ ವಿರುದ್ಧ ಖರ್ಗೆ ವಾಗ್ದಾಳಿ

ನವದೆಹಲಿ (ಪಿಟಿಐ): ‘ಯುವಜನರನ್ನು ನಿರುದ್ಯೋಗಿಗಳನ್ನಾಗಿ ಮಾಡುವುದು ಮೋದಿ ಸರ್ಕಾರವು ಹೊಂದಿರುವ ಏಕೈಕ ಗುರಿ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ನಿರುದ್ಯೋಗ ಕುರಿತಂತೆ ಸಿಟಿ ಗ್ರೂಪ್ ಬಿಡುಗಡೆ ಮಾಡಿರುವ ವರದಿಯನ್ನು ಮೋದಿ ಸರ್ಕಾರ ನಿರಾಕರಿಸಬಹುದು. ಆದರೆ, ಅಂಕಿ ಅಂಶಗಳನ್ನು ಹೇಗೆ ನಿರಾಕರಿಸಲು ಸಾಧ್ಯ ಎಂದು ಅವರು ಎಕ್ಸ್ ಜಾಲತಾಣದ ಮೂಲಕ ಪ್ರಶ್ನಿಸಿದ್ದಾರೆ.

ಕಳೆದ 10 ವರ್ಷಗಳಲ್ಲಿ ಅಸಂಖ್ಯಾತ ಯುವಜನರ ಉದ್ಯೋಗದ ಕನಸನ್ನು ಮೋದಿ ಸರ್ಕಾರ ನುಚ್ಚುನೂರು ಮಾಡಿದೆ ಎಂಬುದಂತೂ ಸತ್ಯ. ಇತ್ತೀಚಿನ ಅಂಕಿ ಅಂಶಗಳು ಈ ಕುರಿತಂತೆ ಸರ್ಕಾರದ ಪ್ರತಿಪಾದನೆಯನ್ನು ಅಲ್ಲಗಳೆಯುತ್ತವೆ ಎಂದೂ ಹೇಳಿದ್ದಾರೆ.

ಎನ್‌ಎಸ್‌ಎಸ್‌ಒ ವಾರ್ಷಿಕ ಸಮೀಕ್ಷೆಯ ಅನುಸಾರ, ಉತ್ಪಾದಕ ವಲಯದಲ್ಲಿ 2015 ರಿಂದ 2023ರ ವರೆಗಿನ ಏಳು ವರ್ಷಗಳಲ್ಲಿ 54 ಲಕ್ಷ ಜನರು ಉದ್ಯೋಗ ಕಳೆದುಕೊಂಡಿದ್ದಾರೆ.

Chamarajanagar Dist Co-operative Milk Producer's Societies Union Limited
Kuderu Village & Post, Santhemarahalli Hobali, Chamarajanagara - 571316

EXPRESSION OF INTEREST

CHAMUL located at Kuderu village, Chamarajanagar. Being one of the KMF member union is processing an average of 2.87 LLPD of milk per day from 466 primary milk co-operative societies where 33000 farmers are pouring milk to primary MPCS and most of the members are depending on dairy farming.

CHAMUL providing health care & veterinary service for the cattle's of pourer member throughout the District. Regarding the Veterinary health care service we are hiring 4 veterinarians on consultant basis who have pursued BVSc & AH degree from VCI (veterinary council of India) recognized institutes & veterinary doctors who have retired from the service, Interested veterinarians please send the resume to mail id ahaichamul2016@gmail.com.

Qualification: BVSc & AH, Salary: 52000/- Monthly

For more information please contact below phone numbers.
Contact numbers: Dr.Amar N - 6366824207
Dr.Naveen kumar R - 7353516506
Sd/-
Managing Director, CHAMUL

ನಗರಸಭಾ ಕಾರ್ಯಾಲಯ, ಉಡುಪಿ
ಉಡುಪಿ ಜಿಲ್ಲೆ–576101 Phone: 0820-2520446/2520306 Fax: 0820-2524236
Website: www.udupicity.mrc.gov.in E-mail: itstaff_ulb_udupi@yahoo.com
UCMC/HS/SM-6000L/CR-107/2024-25 Date: 09/07/2024

ಟೆಂಡರ್ ಪ್ರಕಟಣೆ

ಕೆ.ಟಿ.ಟಿ.ಪಿ.ಕಾಯ್ದೆ 1999 ಮತ್ತು ನಿಯಮಗಳು 2000ರನ್ವಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 6000 ಲೀ ಸಾಮಾರ್ಥ್ಯದ ಸಕ್ಕಿಂಗ್ ಮೆಷಿನ್ ವಾಹನವನ್ನು ಪೂರೈಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 24/07/2024 ಸಮಯ 5.00** ಗಂಟೆವರೆಗೆ. ಅರ್ಹ ಪೂರೈಕೆದಾರರು/ಗುತ್ತಿಗೆದಾರರು/ಏಜೆನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು. ಅನುದಾನದ ವಿವರ:– ಎಸ್.ಬಿ.ಎಂ 1.0 ಉಳಿತಾಯದ ಅನುದಾನ

ಕೆಲಸದ ಹೆಸರು: Procurement of 6000 L Capacity Sucking Machine

ಟೆಂಡರ್ ಸಂಖ್ಯೆ: **DMA/2024-25/IND1860**, ಟೆಂಡರಿಗಿಟ್ಟ ಮೊತ್ತ: **Rs.35,00,000.00/-**
ಇ.ಎಂ.ಡಿ. ಮೊತ್ತ: **Rs.87,500.00/-**

ಸಹಿ/–, ಪೌರಾಯುಕ್ತರು, ನಗರಸಭೆ, ಉಡುಪಿ

ವಾಸಾಇ/ಸನಿಉ/ಕೆಎಸ್‌ಎಂಸಿಎ/109/24–25 ದಿ: 09.07.2024

ಕರ್ನಾಟಕ ಸರ್ಕಾರ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಿಜಯಪುರ
ಸಂಖ್ಯೆ: ಎ1/ಅಲ್ಪಾವಧಿ ಇ–ಟೆಂಡರ್/2022–23 ದಿನಾಂಕ: 09.07.2024

ಅಲ್ಪಾವಧಿ ಇ–ಟೆಂಡರ್ ಮರು ಪ್ರಕಟಣೆ

2022–23ನೇ ಸಾಲಿನ ವಿವಿಧ ಯೋಜನೆಯಡಿ ಜಿಲ್ಲೆಯ ಬಿ.ಆರ್.ಸಿ.ಗಳಿಗೆ (Laptop), ಪದವಿ ಪೂರ್ವ ಕಾಲೇಜುಗಳಿಗೆ (Int LED Display, 2Kv Online UPS Battery, Mini PC) ಮತ್ತು ಕರ್ನಾಟಕ ಪಬ್ಲಿಕ ಶಾಲೆಗಳಿಗೆ (Laptop, 1KV Online UPS Battery, LED) ವಿವಿಧ ಸಾಧನ ಸಾಮಗ್ರಿಗಳನ್ನು ಪೂರೈಸಲು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ದಿನಾಂಕ: 24–07–2024 ರಂದು ಸಾಯಂಕಾಲ 5.00 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9448999362 ಹಾಗೂ ಟೆಂಡರ್ ದಾಖಲೆಗಳನ್ನು https://kppp.karnataka.gov.in ನಲ್ಲಿ ಪಡೆಯಬಹುದು.

1. Tender No:- DPI/2023-24/IND0222/call-2 ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.7.08 ಲಕ್ಷ
2. Tender No:- DPI/2023-24/IND0226/call-2 ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.23.25 ಲಕ್ಷ.

ಸಹಿ/– ಉಪನಿರ್ದೇಶಕರು(ಅ) ಹಾಗೂ ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಿಜಯಪುರ

ವಾಸಾಸಂಇ/ವಿಜಯಪುರ/99/ಕೆಎಸ್‌ಎಂಸಿಎ/2024–25

ಪುರಸಭಾ ಕಾರ್ಯಾಲಯ, ತರೀಕೆರೆ. ಚಿಕ್ಕಮಗಳೂರು ಜಿಲ್ಲೆ.
Ka tarikere tmc gmail.com phone No: 08261–222233
ಸಂ.ಪುತ/ಆ.ಶಾ/ಸಿಆರ್/ಎಸ್.ಬಿ.ಎಂ 2.0/ಎಂ.ಆರ್.ಎಫ್/22/2023–24 ದಿನಾಂಕ : 05.07.2024

: ಟೆಂಡರ್ ಪ್ರಕಟಣೆ :

ತರೀಕೆರೆ ಪುರಸಭೆಯ ಸ್ವಚ್ಛ ಭಾರತ್ ಮಿಷನ್ (ನಗರ)20 ಯೋಜನೆಯಡಿ ಈ ಕೆಳಕಂಡಂತೆ ಕಾಮಗಾರಿಗೆ ಇ–ಪೋರ್ಟಲ್ ಮುಖಾಂತರ ಕೆ.ಟಿ.ಪಿ.ಪಿ ನಿಯಮದಂತೆ ಇ–ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ನೋಂದಾಯಿತ ಅರ್ಹ ಗುತ್ತಿಗೆದಾರರು ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ವಿವರಗಳಿಗೆ ವೆಬ್‌ಸೈಟ್ ವಿಳಾಸ **http://eproc.Karnataka.gov.in** ಸಂಪರ್ಕಿಸತಕ್ಕದ್ದು.

1) ಇ–ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:22.07.2024 ರ ಸಂಜೆ 17:30** ರೊಳಗಾಗಿ.
2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:24.07.2024 ರ ಬೆಳಗ್ಗೆ 10:30** ಗಂಟೆಗೆ.
3) ಆರ್ಥಿಕ ಬಿಡ್ ತೆರೆಯುವ **ದಿನಾಂಕ:26.07.2024 ರ ಬೆಳಗ್ಗೆ 10:30** ಗಂಟೆಗೆ. ಇಂಡೆಂಟ್ ಸಂಖ್ಯೆ : **DMA/2024-25/BD/WORK_INDENT21053.**

ಅಂದಾಜು ಮೊತ್ತ ರೂ 78.50 ಲಕ್ಷಗಳು.

ಸೂಚನೆ : ಟೆಂಡರ್‌ನಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ–ಪೋರ್ಟಲ್ ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು.

ಸಹಿ/– (ಡಾ|| ಕೆ.ಜಿ.ಕಾಂತರಾಜ್) ಆಡಳಿತಾಧಿಕಾರಿ, ಪುರಸಭೆ, ತರೀಕೆರೆ.
ಸಹಿ/– (ಪ್ರಶಾಂತ ಹೆಚ್.) ಮುಖ್ಯಾಧಿಕಾರಿ, ಪುರಸಭೆ, ತರೀಕೆರೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಸಾರಿಗೆ ಸದನ ಮುಖ್ಯ ರಸ್ತೆ, ಕಲಬುರಗಿ–585102
ದೂರವಾಣಿ ಸಂ: 08472 227687
ಸಂಖ್ಯೆ: ಕಕಸಾ/ಕೇಕ/ನೇಮಕ/ನೇ–1/ಕ–387/835/2024–25 ದಿನಾಂಕ: 09.07.2024

ಪ್ರಕಟಣೆ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೇಮಕಾತಿ ಜಾಹೀರಾತು ಸಂಖ್ಯೆ:01/2022 ಮತ್ತು ಸಂಖ್ಯೆ: 02/2022 ದಿನಾಂಕ: 17.08.2022 ಗಳಿಗೆ ಸ್ಪಂದಿಸಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ 13.07.2024 ಮತ್ತು 14.07.2024 ರಂದು ರಾಜ್ಯದ ವಿವಿದ ಜಿಲ್ಲಾ ಕೇಂದ್ರಗಳಲ್ಲಿ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸುತ್ತಿದೆ. ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (KEA) ವೆಬ್‌ಸೈಟ್ ಗೆ ಭೇಟಿ ನೀಡಿ ಪರೀಕ್ಷಾ ಪ್ರವೇಶ ಪತ್ರವನ್ನು (Hallticket) ಡೌನ್ಲೋಡ್ ಮಾಡಿಕೊಂಡು ತಪ್ಪದೇ ಪರೀಕ್ಷೆಗೆ ಹಾಜರಾಗಲು ತಿಳಿಸಲಾಗಿದೆ.

ವಾ.ಸಾ.ಸಂ.ಇ/ಕಲಬುರಗಿ/188/ಕೆ.ಎಸ್.ಎಂ.ಸಿ.&ಎ/2024–25 ಸಹಿ/–ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ರಿಚ್ ಮಂಡ್ ರಸ್ತೆ (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ), ಬೆಂಗಳೂರು–25
ದೂರವಾಣಿ : 080–25584102 / 25594893
Website: www.ksphc.org e mail : eecontractksphc@gmail.com,
ಸಂಖ್ಯೆ: ಕಾಅ/ಕರಾಪೊವ&ಮೂಸೌಅನಿನಿ/ಕಾಂಟ್ರಾಕ್ಟ್/ಟೆಂಡರ್/07/2024–25/139 ದಿನಾಂಕ: 09.07.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರಾಪೊವ ಮತ್ತು ಮೂಸೌಅನಿನಿ ಕರ್ನಾಟಕ ಪಾರದರ್ಶಕತೆ 2000 ಕಾಯ್ದೆ ಹಾಗೂ ಸ್ಟಾಂಡರ್ಡ್ ಟೆಂಡರ್ ದಾಖಲಾತಿ ಪ್ರಕಾರ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **https://kppp.karnataka.gov.in** ಮೂಲಕ ಆನ್‌ಲೈನ್ ಟೆಂಡರ್ ಅನ್ನು ಆಹ್ವಾನಿಸಿದೆ.

1) **ತುಮಕೂರು ಜಿಲ್ಲೆಯ ಕೊಡಿಗೇನಹಳ್ಳಿಯಲ್ಲಿ ಪೊಲೀಸ್ ಠಾಣೆ (ಗ್ರೇಡ್–3) ನಿರ್ಮಾಣ. (KW-4) (ಎರಡು ಟೆಂಡರ್ ಡಾಕ್ಯುಮೆಂಟ್ ವ್ಯವಸ್ಥೆ). ಟೆಂಡರಿಗಿಟ್ಟ ಮೊತ್ತ ರೂ.133.17 ಲಕ್ಷ** (ಜಿಎಸ್‌ಟಿ ಒಳಗೊಂಡಿರುತ್ತದೆ).
2) **ಹಾವೇರಿ ಜಿಲ್ಲೆಯ ಹಾವೇರಿಯಲ್ಲಿರುವ ಜಿಲ್ಲಾ ಪೊಲೀಸ್ ಕಛೇರಿ (D.P.O) ಕಟ್ಟಡಕ್ಕೆ ಪೀಠೋಪಕರಣಗಳನ್ನು ಒದಗಿಸುವುದು. (KW-2). (ಎರಡು ಟೆಂಡರ್ ಡಾಕ್ಯುಮೆಂಟ್ ವ್ಯವಸ್ಥೆ). ಟೆಂಡರಿಗಿಟ್ಟ ಮೊತ್ತ ರೂ.36.23 ಲಕ್ಷ** (ಜಿಎಸ್‌ಟಿ ಒಳಗೊಂಡಿರುತ್ತದೆ).

ಆಸಕ್ತ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇ.ಎಂ.ಡಿ, ಟೆಂಡರ್ ಡಾಕ್ಯುಮೆಂಟ್‌ಗಳು ಇತ್ಯಾದಿ ವಿವರಗಳು **10.07.2024 ರಿಂದ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ (KPPP) ಲಭ್ಯವಿವೆ. ಕರಾಪೊವ ಮತ್ತು ಮೂಸೌಅನಿನಿ ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿದೆ.

ಸೂಚನೆ: ಇನ್ನು ಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ / ಮಾರ್ಪಾಡು ಇದ್ದಲ್ಲಿ ಇದನ್ನು ಕೆಪಿಪಿ ಪೊರ್ಟಲ್ ನಲ್ಲಿ ಮಾತ್ರ ಪ್ರಕಟಿಸಿಲಾಗುವುದು.

DIPR/CP/RO843/AAPL/2024-25 ಸಹಿ/– ಕಾರ್ಯನಿರ್ವಾಹಕ ಅಭಿಯಂತರರು–ಗುತ್ತಿಗೆ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (3ನೇ ಕರೆ)
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ & ಗುಣ ಆಶ್ವಾಸನೆ)
9ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–09

ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
ಗುಣ ಆಶ್ವಾಸನೆ	ಬೆಂಜಮಂ/ಇಕ್ಯೂಎಟಿಇ/ಪಿಬಿ/229/2024–25 ದಿನಾಂಕ:08.07.2024	ರೂ.14,93,156/– / ರೂ.30,000/–	18.07.2024ರ ಸಂಜೆ 05:30 ಗಂಟೆವರೆಗೆ	20.07.2024ರ ಮಧ್ಯಾಹ್ನ 12:00 ಗಂಟೆಗೆ

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯ ನಿರ್ವಾಹಕ ಅಭಿಯಂತರರು (ಗುಣ ಆಶ್ವಾಸನೆ)
DIPR/CP/KAVITA/848/2024-25

ದಿ ಗದಗ ಕೋ–ಆಪ್‌ರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್, ಗದಗ
ಕ್ರ.ಸಂ. : GCIE/Tender/2024-25 ದಿನಾಂಕ : 09–07–2024

ಅಲ್ಪಾವಧಿ KW-4 ಟೆಂಡರ ಪ್ರಕಟಣೆ

ದಿ. ಗದಗ ಕೋ–ಆಪ್‌ರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್, ಗದಗ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಗದಗದಲ್ಲಿ ತಿರಂಗಾ ಪಾರ್ಕ ಪ್ರದರ್ಶನ ಕೇಂದ್ರ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಿಂದ ನೋಂದಣಿ ಮಾಡಿಸಿದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಕೆ.ಟಿ.ಟಿ.ಪಿ. ನಿಯಮಾವಳಿಗಳಿಗೆ (KW-4) ಪ್ರಕಾರ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **www.kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಗುತ್ತಿಗೆ ಕಾರ್ಯಕ್ರಮದ ವಿವರಗಳು ಇಂತಿವೆ. **(Calender of Events)**

1	ಗುತ್ತಿಗೆದಾರರ ಪ್ರಿ–ಬಿಡ್ ಮಿಟಿಂಗ್ ದಿನಾಂಕ	16–07–2024 ಬೆಳಗ್ಗೆ 10.30 ಘಂಟೆಗೆ.
2	ಖಾಲಿ ಟೆಂಡರ ಫಾರ್ಮಗಾಗಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಗಳನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ, ಸಲ್ಲಿಸುವ ಕೊನೆಯ ದಿನಾಂಕ	22–07–2024 ಸಾಯಂಕಾಲ 4.00 ಘಂಟೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	23–07–2024 ಸಾಯಂಕಾಲ 4.30 ಘಂಟೆಗೆ
4	ಆರ್ಥಿಕ ಬಿಡ್ ತೆರೆಯುವ ದಿನಾಂಕ	24–07–2024 ಸಾಯಂಕಾಲ 4.30 ಘಂಟೆಗೆ

ಕಾಮಗಾರಿಯ **Work Indent NO: GCOIE/2024-25/BD/WORK_INDENT1/Call-2**

ಟೆಂಡರ ಫಾರ್ಮ್‌ಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ **www.kppp.karnataka.gov.in** ನಲ್ಲಿ ಲಾಗಿನ್ ಮಾಡಿ ನೋಡಬಹುದು.

ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/- ಕಾರ್ಯದರ್ಶಿಗಳು, ದಿ ಗದಗ ಕೋ-ಆಪ್‌ರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಲಿಮಿಟೆಡ್

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ
ಕಾರ್ಯನಿರ್ವಾಹಕ ಇಂಜಿನೀಯರವರ ಕಾರ್ಯಾಲಯ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ವಿಭಾಗ ನಂ: 01, ಬಾಗಲಕೋಟೆ–587102. ದೂರವಾಣಿ ಸಂಖ್ಯೆ: 08354–295372
Office of the Executive Engineer, Bagalkote Town Development Authority, Division No: 01, Bagalkote-587102. E-mail: btdadn1@gmail.com
ಟೆಂಡರ್ ಪ್ರಕಟಣೆ ಸಂಖ್ಯೆ: ಕಾನಿಇಂ/ಬಾ.ಪ.ಅ.ಪ್ರಾ/ವಿ–1/ಪಿಬಿ–02/ಟೆ.ಪ್ರಸಂಖ್ಯೆ–07/2024–25/828 ದಿನಾಂಕ: 06–07–2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–06.
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ನಂ: 59 ಕಾಮಗಾರಿಗೆ ದ್ವಿಲಕೋಟಿ ಪದ್ಧತಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ: **19.07.2024 ಸಂಜೆ 05.00 ಘಂಟೆವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: **20.07.2024 ಸಂಜೆ 05.01 ಘಂಟೆಗೆ** (ಸಾಧ್ಯವಾದಲ್ಲಿ), ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: **22.07.2024 ಬೆಳಿಗ್ಗೆ 11.00 ಘಂಟೆಗೆ** (ಸಾಧ್ಯವಾದಲ್ಲಿ.) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: **08354–295372** ಸಂಪರ್ಕಿಸಬಹುದಾಗಿದೆ.

ಸೂಚನೆಗಳು: 1) ಟೆಂಡರ್‌ಗೆ ಸಂಬಂಧಿಸಿದಂತೆ "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವ ದಿನಾಂಕಗಳು ಅಂತಿಮವಾಗಿರುವುದು.
2) ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳಲ್ಲಿ ಬದಲಾವಣೆ ಕುರಿತು ಮತ್ತು ಇನ್ನಿತರೆ ತಿದ್ದುಪಡಿಗಳು/ ಮಾರ್ಪಾಡುಗಳನ್ನು, "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಮತ್ತು ಸದರಿ ವಿಷಯ ಕುರಿತು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ: 01, ಬಾಗಲಕೋಟೆ.

ವಾ.ಸಾ.ಇ/ಬಾಗಲಕೋಟೆ/93/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
ನಂ. 6/13/1, 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು– 560072.
ದೂರವಾಣಿ: 080–22282220
ಇ–ಮೇಲ್: kredlmd@gmail.com, www.kredl.karnataka.gov.in
ಸಂಖ್ಯೆ:ಕೆಆರ್‌ಇಡಿಎಲ್/ಎಸ್‌ಜಿ/ಎಫ್–1530/2024–25 ದಿನಾಂಕ: 10.07.2024

ಟೆಂಡರ್ ಆಹ್ವಾನ ಪ್ರಕಟಣೆ

ಬಿಡ್ಡಿಂಗ್ ವಿಧಾನ: ರಾಷ್ಟ್ರೀಯ ಸ್ಪರ್ಧಾತ್ಮಕ ಬಿಡ್ಡಿಂಗ್
ಬಿಡ್ಡಿಂಗ್ ಸ್ವರೂಪ: ಮುಕ್ತ ಟೆಂಡರ್, ಏಕ ಹಂತದ ದ್ವಿ–ಲಕೋಟೆ ಸ್ಪರ್ಧಾತ್ಮಕ ಬಿಡ್ಡಿಂಗ್

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು (ಕೆಆರ್‌ಇಡಿಎಲ್), "ಬಿಲ್ಡ್–ಓನ್–ಆಪರೇಟ್" ಆಧಾರದಲ್ಲಿ ಕರ್ನಾಟಕ ರಾಜ್ಯದ ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ನದಿಸಿನ್ನೂರು ಗ್ರಾಮದಲ್ಲಿ BESCOMನ ವಿದ್ಯುತ್ ಖರೀದಿಗಾಗಿ 100 MW ಸೌರ ವಿದ್ಯುತ್ ಸ್ಥಾವರದ ಜೊತೆಗೆ 100 MWhr ಬ್ಯಾಟರಿ ಶೇಖರಣೆ ವ್ಯವಸ್ಥೆಯನ್ನು ಹೊಂದಿದ ಘಟಕವನ್ನು ಸ್ಥಾಪಿಸಿ, 220 kV ಮಾರ್ಗದ ಮೂಲಕ ಕವಿಪ್ರನಿನಿಯ 400/220kV ಫಿರೋಜಾಬಾದ್ ಉಪಕೇಂದ್ರಕ್ಕೆ ಸಂಪರ್ಕಿಸುವ ಯೋಜನೆಗೆ ದರ ಆಧಾರಿತ ಸ್ಪರ್ಧಾತ್ಮಕ ಬಿಡ್ ಪ್ರಕ್ರಿಯೆ ಮೂಲಕ ಸೌರಶಕ್ತಿ ಅಭಿವೃದ್ಧಿದಾರರನ್ನು ಆಯ್ಕೆ ಮಾಡಲು ಬಿಡ್‌ಗಳನ್ನು ಆಹ್ವಾನಿಸಿದೆ. ಬಿಡ್ ದಸ್ತಾವೇಜುಗಳು **ದಿನಾಂಕ: 15.07.2024ರಂದು ಅಥವಾ ತದನಂತರ** ಭಾರತ್ ಎಲೆಕ್ಟ್ರಾನಿಕ್ ಟೆಂಡರ್ ಪೋರ್ಟಲ್ **https://www.bharat-electronictender.com** ರಲ್ಲಿ ಮತ್ತು ಕೆಆರ್‌ಇಡಿಎಲ್ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.

ಸೂಚನೆ: ಕೆಆರ್‌ಇಡಿಎಲ್ ಸಂಸ್ಥೆಯು ಬಿಡ್ಡಿಂಗ್ ಪ್ರಕ್ರಿಯೆನ್ನು ರದ್ದುಪಡಿಸುವ ಮತ್ತು ಅಂತಹ ಆಹ್ವಾನ ಪ್ರಕಟಣೆಯನ್ನು ಯಾವುದೇ ಹೊಣೆಗಾರಿಕೆ ಅಥವಾ ಬಾಧ್ಯತೆ ನೀಡದೆ ಹೊಸದಾಗಿ ಬಿಡ್‌ಗಳನ್ನು ಆಹ್ವಾನಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಯಾವುದೇ ಮುಂದಿನ ಮಾರ್ಪಾಡುಗಳನ್ನು ಭಾರತ್ ಪೋರ್ಟಲ್ ಮತ್ತು ಕೆಆರ್‌ಇಡಿಎಲ್ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು, ಸೋಲಾರ್ ಗ್ರಿಡ್, ಕೆಆರ್‌ಇಡಿಎಲ್

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017,
ದೂರವಾಣಿ: 0821–2544963 ಇ–ಮೇಲ್: gmproc@cescmysore.org ವೆಬ್‌ಸೈಟ್:www.cescmysore.org
ಸಂಖ್ಯೆ:ಪ್ರ.ವ್ಯ(ಖ)/ಉ.ಪ್ರ.ವ್ಯ(ಕಾ)/ಸ.ಪ್ರ.ವ್ಯ(ಕಾ)/ನಿ.ಕ/ಎಫ್–20/2024–25 ದಿನಾಂಕ: 09.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪ್ರಧಾನ ವ್ಯವಸ್ಥಾಪಕರು(ಖರೀದಿ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರು ಚಾವಿಸನಿನಿಯ ಪರವಾಗಿ ಈ ಕೆಳಕಂಡ ಸಿವಿಲ್ ಕಾಮಗಾರಿಗಳಿಗೆ ಅರ್ಹ ಬಿಡ್ಡುದಾರರಿಂದ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ.

ಕ್ರ.ಸಂ.	ವಿಚಾರಣಾ ಸಂಖ್ಯೆ	ಕಾಮಗಾರಿ ವಿವರ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1.	ಚಾವಿಸನಿನಿ/ಪ್ರವ್ಯ(ಖ)/2024–25/ಸಿವಿಲ್–09 ದಿ:21.06.2024	ನಿಗಮ ಕಛೇರಿಯಲ್ಲಿ ಹೆಚ್ಚುವರಿಯಾಗಿ 13 ಜನ (884 ಕೆಜಿಯ) ಸಾಮರ್ಥ್ಯದ ಪ್ಯಾಸೆಂಜರ್ ಎಲಿವೇಟರ್ ಲಿಫ್ಟ್ ಅಳವಡಿಸುವ ಕಾಮಗಾರಿ.	24.84

ಹೆಚ್ಚಿನ ಮಾಹಿತಿಗಾಗಿ ಇ–ಪ್ರಕ್ಯೂರ್‌ಮೆಂಟ್‌ನ ವೆಬ್‌ಸೈಟ್ **http//kppp.karnataka.gov.in** ಗೆ ಲಾಗ್‌ಇನ್ ಆಗಿ **ದಿನಾಂಕ:27.06.2024ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ:12.07.2024** ಉಳಿದಂತೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು(ಖರೀದಿ)
ನಿಗಮ ಕಛೇರಿ, ಚಾ.ವಿ.ಸ.ನಿ.ನಿ, ಮೈಸೂರು
DIPR/MYS/KAVITA/239/2024-25

ಸುಭಾಷಿತ

ನಾವು ಜೀವನದಲ್ಲಿ ತೀರಾ ಬಾಗಿಕೊಂಡು ನಡೆದರೆ ಜನ ನಮ್ಮ ತಲೆಯ ಮೇಲೆ ನಡೆದುಕೊಂಡು ಹೋಗುತ್ತಾರೆ.

–ಪಾಟೀಲ ಪುಟ್ಟಪ್ಪ

ಬಿಹಾರದಲ್ಲಿ ಸೇತುವೆಗಳ ಕುಸಿತ ಆಡಳಿತ ವೈಫಲ್ಯದ ಸಂಕೇತ

ಬಿಹಾರದ ಸೇತುವೆಗಳಿಗೆ ಕುಸಿಯುವ ಸಾಂಕ್ರಾಮಿಕ ತಗುಲಿದಂತಿದೆ. ಬಿಹಾರ ರಾಜ್ಯದಾದ್ಯಂತ ಎರಡು ವಾರಗಳ ಅವಧಿಯಲ್ಲಿ 12 ಸೇತುವೆಗಳು ಕುಸಿದುಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಸಾವು, ನೋವು ಸಂಭವಿಸಿಲ್ಲ. ನಿತೀಶ್ ಕುಮಾರ್ ನೇತೃತ್ವದ ರಾಜ್ಯ ಸರ್ಕಾರವು ಸೇತುವೆಗಳ ಕುಸಿತ ಕುರಿತು ತನಿಖೆ ನಡೆಸುವುದಕ್ಕಾಗಿ ಉನ್ನತ ಮಟ್ಟದ ಸಮಿತಿಯೊಂದನ್ನು ನೇಮಿಸಿದೆ. ಬಿಹಾರದಲ್ಲಿನ ಎಲ್ಲ ಸೇತುವೆಗಳ ಸುರಕ್ಷತೆ ಮತ್ತು ದೃಢತೆಯ ಬಗ್ಗೆಯೂ ತಪಾಸಣೆ ನಡೆಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಈ ವಿಚಾರಕ್ಕೆ ಸಂಬಂಧಿಸಿದಂತೆ 16 ಎಂಜಿನಿಯರ್‌ಗಳನ್ನು ಅಮಾನತು ಮಾಡಲಾಗಿದೆ. ಆದರೆ, ಇಷ್ಟೇ ಕ್ರಮ ಕೈಗೊಂಡರೆ ಸಾಕಾಗುವುದಿಲ್ಲ. ಪ್ರತಿ ಸೇತುವೆಯ ಕುಸಿತದ ಹಿಂದೆ ಒಬ್ಬರಿಗಿಂತ ಹೆಚ್ಚು ಅಧಿಕಾರಿಗಳು ಕಾರಣರಾಗಿರುವುದು ಖಚಿತ. ಹೀಗಿರುವಾಗ ಕೆಲವೇ ಅಧಿಕಾರಿಗಳನ್ನು ಅಮಾನತು ಮಾಡುವುದು ಕಣ್ಣೊರೆಸುವ ಕ್ರಮವಾಗುತ್ತದೆ. ಅಲ್ಲಿ ಮುಂಗಾರು ಬಿರುಸಾಗುತ್ತಿರುವುದರಿಂದ ಮತ್ತಷ್ಟು ಸೇತುವೆಗಳು ಕುಸಿಯಬಹುದು ಎಂದು ಎಂಜಿನಿಯರ್‌ಗಳ ಸಂಘವೊಂದು ಎಚ್ಚರಿಕೆ ನೀಡಿದೆ. ಈಗ ಕುಸಿದಿರುವ ಸೇತುವೆಗಳಲ್ಲಿ ಕೆಲವು ನಿರ್ಮಾಣ ಹಂತದಲ್ಲಿದ್ದರೆ, ಇನ್ನೂ ಕೆಲವು ಬಳಕೆಯಲ್ಲಿದ್ದವು. ಸೇತುವೆಗಳ ಕುಸಿತವು ನಿರ್ಮಾಣ ಕಾಮಗಾರಿಯ ಗುಣಮಟ್ಟದ ಆಚೆಗೂ ಪ್ರಶ್ನೆಗಳನ್ನು ಮೂಡಿಸಿದೆ. ಆ ಪ್ರಶ್ನೆಗಳು ಬಿಹಾರದ ಆಡಳಿತ ಮತ್ತು ರಾಜಕಾರಣಕ್ಕೆ ಸಂಬಂಧಿಸಿವೆ.



ಸೇತುವೆ ಕುಸಿತದಂತಹ ದುರ್ಘಟನೆಗಳಿಗೆ ದುರಾಡಳಿತ, ಭ್ರಷ್ಟಾಚಾರವೂ ಪ್ರಮುಖ ಕಾರಣಗಳು ಎಂಬುದು ನಿರ್ವಿವಾದ

ವಿನ್ಯಾಸದಲ್ಲಿನ ದೋಷ, ಕಳಪೆ ಗುಣಮಟ್ಟದ ನಿರ್ಮಾಣ ಕಾಮಗಾರಿ, ಕಳಪೆ ಸಾಮಗ್ರಿಗಳ ಬಳಕೆ, ನಿರ್ವಹಣೆಯಲ್ಲಿನ ದೋಷ, ಸೇತುವೆಗಳ ಬಳಿ ಅವೈಜ್ಞಾನಿಕವಾಗಿ ಹೂಳು ಮತ್ತು ಮರಳು ತೆರವು ಮಾಡಿರುವುದರಿಂದ ಪಿಲ್ಲರ್‌ಗಳು ದುರ್ಬಲಗೊಂಡಿರುವುದೂ ಸೇರಿದಂತೆ ಸೇತುವೆಗಳ ಸರಣಿ ಕುಸಿತಕ್ಕೆ ಹಲವು ಕಾರಣಗಳನ್ನು ನೀಡಲಾಗಿದೆ. ಇವೆಲ್ಲವೂ ತೆಳು ಗ್ರಹಿಕೆಯ ಮತ್ತು ತಕ್ಷಣಕ್ಕೆ ಗುರುತಿಸಿದ ಕಾರಣಗಳಷ್ಟೆ. ಕೆಟ್ಟ ವಿನ್ಯಾಸ, ಕಳಪೆ ಕಾಮಗಾರಿ, ಕಳಪೆ ಗುಣಮಟ್ಟದ ಸಾಮಗ್ರಿಗಳ ಬಳಕೆ, ಮೇಲುಸ್ತುವಾರಿ ಮತ್ತು ನಿರ್ವಹಣೆಯಲ್ಲಿ ನಿರ್ಲಕ್ಷ್ಯಕ್ಕೆ ಅವಕಾಶ ಕಲ್ಪಿಸಿದ ಆಡಳಿತದ ವೈಫಲ್ಯವೇ ನಿಜವಾದ ಕಾರಣ. ಗುತ್ತಿಗೆದಾರರು ಕಾಮಗಾರಿಯ ವೆಚ್ಚದ ಒಂದು ಭಾಗವನ್ನು, ಕೆಲವೊಮ್ಮೆ ದೊಡ್ಡ ಮೊತ್ತವನ್ನೇ ರಾಜಕಾರಣಿಗಳು ಮತ್ತು ಅಧಿಕಾರಿಗಳಿಗೆ ಲಂಚವಾಗಿ ನೀಡಬೇಕು ಎಂಬುದು ರಹಸ್ಯವೇನೂ ಅಲ್ಲ. ಗುತ್ತಿಗೆದಾರರು ತಮ್ಮ ಲಾಭದ ಪ್ರಮಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ಕಾಮಗಾರಿಯ ನಿರ್ಮಾಣ ವೆಚ್ಚದಲ್ಲಿ ಕಡಿತ ಮಾಡುತ್ತಾರೆ ಮತ್ತು ಗುಣಮಟ್ಟದಲ್ಲಿ ರಾಜಿಯಾಗುತ್ತಾರೆ. ಬಿಹಾರದಲ್ಲಿ ಹಿಂದೆಯೂ ಸೇತುವೆಗಳ ಕುಸಿತದ ದುರ್ಘಟನೆಗಳು ಸಂಭವಿಸಿದ್ದವು. ಭಾಗಲ್ಪುರ ಜಿಲ್ಲೆಯಲ್ಲಿ ಗಂಗಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಮೂರು ಕಿಲೊಮೀಟರ್ ಉದ್ದದ ಸೇತುವೆಯು ಕಳೆದ ವರ್ಷ ಎರಡು ಬಾರಿ ಕುಸಿದಿತ್ತು. ಈ ಪ್ರಕರಣದಲ್ಲಿ ಅಮಾನತುಗೊಂಡಿದ್ದ ಅಧಿಕಾರಿಗಳು ಕೆಲವೇ ದಿನಗಳಲ್ಲಿ ಕೆಲಸಕ್ಕೆ ಮರಳಿದರು. ಸೇತುವೆ ಕುಸಿತದ ಬಗ್ಗೆ ತನಿಖೆ ನಡೆಯಿತಾದರೂ ಕುಸಿತಕ್ಕೆ ಕಾರಣವಾದ ಅಂಶಗಳ ಕುರಿತು ತನಿಖಾ ವರದಿ ಬೆಳಕು ಚೆಲ್ಲಲಿಲ್ಲ. ಸೇತುವೆ ಕುಸಿತದಂತಹ ದುರ್ಘಟನೆಗಳಿಗೆ ದುರಾಡಳಿತ, ಭ್ರಷ್ಟಾಚಾರವೂ ಪ್ರಮುಖ ಕಾರಣಗಳು ಎಂಬುದು ನಿರ್ವಿವಾದ. ಆದರೆ, ಇಂತಹ ಪ್ರಕರಣಗಳಲ್ಲಿ ಯಾವುದೇ ಸಚಿವ ಅಥವಾ ರಾಜಕಾರಣಿಯನ್ನು ಹೊಣೆಗಾರರನ್ನಾಗಿ ಮಾಡಿದ ಉದಾಹರಣೆ ಸಿಗುವುದಿಲ್ಲ. ನದಿಯ ಪಾಲಾದ, ರಾಜಕಾರಣಿಗಳು, ಅಧಿಕಾರಿಗಳು ಮತ್ತು ಗುತ್ತಿಗೆದಾರರ ಜೇಬು ಸೇರಿದ ಸಾರ್ವಜನಿಕರ ತೆರಿಗೆಯ ಹಣವನ್ನು ವಸೂಲಿ ಮಾಡಿದ ಪ್ರಕರಣಗಳೂ ವಿರಳ. ಸೇತುವೆ ಕುಸಿತದಿಂದ ಜನರಿಗೆ ಅನನುಕೂಲ ಆಗುವುದಷ್ಟೇ ಅಲ್ಲ, ಸೇತುವೆಯ ತ್ಯಾಜ್ಯವು ನದಿಯೊಳಗೆ ಸೇರಿ ತೀವ್ರ ಸ್ವರೂಪದ ಮಾಲಿನ್ಯಕ್ಕೆ ಕಾರಣವಾಗುತ್ತಿದೆ ಎಂಬುದನ್ನು ಯಾರೂ ಗಮನಿಸುತ್ತಿಲ್ಲ.

ಬಿಹಾರದಲ್ಲಿ ರಸ್ತೆಗಳು, ಎಕ್ಸ್‌ಪ್ರೆಸ್ ಹೆದ್ದಾರಿಗಳು, ಸೇತುವೆಗಳು, ಕಟ್ಟಡಗಳು, ಚೆಕ್ ಡ್ಯಾಮ್‌ಗಳಷ್ಟೇ ಅಲ್ಲದೆ ದೊಡ್ಡ ಅಣೆಕಟ್ಟೆಗಳೂ ಕುಸಿಯುತ್ತಿವೆ. ಈ ವಿಚಾರದಲ್ಲಿ ಬಿಹಾರವು ದೇಶದಲ್ಲೇ ಕುಖ್ಯಾತಿ ಪಡೆದಿದೆ. ಗುಜರಾತ್‌ನಲ್ಲಿ 2022ರಲ್ಲಿ ಮೋರ್ಬಿ ಸೇತುವೆ ಕುಸಿದು 140ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು. ದೆಹಲಿ, ರಾಜ್‌ಕೋಟ್, ಲಖನೌ ಮತ್ತು ಜಬಲ್ಪುರದಲ್ಲಿ ವಿಮಾನ ನಿಲ್ದಾಣಗಳ ಹೊರಾಂಗಣದ ಮೇಲ್ಚಪ್ಪರಗಳು ಕುಸಿದಿದ್ದವು. ಇವೆಲ್ಲ ಆಡಳಿತದಲ್ಲಿನ ವೈಫಲ್ಯದ ಸಂಕೇತಗಳು. ಬಿಹಾರವು ಇಂತಹ ಸಂಕೇತಗಳನ್ನು ಆಗಾಗ ನೀಡುತ್ತಲೇ ಇದೆ. ಸಾರ್ವಜನಿಕ ಜೀವನದಲ್ಲಿರುವವರು ಮತ್ತು ಅಧಿಕಾರಿಗಳಿಗೆ ಸುರಕ್ಷತೆ, ಗುಣಮಟ್ಟ, ಪ್ರಾಮಾಣಿಕತೆ ಮತ್ತು ಹೊಣೆಗಾರಿಕೆಯು ದಿಕ್ಸೂಚಿಯಂತಾಗದಿದ್ದರೆ ಇಂತಹ ಅವಘಡಗಳನ್ನು ತಪ್ಪಿಸುವುದು ಕಷ್ಟ.

ದ್ವಿಚಕ್ರ ವಾಹನ ಅಪಘಾತಗಳಿಗೆ ಮೂರು ಪ್ರಮುಖ ಕಾರಣಗಳನ್ನು ಗುರುತಿಸಬಹುದು

ಜೀವ ಇಷ್ಟೊಂದು ಅಗ್ಗ ಆಗಬಾರದು!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ರಸ್ತೆ ಅಪಘಾತದಿಂದಾಗುವ ಸಾವಿನ ಸುದ್ದಿಯಿರದ ದಿನಪತ್ರಿಕೆಯನ್ನು ಈಗ ಹುಡುಕುವುದು ಸಾವಿಲ್ಲದ ಮನೆಯ ಸಾಸಿವೆ ಹುಡುಕಿದಷ್ಟೇ ಪ್ರಯಾಸದಾಯಕ ಅಥವಾ ವ್ಯರ್ಥ. ಜೀವ ಕಸಿದುಕೊಳ್ಳುವ ಅಪಘಾತದ ಘಟನೆಗಳು ‘ಅಯ್ಯೋ…’ ಎಂಬ ಉದ್ಗಾರಕ್ಕೂ ಸಲ್ಲದಷ್ಟು ಸಾಮಾನ್ಯವಾಗಿರುವುದು ಖಂಡಿತ ಒಳ್ಳೆಯ ಲಕ್ಷಣವಲ್ಲ. ಇಂತಹ ಸುದ್ದಿಗಳು ‘ದಿನಾ ಸಾಯುವವರಿಗೆ ಅಳುವವರಾರು’ ಎಂಬ ತಣ್ಣನೆಯ ಕ್ರೌರ್ಯದ ಸೆಲೆಗೂ ಕಾರಣವಾಗುವ ಮೊದಲು ನಾಗರಿಕ ಸಮಾಜ ಮತ್ತು ಆಡಳಿತ ವ್ಯವಸ್ಥೆ ಎಚ್ಚರಗೊಳ್ಳಬೇಕಿದೆ.

ಪುಣೆಯ ಕಲ್ಯಾಣಿ ನಗರದಲ್ಲಿ ಮದ್ಯಪಾನ ಮಾಡಿದ 17 ವರ್ಷ ವಯಸ್ಸಿನ ಬಾಲಕನೊಬ್ಬ ಐಷಾರಾಮಿ ಪೋಶೆ ಕಾರು ಚಲಾಯಿಸಿ ಇಬ್ಬರ ಸಾವಿಗೆ ಕಾರಣನಾದ ಘಟನೆಗೆ ವ್ಯಕ್ತವಾದ ಆಕ್ರೋಶವಿನ್ನೂ ಶಮನವಾಗಿಲ್ಲ. ಅಷ್ಟರಲ್ಲೇ ಮಹಾರಾಷ್ಟ್ರದ ಶಿವಸೇನಾ ನಾಯಕ (ಶಿಂದೆ ಬಣ) ರಾಜೇಶ್ ಶಾ ಅವರ ಪುತ್ರ ಮಿಹಿರ್ ಶಾ ಚಲಾಯಿಸಿದ ಬಿಎಂಡಬ್ಲ್ಯು ಕಾರು ಸ್ಕೂಟರ್‌ಗೆ ಡಿಕ್ಕಿ ಹೊಡೆದು ಮಹಿಳೆಯೊಬ್ಬರನ್ನು ಬಲಿ ತೆಗೆದುಕೊಂಡ ದಾರುಣ ಸಮಾಚಾರ ಬಂದಿದೆ. ಬಹಳಷ್ಟು ಸಾಮ್ಯ ಹೊಂದಿರುವ ಈ ಎರಡೂ ಪ್ರಕರಣಗಳಲ್ಲಿ ಕೆಲವು ಪ್ರಭಾವಿ ವ್ಯಕ್ತಿಗಳಲ್ಲಿ ಕಾಣುವ ದುಬಾರಿ ಹವ್ಯಾಸ ಮತ್ತು ದುರಹಂಕಾರದ ವರ್ತನೆಯನ್ನು ಗಮನಿಸಬಹುದು.

ಹೀಗೆ ವಿಶಿಷ್ಟ ಕಾರಣಗಳಿಂದ ವಿಶೇಷ ಪ್ರಕರಣಗಳಾಗಿ ಇವು ದೇಶವ್ಯಾಪಿ ಸುದ್ದಿಗಳಾಗಿ ಗಮನ ಸೆಳೆದಿವೆ. ಆದರೆ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು, ದುರಸ್ತಿ ಕಾಣದ ರಸ್ತೆಯ ಕುಣಿ ತಪ್ಪಿಸಲು ಹೋಗಿ, ಸೇತುವೆಯ ತಡೆಗೋಡೆಗೆ ತಾಗಿ, ಬೃಹದಾಕಾರದ ಲಾರಿ-ಬಸ್ಸುಗಳ ಚಕ್ರದ ಅಡಿ ತಲೆ ಸಿಲುಕಿ… ದ್ವಿಚಕ್ರ ವಾಹನ ಸವಾರರು ಹೀಗೆ ಜೀವ ಕಳೆದುಕೊಳ್ಳುವುದು ಪತ್ರಿಕೆಗಳಲ್ಲಿ ಸಣ್ಣ ಸುದ್ದಿಯಾಗಿ ಮರೆಯಾಗುತ್ತವೆ.

ಇವೆಲ್ಲಾ ಓದುಗರಿಗೆ ಮತ್ತು ಪತ್ರಿಕೆಗಳಿಗೆ ಅಂತಿಮವಾಗಿ ಕೇವಲ ಸುದ್ದಿ ಅಷ್ಟೇ. ಪೊಲೀಸರಿಗೆ, ವಕೀಲರಿಗೆ ಒಂದು ಪ್ರಕರಣ ಮಾತ್ರ. ಆದರೆ ಜೀವತೆತ್ತವರ ಹತ್ತಿರದವರಿಗೆ, ಮನೆಯವರಿಗೆ...? ದೇಶದಲ್ಲಿ ಸಂಭವಿಸುವ ಒಟ್ಟು ಸಾವುಗಳಲ್ಲಿ ರಸ್ತೆ ಅಪಘಾತಗಳ ಪಾಲು ಶೇಕಡ 13ರಷ್ಟಿದೆ. ಇತ್ತೀಚಿನ ವರ್ಷಗಳಲ್ಲಿ, ಕರ್ನಾಟಕ ರಾಜ್ಯವು ಗಣನೀಯ ಸಂಖ್ಯೆಯಲ್ಲಿ ದ್ವಿಚಕ್ರ ವಾಹನ ಅಪಘಾತಗಳಿಗೆ ಸಾಕ್ಷಿಯಾಗುತ್ತಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಸಂಗ್ರಹಿಸಿರುವ ದಾಖಲೆಗಳ ಪ್ರಕಾರ, 2023ರಲ್ಲಿ ಕರ್ನಾಟಕ 43,440 ರಸ್ತೆ ಅಪಘಾತಗಳನ್ನು ಕಂಡಿದೆ. ಅದರಲ್ಲಿ ದ್ವಿಚಕ್ರ ವಾಹನಗಳ ಪಾಲು ಸರಿಸುಮಾರು ಶೇ 40ರಷ್ಟಿದೆ. ಈ ರಸ್ತೆ ಅಪಘಾತಗಳಿಂದ ಆಗುವ ಸಾವು-ನೋವುಗಳೇನೂ ಕಡಿಮೆ ಪ್ರಮಾಣದಲ್ಲಿಲ್ಲ. 2023ರಲ್ಲಿ, ರಸ್ತೆ ಅಪಘಾತಗಳಿಂದ 12,321 ಮಂದಿ ಸಾವನ್ನಪ್ಪಿದ್ದಾರೆ.

ಈ ಸಾವುಗಳಲ್ಲಿ ದ್ವಿಚಕ್ರ ವಾಹನ ಸವಾರರು ಸರಿಸುಮಾರು ಶೇ 45ರಷ್ಟಿದ್ದಾರೆ. ದ್ವಿಚಕ್ರ ವಾಹನ ಅಪಘಾತದಲ್ಲಿ ಪೆಟ್ಟುತಿಂದು ಹೇಗೋ ಜೀವ ಉಳಿಸಿಕೊಂಡವರು ಅನುಭವಿಸುವ ಯಾತನೆ ಸಣ್ಣದೇನಲ್ಲ. ದ್ವಿಚಕ್ರ ವಾಹನ ಅಪಘಾತಗಳಲ್ಲಿ ಯುವಕರ ಪಾಲೇ ಹೆಚ್ಚಾಗಿರುವುದು ಮತ್ತೊಂದು ಆತಂಕಕಾರಿ ಸಂಗತಿ. ರಸ್ತೆ ಅಪಘಾತಗಳ ಸಂಖ್ಯೆಯಲ್ಲಿ ನಗರ ಪ್ರದೇಶ ಸಹಜವಾಗಿಯೇ ಹೆಚ್ಚಿನ ಪಾಲು ಹೊಂದಿದೆ. ಇದಕ್ಕೆ ನಗರ, ಅದರಲ್ಲೂ ಬೆಂಗಳೂರಿನಂತಹ ಮಹಾನಗರದಲ್ಲಿ ರಸ್ತೆಗಿಳಿಯುವ ವಾಹನಗಳ ಬಾಹುಳ್ಯವೇ ಮುಖ್ಯ ಕಾರಣ. ಹಾಗೆಂದು ಗ್ರಾಮೀಣ ಪ್ರದೇಶಗಳೇನೂ ಅಪಘಾತಗಳ ವಿಷಯದಲ್ಲಿ ತೀರಾ ಹಿಂದೆ ಬಿದ್ದಿಲ್ಲ. ಮಳೆಗಾಲದಲ್ಲಿ ಅಪಘಾತಗಳ ಪ್ರಮಾಣ ಏರಿಕೆಯಾಗುವುದನ್ನೂ ಕಾಣಬಹುದು.

ದ್ವಿಚಕ್ರ ವಾಹನ ಅಪಘಾತಗಳಿಗೆ ಕಾರಣಗಳನ್ನು ಹುಡುಕುತ್ತಾ ಹೊರಟರೆ ಮೂರು ಸಾಧ್ಯತೆಗಳ ಸುತ್ತಲೇ ಸುತ್ತು ಹೊಡೆಯಬೇಕಾಗುತ್ತದೆ. ಮೊದಲನೆಯದು ವಾಹನ ಚಾಲಕರು ಎಸಗುವ ತಪ್ಪುಗಳು, ಎರಡನೆಯದು ರಸ್ತೆ ಕಳಪೆಯಾಗಿರುವುದು ಹಾಗೂ ಮೂರನೆಯದು ವಾಹನದ ದೋಷ. ಬಹುಶಃ ಬಹಳಷ್ಟು ರಸ್ತೆ ಅವಘಡಗಳಿಗೆ ವಾಹನ ಸವಾರರ, ಅದರಲ್ಲೂ ಯುವ ಚಾಲಕರ ಸ್ವಯಂಕೃತ ಪ್ರಮಾದಗಳೇ ಕಾರಣವಾಗುವುದನ್ನು ಗಮನಿಸಬೇಕಾಗುತ್ತದೆ.

ಮಿತಿಮೀರಿದ ವೇಗ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು, ಹೆಲ್ಮೆಟ್‌ರಹಿತ ಚಾಲನೆ, ರಸ್ತೆ ನಿಯಮಗಳ ಉಲ್ಲಂಘನೆಯಂಥವು ಪ್ರಾಣಾಂತಕವಾಗಿ ಪರಿಣಮಿಸುತ್ತವೆ. ರಸ್ತೆ ಗುಂಡಿಗಳು, ಅವೈಜ್ಞಾನಿಕ ವೇಗತಡೆಗಳು, ರಸ್ತೆಗಳ ಕಳಪೆ ನಿರ್ವಹಣೆ, ಅಸಮರ್ಪಕ ಸೂಚನಾ ಫಲಕಗಳು… ದ್ವಿಚಕ್ರ ವಾಹನ ಅಪಘಾತಗಳಿಗೆ ಪ್ರಮುಖ ಕೊಡುಗೆ ನೀಡುತ್ತವೆ. ಇಲ್ಲಿ ರಸ್ತೆ ನಿರ್ವಹಿಸಲು ಎಂಜಿನಿಯರಿಂಗ್ ವಿಭಾಗಗಳಿವೆ, ನಿಯಮಗಳನ್ನು ಜಾರಿಗೊಳಿಸಲು ಸಂಚಾರ ಪೊಲೀಸರು ಇದ್ದಾರೆ, ವಾಹನ-ಚಾಲನೆ ತಪಾಸಣೆಗೆ ಸಾರಿಗೆ ಅಧಿಕಾರಿಗಳಿದ್ದಾರೆ, ಉತ್ಸಾಹಿ ಯುವಜನರಿಗೆ ತಿಳಿಹೇಳಲು ಮನೆಯಲ್ಲಿ ಹಿರಿಯರಿದ್ದಾರೆ, ಏನಾದರೂ ಏರುಪೇರಾದರೆ ಮಧ್ಯಪ್ರವೇಶಿಸಲು ಜನಪ್ರತಿನಿಧಿಗಳು ಇದ್ದಾರೆ, ಬೆಂಗಾವಲಿಗೆ ನಾಗರಿಕ ಸಮಾಜವೂ ಇದೆ… ಆದರೂ ಎಡವಟ್ಟು ನಡೆಯುತ್ತಲೇ ಇದೆ ಎಂದರೆ ಇಡೀ ವ್ಯವಸ್ಥೆಯ ಪುನರ್ ಪರಿಶೀಲನೆಯ ಸಮಯ ಬಂದಿದೆ ಎಂದರ್ಥ.

ರಸ್ತೆ ಅಪಘಾತಗಳಲ್ಲಿ ಸಾವಿಗೆ ಈಡಾಗುವುದಕ್ಕೆ ಮುಖ್ಯ ಕಾರಣ ದ್ವಿಚಕ್ರ ವಾಹನ ಚಾಲಕರ ತಲೆಭಾಗಕ್ಕೆ ಬೀಳುವ ಬಲವಾದ ಪೆಟ್ಟು ಎಂಬುದು ನಿರ್ವಿವಾದ. ಇದಕ್ಕಿರುವ ಏಕೈಕ ಸುರಕ್ಷಾ ಕ್ರಮವೆಂದರೆ ಹೆಲ್ಮೆಟ್ ಧರಿಸುವುದು. ಹೆಲ್ಮೆಟ್ ವಿಷಯದಲ್ಲಿ ಆಗುತ್ತಿರುವ ಲೋಪದ ಮೂಲಕ್ಕೆ ಹೋದರೆ ಸವಾರರು, ಸರ್ಕಾರ ಮತ್ತು ಪೊಲೀಸ್ ಇಲಾಖೆ ಸಾಲಾಗಿ ಕಟಕಟೆಯಲ್ಲಿ ನಿಲ್ಲಬೇಕಾಗುತ್ತದೆ. ದ್ವಿಚಕ್ರ ವಾಹನ ಚಾಲಕರು ಮತ್ತು ಹಿಂಬದಿ ಸವಾರರು ಐ.ಎಸ್.ಐ ಗುರುತಿನ ಗುಣಮಟ್ಟದ ಹೆಲ್ಮೆಟ್‌ಗಳನ್ನೇ ಧರಿಸಬೇಕೆಂದು ಸರ್ಕಾರ ನಿಯಮ ಮಾಡಿದೆ. ಆದರೆ ಕಳಪೆ ಹೆಲ್ಮೆಟ್‌ಗಳ ಉತ್ಪಾದನೆ ಮತ್ತು ಮಾರಾಟದ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗುವುದಿಲ್ಲ.

ಹೆಲ್ಮೆಟ್ ಧರಿಸುವುದರಲ್ಲಿ ತಮ್ಮ ಸುರಕ್ಷತೆ ಇದೆ ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಉಪೇಕ್ಷಿಸುವ ವಾಹನ ಚಾಲಕರು ಈ ನಿಯಮವನ್ನು ಪೊಲೀಸರಿಂದ ಬಚಾವಾಗಲಷ್ಟೇ ಪಾಲಿಸಿದಂತೆ ನಟಿಸುತ್ತಾರೆ. ಸಂಚಾರ ಪೊಲೀಸರಿಗೆ ಕೂಡ ವಾಹನ ಚಾಲಕರ ಸುರಕ್ಷತೆ ಅಥವಾ ನಿಯಮ ಪಾಲನೆಗಿಂತ ನಿಗದಿತ ದಂಡದ ಗುರಿ ಮುಟ್ಟುವುದೇ ಮುಖ್ಯವಾಗುತ್ತದೆ. ಹಾಗಾಗಿ ಕಬ್ಬಿಣದ ಟೋಪಿಗಳಂತಹ ಕಾಟಾಚಾರದ ಹೆಲ್ಮೆಟ್‌ಗಳನ್ನು, ಅದೂ ಪೊಲೀಸರೆದುರು ಮಾತ್ರ ಧರಿಸುವುದನ್ನು ಕಾಣಬಹುದು. ನಾಲ್ಕೈದು ಲಕ್ಷ ರೂಪಾಯಿ ಮೌಲ್ಯದ ಅತಿವೇಗದ ಬೈಕುಗಳ ಆಕರ್ಷಣೆ ಈಗಿನ ಯುವಕರಲ್ಲಿ ವಿಪರೀತವಾಗಿ ಬೆಳೆಯುತ್ತಿದೆ. ವಿದೇಶಗಳಲ್ಲಿನ ಸುಸ್ಥಿತಿಯ ರಸ್ತೆಗಳಲ್ಲಿ ಕಟ್ಟುನಿಟ್ಟಿನ ಸುರಕ್ಷತಾ ಕ್ರಮಗಳೊಂದಿಗೆ ಚಲಾಯಿಸುವಂತೆ ವಿನ್ಯಾಸಗೊಳಿಸಿದ ಇಂತಹ ದ್ವಿಚಕ್ರ ವಾಹನಗಳನ್ನು ಭಾರತದಲ್ಲಿ ಹುಚ್ಚಾಪಟ್ಟೆ ಚಲಾಯಿಸುವ ಮೂಲಕ ತಮ್ಮ ಪ್ರಾಣಕ್ಕೆ ಅಪಾಯ ತಂದುಕೊಂಡವರ ದೊಡ್ಡ ಪಟ್ಟಿಯೇ ಸಿಗುತ್ತದೆ.

ಸಂಚಾರ ಸುರಕ್ಷತೆ ವಿಷಯದಲ್ಲಿ ಸರ್ಕಾರ, ಸಮಾಜ ಮತ್ತು ವ್ಯಕ್ತಿಗಳು ಸಮಾನವಾಗಿ ನಿರ್ಲಕ್ಷ್ಯ ತಾಳಿರುವುದು ಸಮಂಜಸವಲ್ಲ. ಸಾರಿಗೆ ಇಲಾಖೆಯಿಂದ ಚಾಲನಾ ಪರವಾನಗಿ ನೀಡುವುದರಿಂದ ಹಿಡಿದು ಸಂಚಾರ ನಿಯಮಗಳ ಪಾಲನೆ, ಜಾರಿ ಸಂದರ್ಭದಲ್ಲಿ ನಾವು ಒಂದು ವ್ಯವಸ್ಥೆಯಾಗಿ ಹೇಗೆ, ಎಷ್ಟೊಂದು ಸೋಲು ಕಂಡಿದ್ದೇವೆ ಎಂದು ನೆನೆದರೆ ತೀರಾ ಹತಾಶೆಯಾಗುತ್ತದೆ.

ಜರ್ಮನಿಯಲ್ಲಿ ನೆಲೆಸಿರುವ ಬೆಂಗಳೂರಿನ ಯುವಕ ಶ್ರೇಯಸ್ ಕಾರ್ತಿಕ್ ಆ ದೇಶದ ಸಂಚಾರ ಸುರಕ್ಷತೆ ವ್ಯವಸ್ಥೆ ಕುರಿತು ಹಂಚಿಕೊಂಡ ಸ್ವ ಅನುಭವ ಈ ಲೇಖಕನನ್ನು ಅಚ್ಚರಿಗೊಳಪಡಿಸಿತು. ಮೆಕಾನಿಕಲ್ ಎಂಜಿನಿಯರ್ ಆದ ಅವರು ಕೆಲಸ ಮಾಡುವುದು ಮರ್ಸಿಡೀಸ್ ಬೆಂಜ್ ವಾಹನ ತಯಾರಿಕಾ ಕಂಪನಿಯಲ್ಲಿ. ಆ ದೇಶದಲ್ಲಿ ವಾಹನ ಚಾಲನಾ ಪರವಾನಗಿ ಪಡೆಯಲು ಈ ಯುವಕ ತಾನು ಎಂಜಿನಿಯರಿಂಗ್ ಪದವಿ ಪಡೆಯಲು ಹಾಕಿದ್ದಕ್ಕಿಂತ ಹೆಚ್ಚಿನ ಶ್ರಮ ಹಾಕಬೇಕಾಯಿತಂತೆ. ಶುಲ್ಕವಾಗಿ ಪಾವತಿಸಿದ ಮೊತ್ತ ಒಂದೂವರೆ ಲಕ್ಷ ರೂಪಾಯಿ. ವಾಹನ ಚಾಲನೆ ತರಬೇತಿಗೆ ಸೇರಿದಾಗ ಅಲ್ಲಿನ ಸಿಬ್ಬಂದಿ, ‘ಇನ್ ಇಂಡಿಯಾ, ಯು ಡು ನಾಟ್ ಕ್ಲಿಯರ್ ಡ್ರೈವಿಂಗ್ ಟೆಸ್ಟ್… ಯು ಆರ್ ಬೈಯಿಂಗ್ ಲೈಸೆನ್ಸ್’ (ಭಾರತದಲ್ಲಿ ನೀವು ಚಾಲನಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದಿಲ್ಲ. ನೀವು ಪರವಾನಗಿಯನ್ನು ಖರೀದಿಸುತ್ತೀರಿ) ಎಂದಿದ್ದರಂತೆ! ಸಂಚಾರ ಸುರಕ್ಷತೆಯ ವಿಚಾರದಲ್ಲಿ ನಮ್ಮ ನಿರ್ಲಕ್ಷ್ಯ ಧೋರಣೆಯನ್ನು ತಿಳಿಸುವ ಈ ಹೇಳಿಕೆಯನ್ನು ಸುಳ್ಳಾಗಿಸುವ ಕಾಲಕ್ಕೆ ಹಂಬಲಿಸೋಣ.

ಚುರುಮುರಿ



ಕಾಯಿಲೆ ಲೀಲೆ

• ಮಣ್ಣೆ ರಾಜು

ಆಸ್ಪತ್ರೆಯ ಡೆಂಗಿ ವಾರ್ಡಿನಲ್ಲಿ ಹಾಸಿಗೆ ಹಿಡಿದಿದ್ದ ಮಗಳಿಗೆ ಸುಮಿ ಗಂಜಿ ಕುಡಿಸಿ ಆರೈಕೆ ಮಾಡುತ್ತಿದ್ದಳು. ಪಕ್ಕದ ಬೆಡ್ ರೋಗಿ ಕಡೆಯ ಹೆಂಗಸು ಬಂದು, ‘ನಿಮ್ಮ ಮಗಳೇನ್ರೀ?’ ಎಂದು ಮಾತಿಗಿಳಿದಳು.

‘ಹೌದೂರೀ, ಬಾಯಲ್ಲಿಟ್ಟ ಥರ್ಮಾಮೀಟರ್ ಬೆಂದುಹೋಗುವಷ್ಟು ಜ್ವರ ಬಂದಿದೆ… ನಿಮ್ಮವರು ಯಾರು ಅಡ್ಮಿಟ್ ಆಗಿದ್ದಾರೆ?’ ಕೇಳಿದಳು ಸುಮಿ.

‘ಸೊಳ್ಳೆ ಕಚ್ಚಿ ನಮ್ಮ ಫ್ಯಾಮಿಲಿಯೇ ಕಾಯಿಲೆಯಿಂದ ನೆಲ ಕಚ್ಚಿದೆ. 3ನೇ ಬೆಡ್‌ನಲ್ಲಿ ಅತ್ತೆ, 4ರಲ್ಲಿ ಮಗಳು, 5ರಲ್ಲಿ ಮಗ, 6ನೇ ಬೆಡ್‌ನಲ್ಲಿ ಗಂಡ ಮಲಗಿದ್ದಾರೆ’.

‘ಅವರನ್ನು ಆರೈಕೆ ಮಾಡಲು ನೀವೊಬ್ಬರಾದರೂ ಆರೋಗ್ಯವಾಗಿದ್ದೀರಲ್ಲ…’

‘ಹೋದ ವರ್ಷ ಡೆಂಗಿ ಬಂದು ಇದೇ ಆಸ್ಪತ್ರೆಯಲ್ಲಿ ನಾನು ಅಡ್ಮಿಟ್ ಆಗಿದ್ದೆ, ನನ್ನ ಗಂಡ ಹಾಲು, ಗಂಜಿ ಕುಡಿಸಿ ಆರೈಕೆ ಮಾಡಿದ್ದರು. ಈ ವರ್ಷ ಆರೈಕೆ ಸರದಿ ನನ್ನದು’.

‘ಯುಗಾದಿ, ದೀಪಾವಳಿಯಂತೆ ಡೆಂಗಿ ವರ್ಷಾವರ್ಷಾನೂ ಬರುತ್ತಾ?!’

‘ಹೌದು. ಮಳೆಗಾಲ ಶುರುವಿನಲ್ಲಿ ಡೆಂಗಿ, ಮಲೇರಿಯಾದಂತಹ ಕಾಮನ್ ಕಾಯಿಲೆಗಳು ಬರುತ್ತವೆ. ಕಾಯಿಲೆಗಳು ಬರಲಿಬಿಡಿ, ಅವುಗಳಿಗೆ ನಮ್ಮನ್ನು ಬಿಟ್ಟರೆ ಇನ್ಯಾರು ಗತಿ? ಮಕ್ಕಳ ಸ್ಕೂಲ್ ಫೀಸು, ಹಬ್ಬದ ಖರ್ಚಿನಂತೆ ಕಾಯಿಲೆಗೂ ದುಡ್ಡು ಮೀಸಲಿಡುತ್ತೇವೆ’.

‘ಕಾಯಿಲೆಯಿಂದ ಗಾಬರಿ… ಚಿಕಿತ್ಸೆ ನೆಪದಲ್ಲಿ ರಾಬರಿ…’

‘ಗಾಬರಿ ಆಗ್ಬೇಡಿ, ಸೌಭಾಗ್ಯ ಬೇಡಿ ದೇವಸ್ಥಾನದ ಹುಂಡಿಗೆ ದುಡ್ಡು ಹಾಕುವಂತೆ ಆರೋಗ್ಯ ಬಯಸಿ ಆಸ್ಪತ್ರೆ ಹುಂಡಿಗೂ ನಾವು ಹಣ ಹಾಕಬೇಕು’.

‘ಹಬ್ಬ ಹರಿದಿನಗಳಲ್ಲಿ ಬಟ್ಟೆ ಅಂಗಡಿಗಳಲ್ಲಿ ರಿಯಾಯಿತಿ ಮಾರಾಟದಂತೆ ಕಾಯಿಲೆ ಕಾಲದಲ್ಲಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ವೆಚ್ಚಕ್ಕೆ ಡಿಸ್ಕೌಂಟ್ ಆಫರ್ ಇರಬೇಕಾಗಿತ್ತು…’ ಸುಮಿ ಆಸೆಪಟ್ಟಳು.

ಆಗ ನರ್ಸ್ ಬಂದು, ‘ಈಗ ಡಾಕ್ಟರ್ ರೌಂಡ್ಸ್ ಬರ್ತಾರೆ ಪೇಷೆಂಟ್ ಕಡೆಯವರು ಆಚೆ ಹೋಗಿ…’ ಎಂದು ಎಲ್ಲರನ್ನೂ ಕಳಿಸಿದಳು.

ದಿನದ ಟ್ವೀಟ್

ಒತ್ತಡವನ್ನೇ ಚೈತನ್ಯ ಎಂದೆವೇ?

‘ಮುಂಬೈನ ಚೈತನ್ಯ’ ಅಥವಾ ‘ಬೆಂಗಳೂರಿನ ಚೈತನ್ಯ’ ಎಂಬ ಮಾತುಗಳನ್ನು ಮತ್ತೆ ಮತ್ತೆ ಆಡಲಾಗುತ್ತದೆ. ಆದರೆ, ಅಂಥದ್ದೊಂದು ಚೈತನ್ಯ ನಿಜಕ್ಕೂ ಇದೆಯೇ? ಅದು ಇದ್ದಿದ್ದರೆ ಉತ್ತಮ ಆಡಳಿತಕ್ಕಾಗಿ ಜನರು ಒಗ್ಗೂಡುವುದನ್ನು ನಾವು ಕಾಣುತ್ತಿದ್ದೆವು, ಅಲ್ಲವೇ? ನಾವು ಕಾಣುವುದು, ಮುಂದಕ್ಕೆ ಸಾಗಲೇಬೇಕಾದ ಅನಿವಾರ್ಯವನ್ನು. ಬಹುತೇಕ ನಗರವಾಸಿಗಳ ಜೀವನ ಕಷ್ಟಕರ. ಕೆಲಸ ಮಾಡಬೇಕಾದ, ಸಂಪಾದಿಸಬೇಕಾದ ಒತ್ತಡವನ್ನು ‘ಚೈತನ್ಯ’ ಎಂದು ತಪ್ಪಾಗಿ ಕಾಣಲಾಗುತ್ತಿದೆ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ

ಮನೆ ಕಟ್ಟಲು ಬಡವರು ಬಳಸುವ ಸಿಮೆಂಟ್ ಮೇಲೆ ಕೂಡ ಶೇಕಡ 28ರಷ್ಟು ಜಿಎಸ್‌ಟಿಯನ್ನು ಸರ್ಕಾರ ವಿಧಿಸುವುದು ಈ ದೇಶದಲ್ಲಿ ಮಾತ್ರ.

ಎಂ.ಕೆ. ವೇಣು, ಪತ್ರಕರ್ತ

25 ವರ್ಷಗಳ ಹಿಂದೆ

ಶನಿವಾರ, 10-7-1999

• ಇನ್ನಷ್ಟು ಶಿಖರಗಳ ವಶ: ಅಂತಿಮ ಹಂತದಲ್ಲಿ ಆಪರೇಷನ್ ವಿಜಯ್

ನವದೆಹಲಿ, ಜುಲೈ 9– ಬಟಾಲಿಕ್ ವಲಯದಲ್ಲಿ ಪಾಕಿಸ್ತಾನಿ ಸೈನಿಕರು ಮತ್ತು ಉಗ್ರಗಾಮಿಗಳನ್ನು ಸಾಕಷ್ಟು ಸದೆಬಡಿದಿರುವ ಭಾರತೀಯ ಸೇನೆ ಶೇ 99ರಷ್ಟು ಪ್ರದೇಶಗಳನ್ನು ಮತ್ತೆ ತನ್ನ ವಶಕ್ಕೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಪ್ರಮುಖ ಆಯಕಟ್ಟಿನ ಪ್ರದೇಶವಾದ ಬಟಾಲಿಕ್-ಯಲ್ಲೂರ್ ಪ್ರದೇಶ ಭಾರತೀಯ ಸೇನೆಯ ವಶವಾಗಿದ್ದು, ಅತಿಕ್ರಮಣಕಾರರನ್ನು ಸಂಪೂರ್ಣವಾಗಿ ಗಡಿಯಿಂದ ಹೊರಕ್ಕೆ ಹಾಕಲು ಕೆಲವೇ ಗಂಟೆಗಳ ಕಾರ್ಯಾಚರಣೆ ಸಾಕು ಎಂದು ಸೇನಾ ಮೂಲಗಳು ತಿಳಿಸಿವೆ.

• ರೋಷನ್ ಬೇಗ್, ಕಮರುಲ್ ಕಾಂಗ್ರೆಸ್‌ಗೆ

ನವದೆಹಲಿ, ಜುಲೈ 9– ನಿರೀಕ್ಷೆಯಂತೆ ಜನತಾದಳದ ಕರ್ನಾಟಕದ ಮಾಜಿ ಸಚಿವ ರೋಷನ್ ಬೇಗ್, ಲೋಕಸಭೆಯ ಮಾಜಿ ಸದಸ್ಯರಾದ ಕಮರುಲ್ ಇಸ್ಲಾಂ, ರಾಜಾ ರಂಗಪ್ಪ ನಾಯಕ ಮತ್ತು ಶಾಸಕ ರಾಜಾ ವೆಂಕಟಪ್ಪ ನಾಯಕ ಅವರು ಇಂದು ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದರು.

ಈ ನಾಲ್ವರ ಸೇರ್ಪಡೆಯನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಗುಲಾಂ ನಬಿ ಆಜಾದ್ ಇಂದು ಪಕ್ಷದ ಕಾರ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು. ಕೆಪಿಸಿಸಿ ಅಧ್ಯಕ್ಷ ಎಸ್.ಎಂ. ಕೃಷ್ಣ ಅವರ ಸಮ್ಮುಖದಲ್ಲಿ ಈ ನಾಲ್ವರು ಹಾಜರಿದ್ದು ಕಾಂಗ್ರೆಸ್ ಸೇರಿದರು.

50 ವರ್ಷಗಳ ಹಿಂದೆ

ಬುಧವಾರ, 10-7-1974

• 1,000 ಕೋಟಿ ರೂ.ಗಳ ಚಲಾವಣೆ ಸ್ತಂಭನಕ್ಕೆ ಕೇಂದ್ರದ ಆಲೋಚನೆ

ನವದೆಹಲಿ, ಜುಲೈ 9– ರಾಷ್ಟ್ರವನ್ನು ಆವರಿಸಿರುವ ಹಣದುಬ್ಬರವನ್ನು ನಿಗ್ರಹಿಸಲು ಕೇಂದ್ರ ಸರ್ಕಾರವು ಒಂದು ಸಾವಿರ ಕೋಟಿ ರೂ.ಗಳಷ್ಟು ಹಣವನ್ನು ಚಲಾವಣೆಯಿಂದ ತಡೆದಿಡಲು ನಾನಾ ಕ್ರಮಗಳನ್ನು ಕುರಿತು ಆಲೋಚಿಸುತ್ತಿರುವುದಾಗಿ ಗೊತ್ತಾಗಿದೆ.

ವೇತನಗಳನ್ನು ಆಧರಿಸಿರುವ ವರ್ಗಗಳಿಗೆ ಅನ್ವಯಿಸಿರುವ ಕಡ್ಡಾಯ ಠೇವಣಿ ಹಾಗೂ ಕಂಪನಿಗಳ ಮೇಲೆ ವಿಧಿಸಿರುವ ಡಿವಿಡೆಂಡ್ ಸ್ತಂಭನಗಳಿಂದ 500 ಕೋಟಿ ರೂ.ಗಳು ಚಲಾವಣೆಯಲ್ಲಿಲ್ಲದೆ ಕೂಡಿಕೊಳ್ಳುವುದೆಂದು ಅಂದಾಜು ಮಾಡಲಾಗಿದೆ. ಇನ್ನೂ 500 ಕೋಟಿ ರೂ.ಗಳನ್ನು ಇದೇ ರೀತಿ ತಡೆಹಿಡಿಯಲು ಕ್ರಮಗಳು ಸಿದ್ಧಗೊಳ್ಳುತ್ತಿವೆ.

• ಜೆ.ಪಿ. ಆಗಲಿ, ಯಾರೇ ಆಗಲಿ; ಗಲಭೆ ಎದ್ದರೆ ಸೂಕ್ತ ಕ್ರಮ: ಗಫೂರ್

ಪಟನಾ, ಜುಲೈ 9– ‘ಬಿಹಾರದಲ್ಲಿ ಅರಾಜಕತೆ ಮೂಡಿಸಲು ಯತ್ನಿಸುವವರು ಜಯಪ್ರಕಾಶ ನಾರಾಯಣರೇ ಆಗಿರಲಿ, ಅವರಿಗಿಂತ ದೊಡ್ಡವರೇ ಆಗಿರಲಿ ಸುಮ್ಮನೆ ಬಿಡುವುದಿಲ್ಲ’ ಎಂದು ಮುಖ್ಯಮಂತ್ರಿ ಅಬ್ದುಲ್ ಗಫೂರ್ ಅವರು ಇಂದು ವಿಧಾನಸಭೆಯಲ್ಲಿ ಹೇಳಿದರು.

ಜಯಪ್ರಕಾಶ ನಾರಾಯಣರು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಹಾಳುಗೆಡವಲು ಯತ್ನಿಸಿದರೆ ಅವರಿಗೆ ‘ಸರಿಯಾದ ಜಾಗ’ ತೋರಿಸಲಾಗುವುದು ಎಂದು ಅವರು ನುಡಿದರು.

ಸಂಗತ

ವರಮಾನ ಹೆಚ್ಚಳಕ್ಕೆ ಒತ್ತು ಕೊಡಿ!

ಸಂಪನ್ಮೂಲ ಕ್ರೋಡೀಕರಣದಲ್ಲಿ ಎಚ್ಚರಿಕೆಯ ನಡೆ ಅನುಸರಿಸಬೇಕು. ಆಸ್ತಿ ಉಳಿಸಿಕೊಂಡು ವರಮಾನ ಪಡೆಯುವ ಮಾರ್ಗಗಳನ್ನು ಕಂಡುಕೊಳ್ಳಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ರಾಜ್ಯದಲ್ಲಿ ಮಂತ್ರಿಯಾಗಿದ್ದ, ಮುಖ್ಯಮಂತ್ರಿಯಾಗಿದ್ದ ಎಸ್.ಆರ್.ಕಂಠಿ ಅವರು ಶಿಕ್ಷಣ ಪ್ರೇಮಿಯಾಗಿದ್ದರು. ರಾಜ್ಯದ ವಿವಿಧೆಡೆಗಳಲ್ಲಿ ನಡೆಯುತ್ತಿದ್ದ ಸಮಾರಂಭಗಳಲ್ಲಿ ಅವರನ್ನು ಸನ್ಮಾನಿಸಿದಾಗ ಕೊರಳಿಗೆ ಹಾಕಿದ ಹೂವಿನ ಮಾಲೆ ಹಾಗೂ ಶಾಲುಗಳನ್ನು ಹರಾಜಿನಲ್ಲಿ ಮಾರಾಟ ಮಾಡುತ್ತಿದ್ದರು. ಹೀಗೆ ಹರಾಜಿನ ಮೂಲಕ ಬಂದ ದುಡ್ಡನ್ನು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ನೀಡುತ್ತಿದ್ದರು. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹಣ ಸಂಗ್ರಹಕ್ಕೆ ಅವರು ಈ ವಿಶಿಷ್ಟ ಮಾರ್ಗವನ್ನು ಅನುಸರಿಸುತ್ತಿದ್ದರು. ಇದನ್ನು ‘ಕಂಠಿ ಹರಾಜ್’ ಎಂದು ಜನ ಪ್ರೀತಿಯಿಂದ ಕರೆಯುತ್ತಿದ್ದರು. ಕಂಠಿ ದಂಪತಿ ತಮಗೆ ಬಂದ ಪಿಂಚಣಿ ಹಣವನ್ನೆಲ್ಲ ಶಾಲೆಗಳಿಗೆ ಧಾರೆ ಎರೆದಿದ್ದಾರೆ.

ರಾಜ್ಯ ಸರ್ಕಾರವು ಪಂಚ ಗ್ಯಾರಂಟಿಗಳನ್ನು ಮುನ್ನಡೆಸಲು ಹಣ ಕ್ರೋಡೀಕರಣಕ್ಕೆ ಪರದಾಡುತ್ತಿರುವ ಈ ಹೊತ್ತಿನಲ್ಲಿ ಕಂಠಿ ಅವರ ಜನಪರ ನಡೆ ನೆನಪಾಯಿತು.

ರಾಜ್ಯ ಸರ್ಕಾರದ ವರಮಾನ ಹೆಚ್ಚಿಸಲು ಸಲಹೆ ನೀಡಲು ಅರ್ಥಶಾಸ್ತ್ರಜ್ಞರನ್ನು ಒಳಗೊಂಡ ಸಮಿತಿ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಇದು ಒಳ್ಳೆಯ ನಿರ್ಧಾರ. ದೊಡ್ಡ ದೊಡ್ಡ ಸಂಸ್ಥೆಗಳು, ಕೈಗಾರಿಕೆಗಳು ವರಮಾನ ವೃದ್ಧಿಗೆ ದಾರಿ ತೋರುವ ತಜ್ಞರ ಪಡೆಗಳನ್ನು ನೇಮಕ ಮಾಡಿಕೊಳ್ಳುತ್ತವೆ. ಅನವಶ್ಯಕ ಖರ್ಚುಗಳ ನಿಯಂತ್ರಣ, ಸೋರಿಕೆ ತಡೆಯುವುದು, ಬಡವರಿಗಾಗಿ ಮೀಸಲಾಗಿರುವ ಸೌಲಭ್ಯಗಳನ್ನು ಉಳ್ಳವರು ನಕಲಿ ದಾಖಲೆ ಸೃಷ್ಟಿಸಿ ಪಡೆದುಕೊಳ್ಳುವುದನ್ನು ಪೂರ್ಣ ನಿಲ್ಲಿಸುವುದು ಆರ್ಥಿಕ ಬಿಕ್ಕಟ್ಟು ಕಡಿಮೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ನನ್ನ ಸ್ನೇಹಿತರೊಬ್ಬರು ರಸ್ತೆಯ ಬದಿಯಲ್ಲಿರುವ ತಮ್ಮ ಹೊಲದಲ್ಲಿ ಒಂದು ಕಲ್ಯಾಣ ಮಂಟಪವನ್ನು ಕಡಿಮೆ ಖರ್ಚಿನಲ್ಲಿ ಆಕರ್ಷಕವಾಗಿ ನಿರ್ಮಿಸಿದ್ದಾರೆ. ಇದನ್ನು ಮದುವೆ ಸಮಾರಂಭ, ವಸ್ತು ಪ್ರದರ್ಶನ, ಮಾರಾಟ ಮೇಳಗಳಿಗೆ ಬಾಡಿಗೆ ಆಧಾರದಲ್ಲಿ ಕೊಡುತ್ತಾರೆ. ಇದರಿಂದ ಅವರ ಆದಾಯದಲ್ಲಿ ಗಣನೀಯ ಏರಿಕೆಯಾಗಿದೆ. ಇಂಥ ಸಣ್ಣ ಕ್ರಮಗಳು ಬಹುದೊಡ್ಡ ಬದಲಾವಣೆ ತರಬಲ್ಲವು.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿಗಳಿಂದ ಬಡ ಕುಟುಂಬಗಳ ಆರ್ಥಿಕ ಭದ್ರತೆಗೆ ನೆರವು ಸಿಕ್ಕಿದೆ. ಮಹಿಳಾ ಸಬಲೀಕರಣಕ್ಕೆ ಒಂದಿಷ್ಟು ಸಹಾಯವಾಗಿದೆ. ಗ್ಯಾರಂಟಿ ಯೋಜನೆಗಳು ಜಾರಿಗೆ ಬಂದ ವರ್ಷದ ಅವಧಿಯಲ್ಲಿ ಸಾಮಾಜಿಕವಾಗಿ ಒಳಿತಾಗಿರುವ ಹಲವು ವರದಿಗಳು ಪ್ರಕಟವಾಗಿವೆ. ಭಾರತದಂತಹ ಸಮಾಜದಲ್ಲಿ ಇಂತಹ ಜನಪರ ಯೋಜನೆಗಳನ್ನು ಸರ್ಕಾರ ಮುಂದುವರಿಸಿಕೊಂಡು ಹೋಗುವುದು ಬಹಳ ಮುಖ್ಯವಾಗುತ್ತದೆ.

ಸಿಬ್ಬಂದಿಯ ಸಂಬಳಕ್ಕೆ ಮಾತ್ರ ಸರ್ಕಾರ ಕರ ಸಂಗ್ರಹ ಮಾಡಬೇಕು, ಅಭಿವೃದ್ಧಿ ಕಾರ್ಯಕ್ಕೆ ವರಮಾನದ ಮೂಲಗಳನ್ನು ಸೃಷ್ಟಿಸಬೇಕು ಎಂದು ಜರ್ಮನ್ ಚಿಂತಕ ಫ್ರೆಡೆರಿಕ್ ಏಂಗೆಲ್ಸ್ ಹೇಳುತ್ತಾರೆ. ಸರ್ಕಾರದ ವರಮಾನ ಹಾಗೂ ಖರ್ಚು ಬಜೆಟ್‌ನಲ್ಲಿ ವಿವರವಾಗಿ ಉಲ್ಲೇಖವಾಗಿರುತ್ತದೆ. ವರಮಾನ ಕ್ರೋಡೀಕರಣ ಸರ್ಕಾರದ ಮಹತ್ವದ ಕಾರ್ಯ. ಎಲ್ಲ ಯೋಜನೆಗಳ ಅನುಷ್ಠಾನ ಇದನ್ನೇ ಅವಲಂಬಿಸಿದೆ. ಸರ್ಕಾರ ಹೊಂದಿದ ಜಮೀನು, ಕಟ್ಟಡಗಳು, ಕೈಗಾರಿಕೆಗಳು, ಸೇವಾ ವಲಯಗಳ ಕಂಪನಿಗಳ ಮೂಲಕ ವರಮಾನ ಗಳಿಸಬಹುದು. ಪರಿಸರಕ್ಕೆ ಧಕ್ಕೆಯಾಗದಂತೆ ಖನಿಜ ಸಂಪತ್ತನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಸರ್ಕಾರವೇ ದಕ್ಷತೆಯಿಂದ ನಿರ್ವಹಿಸಬೇಕು. ಅನಿಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳು ರಷ್ಯಾ ದೇಶದ ಮುಖ್ಯ ಆದಾಯ ಮೂಲ. ಸರ್ಕಾರವೇ ಇವುಗಳ ಉತ್ಪಾದನೆ ಮತ್ತು ಮಾರಾಟವನ್ನು ನಿರ್ವಹಿಸುತ್ತದೆ.

ರಾಜ್ಯದ ಉದ್ದಗಲಕ್ಕೂ ಇರುವ ಸರ್ಕಾರಿ ಜಮೀನಿನಲ್ಲಿ ಬಹಳಷ್ಟು ಪಾಲನ್ನು ಪ್ರಭಾವಿಗಳು ಆಕ್ರಮಿಸಿಕೊಂಡಿದ್ದಾರೆ. ಗ್ರಾಮೀಣ ಭಾಗಗಳಲ್ಲಿರುವ ಗೋಮಾಳಗಳನ್ನು, ಕೆರೆಗಳ ಸುತ್ತಮುತ್ತಲಿನ ಜಮೀನನ್ನು ಕೂಡ ಇಂಥವರೇ ಕಬಳಿಸಿಕೊಂಡಿದ್ದಾರೆ. ಅಳಿದುಳಿದ ಜಮೀನಿನಲ್ಲಿನ ಕಲ್ಲು, ಮಣ್ಣು ಅಕ್ರಮವಾಗಿ

ಸಾಗಣೆ ಆಗುತ್ತಿದೆ. ಐತಿಹಾಸಿಕ ಸ್ಮಾರಕಗಳ ಸುತ್ತಮುತ್ತಲ ಪ್ರದೇಶಗಳನ್ನು ಕೂಡ ಅಲ್ಲಿನ ಕೆಲವರು ಅತಿಕ್ರಮಿಸಿದ ವರದಿಗಳು ಇವೆ. ಈ ಎಲ್ಲ ಜಮೀನುಗಳನ್ನು ರಕ್ಷಿಸುವ ಕೆಲಸ ತುರ್ತಾಗಿ ನಡೆದು, ಇವುಗಳನ್ನು ವರಮಾನದ ಮೂಲಗಳನ್ನಾಗಿ ಪರಿವರ್ತಿಸಬೇಕು.

ಸಂಪನ್ಮೂಲಗಳ ಕ್ರೋಡೀಕರಣದ ಸಂದರ್ಭದಲ್ಲಿ ಕೆಲವು ಎಚ್ಚರಿಕೆಯ ನಡೆ ಅನುಸರಿಸಬೇಕಿದೆ. ಜಮೀನು ಮಾರಾಟ ಮಾಡದೆ, ಆಸ್ತಿ ಉಳಿಸಿಕೊಂಡು ವರಮಾನ ಪಡೆಯುವ ಮಾರ್ಗಗಳನ್ನು ಕಂಡುಕೊಳ್ಳಬೇಕು. ಆಸ್ತಿ ಮಾರಾಟದಿಂದ ಬಂದ ಹಣವನ್ನು ವರಮಾನವೆಂದು ಪರಿಗಣಿಸಲಾಗದು. ಹಿಂದೆ ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯಗಳು ಲಾಟರಿ ಯೋಜನೆ ಜಾರಿಗೆ ತಂದಿದ್ದವು. ವರಮಾನ ಮೂಲವಾಗಿ ಇಂಥ ಋಣಾತ್ಮಕ ಯೋಜನೆಗಳನ್ನು ರೂಪಿಸುವುದು ಸರಿಯಲ್ಲ.

ಕೊರತೆಯೇ ಹೊಸದರ ಆವಿಷ್ಕಾರಕ್ಕೆ ಮೂಲ ಎನ್ನುವ ಮಾತೊಂದಿದೆ. ಗ್ಯಾರಂಟಿ ಯೋಜನೆಗಳಿಗೆ ಭಾರಿ ಪ್ರಮಾಣದಲ್ಲಿ ಹಣದ ಅವಶ್ಯಕತೆ ಇದೆ. ಇದು ಸಮಸ್ಯೆ ಅಲ್ಲ; ಇದೊಂದು ಅವಕಾಶ. ಸರ್ಕಾರದ ಜಮೀನುಗಳ ಸಮಗ್ರ ದಾಖಲೀಕರಣ ಆಗಬೇಕು. ತಜ್ಞರ ಸೇವೆ ಪಡೆದು ಅದನ್ನು ವರಮಾನದ ಮೂಲವಾಗಿ ಅಭಿವೃದ್ಧಿಪಡಿಸಬೇಕು. ವ್ಯಕ್ತಿಯಾಗಲೀ ರಾಜ್ಯವಾಗಲೀ ಹೆಚ್ಚು ಸಂಪನ್ಮೂಲಗಳನ್ನು ಹೊಂದಿ, ಹೆಚ್ಚು ವರಮಾನ ಪಡೆಯಬೇಕು ಎಂಬ ಗುರಿ ಇಟ್ಟುಕೊಳ್ಳುವುದು ಸಕಾರಾತ್ಮಕ ಧೋರಣೆ. ಇದನ್ನು ಸದಾ ಕಾಪಾಡಿಕೊಳ್ಳಬೇಕು.

ವಾಚಕರ ವಾಣಿ

ಸಾರ್ವಜನಿಕ ಸ್ಥಳಗಳಲ್ಲಿ ಮಾತ್ರ ನಿಷೇಧವೇ?

ಬೆಂಗಳೂರಿನ ರೈಲು ನಿಲ್ದಾಣದ ಸಮೀಪ ಇತ್ತೀಚೆಗೆ ನಡೆದ ಘಟನೆಯಿದು. ಬೆಂಗಳೂರಿನಿಂದ ಮಂಗಳೂರಿಗೆ ಹೊರಡುವ ರೈಲನ್ನು ಹಿಡಿಯುವ ತರಾತುರಿಯಲ್ಲಿದ್ದೆ. ರೈಲು ನಿಲ್ದಾಣಕ್ಕೆ ಹೋಗುವ ದಾರಿಯಲ್ಲಿ ಒಂದು ಪುಟ್ಟ ಅಂಗಡಿಯ ಬಳಿ ಜನ ಸೇರಿದ್ದರು. ಕುತೂಹಲದಿಂದ ಹತ್ತಿರ ಹೋಗಿ ನೋಡಿದಾಗ, ಸಮೀಪದ ಹಳ್ಳಿಯೊಂದರಿಂದ ಬಂದಿದ್ದ ರೈತನೊಬ್ಬ ಅಂಗಡಿಯಲ್ಲಿ ಸಿಗರೇಟ್ ಖರೀದಿಸಿ ಅಲ್ಲಿಯೇ ಸೇದುತ್ತಿದ್ದ ಸಮಯದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಬಂದು ರೈತನ ಕೈಹಿಡಿದುಕೊಂಡು, ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡಿದ್ದಕ್ಕಾಗಿ ₹500 ದಂಡ ತೆರಬೇಕೆಂದು ಒತ್ತಾಯಿಸುತ್ತಿದ್ದ. ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡಬಾರದೆಂಬ ವಿಷಯ ತಮಗೆ ತಿಳಿಯದೆಂದೂ ದಂಡ ತೆರಲು ಅಷ್ಟು ಹಣ ತಮ್ಮ ಬಳಿ ಇಲ್ಲವೆಂದೂ ತಿಳಿಯದೆ ಮಾಡಿದ ತಪ್ಪಿಗೆ ಕ್ಷಮಿಸಬೇಕೆಂದೂ ಆ ರೈತ ಅಂಗಲಾಚಿ ಬೇಡಿಕೊಳ್ಳುತ್ತಿದ್ದ. ನಾನು ಹಿಡಿಯಬೇಕಾದ ರೈಲಿನ ಸಮಯ ಸಮೀಪಿಸುತ್ತಿತ್ತು. ಆದುದರಿಂದ ನಾನು ಅಲ್ಲಿಂದ ಹೊರಟೆ. ಮುಂದೇನಾಯಿತೆಂದು ತಿಳಿಯದು.

ನಂತರ ಹಲವು ಪ್ರಶ್ನೆಗಳು ನನ್ನನ್ನು ಕಾಡತೊಡಗಿದವು. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಬಾರದೆಂಬ ಅರಿವಿಲ್ಲದೆ ರೈತ ಸಿಗರೇಟ್ ಸೇದಿದ್ದು ಅಪರಾಧವೆಂದಾದರೆ, ಸಾರ್ವಜನಿಕ ಸ್ಥಳಗಳ ಬಳಿಯ ಅಂಗಡಿಗಳಲ್ಲಿ ಸಿಗರೇಟ್ ಮಾರಾಟ ಮಾಡಲು ಅನುಮತಿ ನೀಡಿದ್ದೇಕೆ? ಅನುಮತಿ ನೀಡಿಲ್ಲವೆಂದಾದರೆ, ಸಿಗರೇಟ್ ಮಾರಾಟ ಮಾಡಿದ ಅಂಗಡಿಯವರನ್ನೂ ತಪ್ಪಿತಸ್ಥರನ್ನಾಗಿ ಪರಿಗಣಿಸಿ ಕ್ರಮ ಜರುಗಿಸಬೇಕಲ್ಲವೇ?

ಧೂಮಪಾನವು ಆರೋಗ್ಯಕ್ಕೆ ಹಾನಿಕರ ಎಂದಾದಲ್ಲಿ, ಸಿಗರೇಟು ಸೇದುವುದನ್ನು ಸಾರ್ವಜನಿಕ ಸ್ಥಳಗಳಲ್ಲಿ ಮಾತ್ರ ನಿಷೇಧಿಸಿರುವುದು ಏಕೆ? ಸಿಗರೇಟ್ ತಯಾರಿಸಲು ಕಂಪನಿಗಳಿಗೆ ಅನುಮತಿ ನೀಡುವುದೇಕೆ? ಸರ್ಕಾರದ ಖಜಾನೆ ತುಂಬಿಸಲು ಸಿಗರೇಟ್ ಕಂಪನಿಗಳೂ ಬೇಕು, ಸಿಗರೇಟ್ ಸೇದುವ ಪ್ರಜೆಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದಂತೆಯೂ ಆಗಬೇಕು ಎಂಬ ಧೋರಣೆಯೇ?

ಜಿ. ನಾಗೇಂದ್ರ ಕಾವೂರು, ಸಂಡೂರು

ಸ್ಕೈವಾಕ್ ನಿರ್ಮಾಣ: ವಿಸ್ತೃತ ಅಧ್ಯಯನ ಬೇಕು

ಬೆಂಗಳೂರಿನ 60ಕ್ಕೂ ಹೆಚ್ಚಿನ ಸ್ಥಳಗಳಲ್ಲಿ ಸ್ಕೈವಾಕ್ ನಿರ್ಮಿಸಬೇಕೆಂಬ ಪ್ರಸ್ತಾವವನ್ನು ನಗರ ಸಂಚಾರ ಪೊಲೀಸರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಲ್ಲಿಸಿದ್ದಾರೆ (ಪ್ರ.ವಾ., ಜುಲೈ 8). ಇದು ಒಳ್ಳೆಯ ಪ್ರಸ್ತಾವ. ಆದರೆ ಬೆಂಗಳೂರಿನಾದ್ಯಂತ ಈಗಾಗಲೇ ನಿರ್ಮಿಸಿರುವ ಬಹಳಷ್ಟು ಸ್ಕೈವಾಕ್‌ಗಳು ಹೇಗೆ ಬಳಕೆ ಆಗುತ್ತಿವೆ ಎಂಬ ಬಗ್ಗೆ ವಿವರವಾದ ಅಧ್ಯಯನ ಮಾಡುವುದು ಉತ್ತಮ. ಬಹುತೇಕ ಕಡೆಗಳಲ್ಲಿ ಸ್ಕೈವಾಕ್‌ಗಳನ್ನು ಸಾರ್ವಜನಿಕರು ಉಪಯೋಗಿಸುವುದೇ ಇಲ್ಲ ಅಥವಾ ಕೆಲವೇ ಜನ ಅವನ್ನು ಬಳಸುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅವುಗಳ ಎತ್ತರ ಹಾಗೂ ಹತ್ತಿ-ಇಳಿಯಲು ಇರುವ ಮೆಟ್ಟಿಲುಗಳು. ಸ್ಕೈವಾಕ್‌ಗಳನ್ನು ಬಳಕೆದಾರ ಸ್ನೇಹಿಯಾಗಿ ಮಾಡದ ಹೊರತು ಸಾರ್ವಜನಿಕರು ಅವುಗಳನ್ನು ಉಪಯೋಗಿಸುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಈ ಸ್ಕೈವಾಕ್‌ಗಳನ್ನು ಮಹಿಳೆಯರು, ವಯಸ್ಸಾದವರನ್ನು ಗಮನದಲ್ಲಿ ಇಟ್ಟುಕೊಂಡು ವಿನ್ಯಾಸಗೊಳಿಸಬೇಕು. ಸರಿಯಾದ ವಿನ್ಯಾಸದಲ್ಲಿ ಇವುಗಳನ್ನು ನಿರ್ಮಿಸದಿದ್ದರೆ ಇವು ನಗರದ ಸೌಂದರ್ಯವನ್ನು ಹಾಳುಮಾಡುತ್ತವೆ.

ಕಡೂರು ಫಣಿಶಂಕರ್, ಬೆಂಗಳೂರು

ಮುಟ್ಟಿನ ರಜೆ: ಕಾನೂನಿನ ರೂಪದಲ್ಲಿ ಬೇಡ

ಮುಟ್ಟಿನ ರಜೆ ನೀಡುವ ಕುರಿತು ಚರ್ಚೆಗಳು ನಡೆದಿವೆ. ಮುಟ್ಟಿನ ರಜೆ ನೀಡಬೇಕು ಎಂಬ ಕಾನೂನು ಜಾರಿಗೆ ಬಂದರೆ ಉಪಯೋಗಕ್ಕಿಂತ ದುರ್ಬಳಕೆಯೇ ಹೆಚ್ಚಾಗಬಹುದು. ಮಹಿಳೆಯರು ಕೆಲಸದ ಒತ್ತಡಗಳನ್ನು ತಮ್ಮ ದೇಹಪ್ರಕೃತಿಗೆ ಅನುಗುಣವಾಗಿ ತಮ್ಮದೇ ಆದ ಬಗೆಯಲ್ಲಿ ಸರಿದೂಗಿಸಿಕೊಂಡು ಹೋಗುತ್ತಿದ್ದಾರೆ. ಮುಟ್ಟಿನ ರಜೆ ಎರಡು ದಿನ ಇರಬೇಕು ಎಂಬ ವಾದ ಇದೆ. ಆದರೆ, ಕೆಲವು ಮಹಿಳೆಯರು ಒಂದು ವಾರದವರೆಗೂ ಸಮಸ್ಯೆ ಅನುಭವಿಸುತ್ತಾರೆ. ರಜೆ ನೀಡುವ ಕಾನೂನು ಜಾರಿಗೆ ತರುವುದಕ್ಕಿಂತ ಮಹಿಳೆಯರಿಗೆ ಮುಟ್ಟಿನ ಸಮಯದಲ್ಲಿ ಉದ್ಯೋಗದ ಸ್ಥಳದಲ್ಲಿ ಸೂಕ್ತ ಸ್ಯಾನಿಟರಿ ನ್ಯಾಪ್ಕಿನ್ ಲಭ್ಯವಾಗುವಂತೆ ಮಾಡುವುದು ಹೆಚ್ಚು ಒಳಿತು ಮಾಡಬಹುದು. ಮುಟ್ಟಿನ ರಜೆಯನ್ನು ಕಾನೂನಿನ ಮೂಲಕ ಜಾರಿಗೆ ತಂದರೆ ಮಹಿಳೆಯರಿಗೆ ಉದ್ಯೋಗದಲ್ಲಿ ತೊಡಗಿಕೊಳ್ಳುವುದಕ್ಕೆ ಅದೇ ಬಹುದೊಡ್ಡ ತೊಡಕಾಗಿ ಪರಿಣಮಿಸಬಹುದು. ಮೆನೋಪಾಸ್‌ಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿರುವ ಮಹಿಳೆಯರಿಗೆ ಕೆಲಸದ ಒತ್ತಡ ನಿಭಾಯಿಸಿಕೊಳ್ಳಲು ನೆರವಾಗುವ ದಿಸೆಯಲ್ಲಿ ಚಿಂತನೆ ನಡೆಯಬೇಕಿದೆ.

ಸುಮಾ ವೀಣಾ, ಹಾಸನ

ಬಿಪಿಎಲ್: ಗಾಬರಿ ಮೂಡಿಸುವ ಅಂಕಿ–ಅಂಶ

ಮುಖ್ಯಮಂತ್ರಿಯವರು ಅನರ್ಹ ಬಿಪಿಎಲ್ ಕಾರ್ಡುಗಳನ್ನು ರದ್ದುಪಡಿಸಿ ಅರ್ಹರಿಗೆ ಬಿಪಿಎಲ್ ಕಾರ್ಡುಗಳನ್ನು ನೀಡುವಂತೆ ಸೂಚನೆ ನೀಡಿದ್ದಾರೆ (ಪ್ರ.ವಾ., ಜುಲೈ 9). ರಾಜ್ಯದಲ್ಲಿನ ಬಿಪಿಎಲ್ ಕಾರ್ಡುಗಳಿಗೆ ಸಂಬಂಧಿಸಿದ ಅಂಕಿ–ಅಂಶಗಳು ನಿಜಕ್ಕೂ ಗಾಬರಿ ಹುಟ್ಟಿಸುವಂತಿವೆ. ನೀತಿ ಆಯೋಗದ ಪ್ರಕಾರ ರಾಜ್ಯದಲ್ಲಿ ಬಡವರ ಸಂಖ್ಯೆ ಕಡಿಮೆಯಿದ್ದರೂ ಬಿಪಿಎಲ್ ಕಾರ್ಡುಗಳ ಸಂಖ್ಯೆ ಕಡಿಮೆಯಾಗದಿರಲು ಕಾರಣವೇನು ಎಂಬ ಪ್ರಶ್ನೆಯನ್ನು ಮುಖ್ಯಮಂತ್ರಿ ಕೇಳಿರುವುದರಲ್ಲಿ ಅರ್ಥವಿದೆ.

ರಾಜ್ಯದ ಬಡತನ ಪ್ರಮಾಣ, ಬಿಪಿಎಲ್ ಕಾರ್ಡುಗಳ ಸಂಖ್ಯೆ ಮತ್ತು ವಿಲೇವಾರಿಗೆ ಬಾಕಿಯಿರುವ ಅರ್ಜಿಗಳು, ಇವೆಲ್ಲವನ್ನೂ ತುಲನಾತ್ಮಕವಾಗಿ ಪರಿಶೀಲಿಸಿದರೆ ವಾಸ್ತವ ಬಯಲಿಗೆ ಬರಬಹುದು. ಅನುಕೂಲವಂತರು ಸಹ ಬಿಪಿಎಲ್ ಕಾರ್ಡುಗಳನ್ನು ಹಣ, ಪ್ರಭಾವ ಬಳಸಿ ಪಡೆದುಕೊಂಡಿದ್ದಾರೆ ಎಂಬ ಆರೋಪವಿದೆ. ಅರ್ಹ ಅನೇಕ ಮಂದಿ ಈ ಸೌಲಭ್ಯದಿಂದ ವಂಚಿತರಾಗಿರುವ ಸಾಧ್ಯತೆ ಇಲ್ಲದಿಲ್ಲ. ಹಾಗೆಯೇ ಕೆಲವು ಜಿಲ್ಲೆ, ತಾಲ್ಲೂಕುಗಳಲ್ಲಿ ಬಿಪಿಎಲ್ ಕಾರ್ಡುದಾರರು ಪಡಿತರ ಅಂಗಡಿಗಳಿಂದ ಪಡೆದ ಅಕ್ಕಿಯನ್ನು ಉಪಯೋಗಿಸದೆ ಅಧಿಕ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ ಎಂಬ ಬಲವಾದ ಆರೋಪ ಕೂಡ ಇದೆ. ಆದುದರಿಂದ ಬಿಪಿಎಲ್ ಕಾರ್ಡುಗಳ ಬಗ್ಗೆ ನಿಷ್ಪಕ್ಷಪಾತವಾಗಿ ತಳಮಟ್ಟದಿಂದ ತನಿಖೆ ನಡೆಸಿ ಅರ್ಹರಿಗೆ ಮಾತ್ರ ಈ ಸೌಲಭ್ಯ ಸಿಗುವಂತೆ ನೋಡಿಕೊಳ್ಳಬೇಕು. ಈ ಸೌಲಭ್ಯ ನೀಡುವಾಗ ಸರಿಯಾದ ಮಾನದಂಡವೊಂದನ್ನು ಅನ್ವಯ ಮಾಡುವುದು ಒಳಿತು. ಹೀಗೆ ಮಾಡಿದರೆ, ಬೊಕ್ಕಸಕ್ಕೆ ಆಗುತ್ತಿರುವ ಅನಗತ್ಯ ಹೊರೆ ತಗ್ಗುವುದು ಖಚಿತ.

ಹರೀಶ್ ಕುಮಾರ್ ಕುಡ್ತಡ್ಕ, ಮಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

1,27,35,538
ರಾಜ್ಯದಲ್ಲಿ ವಿತರಿಸಿರುವ ಬಿಪಿಎಲ್ ಕಾರ್ಡ್‌ಗಳು

10,83,972
ಅಂತ್ಯೋದಯ ಕಾರ್ಡ್‌ಗಳು

43,81,317
ಅಂತ್ಯೋದಯ ಫಲಾನುಭವಿಗಳು

1,16,51,566
ವಿತರಿಸಲಾಗಿರುವ ಆದ್ಯತಾ ಕಾರ್ಡ್‌ಗಳು (ಬಿಪಿಎಲ್ ಕಾರ್ಡ್)

3,93,06,345
ಆದ್ಯತಾ ಕಾರ್ಡ್ ಫಲಾನುಭವಿಗಳು

ಬಿಪಿಎಲ್ ಕಾರ್ಡ್: ಜಿಲ್ಲಾವಾರು ವಿವರ

ಜಿಲ್ಲೆ	ಕಾರ್ಡ್ ಸಂಖ್ಯೆ	ಫಲಾನುಭವಿಗಳ ಸಂಖ್ಯೆ
	(ಲಕ್ಷಗಳಲ್ಲಿ)	
ಬಾಗಲಕೋಟೆ	4.15	14.65
ಬೆಂಗಳೂರು	10.14	34.96
ಬೆಂ.ಗ್ರಾಮಾಂತರ	2.31	7.90
ಬೆಳಗಾವಿ	11.36	37.45
ಬಳ್ಳಾರಿ	2.30	11.03
ಬೀದರ್	3.51	12.52
ವಿಜಯಪುರ	5.0	17.19
ಚಾಮರಾಜನಗರ	2.90	8.73
ಚಿಕ್ಕಮಗಳೂರು	2.63	8.46
ಚಿತ್ರದುರ್ಗ	4.01	13.81
ಚಿಕ್ಕಬಳ್ಳಾಪುರ	3.09	10.25
ದಕ್ಷಿಣ ಕನ್ನಡ	2.78	11.27
ದಾವಣಗೆರೆ	3.72	13.04
ಧಾರವಾಡ	3.85	13.36
ಗದಗ	2.55	8.25
ಕಲಬುರಗಿ	5.70	19.63
ಹಾಸನ	4.51	14.77
ಹಾವೇರಿ	3.92	13.90
ಕೊಡಗು	1.11	3.34
ಕೋಲಾರ	3.40	11.94
ಕೊಪ್ಪಳ	3.27	11.78
ಮಂಡ್ಯ	4.76	15.50
ಮೈಸೂರು	7.09	22.69
ರಾಯಚೂರು	4.54	15.47
ರಾಮನಗರ	2.95	9.47
ಶಿವಮೊಗ್ಗ	3.89	13.31
ತುಮಕೂರು	6.50	22.09
ಉಡುಪಿ	1.97	8.25
ಉತ್ತರ ಕನ್ನಡ	3.08	10.89
ಯಾದಗಿರಿ	2.70	9.99
ವಿಜಯನಗರ	2.99	10.98

ಬಿಪಿಎಲ್: ನಕಲಿಯೇ ಹೆಚ್ಚು?

ಪ್ರಜಾವಾಣಿ ವಾರ್ತೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯಲ್ಲಿ ಆದ್ಯತಾ (ಬಿಪಿಎಲ್) ಕಾರ್ಡ್‌ಗಳ ಪೈಕಿ ಬೋಗಸ್ ಇರುವುದನ್ನು ರದ್ದು ಮಾಡಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿರುವ ಒಟ್ಟು ಪಡಿತರ ಕಾರ್ಡ್‌ಗಳ ಪೈಕಿ ಶೇ 80ರಷ್ಟು ಕಾರ್ಡ್‌ಗಳು ಬಿಪಿಎಲ್ ಕಾರ್ಡ್‌ಗಳು. ಈ ವರ್ಷದ ಆರಂಭದಲ್ಲಿ ನೀತಿ ಆಯೋಗ ಬಿಡುಗಡೆಮಾಡಿರುವ ಬಹು ಆಯಾಮ ಬಡತನ ಸೂಚ್ಯಂಕದ ವರದಿಯು, 2022–23ರಲ್ಲಿ ಕರ್ನಾಟಕದಲ್ಲಿ ಶೇ 5.67ರಷ್ಟು ಜನರು ಬಡತನ ರೇಖೆಗಿಂತ ಕೆಳಗಿರಬಹುದು ಎಂದು ಅಂದಾಜಿಸಿದೆ. ಸಭೆಯಲ್ಲಿ ಈ ಎರಡೂ ಅಂಶಗಳನ್ನು ಪ್ರಸ್ತಾಪಿಸಿರುವ ಸಿದ್ದರಾಮಯ್ಯ, ಬಡತನದ ಪ್ರಮಾಣ ಇಷ್ಟು ಕಡಿಮೆ ಇದ್ದರೂ, ಬಿಪಿಎಲ್ ಕಾರ್ಡ್‌ಗಳು ಯಾಕೆ ಹೆಚ್ಚಿವೆ ಎಂದು ಪ್ರಶ್ನಿಸಿದ್ದಾರೆ. ತಮಿಳುನಾಡಿನ ಉದಾಹರಣೆಯನ್ನೂ (ಅಲ್ಲಿ ಶೇ 40ರಷ್ಟು ಬಿಪಿಎಲ್ ಕಾರ್ಡ್‌ಗಳಿವೆ) ನೀಡಿದ್ದಾರೆ.

ಬೋಗಸ್ ಬಿಪಿಎಲ್ ಕಾರ್ಡ್‌ಗಳ ಹಾವಳಿ ನಿನ್ನೆ ಮೊನ್ನೆಯದಲ್ಲ. ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಸರ್ಕಾರಿ ಅಧಿಕಾರಿಗಳು, ಶ್ರೀಮಂತರು ಸೇರಿದಂತೆ ಅನರ್ಹರು ತಮ್ಮ ಪ್ರಭಾವ ಬೀರಿ ಬಿಪಿಎಲ್ ಕಾರ್ಡ್‌ಗಳನ್ನು ಮಾಡಿಸಿಕೊಂಡಿದ್ದಾರೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ಉಚಿತವಾಗಿ ಸಿಗುವ ಅಕ್ಕಿಗಳನ್ನು ಮಾರುವ ನಕಲಿ ಕಾರ್ಡ್‌ದಾರರು, ಶಿಕ್ಷಣ, ಉದ್ಯೋಗ ಸೇರಿದಂತೆ ಇತರ ಸೌಲಭ್ಯಗಳನ್ನು ಪಡೆಯುತ್ತಿರುತ್ತಾರೆ. ನಕಲಿ ಕಾರ್ಡ್ ರದ್ದತಿ ಅಭಿಯಾನವನ್ನು ಸರ್ಕಾರ ಕೈಗೊಂಡರೂ ಹೆಚ್ಚು ಪ್ರಯೋಜನವಾಗುತ್ತಿಲ್ಲ. 2022ರಲ್ಲಿ 3.17 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡಲಾಗಿದೆ ಎಂದು ಸರ್ಕಾರ ಹೇಳಿತ್ತು.

ಹೊಸ ಬಿಪಿಎಲ್ ಕಾರ್ಡ್‌ಗಳಿಗೆ ಬರುವ ಅರ್ಜಿಗಳ ಸಂಖ್ಯೆಗೆ ಹೋಲಿಸಿದರೆ, ರದ್ದಾಗುತ್ತಿರುವ ಕಾರ್ಡ್‌ಗಳ ಸಂಖ್ಯೆ ಕಡಿಮೆ. ನಕಲಿ ಕಾರ್ಡ್‌ದಾರರ ವಿರುದ್ಧ ಆಹಾರ, ನಾಗರಿಕ ಸರಬರಾಜು ಇಲಾಖೆ ಕಠಿಣ ಕ್ರಮ ಕೈಗೊಂಡ ಉದಾಹರಣೆಯೂ ಇಲ್ಲ.

ರಾಜ್ಯವಾರು ಪಡಿತರ ಕಾರ್ಡ್ ಚಿತ್ರಣ



ರಾಜ್ಯವಾರು ಬಹು ಆಯಾಮ ಬಡತನ ಹೊಂದಿರುವ ಜನಸಂಖ್ಯೆ (ಶೇಕಡವಾರು)



ಇದು ದೇಶದ ಸಮಸ್ಯೆ

ಕರ್ನಾಟಕ ಮಾತ್ರವಲ್ಲ, ದೇಶದ ಎಲ್ಲ ರಾಜ್ಯಗಳಲ್ಲೂ ಈ ಸಮಸ್ಯೆ ಇದೆ. ನೀತಿ ಆಯೋಗದ ವರದಿ ಹಾಗೂ ಆಹಾರ ಭದ್ರತಾ ಕಾಯ್ದೆಯಡಿಯಲ್ಲಿ ದೇಶದಾದ್ಯಂತ ವಿತರಿಸಲಾಗಿರುವ ಅಂತ್ಯೋದಯ ಮತ್ತು ಆದ್ಯತಾ ಕಾರ್ಡ್‌ಗಳು ಮತ್ತು ಫಲಾನುಭವಿಗಳ ಅಂಕಿ ಅಂಶಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ.

ಬಹು ಆಯಾಮ ಬಡತನ ಸೂಚ್ಯಂಕ ವರದಿಯ ಬಗ್ಗೆ ಹಲವು ಆಕ್ಷೇಪಗಳಿವೆ. ವರದಿಯು ವಾಸ್ತವದಿಂದ ಕೂಡಿಲ್ಲ ಎಂಬ ವಾದ ಇದೆ. ಹಾಗಿದ್ದರೂ, ರಾಜ್ಯವಾರು ಬಿಪಿಎಲ್ ಕಾರ್ಡ್‌ಗಳು ಮತ್ತು ಫಲಾನುಭವಿಗಳ ಸಂಖ್ಯೆಗಳು ಕೂಡ ವಾಸ್ತವದ್ದಲ್ಲ ಎಂಬುದು ಸ್ಪಷ್ಟ.

ದೇಶದಾದ್ಯಂತ ಆಹಾರ ಭದ್ರತಾ ಕಾಯ್ದೆಯಡಿ 20.1 ಕೋಟಿ ಅಂತ್ಯೋದಯ ಮತ್ತು ಆದ್ಯತಾ ಕಾರ್ಡ್‌ಗಳನ್ನು ವಿತರಿಸಲಾಗಿದೆ. 81 ಕೋಟಿ ಫಲಾನುಭವಿಗಳಿದ್ದಾರೆ. 140 ಕೋಟಿ ಜನಸಂಖ್ಯೆ ಇರುವ ಭಾರತದಲ್ಲಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ಪ್ರತಿ ತಿಂಗಳು 81 ಕೋಟಿಯಷ್ಟು ಜನರು ಪಡಿತರ ಪಡೆಯುತ್ತಿದ್ದಾರೆ.

ಆಧಾರ: ನೀತಿಆಯೋಗದ ಬಹುಆಯಾಮ ಬಡತನ ಸೂಚ್ಯಂಕ ವರದಿ, ಆಹಾರ ಭದ್ರತಾ ಕಾಯ್ದೆ ಪೋರ್ಟಲ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ಸಿನಿ ಬಿಟ್ಸ್

ಆಗಸ್ಟ್ 30ಕ್ಕೆ 'ರಾನಿ' ತೆರೆಗೆ

ಗುರುತೇಜ್ ಶೆಟ್ಟಿ ನಿರ್ದೇಶನದ, ಕಿರಣ್‌ರಾಜ್ ನಾಯಕನಾಗಿ ನಟಿಸಿರುವ 'ರಾನಿ' ಚಿತ್ರ ಆಗಸ್ಟ್ 30ರಂದು ತೆರೆಕಾಣಲಿದೆ.

ಇತ್ತೀಚೆಗಷ್ಟೇ ಕಿರಣ್‌ರಾಜ್ ಜನ್ಮದಿನದಂದು ಚಿತ್ರದ ಹಾಡೊಂದನ್ನು ಚಿತ್ರತಂಡ ಬಿಡುಗಡೆ ಮಾಡಿದೆ. 'ಹವಾಮಾನವೆ ಸುಂದರ ಸುಂದರ..' ಎಂಬ ಹಾಡಿಗೆ ಪ್ರಮೋದ್ ಮರವಂತೆ ಸಾಹಿತ್ಯವಿದ್ದು, ಮಣಿಕಾಂತ್ ಕದ್ರಿ ಸಂಗೀತ ಸಂಯೋಜಿಸಿದ್ದಾರೆ. 'ಒಂದು ಹಂತದಲ್ಲಿ ನನಗೆ ಜೀವನದಲ್ಲಿ ಮುಂದೇನು ಎಂಬ ಪ್ರಶ್ನೆ ಎದುರಾಯಿತು. ಆಗ ನನಗೆ, 'ರಾನಿ' ಚಿತ್ರದ ನಿರ್ಮಾಪಕರು ಮತ್ತು ನಿರ್ದೇಶಕರು ಸಿಕ್ಕರು. ನನಗೂ ಈ ಚಿತ್ರದ ಕಥೆ ಇಷ್ಟವಾಯಿತು. ಚಿತ್ರದ ಕಥೆ ಕಾಲ್ಪನಿಕವಾದರೂ, ಪ್ರತಿಯೊಬ್ಬರಿಗೂ ನನ್ನ ಪಾತ್ರ ಹತ್ತಿರವಾಗುತ್ತದೆ. ಬಿಗ್‌ಬಜೆಟ್ ಸಿನಿಮಾವಿದು' ಎಂದರು ಕಿರಣ್‌ರಾಜ್.

'ಇದು ಆ್ಯಕ್ಷನ್ ಚಿತ್ರವಾದರೂ, ಪಕ್ಕಾ ಕೌಟುಂಬಿಕ ಚಿತ್ರ. ಭಿನ್ನ ಪಾತ್ರದಲ್ಲಿ ಕಿರಣ್‌ರಾಜ್ ಇಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಚಿತ್ರದಲ್ಲಿ ಆರು ಆ್ಯಕ್ಷನ್ ಸನ್ನಿವೇಶಗಳಿದೆ. ವಿನೋದ್ ಮಾಸ್ಟರ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದ್ದು, ಆಗಸ್ಟ್ 30ಕ್ಕೆ ಸಿನಿಮಾ ತೆರೆಗೆ ಬರಲಿದೆ' ಎಂದು ಗುರುತೇಜ್ ಶೆಟ್ಟಿ ತಿಳಿಸಿದರು. ಚಂದ್ರಕಾಂತ್ ಪೂಜಾರಿ ಹಾಗೂ ಉಮೇಶ್ ಹೆಗ್ಡೆ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಈ ಚಿತ್ರದಲ್ಲಿ ಮೂವರು ನಾಯಕಿ ಯರಿದ್ದು, ರಾಧ್ಯ, ಸಮಿಕ್ಷಾ ಮತ್ತು ಅಪೂರ್ವ ಬಣ್ಣಹಚ್ಚಿದ್ದಾರೆ. ❖

ಸಮೀಕ್ಷ

ಕನ್ನಡಕ್ಕೆ ಬಂದ ನಟಿ ಅಪ್ಸರ ರಾಣಿ

ರಾಮ್ ಗೋಪಾಲ್ ವರ್ಮ ಅವರ 'ಡೇಂಜರಸ್' ಚಿತ್ರದಿಂದ ಜನಪ್ರಿಯರಾಗಿರುವ ನಟಿ ಅಪ್ಸರ ರಾಣಿ 'ಮುದುಡಿದ ಎಲೆಗಳು' ಚಿತ್ರದ ಮೂಲಕ ಕನ್ನಡಕ್ಕೆ ಕಾಲಿಟ್ಟಿದ್ದಾರೆ. ಹಿಂದಿ, ತೆಲುಗು ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ಅಪ್ಸರ ಕೆಮಿಸ್ಟ್ರಿ ಟೀಚರ್ ಆಗಿ ಕಾಣಿಸಿಕೊಳ್ಳಲಿದ್ದಾರೆ.

ಎಂ.ಶಂಕರ್ ನಿರ್ದೇಶನ ಹಾಗೂ ನಿರ್ಮಾಣದ ಚಿತ್ರದಲ್ಲಿ ಅಪ್ಸರ ರಾಣಿ ಅವರು ಅಭಿನಯಿಸಿದ ಹಾಡಿನ ಚಿತ್ರೀಕರಣ ಇತ್ತೀಚೆಗಷ್ಟೆ ನಡೆಯಿತು.

'ಈಗಾಗಲೇ ಎಂಬತ್ತರಷ್ಟು ಚಿತ್ರೀಕರಣ ಮುಕ್ತಾಯವಾಗಿದೆ. ಕೆಲವು ಭಾಗಗಳ ಚಿತ್ರೀಕರಣ ಮಾತ್ರ ಬಾಕಿಯದೆ. ಒಂದು ಹಾಡಿನ ಚಿತ್ರೀಕರಣ ಕಾಶ್ಮೀರದಲ್ಲಿ ನಡೆದಿದೆ. ಮತ್ತೊಂದು ಹಾಡು ತಜಕಿಸ್ತಾನದಲ್ಲಿ ಚಿತ್ರೀಕರಣಗೊಳ್ಳಲಿದೆ' ಎಂದರು ನಿರ್ದೇಶಕರು.

ರಂಜಿತ್ ಕುಮಾರ್ ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ಪಂಕಜ್ ನಾರಾಯಣ್, ಪಾವನ ಗೌಡ, ನಿಕಿತಾ ಸ್ವಾಮಿ, ಸೂರ್ಯದರ್ಶನ್, ಪ್ರೀತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಹರ್ಷಿಕಾ ಪೂಣಚ್ಚ, ರಮೇಶ್ ಭಟ್, ಭವ್ಯ, ಶೋಭರಾಜ್ ಮುಂತಾದವರು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಿಕಾಸ್ ವಸಿಷ್ಠ ಸಂಗೀತ ನಿರ್ದೇಶನವಿರುವ ಈ ಚಿತ್ರಕ್ಕೆ ಶ್ಯಾಮ್ ಸಿಂಧನೂರು ಅವರ ಛಾಯಾಚಿತ್ರಗ್ರಹಣವಿದೆ. ❖

ಅಪ್ಸರ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗಾಂಧೀಜಿ ಹೇಳಿದ್ದ ಹಳ್ಳಿ

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಅರುಣ್ ಕುಮಾರ್ ಎಂಬ ಕಲಾವಿದ ಹೊಸ ಕನಸುಗಳ ಹೊತ್ತು ಮಲೆನಾಡಿನ ತಮ್ಮ ಹಳ್ಳಿಗೆ ಬಂದರು. ಗಾಂಧೀಜಿ ಹೇಳಿದ್ದ ಗ್ರಾಮ ಸ್ವರಾಜ್ಯದ ಆಶಯ ಎದೆಯೊಳಗಿತ್ತು. ಆದರೆ ದೆಹಲಿಯಲ್ಲಿ ನೆಲೆಸಿದ ಇವರಿಂದ ನಮ್ಮ ಕುಗ್ರಾಮಕ್ಕೆ ಆಗುವುದು ಏನೇನೂ ಇಲ್ಲ. ನಗರದ ಜನರೇ ಹೀಗೆ ಸೋಗಿನವರು. ಅವಾಸ್ತವಿಕ ಮಾತುಗಾರರು ಎಂದು ಜನ ಮೊದಲು ಅಸಡ್ಡೆ ತೋರಿದರು.

ರೈತಾಪಿ ಹಿನ್ನೆಲೆಯಿಂದ ಬಂದ ಅರುಣ್ ಅವರಿಗೆ ಊರಲ್ಲಿ ಕೊಂಚ ಜಮೀನಿತ್ತು. ಅಳಿದು ಹೋಗುತ್ತಿದ್ದ ಭತ್ತದ ಮುನ್ನೂರು ತಳಿಗಳನ್ನು ಹುಡುಕಿ ತಂದು ಅಲ್ಲಿ ಬೆಳೆ ತೆಗೆದರು. ಅದರ ಬೀಜಗಳನ್ನು ಊರಿನ ಜನರಿಗೆ ಹಂಚಿದರು. ತಮಗಿದ್ದ ಬ್ಯಾಣದ ಜಾಗೆಯಲ್ಲಿ ಸಹಜ ಕಾಡನ್ನು ಬೆಳೆಸಿ ಅಲ್ಲಿ ಉಚಿತ ಕಲಿಕೆಯ ಕೇಂದ್ರ ತೆರೆದರು. ಹಳ್ಳಿಗರಿಗೆ ಹಣ್ಣು, ಗಿಡಮೂಲಿಕೆ, ಅಪರೂಪದ ಸಸ್ಯಗಳನ್ನು ಬೆಳೆಸಿ ಕೊಟ್ಟರು. ಹೊರಗಿನಿಂದ ನುರಿತ ತಜ್ಞರ ಕರೆಯಿಸಿ ಸ್ಥಳೀಯ ರೈತರಿಗೆ ಹೊಸ ಜ್ಞಾನ ಮಾರ್ಗಗಳನ್ನು ಪರಿಚಯಿಸಿದರು. ಆರ್ಥಿಕ ಸ್ವಾವಲಂಬನೆಗೆ ಅನುವಾಗುವ ಪರ್ಯಾಯ ಬೆಳೆಗಳ ಕಲಿಸಿದರು.

ಜೇಸು ಪ್ರಕಾಶ್ ಎಂಬ ಗೆಳೆಯನ ಜೊತೆಗೂಡಿ ಊರಿನ ಕೆರೆಗಳ ಹೂಳೆತ್ತುವ ದೊಡ್ಡ ಯೋಜನೆಗೆ ಕೈ ಹಾಕಿದರು. ಅನೇಕ ಹಳ್ಳಿಗಳನ್ನು ದತ್ತು ತೆಗೆದುಕೊಂಡರು. ಸುತ್ತಲ ಜನರ ದೈಹಿಕ ಶ್ರಮ ಒಗ್ಗೂಡಿಸಿದರು. ಬಾಡುವ ಕೆರೆಗಳನ್ನು ಜನರೇ ಮುತುವರ್ಜಿ ವಹಿಸಿ ಉಳಿಸಿಕೊಳ್ಳುವುದು ಎಷ್ಟು ಮುಖ್ಯ ಎಂದು ಮನವರಿಕೆ ಮಾಡಿದರು. ಗ್ರಾಮೀಣ ಶಕ್ತಿ ಛಲದಿಂದ ಒಗ್ಗೂಡಿತು. ಜನವರಿ ತಿಂಗಳಲ್ಲೇ ಬತ್ತಿ ಹೋಗುತ್ತಿದ್ದ ಕೆರೆಗಳು ನಳನಳಿಸಿ ನಗುತ್ತಾ ನಿಂತವು. ಊರ ಬಾವಿಗಳಲ್ಲಿನ ಜಲ ಸ್ತರ ಹೆಚ್ಚಾಯಿತು. ಪ್ರಾಣಿ, ಪಕ್ಷಿ, ದನ ಕರುಗಳು ನೀರಿಲ್ಲದೆ ನಲುಗುವ ದಿನಗಳು ನಿಂತೇ ಹೋದವು.

'ರೈತರನ್ನು ಒಲಿಸಿಕೊಳ್ಳದೆ, ಅವರ ಬದುಕನ್ನು ಒಳಗೊಳ್ಳದೆ ಯಾವುದನ್ನು ಮಾಡಲಾಗದು. ಅವರು ಕಣ್ಣಿಗೆ ಕಂಡರೆ ಮಾತ್ರ ನಂಬುತ್ತಾರೆ. ಯಾರಿಗೂ ಬರಿಯ ಭಾವುಕ ಕನಸುಗಳ ಬಗ್ಗೆ ನಂಬಿಕೆ ಇರುವುದಿಲ್ಲ. ಅಂತಿಮ ಫಲಿತಾಂಶ ಗಳಿಸುವ ತನಕ ಸಹನೆ ಇರಬೇಕು. ನನಗೆ ಅಪ್ಪ ಈ ಹಳ್ಳಿಗೆ ನಿನ್ನ ಕೊಡುಗೆ ಏನೂ ಇರದಿದ್ದರೆ ನೀನು ಎಷ್ಟು ಓದಿ, ಎಷ್ಟು ಗಳಿಸಿ, ಎಲ್ಲಿದ್ದರೂ ಏನು ಪ್ರಯೋಜನ? ಸ್ಥಳೀಯ ಜ್ಞಾನವನ್ನು, ಈ ನೆಲದ ಬೆಳೆಯ ತಳಿಗಳನ್ನು, ನಮ್ಮ ಉಸಿರಾಟದ ಕಾಡನ್ನು ನೀನು ಉಳಿಸಿ ಬೆಳೆಸಬೇಕು' ಎಂದಿದ್ದರು. ಆ ಮಾತನ್ನು ಪಾಲಿಸಲು ಅರುಣ್ ಕುಮಾರ್, ಸಾರಾ ಎಂಬ ಸಂಸ್ಥೆಯನ್ನು ಬಟ್ಟೆಮಲಪ ಎಂಬಲ್ಲಿ ಕಟ್ಟಿದ್ದಾರೆ. ಇದರ ವಾರಸುದಾರರು ಸುತ್ತಲ ಹಳ್ಳಿಯ ಎಲ್ಲಾ ಸಮಸ್ತರು.

ಶಾಲೆಗಳು ಕಲಿಸಲಾಗದ ಪಾಠಗಳು ಮಕ್ಕಳಿಗೆ ಸಿಗಲೆಂದು ಚಿತ್ರಶಾಲೆ, ಮ್ಯೂಸಿಯಂ, ವಿಜ್ಞಾನ ಕೇಂದ್ರ, ಗ್ರಂಥಾಲಯ ರೂಪಿಸಿದ್ದಾರೆ. ಮುಳುಗಡೆಯಾದ ಸ್ಥಳದ ಜನರ ಸಾಂಸ್ಕೃತಿಕ ಕುರುಹುಗಳನ್ನು, ಅವರ ಎದೆಯ ಜನಪದ ದನಿಯನ್ನು ಉಳಿಸಲು ಹೆಣಗುತ್ತಿದ್ದಾರೆ. ಇವರ ತಮ್ಮ ಕುಮಾರ್ ಅಣ್ಣನ ಆಸೆಗೆ ಇಲ್ಲಿ ಆಸರೆಯಾಗಿದ್ದಾರೆ. ಸಮಾಜಮುಖಿಯಾಗಿ ತುಡಿಯುವ ಕನಸಿನ ಮನಸ್ಸುಗಳು ನಮ್ಮ ನಡುವೆ ಇದ್ದಾವೆ ಎಂಬುದೊಂದು ಹೆಮ್ಮೆ. ❖

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜುಲೈ 10, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಚತುರ್ಥಿ ಗಂ.07-53 ನಕ್ಷತ್ರ: ಮಘ ಗಂ. 10-15 ಯೋಗ: ವ್ಯತೀಪಾತ ಗಂ. 27-10 ಕರಣ: ವಿಷ್ಟಿ ಗಂ. 07-53, ಮಿಥುನ ಮಾಸದ 25 ನೇ ದಿನ, ಮಳೆನಕ್ಷತ್ರ: ಪುನರ್ವಸು 2.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-14 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 03 ಮೊಹರಮ್
ಅದೃಷ್ಟ ಸಂಖ್ಯೆ : 12, 5

ಮೇಷ: ಅತ್ಯಂತ ಸಣ್ಣ ವಯಸ್ಸಿಗೆ ವಯಸ್ಸಿಗೆ ಮೀರಿದ ಜವಾಬ್ದಾರಿ ಹೊರ ಬೇಕಾದಂಥ ಸಂದರ್ಭ ಬರುತ್ತದೆ. ವಯಸ್ಸಿಗೆ ಮೀರಿದ ಗಾಂಭೀರ್ಯವನ್ನು ಹೊಗಳುವವರು ಕೆಲವರಾದರೆ ತೆಗಳುವವರು ಕೆಲವರಿರುತ್ತಾರೆ.

ವೃಷಭ: ಹಲವು ದಿನಗಳ ಪ್ರತೀಕ್ಷೆಯ ಮನೋಭಿಲಾಷೆ ಪೂರ್ಣಗೊಳ್ಳುವ ದಿನ ಇದಾಗಲಿದೆ. ತೋಟದ ಫಸಲಿನಲ್ಲಿ ಮಹತ್ತರ ಬದಲಾವಣೆ ತರುವ ಉಪಾಯ ಮಾಡುವಿರಿ. ಮೀನು ಮಾರಾಟಗಾರರಿಗೆ ಲಾಭ.

ಮಿಥುನ: ತಾಳೆಪತ್ರಗಳ ಅಧ್ಯಯನ ನಡೆಸಬೇಕೆಂದು ಇರುವವರಿಗೆ ಸ್ಥಳ ಸಿಗುತ್ತದೆ. ಅಕ್ಕ ತಂಗಿಯರ ಆಸೆ ಈಡೇರಿಸುವ ಪ್ರಯತ್ನ ನಿಮ್ಮದಾಗುವುದು. ಮಕ್ಕಳ ಹೆಸರಿನಲ್ಲಿ ನಿವೇಶನ ಖರೀದಿಸುವ ಯೋಚನೆಗಳು ಬರಲಿವೆ.

ಕರ್ಕಾಟಕ: ಮನೆಯಲ್ಲಿ ಮಾಡುವ ಅಡುಗೆ ಹೊರತುಪಡಿಸಿ ಬೇರೆಯ ಆಹಾರ ತಿನ್ನುವ ಮನಸ್ಸಾಗುತ್ತದೆ. ಕೃತಜ್ಞತೆ ವ್ಯಕ್ತಪಡಿಸದ ವ್ಯಕ್ತಿಗಳ ಜತೆ ವ್ಯವಹಾರ ನಡೆಸುವುದು ಬೇಡ. ನಂಜು ನಿವಾರಕ ಆಹಾರವನ್ನು ಸೇವಿಸಿ.

ಸಿಂಹ: ದಾಂಪತ್ಯದಲ್ಲಿ ಆಗಾಗ ಸಮಸ್ಯೆಗಳು ತೋರಿಬಂದರೂ ಮುಂದಿನ ದಿನಗಳಲ್ಲಿ ಸಂತಸವಿದೆ. ಬಂದಂಥ ಉಡುಗೊರೆ ನೋಡುವ ಸಾಧ್ಯತೆ ಇದೆ. ಮಾತು ಕಡಿಮೆ ಆಡಿದಷ್ಟೂ ಒಳ್ಳೆಯದು.

ಕನ್ಯಾ: ಕೆಲವೊಂದು ಅರ್ಥವಿಲ್ಲದ ಕುಟುಂಬದ ನಡೆಗಳನ್ನು ವಿರೋಧಿಸಿ ಧ್ವನಿಯನ್ನು ಎತ್ತುವಿರಿ. ಯಾವುದೇ ಸವಾಲುಗಳು ಎದುರಾದದರೂ ಬುದ್ಧಿವಂತಿಕೆ ಹಾಗೂ ಧೈರ್ಯದಿಂದ ಅದನ್ನು ಎದುರಿಸುವಿರಿ.

ತುಲಾ: ದೇಹದ ಸೌಂದರ್ಯ ವರ್ಧನೆಗಾಗಿ ಹೆಚ್ಚಿನ ಹಣ ಖರ್ಚು ಮಾಡುವಿರಿ. ತಾಯಿಯಿಂದ ಕಲಿತ ಪಾಠಗಳನ್ನು ಮುಂದಿನ ಪೀಳಿಗೆಗೆ ಕಲಿಸಿಕೊಡುವಂಥ ಸಂತಸದ ದಿನಗಳಿಗೆ ಗಣನೆಯನ್ನು ಮಾಡುವಿರಿ.

ವೃಶ್ಚಿಕ: ವ್ಯವಹಾರದಲ್ಲಿ ಸಹೋದ್ಯೋಗಿಗಳ ಜತೆಯಲ್ಲಿ ಉತ್ತಮವಾದ ಸಂಬಂಧವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಹೊಸ ಹೊಸ ವಿಚಾರಗಳನ್ನು ನಿಮ್ಮ ಸಹೋದರಿಯಿಂದ ಕಲಿಯಲು ಮುಂದಾಗುತ್ತೀರಿ.

ಧನು: ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಅವರಿಂದಾಗಿಯೇ ಹೆಸರು ಹಾಳಾಗುವಂತೆ ಮಾಡುವ ಪ್ರಯತ್ನ ನಡೆಯಬಹುದು. ಹಾಸ್ಯ ಪ್ರವೃತ್ತಿಯ ನಿಮ್ಮ ವ್ಯಕ್ತಿತ್ವ ಬೇಸರದಲ್ಲಿರುವವರನ್ನು ಸಂತಸ ಪಡಿಸುತ್ತದೆ.

ಮಕರ: ಮಾನಸಿಕವಾಗಿ ನಿರ್ಧಾರಗಳಲ್ಲಿ ಸ್ಥಿರತೆ ಬರುವವರೆಗೂ ಇತರರ ಮುಂದೆ ಪ್ರಸ್ತುತ ಪಡಿಸಬೇಡಿ. ಆಕಾಶ ವೀಕ್ಷಣೆಯನ್ನು ನಿಯಮಬದ್ಧವಾಗಿ ಮಾಡುವವರಿಗೆ ಉತ್ತಮ ಜತೆಗಾರರೊಬ್ಬರು ದೊರೆಯಲಿದ್ದಾರೆ.

ಕುಂಭ: ಸಾಮರ್ಥ್ಯದ ಅರಿವಿಲ್ಲದೆ ಲಘುವಾಗಿ ಮಾತನಾಡಿದವರಿಗೆ ಸರಿಯಾದ ಪಾಠವನ್ನು ಕಲಿಸುವಿರಿ. ಉತ್ತಮ ಪ್ರತಿಜ್ಞೆಗಳೊಂದಿಗೆ ಶುರುವಾದ ಕಾರ್ಯವು ಶುಭಫಲ ನೀಡುವುದು. ಮರೆವಿನಿಂದ ಕಷ್ಟಗಳಾಗುವವು.

ಮೀನ: ಪ್ರಾರ್ಥನೆಯು ದೇವರನ್ನು ತಲುಪಿತು ಎನ್ನುವಂತೆ ನಿಮ್ಮ ಅಭೀಷ್ಟಗಳು ನೆರವೇರುವವು. ವಿವಿಧವಾದ ಸವಾಲುಗಳನ್ನು ಎದುರಿಸಬೇಕಾದ ಸಂದರ್ಭ ಬರುತ್ತದೆ. ಮುಂದಿನ ಓದಿನ ಬಗ್ಗೆ ಯೋಚಿಸುವಿರಿ.

ಪದಬಂಧ 5737

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸ್ವರದಲ್ಲಿರುವ ಸ್ವಂತ ಬರವಣಿಗೆ ಕಾಣಿಸಿತೇ? (5)
3.ಗೆಲುವನ್ನು ಪಡೆದವನೀತ (3)
5.ತಿರುಗಿದಾಗ ಆದ ಅಂಜಿಕೆ (2)
7.ಈತ ವಿಧಿಯನ್ನು ಬರೆಯುವವನು (3)
8.ನಡುವೆ ಮಜಾ ಇದ್ದಾಗಲೇ ಈ ಸಾಂತ್ವನ! (5)
11.ಇದು ಭಾರವಲ್ಲ ಬಿಡಿ! (3)
12.ನಗರದಲ್ಲಿರುವ ಮನುಷ್ಯ (2)
14.ಸ್ವಚ್ಛಂದತೆಯನ್ನು ಹೀಗೆನ್ನಿ (3)
15.ಊಟದ ಸಮಾರಂಭವಿದು (5)

ಮೇಲಿಂದ ಕೆಳಕ್ಕೆ
1.ತಾನೇ ಮಾಡಿದುದು (4)
2.ಚತುರ್ವರ್ಣಗಳಲ್ಲಿ ಎರಡನೆಯ ವರ್ಗ (3)
4.ಭೇದಭಾವ ಹೀಗೆ ಬಂದಿದೆ (4)
6.ಸಂಸಾರದ ಸೆರೆಯಿದು (5)
7.ಪಾಂಡಿತ್ಯವನ್ನು ಹೊಂದಿದವಳು (3)
8.ಸರ ತಂದವನಿಗೆ ತೋರಿದ ಆದರ (3)
9.ಗೌರವಕ್ಕೆ ಪಾತ್ರನಾದವನು (4)
10.ಕೊನೆಗೆ ಕಾಟಕೊಟ್ಟಾಗ ಅರಸುವುದು! (4)
13.ತಿರುವುಮುರುವಾದ ಹೊಟ್ಟೆ (3)



5736ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಕಾಯ 3.ವನಸುಮ
5.ಮತ್ಸರ 6.ತಿರುಕ
8.ವರುಣ 9.ಸಾತ್ವಿಕ
10.ಕಟ್ಟಿಗೆ 11.ಹರಕೆ
12.ಸುಮ್ಮಾನ 14.ಕಂಬನಿ
16.ರಸಾಭಾಸ 17.ಜಮಾವಣೆ

ಮೇಲಿಂದ ಕೆಳಕ್ಕೆ:
1.ಪದಾತಿ 2.ಯಮ
3.ವರ 4.ಮರಣ
7.ಕರ್ಣಾಕರ್ಣಿಕೆ 8.ವರ್ಗೀಕರಿಸು
11.ಹಮ್ಮೀರ 13.ನವಣೆ
14.ಕಂಸ 15.ನಿಜ

ಸುಡೊಕು 6122

4	6		3		8			
	7						8	
9					2			6
							6	
	2	6	9		7			
	4		6		1		7	5
			1					7
8		7					9	1
	9		8		6	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6121 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,320
ಇಂದಿನ ಅಂತ್ಯ	24,433
▲	112
ದಿನದ ಗರಿಷ್ಠ	24,443

ವಿನಿಮಯ ದರ

$ ಡಾಲರ್	83.49
£ ಪೌಂಡ್	106.86
€ ಯುರೊ	90.39
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹565
12 ಕ್ಕೆ	₹76
ಮೈಸೂರು	
100ಕ್ಕೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1540)
ಸೋಯಾ (ರಿಫೈನ್ಡ್)	₹965 (975)
ಸೂರ್ಯಕಾಂತಿ (ರಿಫೈನ್ಡ್)	₹965 (970)
ಪಾಮೋಲಿನ್	₹906 (915)

ಪೂರ್ವ ರೈಲ್ವೆಗೆ ₹953 ಕೋಟಿ ವರಮಾನ

ಕೋಲ್ಕತ್ತ (ಪಿಟಿಐ): 2024-25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್–ಜೂನ್) ಪೂರ್ವ ರೈಲ್ವೆಯು ₹953 ಕೋಟಿ ವರಮಾನ ಗಳಿಸಿದೆ ಎಂದು ರೈಲ್ವೆ ವಲಯದ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಪ್ರಯಾಣಿಕರ ವಿಭಾಗದಿಂದ ₹866 ಕೋಟಿ ಆದಾಯ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 9.97ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

ಈ ತ್ರೈಮಾಸಿಕದಲ್ಲಿ ಒಟ್ಟು 2.87 ಲಕ್ಷ ಪ್ರಯಾಣಿಕರು ರೈಲಿನಲ್ಲಿ ಪ್ರಯಾಣಿಸಿದ್ದು, ಶೇ 3.36ರಷ್ಟು ಏರಿಕೆಯಾಗಿದೆ ಎಂದು ವಿವರಿಸಿದ್ದಾರೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹203
ಆರ್‌ಎಸ್‌ಎಸ್-5	₹195.50
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹182.50

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8900-9308
ತಿಪಟೂರು	₹9000-9200

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹100-472
ದ್ವಿತಳಿ (ಬಿ.ವಿ)	₹285-598

ಎಲ್‌ಪಿಜಿಗೆ ಆಧಾರ್ ಜೋಡಣೆ: ಕೇಂದ್ರ ಪೆಟ್ರೋಲಿಯಂ ಸಚಿವರ ಸ್ಪಷ್ಟನೆ

ಇ–ಕೆವೈಸಿಗೆ ಕಾಲಮಿತಿ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ನಕಲಿ ಬಳಕೆದಾರರನ್ನು ಪತ್ತೆ ಹಚ್ಚಲು ಎಲ್‌ಪಿಜಿಗೆ ಗ್ರಾಹಕರ ಆಧಾರ್ ಸಂಖ್ಯೆ ಜೋಡಣೆ ಕಾರ್ಯ ಮಾಡುತ್ತಿವೆ. ಆದರೆ, ಸರ್ಕಾರವು ಈ ಪ್ರಕ್ರಿಯೆ ಪೂರ್ಣಗೊಳಿಸಲು ಯಾವುದೇ ಕಾಲಮಿತಿ ನಿಗದಿಪಡಿಸಿಲ್ಲ' ಎಂದು ಕೇಂದ್ರ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಸ್ಪಷ್ಟಪಡಿಸಿದ್ದಾರೆ.

> ಎಲ್‌ಪಿಜಿಗೆ ಗ್ರಾಹಕರ ಆಧಾರ್ ಸಂಖ್ಯೆ ಜೋಡಣೆ ಪ್ರಕ್ರಿಯೆಯು ಕಳೆದ ಎಂಟು ತಿಂಗಳಿನಿಂದಲೂ ನಡೆಯುತ್ತಿದೆ
>
> **ಹರ್ದೀಪ್ ಸಿಂಗ್ ಪುರಿ,** ಕೇಂದ್ರ ಸಚಿವ, ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಖಾತೆ

ಅಡುಗೆ ಅನಿಲ ಸಿಲಿಂಡರ್ ಗ್ರಾಹಕರು ಇ–ಕೆವೈಸಿ ಅಪ್‌ಡೇಟ್ ಮಾಡಲು ಗ್ಯಾಸ್ ಏಜೆನ್ಸಿಗಳಿಗೆ ಎಡತಾಕುತ್ತಿದ್ದಾರೆ. ಇದರಿಂದ ತೊಂದರೆ ಎದುರಿಸುತ್ತಿದ್ದಾರೆ. ಅದರಲ್ಲೂ ಮಹಿಳೆಯರು ಮತ್ತು ಹಿರಿಯ ನಾಗರಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಅವರು, ಸಚಿವ ಪುರಿ ಅವರಿಗೆ ಪತ್ರ ಬರೆದಿದ್ದರು.

ಸರ್ಕಾರ ಮತ್ತು ತೈಲ ಕಂಪನಿಗಳ ಈ ನಿರ್ಧಾರದಿಂದ ಗ್ಯಾಸ್ ಏಜೆನ್ಸಿಗಳ ಮುಂದೆ ಗ್ರಾಹಕರ ನೂಕುನುಗ್ಗಲು ಉಂಟಾಗುತ್ತಿದೆ. ಅವರ ದೈನಂದಿನ ಬದುಕಿಗೂ ಪೆಟ್ಟು ಬೀಳುತ್ತಿದೆ ಎಂದು ಗಮನ ಸೆಳೆದಿದ್ದರು.

ಇದಕ್ಕೆ ಮಂಗಳವಾರ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಸಚಿವರು, 'ಗ್ರಾಹಕರ ಇ–ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸುವುದಕ್ಕೆ ಸಂಬಂಧಿಸಿದಂತೆ ತೈಲ ಕಂಪನಿಗಳ ಬಳಿ ಸಾಕಷ್ಟು ಆಯ್ಕೆಗಳಿವೆ. ಆದರೆ, ಇದನ್ನು ಪೂರ್ಣಗೊಳಿಸಲು ಕಂಪನಿಗಳು ಅಥವಾ ಸರ್ಕಾರವು ಯಾವುದೇ ಸಮಯ ನಿಗದಿಪಡಿಸಿಲ್ಲ. ಅಲ್ಲದೆ, ತೈಲ ಕಂಪನಿಗಳು ಕೂಡ ಏಜೆನ್ಸಿಗಳ ವ್ಯಾಪ್ತಿಗೆ ಬರುವ ಗ್ರಾಹಕರ ಸಂಖ್ಯೆಯ ಬಗ್ಗೆ ಮಾಹಿತಿ ಪ್ರಕಟಿಸಿಲ್ಲ ಎಂದು ಹೇಳಿದ್ದಾರೆ.

ವಾಣಿಜ್ಯ ಸಿಲಿಂಡರ್ ಬಳಕೆದಾರರ ಪಟ್ಟಿಯಲ್ಲಿರುವ ಕೆಲವರು ಆಗಾಗ್ಗೆ ದಿನಬಳಕೆಯ ಸಿಲಿಂಡರ್ ಬುಕಿಂಗ್ ಮಾಡುತ್ತಾರೆ. ಇಂತಹ ಬಳಕೆದಾರರಿಗೆ ಕಡಿವಾಣ ಹಾಕುವ ಉದ್ದೇಶದಿಂದ ಈ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಗ್ರಾಹಕರಿಗೆ ನೀಡುವ ಸಬ್ಸಿಡಿ ಸೌಲಭ್ಯ ಪಡೆಯಲು ಎಲ್‌ಪಿಜಿ ಬಳಕೆದಾರರು ಆಧಾರ್ ಜೋಡಣೆ ಮಾಡುವುದು ಕಡ್ಡಾಯವಾಗಿದೆ ಎಂದು ಹೇಳಿದ್ದಾರೆ.

ಗ್ರಾಹಕರು ತೈಲ ಕಂಪನಿಗಳ ಮೊಬೈಲ್ ಆ್ಯಪ್ ಮೂಲಕವೂ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದು. ಗ್ಯಾಸ್ ಏಜೆನ್ಸಿ ಕಚೇರಿಗಳಿಗೂ ಭೇಟಿ ನೀಡಬಹುದು ಅಥವಾ ಮನೆ ಬಾಗಿಲಿಗೆ ಸಿಲಿಂಡರ್ ತರುವ ವಿತರಕರಿಗೆ ವಿವರ ನೀಡುವ ಮೂಲಕವೂ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಸಿಲಿಂಡರ್ ವಿತರಕರು ಇ–ಕೆವೈಸಿ ಸಂಬಂಧ ಗ್ರಾಹಕರ ನೈಜತೆಯನ್ನು ಪರಿಶೀಲಿಸಬಹುದಾಗಿದೆ. ಅಲ್ಲದೆ, ಸ್ಥಳದಲ್ಲಿಯೇ ಗ್ರಾಹಕರ ಆಧಾರ್ ಸಂಖ್ಯೆ ಪಡೆದು ಆ್ಯಪ್‌ನಲ್ಲಿ ಅಪ್‌ಡೇಟ್ ಮಾಡಬಹುದಾಗಿದೆ. ಒಟಿಪಿ ಮೂಲಕ ಬಳಕೆದಾರರು ಸ್ಥಳದಲ್ಲಿಯೇ ಈ ಪ್ರಕ್ರಿಯೆಯನ್ನು ಮಾಡಬಹುದಾಗಿದೆ ಎಂದು ಹೇಳಿದ್ದಾರೆ.

ಇಂಗಾಲ ಹೊರಸೂಸುವಿಕೆ ತಗ್ಗಿಸಲು ಒತ್ತು: ಒಎನ್‌ಜಿಸಿ

₹2 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಕಂಪನಿಯು ಕಾರ್ಯಾಚರಣೆ ನಡೆಸುತ್ತಿರುವ ಸ್ಥಳಗಳಲ್ಲಿ 2038ರ ವೇಳೆಗೆ ಇಂಗಾಲ ಹೊರಸೂಸುವಿಕೆ ಪ್ರಮಾಣವನ್ನು ಶೂನ್ಯ-ಕ್ಕಿಳಿಸಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ₹2 ಲಕ್ಷ ಕೋಟಿಗೂ ಹೆಚ್ಚು ಬಂಡವಾಳ ವಿನಿಯೋಗಿಸಲಾಗುವುದು ಎಂದು ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮ (ಒಎನ್‌ಜಿಸಿ) ತಿಳಿಸಿದೆ.

ಈ ನಿಟ್ಟಿನಲ್ಲಿ ನವೀಕರಿಸಬಹುದಾದ ಇಂಧನ ಮತ್ತು ಹಸಿರು ಜಲಜನಕ ಘಟಕಗಳನ್ನು ಸ್ಥಾಪಿಸಲಾಗುತ್ತದೆ. ತೈಲ ಬಾವಿಗಳ ಕಾರ್ಯಾಚರಣೆಯಲ್ಲಿ ಮಿಥೇನ್ ಅನಿಲವನ್ನು ಸುಡುವ ಬದಲು ಹಸಿರು ಇಂಧನ ಬಳಕೆಗೆ ಒತ್ತು ನೀಡಲಾಗುವುದು ಎಂದು ಹೇಳಿದೆ.

ಒಎನ್‌ಜಿಸಿಯು ದೇಶದ ಒಟ್ಟಾರೆ ಉತ್ಪಾದನೆಯಲ್ಲಿ ಮೂರನೇ ಎರಡರಷ್ಟು ಕಚ್ಚಾ ತೈಲವನ್ನು ಉತ್ಪಾದಿಸುತ್ತದೆ. ಶೇ 58ರಷ್ಟು ನೈಸರ್ಗಿಕ ಅನಿಲವನ್ನು ಉತ್ಪಾದಿಸುತ್ತಿದೆ. ಹಂತ ಹಂತವಾಗಿ ಇಂಗಾಲ ಹೊರಸೂಸುವಿಕೆಯ ಪ್ರಮಾಣ ತಗ್ಗಿಸಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದೆ.

ಅಲ್ಲದೆ, ನವೀಕರಿಸಬಹುದಾದ ಇಂಧನ ಮತ್ತು ಹಸಿರು ಜಲಜನಕ ಉತ್ಪಾದನೆಗೆ ಒತ್ತು ನೀಡುವ ಮೂಲಕ ದೇಶದ ಇಂಧನದ ಅಗತ್ಯ ಪೂರೈಸಲಾಗುವುದು ಎಂದು ತಿಳಿಸಿದೆ.

2030ರೊಳಗೆ 5 ಗಿಗಾವಾಟ್ ನವೀಕರಿಸಬಹುದಾದ ಇಂಧನ ಉತ್ಪಾದನೆಗಾಗಿ ₹97 ಸಾವಿರ ಕೋಟಿ ಹೂಡಿಕೆ ಮಾಡಲಾಗುತ್ತದೆ. 2035ರ ವೇಳೆಗೆ ₹65,500 ಕೋಟಿ ಹಾಗೂ 2038ರ ವೇಳೆಗೆ ₹38 ಸಾವಿರ ಕೋಟಿ ಹೂಡಿಕೆ ಮಾಡಲಾಗುವುದು ಎಂದು ತಿಳಿಸಿದೆ.

ಖಾದಿ–ಗ್ರಾಮೋದ್ಯೋಗ: ದಾಖಲೆ ವಹಿವಾಟು

ನವದೆಹಲಿ (ಪಿಟಿಐ): ಕೇಂದ್ರ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು (ಕೆವಿಐಸಿ) 2023–24ನೇ ಆರ್ಥಿಕ ವರ್ಷದಲ್ಲಿ ಮೊದಲ ಬಾರಿಗೆ ₹1.55 ಲಕ್ಷ ಕೋಟಿಯಷ್ಟು ದಾಖಲೆ ವಹಿವಾಟು ನಡೆಸಿದೆ. ಹೊಸದಾಗಿ 10 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಿವೆ ಎಂದು ಮಂಡಳಿಯ ಅಧ್ಯಕ್ಷ ಮನೋಜ್ ಕುಮಾರ್ ಮಂಗಳವಾರ ಹೇಳಿದ್ದಾರೆ.

ಈ ಅವಧಿಯಲ್ಲಿ ಉತ್ಪಾದನೆ ಪ್ರಮಾಣದಲ್ಲಿ ಶೇ 315ರಷ್ಟು ಏರಿಕೆಯಾಗಿದೆ. ಮಾರಾಟದಲ್ಲಿ ಶೇ 400ರಷ್ಟು ಮತ್ತು ಹೊಸ ಉದ್ಯೋಗಾವಕಾಶ ಸೃಷ್ಟಿಯಲ್ಲಿ ಶೇ 81ರಷ್ಟು ಏರಿಕೆಯಾಗಿದೆ ಎಂದಿದ್ದಾರೆ. 2022–23ರಲ್ಲಿ ಮಂಡಳಿಯ ಉತ್ಪನ್ನಗಳ ಮಾರಾಟದ ವಹಿವಾಟು ₹1.34 ಲಕ್ಷ ಕೋಟಿ ಇತ್ತು. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಉತ್ಪನ್ನಗಳ ಮಾರಾಟದ ವಹಿವಾಟು ₹31,154 ಕೋಟಿಯಿಂದ ₹1.55 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗಿದ್ದು, ಗ್ರಾಮೀಣ ಆರ್ಥಿಕತೆಯ ಸದೃಢತೆಗೆ ನೆರವಾಗಿದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಸವಿನೆನಪು

ಶ್ರೀ ಆರ್. ಎಂ. ರಾಜಣ್ಣ

ನಿಮ್ಮ ಆದರ್ಶವೇ ನಮಗೆ ದಾರಿದೀಪ

ಶ್ರೀಮತಿ ಭಾರತಿ ರಾಜಣ್ಣ ಮತ್ತು ಕುಟುಂಬದವರು

ಶ್ರೀ ಆರ್. ಎಂ. ನಾಗರಾಜ ಮತ್ತು ಕುಟುಂಬದವರು

ರಾಮಚಂದ್ರಾಪುರ.

ಮುಂಬೈ ಧಾರಣೆ

ಶೇಂಗಾ

09-07-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1550)
ಒಂದು ವಾರದ ಡೆಲಿವರಿ	1535 (1545)
ಸೋಯಾ ಕಚ್ಚಾ	917 (925)
ಪಾಮ್ ವಾರದ ಡೆಲಿವರಿ	904 (913)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (925)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹72,150 (72,400)

ಬೆಳ್ಳಿ ಕೆ.ಜಿ ₹91,900 (91,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮಾರುಕಟ್ಟೆ ಧಾರಣೆ (₹ಗಳಲ್ಲಿ)

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	1450-1550
ನಡುಗೋಲು	1600-1700
ರಾಶಿ	1750-1800
ರಾಶಿ ಉತ್ತಮ	1900-1950
ಹೆರಕಿದ್ದು	2400-2500
ಹಸಿರು ಸಾಧಾರಣ	2100-2200
ಹಸಿರು ಉತ್ತಮ	2400-2500
ಹಸಿರು ಅತಿ ಉತ್ತಮ	2700-2800
ಕಾಳು ಮೆಣಸು	640
ಬಂಟ್ವಾಳ(ಅಡಿಕೆ)	
ಕೋಕ	18000-28500
ಹೊಸತು	28500-38500
ಹಳತು	38500-46500
ಚಿತ್ರದುರ್ಗ	
ಅಪಿ	50619-51029
ಬೆಟ್ಟೆ	34629-35079
ಕೆಂಪುಗೋಟು	28849-29299
ರಾಶಿ	50139-50569
ಕಾರ್ಕಳ	
ಹೊಸತು	25000-38500
ಹಳತು	30000-46500
ಸಾಗರ	
ಬಿಳಿಗೋಟು	20427-25769
ಚಾಲಿ	31685-33699
ಕೋಕ	18127-27899
ಕೆಂಪುಗೋಟು	28909-30899
ರಾಶಿ	44899-50009
ಸಿಪ್ಪೆಗೋಟು	15069-18199
ಶಿವಮೊಗ್ಗ	
ಬೆಟ್ಟೆ	38000-54289
ಗೊರಬಲು	16000-35613
ರಾಶಿ	30009-51399
ಸರಕು	40200-87796
ಸಿದ್ದಾಪುರ	
ಬಿಳಿಗೋಟು	26389-29809
ಚಾಲಿ	32209-35299
ಕೋಕ	24469-28469
ಕೆಂಪುಗೋಟು	26700-27300
ರಾಶಿ	41419-46989
ತಟ್ಟಿಬೆಟ್ಟೆ	38900-44609
ಶಿರಸಿ	
ಬೆಟ್ಟೆ	32199-43169
ಬಿಳಿಗೋಟು	21900-30866
ಚಾಲಿ	32096-37099
ಕೆಂಪುಗೋಟು	21900-27800
ರಾಶಿ	45499-48099
ಯಲ್ಲಾಪುರ	
ಬಿಳಿಗೋಟು	22012-31399
ಚಾಲಿ	31499-35999
ಕೋಕ	7602-27612
ಕೆಂಪುಗೋಟು	24899-33399
ರಾಶಿ	45000-52999
ತಟ್ಟಿಬೆಟ್ಟೆ	34719-44000

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಚಂದ್ರಶೇಖರ್ ಕೆ.ಎನ್., ಊರು ಹೆಸರಿಸಿಲ್ಲ.

- **ಪ್ರಶ್ನೆ: ನಾನು ಕೇಂದ್ರ ಸರ್ಕಾರದ ಪಿಂಚಣಿದಾರನಾಗಿದ್ದು, ನನಗೆ 68 ವರ್ಷ. 2023-24ನೇ ಸಾಲಿನಲ್ಲಿ ನನ್ನ ಪಿಂಚಣಿ ಆದಾಯ ₹5,06,864 ಹಾಗೂ ಬಡ್ಡಿ ಆದಾಯ ₹4,32,110 ಆಗಿದೆ. ಹೀಗೆ ಒಟ್ಟಾರೆ ಆದಾಯ ₹9,38,974. ಹಳೆಯ ಮತ್ತು ಹೊಸ ತೆರಿಗೆ ಪದ್ಧತಿ ಅಡಿಯಲ್ಲಿ ತೆರಿಗೆ ಹೊಣೆಗಾರಿಕೆ ಮತ್ತು ಯಾವುದೇ ರಿಯಾಯಿತಿ/ಕಡಿತದ ಬಗ್ಗೆ ದಯವಿಟ್ಟು ನನಗೆ ತಿಳಿಸಿ.**

ಉತ್ತರ: ನೀವು ನೀಡಿರುವ ಮಾಹಿತಿಯಂತೆ ನಿಮ್ಮ ಆದಾಯಕ್ಕೆ ಹೊಸ ತೆರಿಗೆ ಪದ್ಧತಿ ಆಯ್ಕೆಯು ಉತ್ತಮವಾಗಿದೆ. ಇದರಂತೆ ಸುಮಾರು ₹45,653 ತೆರಿಗೆ ಪಾವತಿಸಬೇಕಾಗುತ್ತದೆ. ನಿಮಗೆ ಬರುವ ಬಡ್ಡಿ ಆದಾಯ ಒಂದೇ ಬ್ಯಾಂಕ್‌ನಿಂದ ₹50,000ಕ್ಕೂ ಮೀರಿ ಜಮೆ ಆಗಿದ್ದರೆ ಈಗಾಗಲೇ ಶೇ 10ರಷ್ಟು ತೆರಿಗೆ ಕಡಿತ ಆಗಿರಬಹುದು. ಹಾಗಾಗಿ, ಸಣ್ಣ ಪ್ರಮಾಣದ ಮೊತ್ತ ಮಾತ್ರ ಪಾವತಿಸಬೇಕಾಗಬಹುದು. ಇದುವರೆಗೆ ಈ ಆದಾಯದ ಮೇಲೆ ಯಾವುದೇ ತೆರಿಗೆ ಕಡಿತ ಆಗಿಲ್ಲ ಎಂದಾದರೆ ಸಂಪೂರ್ಣ ತೆರಿಗೆ ಮೊತ್ತವನ್ನು ಈ ತಿಂಗಳೊಳಗೆ ರಿಟರ್ನ್ಸ್ ಸಲ್ಲಿಸುವ ಮೊದಲು ಪಾವತಿಸಿ. ಹೊಸ ತೆರಿಗೆ ಪದ್ಧತಿಯಡಿ ನಿಮಗೆ ₹50,000 ಸ್ಟ್ಯಾಂಡರ್ಡ್ ಡಿಡಕ್ಷನ್ ಮಾತ್ರ ಸಿಗುವುದಿದ್ದರೂ ಅದು ಒಟ್ಟು ತೆರಿಗೆ ದೃಷ್ಟಿಯಲ್ಲಿ ಉತ್ತಮ.

ಅಂಕುರ್, ಮಂಗಳೂರು.

- **ಪ್ರಶ್ನೆ: ನಾನು ಮಂಗಳೂರಿನಲ್ಲಿ ಐ.ಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ 25 ವರ್ಷ. ನನ್ನ ಪೋಷಕರಿಗೆ ಮನೆ ಖರೀದಿಸಲು ಯೋಚಿಸುತ್ತಿದ್ದು, ನನ್ನ ವಾರ್ಷಿಕ ಆದಾಯ ಕೇವಲ ₹2 ಲಕ್ಷ. ನನ್ನ ತಂದೆ ಕೆಲಸದಿಂದ ನಿವೃತ್ತರಾಗಿದ್ದಾರೆ. ಅವರು ತಮ್ಮ ಬ್ಯಾಂಕ್ ಮತ್ತು ಎಲ್‌ಐಸಿಯಲ್ಲಿ ಸುಮಾರು ₹5 ಲಕ್ಷ ಮೊತ್ತ ಹೊಂದಿರಬಹುದು. ನನ್ನ ಪೋಷಕರು ನಿವೇಶನ ಖರೀದಿಸುವ ಮೂಲಕ ಮನೆ ನಿರ್ಮಿಸಲು ಬಯಸುತ್ತಾರೆ. ಆದರೆ, ನನಗೆ ಈ ಹಂತದಲ್ಲಿ ಇಎಂಐ ಪಾವತಿಸಲು ಸಾಧ್ಯವಿಲ್ಲ. ಹಾಗಾಗಿ, ನಾನು ಮನೆ ಖರೀದಿಸಲು ಯೋಜಿಸುತ್ತಿದ್ದೇನೆ ಮತ್ತು ಮನೆಯಲ್ಲಿ ನಾವು ನಾಲ್ವರು ಸದಸ್ಯರಿದ್ದೇವೆ. ಹಾಗಾಗಿ, ಐಷಾರಾಮಿ ಮನೆಗಾಗಿ ಯೋಜಿಸುತ್ತಿಲ್ಲ. ಅಂದಾಜು ₹10 ಲಕ್ಷದ ಒಳಗೆ ಇರುವ ಮನೆ ಖರೀದಿಸುವ ಯೋಜನೆಯಿದೆ.**

ನನ್ನ ಪ್ರಶ್ನೆ ಏನೆಂದರೆ, ನನಗಿರುವ ಮಾಸಿಕ ₹17 ಸಾವಿರ ಸಂಬಳದೊಂದಿಗೆ ನಾನು ಈ ಗುರಿಯನ್ನು ಹೇಗೆ ಈಡೇರಿಸಬಹುದು? ನಾನು ಬ್ಯಾಂಕ್‌ನಿಂದ ಸಾಲ ಪಡೆಯಬಹುದೇ? ನಾನು ಮುಂದಿನ ಒಂದು ವರ್ಷದೊಳಗೆ ಖರೀದಿಸಲು ಯೋಜಿಸುತ್ತಿದ್ದೇನೆ. ಹಾಗಾಗಿ ಲೋನ್ ಡೌನ್ ಪೇಮೆಂಟ್ ಅಥವಾ ನನ್ನ ಹಣಕಾಸಿನ ಸುರಕ್ಷತೆಗಾಗಿ ನಾನು ಎಷ್ಟು ಮೊತ್ತವನ್ನು ಇಟ್ಟುಕೊಳ್ಳಬೇಕು? ತೆರಿಗೆ ಉಳಿತಾಯಕ್ಕಾಗಿ ಇರುವ ಸುಲಭೋಪಾಯಗಳು ಯಾವುವು?

ಉತ್ತರ: ನಿಮ್ಮ ಮನೆ ಖರೀದಿಸುವ ಕನಸು ಸಹಜವಾದುದು. ಸಾಮಾನ್ಯವಾಗಿ ಯಾವುದೇ ಸಾಲ ನೀಡುವಾಗ ಹಣಕಾಸು ಸಂಸ್ಥೆಗಳು ಆಯಾ ಪ್ರದೇಶದ ವೆಚ್ಚಗಳಿಗೆ ಅನುಸಾರ ಪ್ರತಿ ತಿಂಗಳಿಗೆ ₹15 ಸಾವಿರದಿಂದ ₹25 ಸಾವಿರಕ್ಕೆ ಕಡಿಮೆ ಇರದ ವೇತನ ಶ್ರೇಣಿಯ ಮಂದಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತವೆ. ಅಲ್ಲದೆ, ಉದ್ಯೋಗದಲ್ಲಿರುವ ಸಂಸ್ಥೆಯ ಪೂರ್ವ ಮಾಹಿತಿಯು, ಸಾಲ ನೀಡುವ ಸಂಸ್ಥೆಗಳಿಗಿದ್ದರೆ ಅದೂ ಕೆಲವೊಮ್ಮೆ ನೆರವಾಗುತ್ತದೆ. ಮೊದಲ ಹಂತದಲ್ಲಿ ಸಹಕಾರ ಬ್ಯಾಂಕ್‌ಗಳನ್ನೂ ಸಂಪರ್ಕಿಸಿ. ನೀವು ಖರೀದಿಸುವ ಮನೆಯ ಮೇಲೆ ನೇರವಾಗಿ ಅಡಮಾನ ಸಾಲ ಪಡೆಯಲು ಹೆಚ್ಚುವರಿ ದಾಖಲೆಗಳು ಹಾಗೂ ನಿಮ್ಮ ತೆರಿಗೆ ರಿಟರ್ನ್ಸ್ ಇತ್ಯಾದಿ ಅನಿವಾರ್ಯವಾಗುತ್ತದೆ. ಮುಂದೆ ಈ ಬಗ್ಗೆ ಗಮನಹರಿಸಿ.

ನೀವು ಯೋಜಿಸಿರುವ ಮನೆಯು ₹10 ಲಕ್ಷದೊಳಗೆ ಸಿಗುವ ಸಾಧ್ಯತೆಗಳಿದ್ದರೆ ಪ್ಯಾನ್ ಸಹಿತ ಪೂರ್ಣ ಕೆವೈಸಿ ದಾಖಲೆ ಹೊಂದಿ, ವೇತನದ ಆಧಾರದ ಮೇಲೆ ವೈಯಕ್ತಿಕ ಸಾಲಕ್ಕೆ ಅರ್ಜಿ ಸಲ್ಲಿಸಬಹುದು. ಇತ್ತೀಚೆಗೆ ವೈಯಕ್ತಿಕ ಸಾಲ ನೀಡುವ ಸಂಸ್ಥೆಗಳು ಸಾಕಷ್ಟಿದ್ದು, ಯಾವುದೇ ಹೆಚ್ಚಿನ ದಾಖಲೆಗಳಿಲ್ಲದೆ ಸಾಲ ನೀಡುತ್ತವೆ. ಆದರೆ, ಇಂತಹ ಸಾಲಕ್ಕೆ ಶೇ 12ರಿಂದ 18ರಷ್ಟು ಬಡ್ಡಿ ಇರುತ್ತದೆ.

ಸಾಲಗಾರರ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಇದು ವ್ಯತ್ಯಾಸವಾಗುತ್ತದೆ. ಏನಿದ್ದರೂ ನೀವು ಎರಡು– ಮೂರು ಮೂಲಗಳಿಂದ ಹಣ ಕ್ರೋಡೀಕರಿಸುವತ್ತ ಗಮನ ಹರಿಸಬೇಕು. ಉದಾಹರಣೆಗೆ ನಿಮ್ಮಲ್ಲಿ ಯಾವುದಾದರೂ ಚಿನ್ನಾಭರಣ ಇದ್ದರೆ ಅದರ ಮೇಲೆ ಸಾಲಕ್ಕೆ ಪ್ರಯತ್ನಿಸಬಹುದು. ಪ್ರಸ್ತುತ ಮೌಲ್ಯದ ಸುಮಾರು ಶೇ 60ರಿಂದ 70ರಷ್ಟು ಸಾಲ ಸಿಗುತ್ತದೆ. ನಿಮ್ಮ ಖರ್ಚಿಗಾಗಿ ಪ್ರಸ್ತುತ ವೇತನದ ಅರ್ಧ ಮೊತ್ತವನ್ನಾದರೂ ಕಾಯ್ದಿರಿಸಿ. ವೈಯಕ್ತಿಕ ಸಾಲವಾದರೆ ಯಾವುದೇ ಪೂರ್ವ ಪಾವತಿಯ (ಡೌನ್ ಪೇಮೆಂಟ್) ಪ್ರಶ್ನೆ ಬರುವುದಿಲ್ಲ.

ಇತರೆ ಸಂದರ್ಭದಲ್ಲಿ ಶೇ 20ರಿಂದ ಶೇ 25ರಷ್ಟು ಹಣವನ್ನು ಸಾಲಗಾರ ಮೊದಲೇ ಭರಿಸಬೇಕಾಗಿರುತ್ತದೆ. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ನಿಮ್ಮ ತಂದೆಯವರ ಹಣ ಉಪಯೋಗಿಸಿ. ಇನ್ನೂ ಸಾಧ್ಯವಾಗದಿದ್ದರೆ ವಿಶ್ವಸನೀಯ ಸ್ನೇಹಿತರು, ಬಂಧುಗಳಿಂದ ಹಣವನ್ನು ಸಾಲವಾಗಿ ಪಡೆದು ಅವರಿಗೆ ಪರ್ಯಾಯವಾಗಿ ಬಡ್ಡಿ ಸಹಿತ ಮರಳಿಸಿ.

ಪ್ರಸ್ತುತ ನೀವು ನೀಡಿರುವ ಮಾಹಿತಿಯಂತೆ ನಿಮ್ಮ ಆದಾಯಕ್ಕೆ ತೆರಿಗೆ ಬರುವ ಸಾಧ್ಯತೆಗಳಿಲ್ಲ. ಮುಂದಿನ ದಿನಗಳಲ್ಲಿ ಹೆಚ್ಚಿನ ಗಳಿಕೆಗೆ ನಿಮಗಿರುವ ಹೆಚ್ಚುವರಿ ಸಮಯ ಹಾಗೂ ನಿಮ್ಮಲ್ಲಿರುವ ಕೌಶಲವನ್ನು ಬಳಸಿಕೊಳ್ಳಿ. ಅಂತಹ ಆದಾಯವನ್ನು ಅಗತ್ಯವಾಗಿ ನಿಮ್ಮ ರಿಟರ್ನ್ಸ್‌ನಲ್ಲಿ ಘೋಷಿಸಬೇಕು. ಹೊಸ ತೆರಿಗೆ ಪದ್ಧತಿಯಡಿ ₹7 ಲಕ್ಷದೊಳಗೆ ಆದಾಯ ಇರುವವರಿಗೆ ಯಾವುದೇ ತೆರಿಗೆ ಬರುವ ಸಾಧ್ಯತೆ ಇಲ್ಲ. ಇದೇ ಸಂದರ್ಭದಲ್ಲಿ ಗರಿಷ್ಠ ಉಳಿಕೆಗೆ ಪ್ರಯತ್ನಿಸಿ. ತೆರಿಗೆ ಉಳಿತಾಯಕ್ಕಾಗಿ ಮಾತ್ರ ಹೂಡಿಕೆಯ ಉದ್ದೇಶ ಆಗಿರದೆ ನಿಮ್ಮ ಆರ್ಥಿಕ ಸುರಕ್ಷತೆ ದೃಷ್ಟಿಯಲ್ಲಿಯೂ ಇದು ಅನಿವಾರ್ಯವಾಗಿದೆ.

ನೀವು ಉತ್ತಮ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮೂಲಕ ದೀರ್ಘಕಾಲದಲ್ಲಿ ಆರ್ಥಿಕವಾಗಿ ಸಶಕ್ತರಾಗಲು ಅವಕಾಶವಿದೆ. ಇಂದು ತಿಂಗಳಿಗೆ ₹100ರಿಂದ ತೊಡಗಿ ತಮ್ಮ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಯಾವುದೇ ಮೊತ್ತದ ಹೂಡಿಕೆ ಮಾಡಬಹುದು. ಇದು ಮೊದಲ ಹೆಜ್ಜೆಯ ಆರಂಭವಷ್ಟೇ ಎಂದು ತಿಳಿದು ಮುಂದುವರಿಯಿರಿ.

ನಿಮ್ಮ ಆದ್ಯತೆಯ ಮನೆಯ ಬಗೆಗಿನ ಹಣಕಾಸು ವಿಚಾರವು ಸರಿದೂಗಿದ ನಂತರ ಈ ಮೊತ್ತ ಹೆಚ್ಚಿಸುವತ್ತ ಗಮನ ನೀಡಿ. ಮುಂದೆ ಇದು ನಿಮ್ಮ ಹಣಕಾಸಿನ ಭದ್ರತೆಗೆ ನೆರವಾಗುತ್ತದೆ. ಅಲ್ಲದೆ, ಇತ್ತೀಚೆಗೆ ಬಹಳಷ್ಟು ಹೊಸ ಫಂಡ್‌ಗಳು (ಎನ್‌ಎಫ್‌ಒ) ಹೂಡಿಕೆಗೆ ಅವಕಾಶ ಕಲ್ಪಿಸಿ ಕೊಡುತ್ತಿವೆ. ಇವುಗಳ ಪ್ರತಿ ಯೂನಿಟ್‌ನ ಮೂಲ ಬೆಲೆ ₹10 ಆಗಿರುವುದರಿಂದ ಆರಂಭಿಕ ಹಂತದಲ್ಲಿಯೇ ಮಾಡುವ ಖರೀದಿಯು ಮುಂದೆ ಫಂಡ್ ಬೆಳೆದಂತೆ ಉತ್ತಮ ಲಾಭವನ್ನು ತಂದುಕೊಡಬಲ್ಲದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.

ಇ–ಮೇಲ್: businessdesk@prajavani.co.in

ಈಕ್ವಿಟಿ ಎಂ.ಎಫ್: ಹೂಡಿಕೆ ಹೆಚ್ಚಳ

ಮುಂಬೈ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ (ಎಂ.ಎಫ್) ಜೂನ್ ತಿಂಗಳಿನಲ್ಲಿ ₹40,608 ಕೋಟಿ ಬಂಡವಾಳ ಹೂಡಿಕೆಯಾಗಿದೆ. ಮೇ ತಿಂಗಳಿಗೆ ಹೋಲಿಸಿದರೆ ಬಂಡವಾಳ ಒಳಹರಿವಿನ ಪ್ರಮಾಣದಲ್ಲಿ ಶೇ17ರಷ್ಟು ಏರಿಕೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಂಗಳವಾರ ತಿಳಿಸಿದೆ.

ಜೂನ್‌ನಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ₹21,262 ಕೋಟಿ ಹೂಡಿಕೆಯಾಗಿದೆ. ಮೇ ತಿಂಗಳಿನಲ್ಲಿ ₹20,904 ಕೋಟಿ ಹೂಡಿಕೆಯಾಗಿತ್ತು.

ಷೇರು ಮಾರುಕಟ್ಟೆಯಲ್ಲಿ ಉತ್ತಮ ಬೆಳವಣಿಗೆ ಹಾಗೂ ಒಳಹರಿವು

ಪ್ರಮಾಣದಲ್ಲಿನ ಏರಿಕೆಯೇ ಇದಕ್ಕೆ ಕಾರಣ ಎಂದು ಎಎಂಎಫ್‌ಐನ ಮುಖ್ಯ ಕಾರ್ಯ ನಿರ್ವಾಹಕ ವೆಂಕಟ್ ಚಲಸಾನಿ ತಿಳಿಸಿದ್ದಾರೆ.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಯಾಗಿರುವ ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹27.67 ಲಕ್ಷ ಕೋಟಿಗೆ ತಲುಪಿದೆ. ಎಸ್‌ಐಪಿ ಮೂಲಕ ಹೂಡಿಕೆಯಾಗಿರುವ ಎಯುಎಂ ₹12.43 ಲಕ್ಷ ಕೋಟಿ ಆಗಿದೆ ಎಂದು ವಿವರಿಸಿದ್ದಾರೆ.

32.35 ಲಕ್ಷ ಎಸ್‌ಐಪಿ ಹೂಡಿಕೆಗಳು ಸ್ಥಗಿತಗೊಂಡಿವೆ ಅಥವಾ ಅವಧಿ ಪೂರ್ಣಗೊಳಿಸಿವೆ. 55 ಲಕ್ಷ ಹೊಸ ಹೂಡಿಕೆದಾರರು ಎಸ್‌ಐಪಿ ಆರಂಭಿಸಿದ್ದು, ಹೂಡಿಕೆದಾರರ ಒಟ್ಟು ಸಂಖ್ಯೆ 8.98 ಕೋಟಿ ಆಗಿದೆ ಎಂದು ತಿಳಿಸಿದ್ದಾರೆ.

ಮ್ಯೂಚುವಲ್ ಫಂಡ್ ಉದ್ಯಮ ವಲಯದ ಎಯುಎಂ ₹61.33 ಲಕ್ಷ ಕೋಟಿ ದಾಟಿದೆ. ಮೇ ತಿಂಗಳಿಗೆ ಹೋಲಿಸಿದರೆ ಶೇ 4ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

'ಕಳೆದ ಎರಡು ತಿಂಗಳಿನಿಂದಲೂ ಮ್ಯೂಚುವಲ್ ಫಂಡ್‌ಗಳಲ್ಲಿ ಬಂಡವಾಳದ ಒಳಹರಿವು ಹೆಚ್ಚುತ್ತಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ತಿಂಗಳಿನಲ್ಲಿ ದಾಖಲೆ ಪ್ರಮಾಣದಲ್ಲಿ ಒಳಹರಿವು ಏರಿಕೆಯಾಗಿದೆ' ಎಂದು ಕ್ರೆಡಿಟ್ ರೇಟಿಂಗ್ ಏಜೆನ್ಸಿ ಐಸಿಆರ್‌ಎ ಮಾರುಕಟ್ಟೆ ದತ್ತಾಂಶ ವಿಭಾಗದ ಮುಖ್ಯಸ್ಥ ಅಶ್ವಿನಿ ಕುಮಾರ್ ತಿಳಿಸಿದ್ದಾರೆ.

ಷೇರುಪೇಟೆಯಲ್ಲಿ ಗೂಳಿ ಓಟ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ಸಕಾರಾತ್ಮಕ ವಹಿವಾಟು ನಡೆದಿದ್ದು, ಸೂಚ್ಯಂಕಗಳು ಹೊಸ ಎತ್ತರಕ್ಕೆ ಜಿಗಿದಿವೆ.

ಆಟೊ ಮತ್ತು ಎಫ್‌ಎಂಸಿಜಿ ವಲಯದ ಷೇರುಗಳ ಏರಿಕೆ ಹಾಗೂ ವಿದೇಶಿ ಬಂಡವಾಳದ ಒಳಹರಿವಿನ ಹೆಚ್ಚಳವು ಇದಕ್ಕೆ ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 391 ಅಂಶ ಏರಿಕೆ ಕಂಡು, 80,351 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 112 ಅಂಶ ಏರಿಕೆ ಕಂಡು, 24,433 ಅಂಶಗಳಲ್ಲಿ ಸ್ಥಿರಗೊಂಡಿತು.

ಬಿಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹451 ಲಕ್ಷ ಕೋಟಿ ದಾಟಿದೆ.

ಉತ್ತರ ಪ್ರದೇಶದ ಸರ್ಕಾರವು ಪರಿಸರಸ್ನೇಹಿ ವಾಹನಗಳಿಗೆ ಉತ್ತೇಜನ ನೀಡಲು ನಿರ್ಧರಿಸಿದೆ. ಹೀಗಾಗಿ ಹೈಬ್ರಿಡ್ ಕಾರುಗಳ ಮೇಲಿನ ನೋಂದಣಿ ತೆರಿಗೆಯನ್ನು ಮನ್ನಾ ಮಾಡಿದೆ. ಹಾಗಾಗಿ, ಸೆನ್ಸೆಕ್ಸ್

ಗುಚ್ಛದಲ್ಲಿನ ಮಾರುತಿ ಸುಜುಕಿ ಇಂಡಿಯಾ ಷೇರಿನ ಮೌಲ್ಯದಲ್ಲಿ ಶೇ 7ರಷ್ಟು ಏರಿಕೆಯಾಗಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಟೈಟನ್, ಸನ್ ಫಾರ್ಮಾ, ಐಟಿಸಿ, ನೆಸ್ಲೆ ಇಂಡಿಯಾ ಮತ್ತು ಟಾಟಾ ಮೋಟರ್ಸ್ ಷೇರಿನ ಮೌಲ್ಯವೂ ಏರಿಕೆಯಾಗಿದೆ.

ರಿಲಯನ್ಸ್ ಇಂಡಸ್ಟ್ರಿಸ್, ಕೋಟಕ್ ಮಹೀಂದ್ರ ಬ್ಯಾಂಕ್, ಬಜಾಜ್ ಫೈನಾನ್ಸ್ ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಸೋಲ್, ಟೋಕಿಯೊ ಮತ್ತು ಶಾಂಘೈ ಮಾರುಕಟ್ಟೆಯು ಏರಿಕೆ ಕಂಡಿವೆ. ಹಾಂಗ್‌ಕಾಂಗ್ ಮಾರುಕಟ್ಟೆ ಇಳಿಕೆ ದಾಖಲಿಸಿದೆ. ಜಾಗತಿಕ ಮಟ್ಟದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.51ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 85.31 ಡಾಲರ್ ಆಗಿದೆ.

ಹಮಾಸ್ ಬಂಡುಕೋರರು ಹಾಗೂ ಇಸ್ರೇಲ್ ಸೇನೆಯ ನಡುವೆ ಗಾಜಾ ಪಟ್ಟಿಯಲ್ಲಿನ ಸಂಘರ್ಷವು ಮತ್ತೆ ಉಲ್ಬಣಿಸಿದ್ದು, ಪ್ಯಾಲೆಸ್ಟೀನ್ ಮಹಿಳೆಯೊಬ್ಬರು ಮಂಗಳವಾರ ಯುನಿಸೆಫ್‌ನ ಟ್ಯಾಂಕರ್‌ನಿಂದ ನೀರು ಹಿಡಿದುಕೊಂಡು ಮನೆಯತ್ತ ಹೆಜ್ಜೆ ಹಾಕಿದರು –ಎಎಫ್‌ಪಿ ಚಿತ್ರ

ಇಸ್ರೇಲ್ ದಾಳಿ: ಹಮಾಸ್ ಎಚ್ಚರಿಕೆ

ಡೀರ್ ಅಲ್-ಬಲಾಹ್ (ಗಾಜಾ ಪಟ್ಟಿ), (ಎಪಿ): ಗಾಜಾ ಪಟ್ಟಿಯಲ್ಲಿ ಮತ್ತೆ ಸಂಘಟಿತರಾಗುತ್ತಿರುವ ಉಗ್ರಗಾಮಿಗಳ ಶೋಧಕ್ಕಾಗಿ, ಇಸ್ರೇಲ್ ಸೇನಾಪಡೆಯು ತನ್ನ ಕಾರ್ಯಾಚರಣೆಯನ್ನು ಮತ್ತಷ್ಟು ಬಿರುಸುಗೊಳಿಸಿದೆ.

ಹಮಾಸ್ ಬಂಡುಕೋರರು ಹಾಗೂ ಇಸ್ರೇಲ್ ಸೇನೆ ನಡುವಿನ ಸಂಘರ್ಷ ಗಾಜಾ ಪಟ್ಟಿಯಲ್ಲಿ ಹೆಚ್ಚಲಿರುವುದರಿಂದ, ಇಲ್ಲಿ ನೆಲೆಸಿದ್ದ ಸಹಸ್ರಾರು ಪ್ಯಾಲೆಸ್ಟೀನಿಯನ್ನರು ಈ ಪ್ರದೇಶವನ್ನು ತೊರೆದು, ಸುರಕ್ಷಿತ ಸ್ಥಳಗಳನ್ನು ಅರಸಿ ಸೋಮವಾರ ವಲಸೆ ಹೊರಟರು.

ಗಾಜಾ ನಗರದಲ್ಲಿ ಈಚೆಗೆ ನಡೆದ ದಾಳಿಗಳು ಮತ್ತು ಸ್ಥಳಾಂತರವು, ಕದನ ವಿರಾಮ ಮತ್ತು ಒತ್ತೆಯಾಳುಗಳ ಬಿಡುಗಡೆ ಕುರಿತಂತೆ ದೀರ್ಘಾವಧಿಯಿಂದ ನಡೆಯುತ್ತಿರುವ ಮಾತುಕತೆಗೆ ಅಡ್ಡಿಯಾಗಬಹುದು ಎಂದು ಹಮಾಸ್ ಎಚ್ಚರಿಸಿದೆ.

ಉತ್ತರ ಗಾಜಾದಲ್ಲಿ ಬೀಡುಬಿಟ್ಟಿದ್ದ ಉಗ್ರಗಾಮಿಗಳನ್ನು ಸದೆಬಡಿಯಲಾಗಿದೆ ಎಂದು ತಿಂಗಳ ಹಿಂದಷ್ಟೇ ಹೇಳಿದ್ದ ಇಸ್ರೇಲ್ ಸೇನೆಯು, ಇದೀಗ ಈ ಭಾಗದಲ್ಲೇ ಮತ್ತೆ ಉಗ್ರರೊಂದಿಗೆ ಹೋರಾಟ ನಡೆಸಿದೆ. ದಾಳಿಗೆ ಮುನ್ನ ಸೇನೆಯು ಸ್ಥಳಾಂತರಕ್ಕೆ ಸೂಚಿಸಿದೆ.

'ನಾವು ಎಲ್ಲಿಯೂ ಸುರಕ್ಷಿತರಾಗಿಲ್ಲ' ಎಂದು ಪ್ಯಾಲೆಸ್ಟೀನಿಯನ್ನರು ಹೇಳಿದ್ದಾರೆ. 23 ಲಕ್ಷ ಜನರು ಸ್ಥಳಾಂತರಗೊಂಡಿದ್ದು, ಟೆಂಟ್‌ಗಳಲ್ಲಿ ನೆಲಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶಾಂತಿಗಾಗಿ ಪೋಪ್ ಫ್ರಾನ್ಸಿಸ್ ಮನವಿ

ವ್ಯಾಟಿಕನ್ ಸಿಟಿ (ಎಪಿ): ಕೀವ್‌ನಲ್ಲಿ ಮಕ್ಕಳ ಆಸ್ಪತ್ರೆ ಹಾಗೂ ಗಾಜಾದಲ್ಲಿ ಶಾಲೆಯನ್ನು ಗುರಿಯಾಗಿಸಿಕೊಂಡು ಮಂಗಳವಾರ ದಾಳಿ ನಡೆದಿರುವುದಕ್ಕೆ ಪೋಪ್ ಫ್ರಾನ್ಸಿಸ್ ದುಃಖ ವ್ಯಕ್ತಪಡಿಸಿದ್ದಾರೆ.

ಉಕ್ರೇನ್ ಮತ್ತು ಗಾಜಾದಲ್ಲಿ ನಡೆಯುತ್ತಿರುವ ಯುದ್ಧವನ್ನು ಅಂತ್ಯಗೊಳಿಸಬೇಕು. ಶಾಂತಿ ಸ್ಥಾಪನೆಗಾಗಿ ಕ್ರಮ ಕೈಗೊಳ್ಳಬೇಕು ಎಂದು ಅವರು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಪಾಕಿಸ್ತಾನ: ಫೋನ್ ಕರೆ ಪತ್ತೆ–ಐಎಸ್‌ಐಗೆ ಅಧಿಕಾರ

ಇಸ್ಲಾಮಾಬಾದ್ (ಪಿಟಿಐ): ರಾಷ್ಟ್ರೀಯ ಭದ್ರತೆಯ ಹಿತಾಸಕ್ತಿಯಿಂದ ದೂರವಾಣಿ ಕರೆ, ಸಂದೇಶಗಳನ್ನು ಪತ್ತೆಹಚ್ಚಲು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐಗೆ ಸರ್ಕಾರ ಮಂಗಳವಾರ ಔಪಚಾರಿಕವಾಗಿ ಅನುಮೋದನೆ ನೀಡಿತು.

ಇದಕ್ಕೆ ಸಂಬಂಧಿಸಿದಂತೆ ಮಾಹಿತಿ ತಂತ್ರಜ್ಞಾನ ಮತ್ತು ದೂರಸಂಪರ್ಕ ಸಚಿವಾಲಯವು ಪಾಕಿಸ್ತಾನ ದೂರ-ಸಂಪರ್ಕ(ತಿದ್ದುಪಡಿ) ಕಾಯ್ದೆ-1996 ಅಡಿಯಲ್ಲಿ ಪ್ರಕಟಣೆ ಹೊರಡಿಸಿದೆ.

'ರಾಷ್ಟ್ರೀಯ ಭದ್ರತೆ ಹಿತದೃಷ್ಟಿಯಿಂದ ಸೆಕ್ಷನ್ 54ರ ಅಡಿಯಲ್ಲಿ ಐಎಸ್‌ಐ ಅಧಿಕಾರಿಗಳು ದೂರವಾಣಿ ಕರೆಗಳು ಮತ್ತು ಸಂದೇಶವನ್ನು ಪತ್ತೆ ಮಾಡಲು ಅವಕಾಶ ನೀಡಲಾಗುತ್ತಿದೆ' ಎಂದು ತಿಳಿಸಿದೆ.

ಭೂಕುಸಿತ: 12 ಜನರ ಪತ್ತೆಗೆ ತೀವ್ರ ಶೋಧ

ಜಕಾರ್ತಾ (ಎ.ಪಿ): ಇಂಡೊನೇಷ್ಯಾದ ಸುಲವೇಸಿ ದ್ವೀಪದಲ್ಲಿರುವ ಅನಧಿಕೃತ ಚಿನ್ನದ ಗಣಿ ಪ್ರದೇಶದಲ್ಲಿ ಸಂಭವಿಸಿದ್ದ ಭೂಕುಸಿತದಿಂದಾಗಿ ಅವಶೇಷಗಳಡಿ ಸಿಲುಕಿರುವ 12 ಜನರ ರಕ್ಷಣೆಗಾಗಿ ರಕ್ಷಣಾ ಸಿಬ್ಬಂದಿ ತೀವ್ರ ಶೋಧ ಕಾರ್ಯ ನಡೆಸಿದ್ದಾರೆ.

ಭೂಕುಸಿತದಿಂದಾಗಿ ಕನಿಷ್ಠ 23 ಜನರು ಮೃತಪಟ್ಟಿದ್ದಾರೆ. ಬೆಟ್ಟ ಪ್ರದೇಶವಾಗಿರುವ ಬೋನ್ ಬೊಲಾಂಗೊ ಗ್ರಾಮ ವ್ಯಾಪ್ತಿಯಲ್ಲಿ ಭಾನುವಾರ ಸಂಜೆ 100ಕ್ಕೂ ಹೆಚ್ಚು ಜನರು ಗಣಿಗಾರಿಕೆ-ಯಲ್ಲಿ ತೊಡಗಿದ್ದರು. ಆಗ ಭೂಕುಸಿತ ಉಂಟಾಗಿದ್ದು, ಹಲವರು ಸಿಲುಕಿದ್ದರು.

ಸಂಸತ್‌ನಲ್ಲಿ ಸ್ಟಾರ್ಮರ್ ಭಾಷಣ

ಲಂಡನ್ (ಪಿಟಿಐ): ಬ್ರಿಟಿಷ್ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ವೈವಿಧ್ಯ ರೀತಿಯ ಲಿಂಗ ಮತ್ತು ಜನಾಂಗವನ್ನು ಒಳಗೊಂಡಿರುವ ಬ್ರಿಟನ್ ಸಂಸತ್ತನ್ನು ಉದ್ದೇಶಿಸಿ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಮಂಗಳವಾರ ಭಾಷಣ ಮಾಡಿದರು.

ಪ್ರಧಾನಿಯಾಗಿ ಅವರು ಸಂಸತ್ತನ್ನು ಉದ್ದೇಶಿಸಿ ಮಾಡಿದ ಮೊದಲ ಭಾಷಣವಿದು. ಸ್ಟಾರ್ಮರ್ ಅವರಿಗೆ ಶುಭ ಕೋರಿದ ಪ್ರತಿಪಕ್ಷದ ನಾಯಕ ರಿಷಿ ಸುನಕ್ ಅವರು, ಎದುರಿಸಬೇಕಾದ ಹಲವು ಸವಾಲುಗಳಿವೆ ಎಂದರು.

ಅಮೆರಿಕ: ತೆಲಂಗಾಣದ ವಿದ್ಯಾರ್ಥಿ ಸಾವು

ನ್ಯೂಯಾರ್ಕ್ (ಪಿಟಿಐ): ಟ್ರೈನ್ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ, ತೆಲಂಗಾಣದ 25 ವರ್ಷದ ವಿದ್ಯಾರ್ಥಿ ನ್ಯೂಯಾರ್ಕ್‌ನ ಅಲ್ಬನಿಯಲ್ಲಿರುವ ಜಲಪಾತದಲ್ಲಿ ಬಿದ್ದು ಮೃತಪಟ್ಟಿದ್ದಾರೆ.

ಮೃತ ವಿದ್ಯಾರ್ಥಿಯನ್ನು ಸಾಯಿ ಸೂರ್ಯ ಅವಿನಾಶ್ ಗಡ್ಡೆ ಎಂದು ಗುರುತಿಸಲಾಗಿದೆ. ಜುಲೈ 7ರಂದು ಬಾರ್ಬರ್‌ವಿಲ್ಲೆ ಫಾಲ್ಸ್‌ನಲ್ಲಿ ಬಿದ್ದು, ಅವರು ಮೃತಪಟ್ಟಿದ್ದಾರೆ.

'ಸಾಯಿ ಸೂರ್ಯ ಅವರ ಪಾರ್ಥಿವ ಶರೀರವನ್ನು ಭಾರತಕ್ಕೆ ಸಾಗಿಸಲು ಅಗತ್ಯವಿರುವ ಎನ್‌ಒಸಿ ವಿತರಣೆ ಸೇರಿದಂತೆ ಕುಟುಂಬಕ್ಕೆ ಅಗತ್ಯ ನೆರವು ನೀಡಲಾಗುವುದು' ಎಂದು ಭಾರತೀಯ ಕಾನ್ಸುಲೇಟ್ ಜನರಲ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಆಸ್ಪತ್ರೆ ಮೇಲಿನ ದಾಳಿ– ಮುಂದುವರಿದ ರಕ್ಷಣಾ ಕಾರ್ಯ

ಕೀವ್ (ಉಕ್ರೇನ್)(ಎಪಿ): ಕೀವ್‌ನ ಮಕ್ಕಳ ಆಸ್ಪತ್ರೆ ಮೇಲೆ ರಷ್ಯಾ ನಡೆಸಿದ್ದ ಭೀಕರ ಕ್ಷಿಪಣಿ ದಾಳಿಯಿಂದಾಗಿ ಅವಶೇಷಗಳಡಿ ಸಿಲುಕಿದ್ದವರ ರಕ್ಷಣಾ ಕಾರ್ಯಾಚರಣೆ ಎರಡನೇ ದಿನವೂ ಮುಂದುವರಿಯಿತು.

ದಾಳಿಯಲ್ಲಿ 38 ಮಂದಿ ಮೃತಪಟ್ಟಿ-ದ್ದಾರೆ ಮತ್ತು ಸುಮಾರು 200 ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Drivers

WANTED FEMALE Driver for reputed cab company. Salary 32k per month. Must have 1 year old driving license. Contact 9916242982 / 9902474455

Wanted

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/– ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

Teachers / Professors

KARNATAKA DIGITAL ECONOMY MISSION (KDEM)

An initiative of the Govt. of Karnataka

CAREER OPPORTUNITIES

Call for Applicants

VP – ESDM, Beyond Bengaluru, Talent Accelerator & IT/GCC
15-18 years of Experience, Location- Bengaluru

Associate – Startup & Innovation / Marketing
2-5 years of Experience | Location: Bengaluru

Project Manager
8-10 years of Experience | Location: Bengaluru

Research Associate
2-7 years of Experience | Location: Bengaluru

The detailed Job Description and application process are available at www.karnatakadigital.in/careers

THE DEADLINE FOR APPLICATIONS IS 19TH JULY 2024

ಭವಿಷ್ಯ

Astrology

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ

Travel

14 ದಿನಗಳ ಚಾರ್ಧಾಮ್ ಪ್ರವಾಸ 14.09.2024. 10ದಿನಗಳ ರಾಜಸ್ಥಾನ ಪ್ರವಾಸ 19.10.2024. 5ದಿನಗಳ ಥೈಲ್ಯಾಂಡ್ ಪ್ರವಾಸ 08.10.2024. 14ದಿನಗಳ ಕಾಶ್ಮೀರ,ಹಿಮಾಚಲ ಪ್ರವಾಸ 20.12.24. Twite Holidays ಸಂಪರ್ಕಿಸಿ: 8088559962/ 9611801143.

26.07.2024 ಚಿಕ್ಕಮಗಳೂರು, 8.8.2024 ಮಂತ್ರಾಲಯ ಒಂದಿನ, 30.08.2024 ಮಡಕೇರಿ, 13.09.2024 ಸೌದತ್ತಿ ಕೂಡಲಸಂಗಮ, 20.09.2024 ಮಲೆಮಹದೇಶ್ವರ ಬೆಟ್ಟ.ಶ್ರೀನಿಧಿ ಪ್ರವಾಸ. 9448373624

10 ದಿನಗಳ ಕಾಂಬೋಡಿಯಾ, ವಿಯೆಟ್ನಾಂ. 7 ದಿನಗಳ ಶ್ರೀಲಂಕಾ ಮತ್ತು 6 ದಿನಗಳ ದುಬೈ. ಭಟ್ ಟ್ರಾವೆಲ್ಸ್: 9844037295/ 9844166555

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS

@500/-* PER SQCM

www.dhclassifieds.com

BOOK NOW

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9886213331 | +91 9731810277

+91 9901641752 | 9845114560

*Conditions apply

ರಾಹುಲ್ ದ್ರಾವಿಡ್ ಸ್ಥಾನಕ್ಕೆ ಆಯ್ಕೆ • ತಿಂಗಳಾಂತ್ಯಕ್ಕೆ ಲಂಕಾ ಪ್ರವಾಸ ಮೊದಲ ಹೊಣೆ

ಭಾರತ ತಂಡಕ್ಕೆ ಗಂಭೀರ್ ಕೋಚ್

ನವದೆಹಲಿ (ಪಿಟಿಐ/ ಎಫ್‌ಪಿ): ಏಕದಿನ ವಿಶ್ವಕಪ್ ವಿಜೇತ ತಂಡದ ಆರಂಭ ಆಟಗಾರರಾಗಿದ್ದ ಗೌತಮ್ ಗಂಭೀರ್ ಅವರನ್ನು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ಮಂಗಳವಾರ ನೇಮಕ ಮಾಡಲಾಗಿದೆ. ರಾಹುಲ್ ದ್ರಾವಿಡ್ ಅವರಿಂದ ತೆರವಾದ ಸ್ಥಾನವನ್ನು ಗಂಭೀರ್ ತುಂಬಲಿದ್ದಾರೆ.

ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ಇತ್ತೀಚೆಗೆ ಟಿ20 ವಿಶ್ವಕಪ್ ಪ್ರಶಸ್ತಿ ಗೆದ್ದಾಗ ರಾಹುಲ್ ದ್ರಾವಿಡ್ ಮುಖ್ಯ ಕೋಚ್ ಆಗಿದ್ದರು. ಆ ವಿಶ್ವಕಪ್ ಟೂರ್ನಿಯೊಂದಿಗೆ ಅವರ ಗುತ್ತಿಗೆ ಅವಧಿಯೂ ಮುಕ್ತಾಯಗೊಂಡಿತ್ತು.

'ಗೌತಮ್ ಗಂಭೀರ್ ಅವರನ್ನು ಭಾರತ ಕ್ರಿಕೆಟ್ ತಂಡದ ನೂತನ ಹೆಡ್ ಕೋಚ್ ಆಗಿ ತುಂಬಾ ಖುಷಿಯಿಂದ ಸ್ವಾಗತಿಸುತ್ತಿದ್ದೇನೆ. ಆಧುನಿಕ ಕ್ರಿಕೆಟ್ ವೇಗವಾಗಿ ವಿಕಸಿತಗೊಳ್ಳುತ್ತಿದೆ. ಗಂಭೀರ್ ಅವರು ಈ ಪರಿವರ್ತನೆಯನ್ನು ತುಂಬಾ ಹತ್ತಿರದಿಂದ ಗಮನಿಸಿದ್ದಾರೆ. ವೃತ್ತಿಜೀವನದುದ್ದಕ್ಕೂ ಅವರು ವಿವಿಧ ಪಾತ್ರಗಳಲ್ಲಿ ಮಿಂಚಿದ್ದಾರೆ. ಭಾರತದ ಕ್ರಿಕೆಟ್‌ಅನ್ನು ಪ್ರಗತಿಯತ್ತ ಒಯ್ಯುವಲ್ಲಿ ಅವರು ಸೂಕ್ತ ವ್ಯಕ್ತಿ ಎಂಬ ವಿಶ್ವಾಸವಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಾಕಿದ್ದಾರೆ.

ಎಡಗೈ ಆಟಗಾರರಾಗಿರುವ 42 ವರ್ಷ ವಯಸ್ಸಿನ ಗಂಭೀರ್ 2011ರಲ್ಲಿ ಏಕದಿನ ವಿಶ್ವಕಪ್ ಗೆದ್ದ ತಂಡದ ಪ್ರಮುಖ ಆಟಗಾರರಾಗಿದ್ದರು. ಐಪಿಎಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡ 2012, 2014ರಲ್ಲಿ ಪ್ರಶಸ್ತಿ ಗೆದ್ದಾಗ ಅವರು ನಾಯಕರಾಗಿದ್ದರು. ಈ ವರ್ಷ ಕೋಲ್ಕತ್ತದ ತಂಡ ಐಪಿಎಲ್ ಟ್ರೋಫಿ ಗೆದ್ದಾಗ ಅವರು ಮೆಂಟರ್ ಆಗಿದ್ದರು.

ಟೆಸ್ಟ್ ಪಂದ್ಯಗಳಲ್ಲಿ ಸತತವಾಗಿ ಐದು ಶತಕ ಗಳಿಸಿದ ನಾಲ್ವರು ಅಂತರರಾಷ್ಟ್ರೀಯ ಆಟಗಾರರಲ್ಲಿ ಗಂಭೀರ್ ಸಹ ಒಬ್ಬರು. ಡಾನ್ ಬ್ರಾಡ್ಮನ್, ಜಾಕ್ವೆಸ್ ಕಾಲಿಸ್ ಮತ್ತು ಮೊಹಮ್ಮದ್ ಯೂಸುಫ್ ಉಳಿದ ಮೂವರು.

ನಿವೃತ್ತಿ ನಂತರ ಅವರು, 2019ರಲ್ಲಿ ಪೂರ್ವದೆಹಲಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಲೋಕಸಭೆಗೆ ಆಯ್ಕೆಯಾಗಿದ್ದರು. ನಂತರ ರಾಜಕೀಯ ತೊರೆದಿದ್ದು, ಮೆಂಟರ್ ಆಗಿ ಕೆಕೆಆರ್ ತಂಡಕ್ಕೆ ಮರಳಿದ್ದರು. ಕೆಲಸಮಯ ಹಿಂದೆ ಭಾರತ ತಂಡದ ಕೋಚ್ ಹುದ್ದೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮೆಂಟರ್ ಹುದ್ದೆಯನ್ನೂ ತ್ಯಜಿಸಿದ್ದರು.

ಟೀಮ್ ಇಂಡಿಯಾ ಕುರಿತಾಗಿ ಗಂಭೀರ್ ಅವರ ದೂರದೃಷ್ಟಿ, ಜೊತೆಗೆ ಅವರ ವ್ಯಾಪಕ ಅನುಭವದಿಂದಾಗಿ ಈ ಅತಿ ಮಹತ್ವದ ಹುದ್ದೆಗೆ ಅವರೇ ಪರಿಪೂರ್ಣ ಆಯ್ಕೆ ಎನಿಸಿದ್ದಾರೆ. ಈ ಹೊಸ ಪಯಣದಲ್ಲಿ ಬಿಸಿಸಿಐ ಅವರನ್ನು ಪೂರ್ಣವಾಗಿ ಬೆಂಬಲಿಸುತ್ತದೆ

ಜಯ್ ಶಾ, ಬಿಸಿಸಿಐ ಕಾರ್ಯದರ್ಶಿ

ಭಾರತ ತಂಡ, ಈ ತಿಂಗಳ ಅಂತ್ಯಕ್ಕೆ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿದ್ದು, ಇದು ಗಂಭೀರ್ ಅವರಿಗೆ ಕೋಚ್ ಆಗಿ ಮೊದಲ ಜವಾಬ್ದಾರಿಯಾಗಲಿದೆ.

ಯಶಸ್ಸಿನ ಉತ್ತುಂಗದಲ್ಲಿ ರುವಾಗ ಕೋಚಿಂಗ್ ಅವಧಿ ಪೂರೈಸಿದ ದ್ರಾವಿಡ್ ಅವರಿಗೆ ಜಯ್ ಶಾ ಅವರು ಇದೇ ವೇಳೆ ಧನ್ಯವಾದ ಮತ್ತು ಕೃತಜ್ಞತೆ ಸಲ್ಲಿಸಿದರು. 'ಅವರ ಮಾರ್ಗದರ್ಶನದಡಿ ಭಾರತ ಟಿ20 ವಿಶ್ವಕಪ್ ಚಾಂಪಿಯನ್ ಪಟ್ಟ ಸೇರಿದಂತೆ ಎಲ್ಲ ಮಾದರಿಯಲ್ಲಿ ಪ್ರಬಲ ಶಕ್ತಿಯಾಗಿ ಹೊಮ್ಮಿದೆ' ಎಂದು ಶಾ ಹೇಳಿದರು.

'ಅವರ ಚತುರ ತಂತ್ರಗಾರಿಕೆ, ಪ್ರತಿಭೆಗಳನ್ನು ಬೆಳೆಸುವಲ್ಲಿ ಅವಿರತ ಪ್ರಯತ್ನ, ನಾಯಕತ್ವದ ಗುಣವು ತಂಡದೊಳಗೆ ಉತ್ಕೃಷ್ಟತೆಯ ಸಂಸ್ಕೃತಿಯನ್ನು ಬೆಳೆಸಿದೆ. ಇದು ಅವರು ಬಿಟ್ಟು ಹೋಗಿರುವ ಪರಂಪರೆ' ಎಂದು ಶ್ಲಾಘಿಸಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್: ಗಂಭೀರ್ ಸಾಧನೆ

–	ಟೆಸ್ಟ್	ಏಕದಿನ	ಟಿ20
ಪಂದ್ಯ	58	147	37
ಒಟ್ಟು ರನ್	4154	5238	932
ಸರಾಸರಿ	41.96	39.68	27.41
ಶತಕ	9	11	0
ಅರ್ಧಶತಕ	22	34	7
ಗರಿಷ್ಠ ರನ್	206	150*	75

- 2003 ಏಪ್ರಿಲ್ 11ರಂದು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ (ಬಾಂಗ್ಲಾದೇಶ ವಿರುದ್ಧದ ಏಕದಿನ ಪಂದ್ಯದಲ್ಲಿ)
- 2016 ನವೆಂಬರ್ 9ರಂದು ಕೊನೆಯ ಅಂತರರಾಷ್ಟ್ರೀಯ ಪಂದ್ಯ (ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯ)

ದೇಶಸೇವೆಗೆ ದೊರೆತ ಅವಕಾಶ: ಗಂಭೀರ್

ನವದೆಹಲಿ (ಪಿಟಿಐ): ಇದು ದೇಶ ಸೇವೆಗೆ ತಮಗೆ ದೊರೆತ ಅತಿ ದೊಡ್ಡ ಗೌರವ ಎಂದು ಭಾರತ ತಂಡದ ನೂತನ ಮುಖ್ಯ ಕೋಚ್ ಆಗಿ ನೇಮಕವಾದ ಗೌತಮ್ ಗಂಭೀರ್ ಹೇಳಿದರು.

ತಂಡ ಉತ್ತಮ ಫಲಿತಾಂಶ ನೀಡಲು ತಮ್ಮಿಂದಾದ ಎಲ್ಲವನ್ನೂ ಮಾಡುವುದಾಗಿ ಅವರು ಹೇಳಿದರು.

'ಭಾರತ ನನ್ನ ಅಸ್ಮಿತೆ. ದೇಶದ ಸೇವೆ ನನಗೆ ದೊರೆತ ಅತಿ ದೊಡ್ಡ ಅವಕಾಶ. ಪಾತ್ರ ಬೇರೆ ಇರಬಹುದು. ಆದರೆ ಎಂದಿಗೂ ನನ್ನ ಗುರಿ ಒಂದೇ. ದೇಶ ಹೆಮ್ಮೆ ಪಡುವಂತೆ ಮಾಡುವುದು' ಎಂದು ಗಂಭೀರ್ 'ಎಕ್ಸ್'ನಲ್ಲಿ ಬರೆದಿದ್ದಾರೆ.

'ಕ್ರಿಕೆಟ್ ನನ್ನ ಪ್ಯಾಷನ್. ಬಿಸಿಸಿಐ, ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್, ನೆರವು ಸಿಬ್ಬಂದಿ, ಎಲ್ಲಕ್ಕಿಂತ ಮುಖ್ಯವಾಗಿ ಆಟಗಾರರ ಜೊತೆಯಾಗಿ ಕೆಲಸ ಮಾಡಲು ಎದುರುನೋಡುತ್ತಿದ್ದೇನೆ. ಮುಂಬರುವ ಟೂರ್ನಿಗಳಲ್ಲಿ ಯಶಸ್ಸಿಗಾಗಿ ಒಟ್ಟಾಗಿ ಶ್ರಮವಹಿಸುತ್ತೇವೆ' ಎಂದು ಬಿಸಿಸಿಐ ಹೇಳಿಕೆಯಲ್ಲಿ ಅವರು ತಿಳಿಸಿದ್ದಾರೆ.

ಪದಾರ್ಪಣೆ (ಅಂತರರಾಷ್ಟ್ರೀಯ)

- ಟೆಸ್ಟ್: ಮಾರ್ಚ್ 1971
- ವಿರುದ್ಧ: ವೆಸ್ಟ್ ಇಂಡೀಸ್
- ಸ್ಥಳ: ಪೋರ್ಟ್ ಆಫ್ ಸ್ಪೇನ್
- ಏಕದಿನ: ಜುಲೈ 1974
- ವಿರುದ್ಧ: ಇಂಗ್ಲೆಂಡ್
- ಸ್ಥಳ: ಲೀಡ್ಸ್

ಕೊನೆಯ ಪಂದ್ಯ

ಟೆಸ್ಟ್: ಮಾರ್ಚ್ 1987
ವಿರುದ್ಧ: ಪಾಕಿಸ್ತಾನ
ಸ್ಥಳ: ಬೆಂಗಳೂರು

ಏಕದಿನ: ನವೆಂಬರ್ 1987
ವಿರುದ್ಧ: ಇಂಗ್ಲೆಂಡ್
ಸ್ಥಳ: ವಾಂಖೆಡೆ, ಮುಂಬೈ

ಪ್ರಮುಖ ಅಂಶಗಳು

- ಪ್ರಥಮ ದರ್ಜೆ ಕ್ರಿಕೆಟ್ 1966 ರಿಂದ 1987
- ಲಿಸ್ಟ್ ಎ ಕ್ರಿಕೆಟ್ 1973 ರಿಂದ 1988

ಸನ್ನಿ@75

ಪ್ರಜಾವಾಣಿ ವಾರ್ತೆ

ಭಾರತದ ಕ್ರಿಕೆಟ್‌ನಲ್ಲಿ ಸತತ ಆರು ದಶಕಗಳಿಂದ ಸಕ್ರಿಯರಾಗಿರುವ ವ್ಯಕ್ತಿಯೆಂದರೆ ಸುನಿಲ್ ಮನೋಹರ್ ಗಾವಸ್ಕರ್.

ಆಡುವ ಕಾಲದಲ್ಲಿ ತಮ್ಮ ಬ್ಯಾಟಿಂಗ್ ಶೈಲಿ, ದಾಖಲೆಗಳು, ನಾಯಕತ್ವ, ವಿವಾದಗಳು ಮತ್ತು ನಿವೃತ್ತಿಯ ನಂತರ ವೀಕ್ಷಕ ವಿವರಣೆಗಾರನಾಗಿ ಸದಾ ಮಿಂಚುತ್ತಲೇ ಇದ್ದಾರೆ. ಆ ಮೂಲಕ ಈ ಕಾಲಘಟ್ಟದ ಎಲ್ಲ ಪೀಳಿಗೆಯ ಕ್ರಿಕೆಟ್ ಅಭಿಮಾನಿಗಳಲ್ಲಿ 'ಸನ್ನಿ' ಚಿರಪರಿಚಿತರು. ಬುಧವಾರ ಅವರಿಗೆ 75ನೇ ಜನ್ಮದಿನದ ಸಂಭ್ರಮ.

1970ರ ದಶಕದಲ್ಲಿ ಭಾರತದ ಕ್ರಿಕೆಟ್ ಬೆಳವಣಿಗೆಯ ಹಾದಿಯಲ್ಲಿತ್ತು. ಇ.ಎ.ಎಸ್. ಪ್ರಸನ್ನ, ಬಿ.ಎಸ್. ಚಂದ್ರಶೇಖರ್, ಜಿ.ಆರ್. ವಿಶ್ವನಾಥ್, ಬಿಷನ್ ಸಿಂಗ್ ಬೇಡಿ, ಏಕನಾಥ್ ಸೋಳ್ಕರ್, ಅಜಿತ್ ವಾಡೇಕರ್, ಎಸ್. ವೆಂಕಟರಾಘವನ್, ಮನ್ಸೂರ್ ಅಲಿ ಖಾನ್ ಪಟೌಡಿ ಅವರ ಹೆಸರುಗಳು ಕ್ರಿಕೆಟ್ ಅಭಿಮಾನಿಗಳಿಗೆ ಚಿರಪರಿಚಿತವಾಗಿದ್ದವು. ಬಾನುಲಿಯ ಕಾಮೆಂಟ್ರಿ ಮತ್ತು ಸುದ್ದಿಪತ್ರಿಕೆಗಳ ಮೂಲಕ ಅವರ ಸಾಧನೆಗಳು ಜನಮಾನಸಕ್ಕೆ ತಲುಪುತ್ತಿದ್ದ ಕಾಲ ಅದು.

ಅದೇ ಕಾಲಘಟ್ಟದಲ್ಲಿ ಮುಂಬೈನ ಮಧ್ಯಮವರ್ಗದ, ಮರಾಠಿಭಾಷಿಕ ಕುಟುಂಬದ ಹುಡುಗ ಸನ್ನಿ, ಕ್ರಿಕೆಟ್ ಅಂಗಳಕ್ಕೆ ಇಳಿಯುತ್ತಾರೆ. ಆದರೆ ಗಂಭೀರವಾಗಿ ಆಟವನ್ನು ಅಪ್ಪಿಕೊಂಡಿದ್ದು ತಮ್ಮ ಸೋದರಮಾವ ಮಾಧವ ಮಂತ್ರಿ ಹೇಳಿದ್ದ ಒಂದು ಮಾತಿನಿಂದ ಎಂದು ಇತ್ತೀಚೆಗಷ್ಟೇ ಕಾರ್ಯಕ್ರಮವೊಂದರಲ್ಲಿ ಗಾವಸ್ಕರ್ ನೆನಪಿಸಿಕೊಂಡಿದ್ದರು.

'ಕ್ರಿಕೆಟ್‌ಗೆ ಸಂಬಂಧಿಸಿದಂತೆ ನಾನು ಮೊದಲ ಪಾಠ ಕಲಿತದ್ದು ನನ್ನ ಸೋದರಮಾವ ಮಾಧವ ಮಂತ್ರಿ (ಭಾರತದ ಮಾಜಿ ಕ್ರಿಕೆಟಿಗ) ಅವರಿಂದ. ಚಿಕ್ಕವನಿದ್ದಾಗ ಅಮ್ಮನೊಂದಿಗೆ ಅವರ (ಮಾವ) ಮನೆಗೆ ಹೋಗಿದ್ದೆ. ಅಲ್ಲಿ ಅವರ ಕ್ರಿಕೆಟ್ ಕ್ಯಾಪ್‌ಗಳು, ಜೆರ್ಸಿಗಳು, ಬ್ಲೇಜರ್‌ಗಳು ಮತ್ತು ಕ್ರಿಕೆಟ್ ಸಲಕರಣೆಗಳು ಇದ್ದವು. ಅದರಲ್ಲಿ ಒಂದು ಕ್ಯಾಪ್ ಹಾಕಿಕೊಳ್ಳಲು ಮುಂದಾದೆ. ಆಗ ಅದನ್ನು ಮುಟ್ಟದಂತೆ ಅವರು ತಾಕೀತು ಮಾಡಿದರು. 'ನಿಮ್ಮ ಬಳಿ ಇಷ್ಟೊಂದು ಇವೆಯಲ್ಲ..' ಎಂದೆ. ಅದಕ್ಕವರು, ಅವೆಲ್ಲವನ್ನೂ ತಾವು ಗಳಿಸಿದ್ದು. ಅಂತಹದೊಂದು ಬೇಕೆಂದರೆ ನೀನೇ ಗಳಿಸಿಕೊಳ್ಳಬೇಕು ಎಂದಿದ್ದರು. ಆ ಮಾತು ನನ್ನ ಮನದಲ್ಲಿ ಅಚ್ಚೊತ್ತಿತ್ತು' ಎಂದು ಗಾವಸ್ಕರ್ ಹೇಳಿದ್ದರು. ಇದಾದ ನಂತರ ಮುಂಬೈ ತಂಡ, ಭಾರತ ತಂಡದ ಕ್ಯಾಪ್‌ಗಳನ್ನು ಗಳಿಸಿದರು. ಆರಂಭಿಕ ಬ್ಯಾಟರ್ ಆಗಿ ಹಲವು ದಾಖಲೆಗಳನ್ನು ಬರೆದರು. 1983 ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದ ಕಪಿಲ್‌ದೇವ್ ನಾಯಕತ್ವದ ತಂಡದ ಆರಂಭಿಕ ಬ್ಯಾಟರ್ ಆಗಿದ್ದವರು.

ಆ ಕಾಲಘಟ್ಟದ ಅಪ್ರತಿಮ ವೇಗದ ಬೌಲರ್‌ಗಳ ಮುಂದೆ ಶಿರಸ್ತ್ರಾಣ (ಹೆಲ್ಮೆಟ್) ಧರಿಸದೇ ಬ್ಯಾಟಿಂಗ್ ಮಾಡಿದ್ದನ್ನು ಮೆಚ್ಚದವರೇ ಇಲ್ಲ. ವೆಸ್ಟ್ ಇಂಡೀಸ್‌ನ ದೈತ್ಯ ಬೌಲರ್‌ಗಳು ಮೆರೆದಾಟದ ಕಾಲ ಅದು. ಆಸ್ಟ್ರೇಲಿಯಾ, ಪಾಕಿಸ್ತಾನದ ಬೌಲರ್‌ಗಳೂ ಕಮ್ಮಿ ಇರಲಿಲ್ಲ. ಅವರೆಲ್ಲರ ಎಸೆತಗಳಲ್ಲಿ ತಿಂದ ಪೆಟ್ಟುಗಳ ಗಾಯದ ಗುರುತುಗಳು ಹಲವಾರಿವೆ. ಆ ಗಾಯಗಳು ಅವರನ್ನು ಎಂದೂ ಅಧೀರಗೊಳಿಸಲಿಲ್ಲ.

ಕಾಮೆಂಟ್ರಿ ಚಾಂಪಿಯನ್: ಆಟದಿಂದ ನಿವೃತ್ತರಾದ ನಂತರ ಇವರ ಸಮಕಾಲೀನರಲ್ಲಿ ಹಲವರು ನೇಪಥ್ಯಕ್ಕೆ ಸರಿದಿದ್ದೇ ಹೆಚ್ಚು. ಆದರೆ ಸನ್ನಿ ಕ್ರಿಕೆಟ್‌ನೊಂದಿಗಿನ ನಂಟು ಇಂದಿಗೂ ಉಳಿದಿದೆ. ವೀಕ್ಷಕ ವಿವರಣೆಗಾರರಾಗಿ ಮೂರು ದಶಕಗಳಿಂದ ಟೆಲಿವಿಷನ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಟೆಸ್ಟ್ ಕ್ರಿಕೆಟ್	125	10122	236*	34	45
ಏಕದಿನ	108	3092	103*	1	27
ಪ್ರಥಮ ದರ್ಜೆ	348	25834	340	81	105

ಜಿಂಬಾಬ್ವೆ ವಿರುದ್ಧ ಮೂರನೇ ಟಿ20 ಪಂದ್ಯ ಇಂದು

ಇನಿಂಗ್ಸ್ ಆರಂಭಿಸುವರೇ ಜೈಸ್ವಾಲ್?

ಹರಾರೆ (ಪಿಟಿಐ): ಭಾರತ ತಂಡ ಈಗ ಆರಂಭ ಆಟಗಾರರ ಸಂಯೋಜನೆಗೆ ಸಂಬಂಧಿಸಿ ದ್ವಂದ್ವದಲ್ಲಿದೆ. ಜಿಂಬಾಬ್ವೆ ವಿರುದ್ಧ ಮೂರನೇ ಟಿ20 ಪಂದ್ಯ ಬುಧವಾರ ನಡೆಯಲಿದ್ದು, ಸರಾಗವಾಗಿ ಆಡುವ ಯಶಸ್ವಿ ಜೈಸ್ವಾಲ್ ಅವರನ್ನು ಆರಂಭ ಆಟಗಾರರಾಗಿ ಕಣಕ್ಕಿಳಿಸಬೇಕೇ, ಆಕ್ರಮಣಕಾರಿಯಾಗಿ ಆಡುವ ಅಭಿಷೇಕ್ ಶರ್ಮಾ ಅವರಿಗೇ ಈ ಹೊಣೆ ನೀಡಬೇಕೇ ಎಂಬ ನಿರ್ಧಾರ ಕೈಗೊಳ್ಳಬೇಕಾಗಿದೆ.

ಟಿ20 ವಿಶ್ವಕಪ್ ವಿಜೇತ ತಂಡದ ಜೊತೆಗಿದ್ದ ಜೈಸ್ವಾಲ್, ಸಂಜು ಸ್ಯಾಮ್ಸನ್ ಮತ್ತು ಶಿವಂ ದುಬೆ ಅವರು ಜಿಂಬಾಬ್ವೆ ಪ್ರವಾಸದಲ್ಲಿರುವ ತಂಡವನ್ನು ಕೂಡಿಕೊಂಡಿದ್ದು ತಂಡ ಇನ್ನಷ್ಟು ಪ್ರಬಲವಾಗಿದೆ. ಎರಡನೇ ಪಂದ್ಯವನ್ನು 100 ರನ್‌ಗಳ ದೊಡ್ಡ ಅಂತರದಿಂದ ಗೆದ್ದ ನಂತರ ವಿಶ್ವಾಸವೂ ಇಮ್ಮಡಿಯಾಗಿದ್ದು, ಈಗ ಸರಣಿ ಗೆಲುವಿನ ಕಡೆ ತಂಡ ಗಮನಹರಿಸಿದೆ.

ಆದರೆ ನಾಯಕ ಶುಭಮನ್ ಗಿಲ್ ಅವರ ಜೊತೆ ಇನಿಂಗ್ಸ್ ಆರಂಭ ಮಾಡುವ ಆಟಗಾರ ಯಾರೆಂಬ ಕುತೂಹಲವಿದೆ. ಎಡಗೈ ಆಟಗಾರ ಅಭಿಷೇಕ್ ಶರ್ಮಾ ತಮ್ಮ ಎರಡನೇ ಪಂದ್ಯದಲ್ಲೇ ಕೇವಲ 46 ಎಸೆತಗಳಲ್ಲಿ ಶತಕ ಸಿಡಿಸಿದ್ದು ಗಮನ ಸೆಳೆದಿದ್ದಾರೆ. ಆದರೆ ಜೈಸ್ವಾಲ್ ಅವರು 17 ಟಿ20 ಪಂದ್ಯಗಳಲ್ಲಿ 161ರ ಉತ್ತಮ ಸ್ಟ್ರೈಕ್ ರೇಟ್ ಹೊಂದಿದ್ದಾರೆ. ನಾಲ್ಕು ಅರ್ಧ ಶತಕಗಳೂ ಅವರ ಹೆಸರಿನಲ್ಲಿವೆ. ಇತ್ತೀಚಿನ ವಿಶ್ವಕಪ್‌ನಲ್ಲಿ ಅವರು ತಂಡದಲ್ಲಿದ್ದರೂ ಆಡುವ ಅವಕಾಶ ಪಡೆದಿರಲಿಲ್ಲ. ಮೈಲಿಗಲ್ಲಿನ ಇನಿಂಗ್ಸ್ ಆಡಿದ ನಂತರದಲ್ಲೇ ಅಂಥ ಬ್ಯಾಟರ್ ಅವಕಾಶ ಕಳೆದುಕೊಳ್ಳುವುದು ವಿರಳವಾದರೂ, ಭಾರತದ ಕ್ರಿಕೆಟ್‌ನಲ್ಲಿ ಅಂಥ ನಿದರ್ಶನಗಳು ಇಲ್ಲದ್ದಿಲ್ಲ. ಮನೋಜ್ ತಿವಾರಿ 2011ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಏಕದಿನ ಪಂದ್ಯದಲ್ಲಿ ಶತಕ ಗಳಿಸಿದರೂ ಬೇಗ ಸ್ಥಾನ ಕಳೆದುಕೊಂಡಿದ್ದರು. ಕರುಣ್ ನಾಯರ್ 2016ರಲ್ಲಿ ಇಂಗ್ಲೆಂಡ್ ವಿರುದ್ಧ ಟೆಸ್ಟ್‌ನಲ್ಲಿ ತ್ರಿಶತಕ ಗಳಿಸಿದರೂ, ಅವಕಾಶ ಕಳೆದುಕೊಂಡಿದ್ದು ಉದಾಹರಣೆಗಳಷ್ಟೇ.

ಭಾರತದ ಯಶಸ್ವಿ ಜೈಸ್ವಾಲ್

ಆದರೆ ಗಿಲ್ ಅವರು 14 ವರ್ಷದೊಳಗಿನವರ ಕ್ರಿಕೆಟ್ ದಿನಗಳಿಂದ ತಮ್ಮ ಆಪ್ತ ಸ್ನೇಹಿತನಾಗಿರುವ ಶರ್ಮಾ ಅವರನ್ನು ಕೈಬಿಡುವ ಸಾಧ್ಯತೆ ಕಡಿಮೆ. ಗಿಲ್ ಅವರಿಂದ ಪಡೆದ ಬ್ಯಾಟಿನಲ್ಲೇ ಶರ್ಮಾ ಶತಕ ಹೊಡೆದಿದ್ದರು. ಹೀಗಾಗಿ ಇಬ್ಬರ ಎಡಚರಲ್ಲಿ ಒಬ್ಬರು ಮೂರನೇ ಕ್ರಮಾಂಕದಲ್ಲಿ ಆಡುವ ಸಾಧ್ಯತೆಯಿದೆ. ಋತುರಾಜ ಗಾಯಕವಾಡ ಅವರು ಮೂರನೇ ಕ್ರಮಾಂಕದ ಬದಲು ನಾಲ್ಕನೇ ಕ್ರಮಾಂಕಕ್ಕೆ ಇಳಿಯಬಹುದು. ಹೀಗಾದಲ್ಲಿ, ರಾಜಸ್ಥಾನ ರಾಯಲ್ಸ್ ಪರ ಮೂರನೇ ಕ್ರಮಾಂಕದಲ್ಲಿ ಆಡುವ ಸ್ಯಾಮ್ಸನ್ ಐದನೇ ಕ್ರಮಾಂಕದಲ್ಲಿ ಆಡಬೇಕಾಗುತ್ತದೆ.

ಮೊದಲೆರಡು ಪಂದ್ಯಗಳಿಗೆ ಮಾತ್ರ ಆಯ್ಕೆಯಾಗಿದ್ದ ಸಾಯಿ ಸುದರ್ಶನ್ ಬದಲು ಜೈಸ್ವಾಲ್ ತಂಡದೊಳಕ್ಕೆ ಬರುವುದು ಖಚಿತ. ಧ್ರುವ್ ಜುರೇಲ್ ಸ್ಥಾನದಲ್ಲಿ ಸ್ಯಾಮ್ಸನ್ ಅವಕಾಶ ಪಡೆಯಬಹುದು. ರಿಯಾನ್ ಪರಾಗ್ ಅವರನ್ನು ಕೈಬಿಟ್ಟು ಶಿವಂ ದುಬೆ ಅವರಿಗೆ ಅವಕಾಶ ಸಿಗುವ ಸಾಧ್ಯತೆಯಿದೆ. ದುಬೆ ವಿಶ್ವಕಪ್ ತಂಡದಲ್ಲಿ ಆಡಿದ್ದರು.

ಜಿಂಬಾಬ್ವೆ ತಂಡಕ್ಕೆ ಬ್ಯಾಟಿಂಗ್ ಸಮಸ್ಯೆ ಕಾಡುತ್ತಿದೆ. ಮೊದಲ ಪಂದ್ಯದಲ್ಲಿ 115 ರನ್ ಕುಸಿದಿದ್ದರೆ, ಎರಡನೇ ಪಂದ್ಯದಲ್ಲಿ 235 ರನ್ ಬೆನ್ನಟ್ಟುವ ಹಾದಿಯಲ್ಲಿ 134 ರನ್‌ಗಳಿಗೆ ಉರುಳಿತ್ತು. ಹರಾರೆ ಸ್ಪೋರ್ಟ್ಸ್ ಕ್ಲಬ್ ಪಿಚ್‌ನಲ್ಲಿ ಸ್ಪಿನ್ನರ್‌ಗಳೂ ಕೈಚಳಕ ತೋರಿದ್ದು, ರವಿ ಬಿಷ್ಣೋಯಿ ಇದುವರೆಗೆ 8 ಓವರುಗಳಲ್ಲಿ 24 ರನ್ನಿಗೆ 6 ವಿಕೆಟ್ ಪಡೆದಿದ್ದಾರೆ. ಮೊದಲ ಪಂದ್ಯದಲ್ಲಿ 13 ರನ್‌ಗಳ ಆಘಾತಕಾರಿ ಸೋಲು ಯುವ ಆಟಗಾರರ ತಂಡಕ್ಕೆ ಎಚ್ಚರಿಕೆಯ ಗಂಟೆಯಾಗಿ ಕೆಲಸ ಮಾಡಿತ್ತು. ಗಿಲ್ ಅವರು ಮೊದಲೆರಡು ಪಂದ್ಯಗಳಲ್ಲಿ ಯಶಸ್ಸು ಕಂಡಿಲ್ಲ. ಅವರಿಗೆ ಲಯಕ್ಕೆ ಮರಳಲು ಇದು ಒಳ್ಳೆಯ ಅವಕಾಶ.

ಪಂದ್ಯ ಆರಂಭ: ಸಂಜೆ 4.30

ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಉಡುಪಿ ಜಿಲ್ಲೆಯ ಕಾಪು ಮಾರಿಗುಡಿಗೆ ಮಂಗಳವಾರ ಭೇಟಿ ನೀಡಿದ ಭಾರತ ಕ್ರಿಕೆಟ್ ತಂಡದ ಸೂರ್ಯಕುಮಾರ್ ಯಾದವ್ ಅವರೊಂದಿಗೆ ಸೆಲ್ಫಿ ಕ್ಲಿಕ್ಕಿಸಲು ಮುಗಿಬಿದ್ದ ಮಕ್ಕಳು ಮತ್ತು ಕ್ರಿಕೆಟ್ ಪ್ರಿಯರು. ಸೂರ್ಯ ಅವರೊಂದಿಗೆ ಪತ್ನಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಮೂಲದ ದೇವಿಶಾ ಶೆಟ್ಟಿ ಪಾಲ್ಗೊಂಡಿದ್ದರು.

ಬೂಮ್ರಾ, ಮಂದಾನಗೆ ಐಸಿಸಿ ಪ್ರಶಸ್ತಿ

ದುಬೈ (ಪಿಟಿಐ): ಭಾರತ ತಂಡದ ಟಿ20 ಕ್ರಿಕೆಟ್ ವಿಶ್ವಕಪ್ ಗೆಲುವಿನ ರೂವಾರಿಗಳಲ್ಲಿ ಒಬ್ಬರಾದ ಜಸ್‌ಪ್ರೀತ್ ಬೂಮ್ರಾ ಅವರು 'ಐಸಿಸಿ ತಿಂಗಳ ಆಟಗಾರ' ಗೌರವಕ್ಕೆ ಭಾಜನರಾಗಿದ್ದಾರೆ.

ಭಾರತ ಮಹಿಳಾ ತಂಡದ ಉಪನಾಯಕಿ ಸ್ಮೃತಿ ಮಂದಾನ 'ಐಸಿಸಿ ತಿಂಗಳ ಆಟಗಾರ್ತಿ' ಆಗಿ ಆಯ್ಕೆಗೊಂಡಿದ್ದಾರೆ.

ಮಂದಾನ ಅವರು ಮೊದಲ ಬಾರಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಇತ್ತೀಚೆಗಷ್ಟೆ ಮುಕ್ತಾಯವಾದ ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿಯಲ್ಲಿ ಭಾರತ 3–0 ಕ್ಲೀನ್‌ಸ್ವೀಪ್ ಸಾಧಿಸಿತ್ತು. ಈ ಸರಣಿಯಲ್ಲಿ ಮಂದಾನ ಉತ್ತಮ ಪ್ರದರ್ಶನ ತೋರಿದ್ದರು.

30 ವರ್ಷ ವಯಸ್ಸಿನ ಬೂಮ್ರಾ ಅವರು ರೋಹಿತ್ ಶರ್ಮಾ ಮತ್ತು ಅಫ್ಗಾನಿಸ್ತಾನದ ರಹಮಾನುಲ್ಲಾ ಗುರ್ಬಾಜ್ ಅವರನ್ನು ಹಿಂದೆಹಾಕಿ ಪ್ರಶಸ್ತಿಗೆ ಆಯ್ಕೆಯಾದರು. ಟಿ20 ವಿಶ್ವಕಪ್ ಟೂರ್ನಿಯಲ್ಲಿ 8.26 ಸರಾಸರಿಯಲ್ಲಿ 15 ವಿಕೆಟ್ ಪಡೆದು ಮಿಂಚಿದ್ದ ಬೂಮ್ರಾ ಸರಣಿಯ ಆಟಗಾರ ಪ್ರಶಸ್ತಿಗೆ ಪಾತ್ರರಾಗಿದ್ದರು.

ಬೂಮ್ರಾ

ಸ್ಮೃತಿ ಮಂದಾನ

ಮಂದಾನ ಅವರು ಇಂಗ್ಲೆಂಡ್‌ನ ಮಾಯಾ ಬುಷಿಯಾ ಹಾಗೂ ಶ್ರೀಲಂಕಾದ ವಿಶ್ಮಿ ಗುಣರತ್ನೆ ಅವರನ್ನು ಹಿಂದಿಕ್ಕಿ ಈ ಗೌರವಕ್ಕೆ ಪಾತ್ರರಾದರು.

ಬೆಂಗಳೂರಿನಲ್ಲಿ ನಡೆದ ಏಕದಿನ ಸರಣಿಯಲ್ಲಿ ಮಂದಾನ 114.33 ಸರಾಸರಿಯಲ್ಲಿ 343 ರನ್ ಗಳಿಸಿದ್ದರು.

ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿ 1–1 ಸಮಬಲ

ಭಾರತ ವನಿತೆಯರಿಗೆ 10 ವಿಕೆಟ್ ಜಯ

ಚೆನ್ನೈ (ಪಿಟಿಐ): ಮಧ್ಯಮ ವೇಗದ ಬೌಲರ್ ಪೂಜಾ ವಸ್ತ್ರಾಕರ್ (13ಕ್ಕೆ4) ಜೀವನಶ್ರೇಷ್ಠ ಬೌಲಿಂಗ್ ಪ್ರದರ್ಶಿಸಿದ ನಂತರ ಸ್ಮೃತಿ ಮಂದಾನ (54, 40ಎ, 4x8, 6x2) ಅವರು ಬಿರುಸಿನ ಅರ್ಧ ಶತಕ ಹೊಡೆದು ಭಾರತ ತಂಡ, ಕೊನೆಯ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 10 ವಿಕೆಟ್‌ಗಳ ಸುಲಭ ಜಯ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇದರೊಂದಿಗೆ ಮೂರು ಪಂದ್ಯಗಳ ಸರಣಿ ಮಂಗಳವಾರ 1–1ರಲ್ಲಿ ಸಮನಾಯಿತು. ಪೂಜಾ ಅವರಿಗೆ ಸೂಕ್ತ ಬೆಂಬಲ ನೀಡಿದ ಎಡಗೈ ಸ್ಪಿನ್ನರ್ ರಾಧಾ ಯಾದವ್ 6 ರನ್ನಿಗೆ 3 ವಿಕೆಟ್ ಪಡೆದರು.

ಟಾಸ್ ಗೆದ್ದ ಭಾರತ, ಪ್ರವಾಸಿ ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿ 17.1 ಓವರುಗಳಲ್ಲಿ ಕೇವಲ 84 ರನ್‌ಗಳಿಗೆ ಕಟ್ಟಿಹಾಕಿತು. ಈ ಸಣ್ಣ ಮೊತ್ತವನ್ನು ಬೆನ್ನಟ್ಟಿದ ಭಾರತ 55 ಎಸೆತಗಳು ಉಳಿದಿರುವಂತೆ ವಿಕೆಟ್ ನಷ್ಟವಿಲ್ಲದೇ 88 ರನ್ ಹೊಡೆಯಿತು.

ಉತ್ತಮ ಲಯದಲ್ಲಿರುವ ಮಂದಾನ ಜೊತೆ ಇನಿಂಗ್ಸ್ ಆರಂಭಿಸಿದ ಶಫಾಲಿ ವರ್ಮಾ 27 ರನ್ (25ಎ) ಗಳಿಸಿ ಅಜೇಯರಾಗುಳಿದರು. ನದೀನ್ ಡಿ ಕ್ಲಾರ್ಕ್ ಮಾಡಿದ 11ನೇ ಓವರಿನ ಮೊದಲ ಎಸೆತವನ್ನು ಸಿಕ್ಸರ್‌ಗೆ ಅಟ್ಟುವ ಮೂಲಕ ಮಂದಾನ ಭಾರತದ ಗೆಲುವನ್ನು ಪೂರೈಸಿದರು. ಇದು ಅವರು ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಗಳಿಸಿದ 24ನೇ ಅರ್ಧ ಶತಕ. ಇದಕ್ಕೆ ಮೊದಲು ದಕ್ಷಿಣ ಆಫ್ರಿಕಾ ಇನಿಂಗ್ಸ್‌ನಲ್ಲಿ ಮೂವರು ಮಾತ್ರ ಎರಡಂಕಿ ಮೊತ್ತ ಗಳಿಸಿದರು. ನಾಲ್ಕನೇ ಓವರಿನಲ್ಲಿ ನಾಯಕಿ ಲಾರಾ ವೊಲ್ವಾರ್ಟ್ (9) ಅವರ ವಿಕೆಟ್ ಪಡೆಯುವ ಮೂಲಕ ಶ್ರೇಯಾಂಕಾ ಪಾಟೀಲ ಭಾರತಕ್ಕೆ ಯಶಸ್ಸು ಗಳಿಸಿಕೊಟ್ಟರು. ಮೊದಲೆರಡು ಪಂದ್ಯಗಳಲ್ಲಿ ಉತ್ತಮ ಆಟ ಆಡಿದ್ದ ತಾಜ್ಮಿನ್ ಬ್ರಿಟ್ಸ್ (20, 23ಎ) ಈ ಪಂದ್ಯದಲ್ಲೂ ಹೆಚ್ಚಿನ ಕಾಣಿಕೆ ನೀಡಿದರು. ಅವರು ಮೂರನೆಯವರಾಗಿ ನಿರ್ಗಮಿಸಿದ ನಂತರ ತಂಡ ಕುಸಿಯಿತು.

ವಿಕೆಟ್ ಗಳಿಸಿದ ಸಂಭ್ರಮದಲ್ಲಿ ಪೂಜಾ ವಸ್ತ್ರಾಕರ್ –ಪಿಟಿಐ ಚಿತ್ರ

ಸ್ಕೋರುಗಳು: ದಕ್ಷಿಣ ಆಫ್ರಿಕಾ ಮಹಿಳಾ ತಂಡ: 17.1 ಓವರುಗಳಲ್ಲಿ 84 (ತಾಜ್ಮಿನ್ ಬ್ರಿಟ್ಸ್ 20, ಮರೈಝುನ್ ಕಾಪ್ 10, ಅನ್ನೇಕೆ ಬಾಷ್ 17; ಪೂಜಾ ವಸ್ತ್ರಾಕರ್ 13ಕ್ಕೆ4, ರಾಧಾ ಯಾದವ್ 6ಕ್ಕೆ3, ಅರುಂಧತಿ ರೆಡ್ಡಿ 14ಕ್ಕೆ1, ಶ್ರೇಯಾಂಕ ಪಾಟೀಲ 19ಕ್ಕೆ1, ದೀಪ್ತಿ ಶರ್ಮಾ 21ಕ್ಕೆ1); ಭಾರತ ಮಹಿಳಾ ತಂಡ: 10.5 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 88 (ಶಫಾಲಿ ವರ್ಮಾ ಔಟಾಗದೇ 27, ಸ್ಮೃತಿ ಮಂದಾನ ಔಟಾಗದೇ 54). **ಪಂದ್ಯದ ಮತ್ತು ಸರಣಿಯ ಆಟಗಾರ್ತಿ:** ಪೂಜಾ ವಸ್ತ್ರಾಕರ್.

ಈಜು: ಸಮರ್ಥ್ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜು ಕೇಂದ್ರದ ಸಮರ್ಥ್ ಗೌಡ ಬಿ.ಎಸ್. ಇಲ್ಲಿ ನಡೆಯುತ್ತಿರುವ ಎನ್‌ಆರ್‌ಜೆ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಬಾಲಕರ (2ಎ ಗುಂಪು) 100ಮೀ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದರು.

ಸಮರ್ಥ್ 1ನಿಮಿಷ 00.31 ಸೆಕೆಂಡಿನಲ್ಲಿ ಗುರಿ ಮುಟ್ಟಿದರು. ಬಿಎಸಿಯ ಆಡ್ರಿಯನ್ ನೀಲ್ ಸೆರಾವೊ (1ನಿ. 07.45ಸೆ) ಮತ್ತು ನೆಟ್ಟಕಲ್ಲಪ್ಪ ಈಜು ಕೇಂದ್ರದ ಅಮೋಘ್ ಎಸ್. ಮದ್ದಾನಿಮಠ (1ನಿ. 08.37ಸೆ) ಕ್ರಮವಾಗಿ ನಂತರದ ಸ್ಥಾನ ಪಡೆದರು. 2ಎ ಗುಂಪಿನ 50 ಮೀ ಬಟರ್‌ಫ್ಲೈ ಸ್ಪರ್ಧೆಯಲ್ಲೂ ಸಮರ್ಥ್ ಚಿನ್ನ ಗೆದ್ದರು.

ಫಲಿತಾಂಶಗಳು: ಬಾಲಕರು: 12-14 ವರ್ಷದೊಳಗಿನವರ 4x100 ಮೀ. ಫ್ರೀಸ್ಟೈಲ್ ರಿಲೆ ಸ್ಪರ್ಧೆಯಲ್ಲಿ ಬಿಎಸಿ 'ಎ' ತಂಡ 'ಎ' (3ನಿ. 57.51ಸೆ). 2ಎ ಗುಂಪು: 200ಮೀ ಫ್ರೀಸ್ಟೈಲ್: ಅಕ್ಷಜ್ ಠಾಕುರಿಯಾ (ಡಾಲ್ಫಿನ್, 2ನಿ. 01.47ಸೆ), 100 ಮೀ. ಬ್ರೆಸ್ಟ್ ಸ್ಟ್ರೋಕ್: ಯಶ್ ಎಚ್. ಪಾಲ್ (ಬಿಎಸಿ, 1ನಿ. 13.61ಸೆ), 100 ಮೀ. ಬ್ಯಾಕ್ ಸ್ಟ್ರೋಕ್, ಸಮರ್ಥ್ ಗೌಡ ಬಿ.ಎಸ್. (ಬಿಎಸಿ, 1ನಿ. 00.31ಸೆ), 50 ಮೀ. ಬಟರ್‌ಫ್ಲೈ: ಸಮರ್ಥ್ ಗೌಡ ಬಿ.ಎಸ್. (ಬಿಎಸಿ, 27.32ಸೆ). 2ಬಿ ಗುಂಪು: 200 ಮೀ. ಫ್ರೀಸ್ಟೈಲ್: ಶರಣ್ ಎಸ್. (ಮತ್ಸ್ಯ, 2ನಿ. 03.20ಸೆ), 100 ಮೀ. ಬ್ರೆಸ್ಟ್‌ಸ್ಟ್ರೋಕ್: ರೆಯಾನ್ಶ್ ಕಂಠಿ ವೈ. (ಬಿಎಸಿ, 1ನಿ. 17.12ಸೆ), 100 ಮೀ. ಬ್ಯಾಕ್‌ಸ್ಟ್ರೋಕ್: ಅದ್ವೈತ ವಿ.ಎಂ. (ಬಿಎಸಿ, 1 ನಿ. 04.44 ಸೆ), 50 ಮೀ. ಬಟರ್‌ಫ್ಲೈ: ರೆಯಾನ್ಶ್ ಕಂಠಿ ವೈ. (ಬಿಎಸಿ, 28.86ಸೆ). 2ಸಿ ಗುಂಪು: 200 ಮೀ. ಫ್ರೀಸ್ಟೈಲ್: ಜಾಸ್ ಸಿಂಗ್ (ಎಸಿಇ, 2ನಿ. 15.79ಸೆ), 100 ಮೀ. ಬ್ರೆಸ್ಟ್ ಸ್ಟ್ರೋಕ್: ಚೇತನ್ ನಾಗರಾಜ ಗಣಪ (ಎನ್‌ಎಸಿ, 1ನಿ. 19.15ಸೆ), 100 ಮೀ. ಬ್ಯಾಕ್ ಸ್ಟ್ರೋಕ್: ಕ್ರಿಶ್ ಎಸ್.(ಬಿಎಸಿ, 1ನಿ. 11.62ಸೆ), 50 ಮೀ. ಬಟರ್ ಫ್ಲೈ: ವೇದಾಂತ್ ಮಿಸಾಲೆ (ಎಸ್‌ಸಿಬಿ, 30.70ಸೆ),

ಸಮರ್ಥ್ ಗೌಡ ಬಿ.ಎಸ್.

ಬಾಲಕಿಯರು: 2ಎ ಗುಂಪು: 200 ಮೀ. ಫ್ರೀಸ್ಟೈಲ್: ಸಂಜನಾ ಪಿ.ವಿ. (ಬಿಎಸಿ, 2ನಿ. 20.95ನಿ), 100 ಮೀ. ಬ್ರೆಸ್ಟ್ ಸ್ಟ್ರೋಕ್: ತಿಸ್ಯಾ ಸೋನಾರ್ (ಮತ್ಸ್ಯ, 1ನಿ. 20.35ಸೆ), 100 ಮೀ. ಬ್ಯಾಕ್‌ಸ್ಟ್ರೋಕ್: ನೈಶಾ (ಬಿಎಸಿ, 1ನಿ 07.92ಸೆ), 50 ಮೀ. ಬಟರ್‌ಫ್ಲೈ: ಫಣೀಂದ್ರನಾಥ್ ಚರಿತಾ (ಎಲೈಟ್, 30.44ಸೆ). ಗುಂಪು 2ಬಿ: 200 ಮೀ. ಫ್ರೀಸ್ಟೈಲ್: ತ್ರಿಶಾ ಸಿಂಧು (ಗ್ಲೋಬಲ್, 2ನಿ. 17.40ಸೆ), 100 ಮೀ. ಬ್ರೆಸ್ಟ್ ಸ್ಟ್ರೋಕ್: ಸ್ಪರ್ಶಾ ಎಸ್. ಹರೀಶ (ಮತ್ಸ್ಯ, 1ನಿ. 26.90ಸೆ), 100 ಮೀ. ಬ್ಯಾಕ್‌ಸ್ಟ್ರೋಕ್: ಆದ್ಯಾ ನಾಯರ್ (ಡಾಲ್ಫಿನ್, 1ನಿ. 12.95ಸೆ), 50 ಮೀ. ಬಟರ್‌ಫ್ಲೈ: ನಿಧಿ ಕುಲಕರ್ಣಿ (ಎಸ್‌ಸಿಬಿ, 31.63ಸೆ). 2ಸಿ ಗುಂಪು: 200 ಮೀ. ಫ್ರೀಸ್ಟೈಲ್: ಸುಮನ್ವಿ ವಿ. (ಡಿಕೆವಿ, 2ನಿ. 26.08ಸೆ), 100 ಮೀ. ಬ್ರೆಸ್ಟ್ ಸ್ಟ್ರೋಕ್ ಸುಮೇಧಾ ಡಿ.ವಿ. (ಡಿಕೆವಿ, 2ನಿ. 26.08ಸೆ), 50 ಮೀ. ಬಟರ್‌ಫ್ಲೈ: ಮಾನ್ಯಾ ಆರ್. ವಾಧ್ವಾ (ಪಿಎಂಎಸ್‌ಸಿ, 32.83ಸೆ).

ಹಾಕಿ: ಕೆನರಾ ಬ್ಯಾಂಕ್ ತಂಡಕ್ಕೆ ಗೆಲುವು

ಬೆಂಗಳೂರು: ರಾಜಿಂದರ್ ಸಿಂಗ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕೆನರಾ ಬ್ಯಾಂಕ್ ತಂಡವು ಇಲ್ಲಿ ನಡೆಯುತ್ತಿರುವ ಕರ್ನಾಟಕ ಹಾಕಿ ಲೀಗ್ ಚಾಂಪಿಯನ್‌ಷಿಪ್ 8ನೇ ಆವೃತ್ತಿಯ ಪಂದ್ಯದಲ್ಲಿ ಗೆಲುವು ಸಾಧಿಸಿದೆ.

ಮಂಗಳವಾರ ನಡೆದ ಪಂದ್ಯದಲ್ಲಿ ಕೆನರಾ ಬ್ಯಾಂಕ್ ತಂಡವು 5–2ರಿಂದ ಕರ್ನಾಟಕ ರಾಜ್ಯ ಪೊಲೀಸ್ ತಂಡವನ್ನು ಸೋಲಿಸಿತು. ಮತ್ತೊಂದು ಪಂದ್ಯದಲ್ಲಿ ಭಾರತೀಯ ಕ್ರೀಡಾ ಪ್ರಾಧಿಕಾರ, ಎಸ್‌ಟಿಸಿ ತಂಡವು 4–4ರಿಂದ ಅಕೌಂಟೆಂಟ್ ಜನರಲ್ ಆಫೀಸ್ ಅಂಡ್ ರಿಕ್ರಿಯೇಷನ್ ಕ್ಲಬ್ ಜೊತೆ ಡ್ರಾ ಸಾಧಿಸಿತು. ಇನ್ನೊಂದು ಪಂದ್ಯದಲ್ಲಿ ಪೋಸ್ಟಲ್ ತಂಡವು 3–2ರಿಂದ ಬಾಯ್ಸ್ ಸ್ಪೋರ್ಟ್ಸ್ ಕಂಪನಿ ಎಂಇಜಿ ತಂಡವನ್ನು ಮಣಿಸಿತು.

ಗೆಲುವಿನ ಸಂಭ್ರಮದಲ್ಲಿ ರಷ್ಯಾದ ಡೇನಿಯಲ್ ಮೆಡ್ವೆಡೇವ್ –ಎಎಫ್‌ಪಿ ಚಿತ್ರ

ವಿಂಬಲ್ಡನ್: ಸೆಮಿಫೈನಲ್‌ಗೆ ಅಲ್ಕರಾಜ್
ಸಿನ್ನರ್‌ಗೆ ಮೆಡ್ವೆಡೇವ್ ಆಘಾತ

ಲಂಡನ್ (ಎಎಫ್‌ಪಿ): ಐದನೇ ಕ್ರಮಾಂಕದ ಡೇನಿಯಲ್ ಮೆಡ್ವೆಡೇವ್ ಅವರು ವಿಶ್ವದ ಅಗ್ರಕ್ರಮಾಂಕದ ಆಟಗಾರ ಯಾನಿಕ್ ಸಿನ್ನರ್ ಅವರನ್ನು ಐದು ಸೆಟ್‌ಗಳ ದೀರ್ಘ ಪಂದ್ಯದಲ್ಲಿ ಪರಾಭವಗೊಳಿಸಿ, ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್ಸ್‌ನಲ್ಲಿ ಸತತ ಎರಡನೇ ಬಾರಿ ಸೆಮಿಫೈನಲ್ ತಲುಪಿದರು.

ರಷ್ಯಾದ ಮೆಡ್ವೆಡೇವ್ 6–7 (7–9), 6–4, 7–6 (7–4), 2–6, 6–3 ರಿಂದ ಜಯ ಗಳಿಸಿದರು. ಆ ಮೂಲಕ ಜನವರಿಯಲ್ಲಿ ಆಸ್ಟ್ರೇಲಿಯನ್ ಓಪನ್ ಫೈನಲ್‌ನಲ್ಲಿ ಸಿನ್ನರ್ ವಿರುದ್ಧ ಅನುಭವಿಸಿದ ಸೋಲಿಗೆ ಸೇಡು ತೀರಿಸಿಕೊಂಡರು.

ಇಟಲಿಯ ಆಟಗಾರನ ವಿರುದ್ಧ ಸತತ ಐದು ಪಂದ್ಯಗಳ ಸೋಲಿನ ಸರಪಳಿಯನ್ನು ಕಳಚಿದ 28 ವರ್ಷ ವಯಸ್ಸಿನ ಮೆಡ್ವೆಡೇವ್, ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಒಂಬತ್ತನೇ ಬಾರಿ ಸೆಮಿಫೈನಲ್ ಪ್ರವೇಶಿಸಿದ ಸಾಧನೆ ಮಾಡಿದರು. ಅಮೆರಿಕ ಓಪನ್ ಮಾಜಿ ಚಾಂಪಿಯನ್ ಆಗಿರುವ ಅವರು ಶುಕ್ರವಾರ ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರನ್ನು ಎದುರಿಸಲಿದ್ದಾರೆ.

ಮೂರನೇ ಶ್ರೇಯಾಂಕದ ಅಲ್ಕರಾಜ್ ಅವರು 5–7, 6–4, 6–2, 6–2 ಸೆಟ್‌ಗಳಿಂದ 12ನೇ ಶ್ರೇಯಾಂಕದ ಟಾಮಿ ಪಾಲ್ (ಅಮೆರಿಕ) ಅವರನ್ನು ಹಿಮ್ಮೆಟ್ಟಿಸಿದರು.

ನಾಲ್ಕನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿಯ ಪ್ರಯತ್ನದಲ್ಲಿರುವ ಸ್ಪೇನ್‌ನ 21 ವರ್ಷದ ಅಲ್ಕರಾಜ್, ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದರು. ಆದರೆ, ನಂತರ ಪುಟಿದೆದ್ದ ಅವರು ಸತತ ಮೂರು ಸೆಟ್‌ಗಳಲ್ಲಿ ಮೇಲುಗೈ ಸಾಧಿಸಿದರು.

ಕ್ವಾರ್ಟರ್‌ಗೆ ಜೊಕೊವಿಚ್: ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಇದರೊಂದಿಗೆ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ 60ನೇ ಹಾಗೂ ವಿಂಬಲ್ಡನ್‌ನಲ್ಲಿ 15ನೇ ಬಾರಿ ಅಂತಿಮ ಎಂಟರ ಘಟ್ಟ ಪ್ರವೇಶಿಸಿದ ಸಾಧನೆ ಮಾಡಿದರು. ದಾಖಲೆಯ ಎಂಟನೇ ವಿಂಬಲ್ಡನ್ ಕಿರೀಟ ಧರಿಸುವ ಯತ್ನದಲ್ಲಿರುವ ಜೊಕೊವಿಚ್ ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಡೆನ್ಮಾರ್ಕ್‌ನ ಹೋಲ್ಗರ್ ರೂನ್ ಅವರನ್ನು 6-3, 6-4, 6-2 ಸೆಟ್‌ಗಳಿಂದ ಸೋಲಿಸಿದರು.

ಎರಡನೇ ಶ್ರೇಯಾಂಕದ ಜೊಕೊವಿಚ್, ಕ್ವಾರ್ಟರ್ ಫೈನಲ್‌ನಲ್ಲಿ ಒಂಬತ್ತನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ (ಆಸ್ಟ್ರೇಲಿಯಾ) ಅವರನ್ನು ಎದುರಿಸಲಿದ್ದಾರೆ. 37 ವರ್ಷ ವಯಸ್ಸಿನ ಜೊಕೊವಿಚ್ ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಎದುರು ನೋಡುತ್ತಿದ್ದಾರೆ. ಪ್ರಸಕ್ತ ಋತುವಿನಲ್ಲಿ ಯಾವುದೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಅವರು ಗೆದ್ದಿಲ್ಲ.

ಮಹಿಳಾ ಸಿಂಗಲ್ಸ್: ನಾಲ್ಕರ ಘಟ್ಟಕ್ಕೆ ಡೋನಾ, ಜಾಸ್ಮಿನ್

ಲಂಡನ್ (ಎಪಿ): ಕ್ರೊವೇಷ್ಯಾದ ಡೋನಾ ವೆಕಿಚ್ ಮತ್ತು ಇಟಲಿಯ ಜಾಸ್ಮಿನ್ ಪಾವೋಲಿನಿ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ತಲುಪಿದರು.

ಮಂಗಳವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಡೋನಾ 5-7, 6-4, 6-1ರಿಂದ ನ್ಯೂಜಿಲೆಂಡ್‌ನ ಲುಲು ಸನ್ ಅವರನ್ನು ಸೋಲಿಸಿದರು. ಡೋನಾ ಅವರು, ಮಿರ್ಜಾನಾ ಲೂಸಿಕ್ (1999) ನಂತರ ವಿಂಬಲ್ಡನ್‌ನಲ್ಲಿ ಸೆಮಿಫೈನಲ್ ತಲುಪಿದ ಕ್ರೊವೇಷ್ಯಾದ ಎರಡನೇ ಆಟಗಾರ್ತಿಯಾಗಿದ್ದಾರೆ. ಅವರು ಸೆಮಿಫೈನಲ್‌ನಲ್ಲಿ ಏಳನೇ ಕ್ರಮಾಂಕದ ಜಾಸ್ಮಿನ್ ಅವರನ್ನು ಎದುರಿಸಲಿದ್ದಾರೆ. ಫ್ರೆಂಚ್ ಓಪನ್ ರನ್ನರ್ ಅಪ್ ಜಾಸ್ಮಿನ್ 6–2, 6–1ರಿಂದ 19ನೇ ಕ್ರಮಾಂಕದ ಎಮ್ಮಾ ನವಾರೊ ಅವರನ್ನು ಮಣಿಸಿದರು. ನವಾರೊ, ಹಿಂದಿನ ಪಂದ್ಯದಲ್ಲಿ ಕೊಕೊ ಗಾಫ್ ಅವರಿಗೆ ಆಘಾತ ನೀಡಿದ್ದರು.

ನಗಾಲ್‌ಗೆ ಜಯ

ಬ್ರಾನ್ಸ್‌ವೇಗ್ (ಜರ್ಮನಿ), (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್, ಬ್ರಾನ್ಸ್‌ವೇಗ್ ಚಾಲೆಂಜರ್ ಟೆನಿಸ್ ಟೂರ್ನಿಯ 2ನೇ ಸುತ್ತು ಪ್ರವೇಶಿಸಿದ್ದಾರೆ. ಮಂಗಳವಾರ ನಡೆದ ಪಂದ್ಯದಲ್ಲಿ ಅವರು 6-1,6-4ರಿಂದ ಬ್ರೆಜಿಲ್‌ನ ಮೆಲಿಗೆನಿ ಅಲ್ವೇಸ್ ಅವರನ್ನು ಮಣಿಸಿದರು.

ರಾಜ್ಯ ರ‍್ಯಾಂಕಿಂಗ್ ಟಿಟಿ 18ರಿಂದ

ಬೆಂಗಳೂರು: ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯು ಇದೇ 18ರಿಂದ 21ರ ವರೆಗೆ ಮೈಸೂರಿನಲ್ಲಿ ನಡೆಯಲಿದೆ.

ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಮೈಸೂರು ವಿಶ್ವವಿದ್ಯಾಲಯದ ವ್ಯಾಯಾಮ ಶಾಲೆಯಲ್ಲಿ ಮೂರನೇ ಆವೃತಿಯ ಟೂರ್ನಿಯನ್ನು ಹಮ್ಮಿಕೊಳ್ಳಲಾಗಿದೆ.

11, 13, 15, 17, 19 ವರ್ಷದೊಳಗಿನವರ ವಿಭಾಗ ಸೇರಿದಂತೆ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. ಹೆಸರು ನೋಂದಾಯಿಸಲು ಜುಲೈ 14 ಕಡೆಯ ದಿನ. https://karnatakatabletennis.web.app/auth/login ಈ ವೆಬ್‌ಸೈಟ್‌ನಲ್ಲಿ ನೋಂದಾಯಿಸಬಹುದು. ಮಾಹಿತಿಗೆ ಮೊಬೈಲ್: 94487 50558.